ಮೇ 1999 ರೂ. 10

ಬಿಸಿಲ

■ ವಾಣಿಜ್ಯ ■ ವಿಕಾಸ ■ ಮಾಹಿತಿ ■ ಸಂಪರ್ಕ

ಮಾಸಪತ್ರಿಕೆ



...ತ್ವಕಪ್

‘ಶಕ್ತಿಮಾನ್’ ಅವಾಂತರ !

ಉಣ್ಣದ ಮಗುವಿಗೆ ಔಷಧಿ ಬೇಕೆ?

ಮನೆ ವಾರ ಪತ್ರಿಕೆ ವಿಳಂಬ ಏಕೆ?

ಪ್ರಿಯ ಓದುಗರೇ,

ಬಹುಕಾಲದಿಂದ ನೀವು ನಿರೀಕ್ಷಿಸುತ್ತಿರುವ **'ಮನೆ'** ವಾರಪತ್ರಿಕೆ ನಿಮ್ಮ ಕೈಗೆ ಸೇರಲು ವಿಳಂಬವಾಗುತ್ತಿದೆ. ಈ ವಾರಪತ್ರಿಕೆಯನ್ನು ಅದ್ಭುತವಾಗಿ, ಪರಿಪೂರ್ಣವಾಗಿ ರೂಪಿಸಬೇಕೆಂಬ ನಮ್ಮ ಆಸೆಯೇ ವಿಳಂಬಕ್ಕೆ ಕಾರಣ. ಪತ್ರಿಕೆಯ ಸಿದ್ಧತೆಗಳು ಭರದಿಂದ ಸಾಗಿದ್ದು ನಿಮ್ಮ ಸಹನೆಯನ್ನು ಹೆಚ್ಚು ಪರೀಕ್ಷಿಸದೆ ಪತ್ರಿಕೆಯನ್ನು ಶೀಘ್ರದಲ್ಲೇ ನಿಮ್ಮ ಕೈಗಿರಿಸಲಿದ್ದೇವೆ. ಇಷ್ಟೊಂದು ಸಿದ್ಧತೆ ಮಾಡುತ್ತಿರಬೇಕಾದರೆ ಇವರು ಅದೆಂತಹಾ ಪತ್ರಿಕೆ ರೂಪಿಸುತ್ತಿದ್ದಾರೆಂಬ ಕುತೂಹಲ ನಿಮಗೆ ಉಂಟಾಗಿರಬೇಕಲ್ಲ?

ನಮ್ಮ ಕನಸಿನ ತುಣುಕುಗಳು

- **'ಮನೆ'** ವಾರಪತ್ರಿಕೆಯ ಪ್ರಥಮ ಸಂಚಿಕೆಯ **ಒಂದು ಲಕ್ಷ** ಪ್ರತಿಗಳನ್ನು ಮುದ್ರಿಸಿ ಕನ್ನಡ ಪತ್ರಿಕೋದ್ಯಮದಲ್ಲಿ ಒಂದು ದಾಖಲೆ ನಿರ್ಮಿಸಬೇಕು.
- ಕನ್ನಡ ಬಲ್ಲ ಪ್ರತಿಯೊಬ್ಬರ ಕೈಯಲ್ಲೂ **'ಮನೆ'** ರಾರಾಜಿಸಬೇಕು.
- ಟ್ಯಾಬ್ಲಾಯ್ಡ್ ಆಕಾರದ 8 ಪುಟಗಳುಳ್ಳ ರಾಜ್ಯಮಟ್ಟದ ಆವೃತ್ತಿ ಜತೆಗೆ 12 ಪುಟಗಳ ವಿಶೇಷ ಜಿಲ್ಲಾ ಆವೃತ್ತಿಯನ್ನು (ಒಟ್ಟು 20 ಪುಟಗಳು) ಕೇವಲ 2 ರೂಪಾಯಿಗೆ ನೀಡಿ ಕನ್ನಡ ಓದುಗರನ್ನು ಬೆಚ್ಚಿಬೀಳಿಸಬೇಕು.
- ಈ ಜಿಲ್ಲಾ ಆವೃತ್ತಿ ಆಯಾ ಜಿಲ್ಲಾ ಕೇಂದ್ರದಲ್ಲಿ ಪ್ರತ್ಯೇಕವಾಗಿ ಸಂಪಾದನೆಗೊಂಡು, ಬೆಂಗಳೂರಿನಲ್ಲಿ ಮುದ್ರಣಗೊಂಡು ವಿತರಣೆಯಾಗಬೇಕು.

ಈಗ ನಮ್ಮ ಶ್ರಮ, ಕನಸು, ಸಾಹಸದ ಅಗಾಧತೆ ಬಗ್ಗೆ ನಿಮಗೆ ಮನವರಿಕೆಯಾಗಿರಬೇಕಲ್ಲವೆ? ಹಾಗೆಯೇ ಒಂದು ಉತ್ಕೃಷ್ಟ-ವಿನೂತನ ಸಾಹಸ ಕಾರ್ಯರೂಪಕ್ಕೆ ಬರುವಲ್ಲಿ ಆಗಿರುವ ವಿಳಂಬವನ್ನು ನೀವು ಅರ್ಥಮಾಡಿಕೊಂಡು ಪ್ರೋತ್ಸಾಹಿಸುತ್ತೀರೆಂದು ನಂಬುತ್ತೇವೆ.

- ಸಂಪಾದಕ

ಅಭಿಪ್ರಾಯ ತಿಳಿಸಿ ! ಬಹುಮಾನ ಗಳಿಸಿ !

ಪ್ರಿಯ ಓದುಗರೇ,

ಬರುವ ಜುಲೈ ತಿಂಗಳಿನಿಂದ **'ಬದುಕು'** ಯಶಸ್ವಿ 2 ವರ್ಷಗಳನ್ನು ಪೂರೈಸಿ 3ನೇ ವರ್ಷಕ್ಕೆ ಕಾಲಿರಿಸಲಿದೆ. ನಿಮಗೆ ಗೊತ್ತಿದ್ದಂತೆ **'ಬದುಕು'** ವರ್ಷದಿಂದ ವರ್ಷಕ್ಕೆ ವೈವಿಧ್ಯ ಹೆಚ್ಚಿಸಿಕೊಂಡು ಹೊಸತನ ಹೊತ್ತು ಹೊರಬರುತ್ತದೆ. ಅಂತೆಯೇ ಪ್ರಕಟಣೆಯ 3ನೇ ವರ್ಷದಲ್ಲಿ 'ಬದುಕು' ಮಾಸಪತ್ರಿಕೆಯ ಸ್ವರೂಪದಲ್ಲಿ ಆಮೂಲಾಗ್ರ ಬದಲಾವಣೆ ಮಾಡಲು ಯೋಚಿಸಿದ್ದೇವೆ. 3ನೇ ವರ್ಷದ **'ಬದುಕು'** ಹೇಗಿರಬಹುದು ಎಂಬುದನ್ನು ನಿರ್ಧರಿಸುವವರು ನೀವೇ. ಕೆಳಗಿನ ಅಂಶಗಳಿಗೆ ಸಂಬಂಧಿಸಿದಂತೆ ನಿಮ್ಮ ಅಭಿಪ್ರಾಯ, ಸಲಹೆ-ಸೂಚನೆಗಳನ್ನು ನೀಡಿ **'ಬದುಕು'** ರೂಪಿಸುವ ಕ್ರಿಯೆಯಲ್ಲಿ ಪಾಲ್ಗೊಳ್ಳಲು ನಿಮ್ಮನ್ನು ಆಹ್ವಾನಿಸುತ್ತಿದ್ದೇವೆ. ನಿಮ್ಮ ಅಭಿಪ್ರಾಯ ತಿಳಿಸಲು ಬಾಕ್ಸ್‌ನಲ್ಲಿ ☑ ಹೀಗೆ ಟಿಕ್ ಮಾಡಿ, ಇಡೀ ಹಾಳೆಯನ್ನು ಕತ್ತರಿಸಿ ಪತ್ರಿಕೆಯ ಕಚೇರಿಗೆ ಕಳಿಸಿಕೊಡಿ. ಪ್ರತಿಯೊಬ್ಬರ ಅನಿಸಿಕೆಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು. **ಹಾಗೆಯೇ ಸೂಕ್ತ ಅಭಿಪ್ರಾಯ ಕಳಿಸಿದ 10 ಜನ ಓದುಗರಿಗೆ ಆಶ್ಚರ್ಯಕರ ಬಹುಮಾನ ಕೂಡಾ ಕಾದಿದೆ.** ತ್ವರೆ ಮಾಡಿ.

1. ಈಗ ನಿಮ್ಮ ಕೈಯಲ್ಲಿರುವ ಮೇ 99ರ ಸಂಚಿಕೆಯಲ್ಲಿನ ಲೇಖನಗಳ ಬಗ್ಗೆ.

ಲೇಖನಗಳು	ಓದಿದೆ	ಓದಿಲ್ಲ	ಅಭಿಪ್ರಾಯ
1. ಉಣ್ಣದ ಮಗುವಿಗೆ ಔಷಧಿ ಬೇಕೆ?			
2. ವಿಶ್ವಕಪ್: ಭಾರತ ಗೆದ್ದೀತೆ?			
3. ಅಡುಗೆ ಮನೆ			
5. ಬಿರುಗಾಳಿ v/s ಸುಂಟರಗಾಳಿ			
6. ಪತ್ರಿಕಾ ಸಮರ			
7. ಸಾವಿನ ಬಾಗಿಲು - ಡ್ರಗ್ಸ್			
8. ಕ್ವಿಜ್			
9. ಪಾರೂ ಹಲ್ಲು ಕೀಳಿಸಿದ್ದು			
10. ಚಿಣ್ಣರನ್ನು ನುಂಗಿದ ಶಕ್ತಿಮಾನ್			
11. ಸಂವೇದನೆ			
12. ವಯಸ್ಕರಿಗಾಗಿ			
13. ಆಪ್ತಸಮಾಲೋಚನೆ			
14. ಕನ್ನಡದಲ್ಲಿ ಕಲಿತವರು			
15. ಮಾನವೀಯ ಧರ್ಮ ಸಂರಕ್ಷಿಸಿ			
16. ಜಲಪಾತಗಳ ಮಡಿಲು			
17. ಕೋಚೆ ಚಿಂತನ			
18. ವ್ಯಕ್ತಿತ್ವ ವಿಕಾಸ			
19. ವಿದ್ಯೆ-ಉದ್ಯೋಗ			
20. ಪದಬಂಧ			
21. ಕಿಲಕಿಲ			
22. ತಾರಾ ಬದುಕು			

ಒಟ್ಟಾರೆ ಅಭಿಪ್ರಾಯ ....

....

....

....

....

2. 'ಬದುಕು' ಪತ್ರಿಕೆಯ ಈ ಕೆಳಗಿನ ವಿಷಯಗಳ ಬಗ್ಗೆ ನಿಮ್ಮ ಅನಿಸಿಕೆ ತಿಳಿಸಿ.

	ಅತ್ಯುತ್ತಮ	ಉತ್ತಮ	ಕಳಪೆ
ಬಳಸಿದ ಕಾಗದ			
ಲೇಖನಗಳ ಭಾಷೆ			
ಲೇಖನಗಳ ವಿಷಯ			
ಮುದ್ರಣ			
ಪುಟ ವಿನ್ಯಾಸ			
ಫೋಟೊಗಳು			
ಮುಖಪುಟ			

ಒಟ್ಟಾರೆ ಅಭಿಪ್ರಾಯ ....

....

....

....

....

....

....

....

3. 'ಬದುಕು' ನಿಮಗೆ ಹೇಗೆ ತಲುಪಿತು?

- ಚಂದಾದಾರನಾಗಿದ್ದೇನೆ ☐
- ಅಂಗಡಿಯಲ್ಲಿ ☐
- ಪೇಪರ್ ಹುಡುಗನ ಮೂಲಕ ☐
- ಗ್ರಂಥಾಲಯದಲ್ಲಿ ನೋಡಿದೆ ☐

4. 'ಬದುಕು' ಹೀಗಿರಬೇಕೆಂದು ನನ್ನ ಬಯಕೆ

- 'ಸುಧಾ'ದಂತೆ ☐
- 'ತರಂಗ'ದಂತೆ ☐
- 'ದಿಕ್ಸೂಚಿ'ಯಂತೆ ☐
- 'ಕಸ್ತೂರಿ'ಯಂತೆ ☐

5. ಮುಖಪುಟದಲ್ಲಿ ಅಪೇಕ್ಷಿಸುವ ಫೋಟೋ?

- ರೂಪದರ್ಶಿ ☐
- ಮಕ್ಕಳು ☐
- ವರ್ಣ ಕಲಾಕೃತಿ ☐
- ಸಿನಿಮಾ ತಾರೆ ☐

6. ಮನೆಯಲ್ಲಿ 'ಬದುಕು' ಯಾರು ಹೆಚ್ಚು ಇಷ್ಟ ಪಡುತ್ತಾರೆ.

- ಎಲ್ಲರೂ ☐
- ನಾನು ಮಾತ್ರ ☐
- ಮಹಿಳೆಯರು ☐
- ಮಕ್ಕಳು ☐

7. 'ಬದುಕು'ದಲ್ಲಿ ಈ ವಿಷಯ ಹೆಚ್ಚಿರಲಿ.

- ಜನರಲ್ ನಾಲೆಡ್ಜ್ ☐
- ಮಹಿಳೆಯರ ವಿಷಯ ☐
- ಉದ್ಯೋಗ ಮಾಹಿತಿ ☐
- ಕತೆ-ಕಾದಂಬರಿ ☐

8. ನೀವು 'ಬದುಕು' ಇಷ್ಟಪಡಲು ಮುಖ್ಯ ಕಾರಣವೇನು?

....

9. ನಿಮಗೆ 'ಬದುಕು' ಇಷ್ಟವಾಗದಿರಲು ಮುಖ್ಯ ಕಾರಣ ಯಾವುದು?

....

10. ನೀವು ಓದುವ ಇತರ ವಾರಪತ್ರಿಕೆಗಳು ಹಾಗೂ ಮಾಸಪತ್ರಿಕೆಗಳು ಯಾವುವು?

1.............................. 2.............................. 3.............................. 4..............................

11. 'ಬದುಕು'ದಲ್ಲಿ ಈ ಕೆಳಗಿನ ಲೇಖಕರ ಬರಹಗಳು ಇರಲಿ.

1.............................. 2.............................. 3.............................. 4..............................

12. 'ಬದುಕು' ಬೆಲೆ ಎಷ್ಟಿರಬೇಕು?

....

13. ನನ್ನ ವೈಯಕ್ತಿಕ ವಿವರಗಳು

ಹೆಸರು :..

ಹುಟ್ಟಿದ ದಿನಾಂಕ :.................................... ವೃತ್ತಿ :....................................

ಪೂರ್ಣ ವಿಳಾಸ :..

....

....ಪಿನ್‌ಕೋಡ್:..............................

ದೂರವಾಣಿ :..

ಭರ್ತಿ ಮಾಡಿದ ಫಾರ್ಮ್‌ನ್ನು ಕಳಿಸಬೇಕಾದ ವಿಳಾಸ :

'ಬಿಸಿಲ ಬದುಕು' ಮಾಸಪತ್ರಿಕೆ

ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951, ಬಸವೇಶ್ವರನಗರ, ಬೆಂಗಳೂರು - 560 079.

ಬಿಸಿಲ
ಬದುಕು

ಸಂಪಾದಕ
ಚಂದ್ರಕಾಂತ ವಡ್ಡು

ಉಪ ಸಂಪಾದಕರು
ಎ.ಎಂ.ಸುರೇಶ್

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ರಮೇಶ್ ವಿಟ್ಲಾಪುರ

ಅಕ್ಷರ ಜೋಡಣೆ
ನರೇಂದ್ರ ಪಾಟೀಲ, ಕೋಕಿಲ

ಮುಖಪುಟ ವಿನ್ಯಾಸ
ಅಂಕುರ

ಮುಖಪುಟ ಚಿತ್ರ
ಬಿ.ಎಂ.ಆರ್.ಸ್ವಾಮಿ
ತಾಯಿ: ನೀಲಿಮಾ ಮಗು : ರೋಹನ್

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ : 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager : 9622 738638 Printed at M.N.S.Enterprises, Bhattarahalli, Old Madras Road, Bangalore -560 049 Editor : Chandrakanta Vaddu

ಬಿಸಿಲ ಬದುಕು

ಆಮೂಲಾಗ್ರ ಬದಲಾವಣೆ

ನಿಮ್ಮ ಅಭಿಮಾನದ 'ಬದುಕು' ಯಶಸ್ವಿ ಎರಡನೇ ವರ್ಷ ಮುಗಿಸಲು ಕೇವಲ ಒಂದು ಸಂಚಿಕೆ ಬಾಕಿ ಉಳಿದಿದೆ. ಮೂರನೇ ವರ್ಷದಲ್ಲಿ ಕಾಲಿರಿಸುವ ಈ ವಿಶಿಷ್ಟ ಘಟ್ಟದಲ್ಲಿ 'ಬದುಕು' ಮತ್ತೊಮ್ಮೆ ತನ್ನನ್ನು ಸ್ವವಿಮರ್ಶೆಗೆ ಒಡ್ಡಿಕೊಳ್ಳಲು, ಆಮೂಲಾಗ್ರವಾಗಿ ಬದಲಾಗಲು ಮುಂದಾಗಿದೆ. ಮೊದಲ ವರುಷ ದಾಟಿ ಎರಡನೇ ವರ್ಷದಲ್ಲಿ ಕಾಲಿರಿಸಿದಾಗ 'ಬದುಕು' ಹೊಸ ಸ್ವರೂಪ ಪಡೆದದ್ದು ನಿಮಗೆ ನೆನಪಿರಬಹುದು. ಅದೇ ರೀತಿ ಮೂರನೇ ವರ್ಷದಲ್ಲಿ 'ಬದುಕು' ಅನಿರೀಕ್ಷಿತ ತಿರುವು ಪಡೆದುಕೊಂಡು ಭರ್ಜರಿಯಾಗಿ ಬೆಳೆದು ನಿಲ್ಲಲಿದೆ.

ಇದಕ್ಕೆ ನಿಮ್ಮ ಸಲಹೆ, ಸೂಚನೆ, ದೂಷಣೆ, ತಿದ್ದುವಿಕೆ, ಪ್ರೀತಿ, ಸಿಟ್ಟು ಎಲ್ಲವೂ ಬೇಕು. ನಿಮ್ಮ ವೈವಿಧ್ಯಮಯ ಭಾವನೆಗಳ ಪಾಕವಾಗಿಯೇ 'ಬದುಕು' ಬದಲಾವಣೆ ಹೊಂದಲು ಸಿದ್ಧವಾಗಿದೆ. ಓದುಗರ ಅಭಿಪ್ರಾಯ ಸಂಗ್ರಹಣೆಗಾಗಿ ಪ್ರಕಟಿಸಿರುವ ಫಾರ್ಮ್‌ನ್ನು ದಯವಿಟ್ಟು ಭರ್ತಿಮಾಡಿ 'ಬದುಕು' ರೂಪಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ವಿನಂತಿಸುತ್ತೇವೆ.

ಹಾಗೆಯೇ 'ಬದುಕು' ಪತ್ರಿಕೆಯ ವಿದ್ಯ-ಉದ್ಯೋಗ ವಿಭಾಗದ ಜನಪ್ರಿಯತೆ, ಉಪಯುಕ್ತತೆ ಬಗೆಗೆ ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆದರೆ 'ಬದುಕು' ಮಾಸಪತ್ರಿಕೆಯಾಗಿರುವುದರಿಂದ ನಮ್ಮ ವಿದ್ಯಾರ್ಥಿ-ಉದ್ಯೋಗಾಕಾಂಕ್ಷಿ ಓದುಗರ ಅಪೇಕ್ಷೆಗಳನ್ನು ಪರಿಪೂರ್ಣವಾಗಿ ಈಡೇರಿಸಲು ಸಾಧ್ಯವಾಗುತ್ತಿಲ್ಲ. ಹಲವೊಮ್ಮೆ ನಮ್ಮ ಪತ್ರಿಕೆ ಹೊರಬರುವಷ್ಟರಲ್ಲಿ ಅರ್ಜಿ ಹಾಕುವ ಅಂತಿಮ ದಿನಾಂಕ ಮುಗಿದುಹೋಗಿ ನಿರಾಶೆ ಕಾಡಿದ್ದಿದೆ. ಯುವಜನಾಂಗದ ಅಗತ್ಯಗಳಿಗೆ ಹೆಚ್ಚು ಒತ್ತು ನೀಡಿದಾಗ ಕುಟುಂಬದ ಇತರ ಸದಸ್ಯರು 'ಬದುಕು' ಬಗ್ಗೆ ಆಸಕ್ತಿ ಕಳೆದುಕೊಂಡದ್ದೂ ಉಂಟು.

ಇದೇ ಕಾರಣಕ್ಕಾಗಿ ವಿದ್ಯಾರ್ಥಿ-ಉದ್ಯೋಗಾಕಾಂಕ್ಷಿ ಯುವ ಜನಾಂಗದ ಹಿತದೃಷ್ಟಿಯಿಂದ ಇನ್ನೊಂದು ವಾರಪತ್ರಿಕೆ **'ದಾರಿ'** ಪ್ರಾರಂಭಿಸುತ್ತಿದ್ದೇವೆ. ಯುವಕ-ಯುವತಿಯರ ಕಣ್ಮಣಿಯಾಗಲಿರುವ 'ದಾರಿ' ವಾರಪತ್ರಿಕೆ ಶೀಘ್ರದಲ್ಲೇ ಬಿಡುಗಡೆಯಾಗಲಿದೆ. ಅದು 'ಬದುಕು' ಬಳಗದ ಸಹೋದರ ಪತ್ರಿಕೆ ಎಂದ ಮೇಲೆ ಅದರ ಉಪಯುಕ್ತತೆ ವಿಶಿಷ್ಟತೆ ಬಗ್ಗೆ ಬಿಡಿಸಿ ಹೇಳಬೇಕಿಲ್ಲ ತಾನೇ?

-ಸಂಪಾದಕ

ಹಾಸ್ಯ

ಎರಡನೇ ಐಸ್‌ಕ್ರೀಂ

ಅತೀ ಜಿಪುಣ ಪತಿಮಹಾಶಯರೊಬ್ಬರು ತನ್ನ ಪತ್ನಿಯನ್ನು ವಾಕಿಂಗ್ ಕರೆದುಕೊಂಡು ಹೊರಟಿದ್ದರು. ರಸ್ತೆಯಲ್ಲಿ ಎದುರಾದ ಐಸ್‌ಕ್ರೀಂ ಅಂಗಡಿ ತೋರಿಸುತ್ತಾ, ''ಏನೇ.. ಇನ್ನೊಂದು ಐಸ್‌ಕ್ರೀಂ ತಿಂನ್ತೀಯಾ'' ಎಂದರು. ನಡೆದೂ ನಡೆದೂ ಸುಸ್ತಾದ ಹೆಂಡತಿ ಸಿಟ್ಟಿನಿಂದಲೇ, ''ಏನ್ರೀ, ಇನ್ನೊಂದು ತಿನ್ನುತ್ತೀಯಾ ಅನ್ನಲು ಈ ಮೊದಲೇ ನೀವು ಯಾವಾಗಲಾದರೂ ಐಸ್‌ಕ್ರೀಂ ಕೊಡಿಸಿದ್ದೀರಾ?''

ಜಿಪುಣ ಪತಿ: ಅಲ್ವೇ... ಸರಿಯಾಗಿ ಜ್ಞಾಪಿಸಿಕೋ.. ಹತ್ತು ವರ್ಷದ ಹಿಂದೆ ಹೀಗೇ ನಾವಿಬ್ಬರೂ ವಾಕಿಂಗ್‌ಗೆ ಬಂದಾಗ ಒಂದು ಐಸ್‌ಕ್ರೀಂ ಕೊಡಿಸಿದ್ದೆ! ಈಗ ಕೊಡಿಸಿದರೇ ಎರಡನೆಯದಾಗುತ್ತದೆ.

ಕಂಡಿದ್ದೀರಾ?

''ಏನ್ರೀ!..... ನೀವೆಂದಾದರೂ ಭೂತ, ಪಿಶಾಚೀನ ಕಂಡಿದ್ದೀರಾ? ಅವು ಮಾತಾಡೋದನ್ನ ಕೇಳಿದ್ದೀರಾ?'' ಪತ್ನಿ ತನ್ನ ಪತಿಯನ್ನು ಪ್ರಶ್ನಿಸಿದಳು.

''ಇಲ್ಲ! ಅದರೊಂದಿಗೆ ಸಂಸಾರ ಮಾಡ್ತಾ ಇದ್ದೀನಿ!'' ಪತಿ ಉಲಿದ.

ಎದ್ದಿಲ್ಲ

''ನಮ್ಮಪ್ಪ ಕಾವೇರಿಯಲ್ಲಿ ಅರ್ಧ ನಿಮಿಷದವರೆಗೆ ದಮ್‌ಕಟ್ಟಿ ಮುಳುಗಿದ್ರು'' ಅಂದ ಮುರಳಿ.

''ಅದೇನು ಮಹಾ! ನಮ್ಮಜ್ಜ ಹೋದ ವರ್ಷ ಅದೇ ನದೀಲಿ ಮುಳುಗಿದವರು ಇನ್ನೂ ಎದ್ದಿಲ್ಲ!'' ಎಂದ ರವಿ.

ಸಂತೋಷದ ಸುದ್ದಿ

''ಸಾರಿ ಸಾರ್... ನಿಮ್ಮಾಕೆಗೆ ಗರ್ಭಸ್ರಾವವಾಗಿದೆ'' ಆಕೆಯನ್ನು ಪರೀಕ್ಷಿಸಿದ ಡಾಕ್ಟರ್ ಆಪರೇಷನ್ ಥಿಯೇಟರ್ ಹೊರಗೆ ಕಾಯುತ್ತಿದ್ದ ವ್ಯಕ್ತಿಯೊಂದಿಗೆ ಹೇಳಿದರು.

''ಅಬ್ಬಾ!... ಎಂಥ ಸಂತೋಷದ ಸುದ್ದಿ ಹೇಳಿದಿರಿ ಡಾಕ್ಟ್ರೇ''

''ಅದ್ಯಾಕ್ರೀ ಹಾಗೆ ಹೇಳ್ತೀರಾ?'' ಡಾಕ್ಟರ್ ಪ್ರಶ್ನಿಸಿದರು.

''ನಾನಿನ್ನೂ ಆಕೆಯನ್ನು ಮದುವೆಯಾಗಿಲ್ಲ ಡಾಕ್ಟ್ರೇ!''

ನಿಮಗಲ್ಲ

ಮಧ್ಯರಾತ್ರಿಯಲ್ಲಿ ಫೋನು ಕಿರಿಚಿಕೊಳ್ಳತೊಡಗಿತು. ಡಾಕ್ಟರ್ ಫೋನೆತ್ತಿದರು:

''ಬೇಗ... ಈಗಿಂದೀಗಲೇ ಬರದಿದ್ದರೆ ನನ್ನ ಪ್ರಾಣವೇ ಹೋಗುತ್ತದೆ....'' ಅಂಗಲಾಚಿದ ಧ್ವನಿ.

''ಏನು ತೊಂದರೆ?'' ಡಾಕ್ಟರ್ ಕೇಳಿದರು.

ಪಕ್ಕದಲ್ಲೇ ನಿಂತಿದ್ದ ಡಾಕ್ಟರ್‌ರ ಮಗಳು ''ಪಪ್ಪಾ, ಫೋನು ನಿಮಗಲ್ಲ, ನನಗೆ ಬಂದಿರೋದು'' ಎಂದು ಫೋನ್ ಕಸಿದುಕೊಂಡಳು.

ಉಪಾಯ ತಿಳಿಸಿ

''ನಿಮ್ಮ ಮಗ ತುಂಬಾ ಜಾಣ. ಆದರೆ ಅವನು ಯಾವಾಗಲೂ ಹುಡುಗಿಯರ ಜೊತೆಗೆ ಕಾಲ ಕಳೆಯುತ್ತಾನೆ''ಎಂದು ಪ್ರೋಗ್ರೆಸ್ ಕಾರ್ಡಿನಲ್ಲಿ ಬರೆದು ತಿಳಿಸಿದರು.

ಅದಕ್ಕೆ ಅವರ ಅಮ್ಮನಿಂದ ಬಂದ ಉತ್ತರ:

''ದಯವಿಟ್ಟು ಅಂಥಾ ಸಮಸ್ಯೆಗೆ ಏನಾದರೂ ಪರಿಹಾರ ಇದ್ದರೆ ಬರೆದು ಕಳುಹಿಸಿ. ಅವನ ತಂದೆಗೂ ಅಂಥದೇ ಕಾಯಿಲೆ ಇದೆ!''

ಆಲ್ಕೋಹಾಲ್ ಪರಿಣಾಮ

ಆಲ್ಕೋಹಾಲ್‌ನಿಂದಾದ ದುಷ್ಪರಿಣಾಮಗಳನ್ನು ಪ್ರೊಫೆಸರು ವಿದ್ಯಾರ್ಥಿಗಳಿಗೆ ವಿವರಿಸುತ್ತಿದ್ದರು. ಅದು ಅಪಾಯಕಾರಿ ಎಂಬುದಕ್ಕೆ ಉದಾಹರಣೆ ಕೊಟ್ಟರು. ಅನಂತರ ಆ ಬಗ್ಗೆ ಪ್ರಯೋಗವನ್ನು ಪ್ರಾರಂಭಿಸಿದರು.

ಅವರು ಮೊದಲು ನೀರು ತುಂಬಿದ ಗಾಜಿನ ಪಾತ್ರೆಯನ್ನು ತೆಗೆದುಕೊಂಡರು. 'ಈಗ ಎಲ್ಲರೂ ನೋಡಿ' ಎನ್ನುತ್ತಾ ಪಾತ್ರೆಯೊಳಗಡೆ ಒಂದು ಹುಳುವನ್ನು ಹಾಕಿದರು.. ಹುಳು ಬಹಳ ಕಷ್ಟಪಟ್ಟು ಸ್ವಲ್ಪ ಹೊತ್ತಿನ ನಂತರ ಹೊರಕ್ಕೆ ಬಂದಿತು. ಅನಂತರ ಪ್ರೊಫೆಸರ್ ಅದೇ ಹುಳುವನ್ನು ಆಲ್ಕೋಹಾಲ್ ತುಂಬಿದ್ದ ಗಾಜಿನ ಪಾತ್ರೆಯೊಳಕ್ಕೆ ಹಾಕಿದರು. ಹುಳು ಸತ್ತು ಹೋಯಿತು.

ಆಗ ಅವರು ವಿದ್ಯಾರ್ಥಿಗಳನ್ನು ಪ್ರಶ್ನಿಸಿದರು:

''ಎರಡು ಪ್ರಯೋಗಗಳನ್ನು ನೋಡಿದ್ದೀರಿ. ಇದರಿಂದ ನೀವು ತಿಳಿದುಕೊಳ್ಳುವ ಪಾಠ ಏನು?''

ತಕ್ಷಣ ಎದ್ದು ನಿಂತ ಗುಂಡ ಉತ್ತರಿಸಿದ:

''ನಾವು ಆಲ್ಕೋಹಾಲ್ ಕುಡಿದರೆ ಹುಳುವಿನ ಬಾಧೆ ಇರುವುದಿಲ್ಲ, ಇದೇ ಪಾಠ!'' ಪ್ರೊಫೆಸರ್ ದಿಗ್ಭ್ರಾಂತರಾದರು.

ಕೆಲಸ ಎಲ್ಲಿ

ಮೊದಲ ತಾರೀಖಿನಂದು ತರಗತಿಯಲ್ಲಿದ್ದ ಮಾಸ್ತರರಿಗೆ ಜವಾನ ಒಂದು ಲಕೋಟೆ ಕೊಟ್ಟು ಹೋದನು. ಲಕೋಟೆ ತೆಗೆದು ತಮಗೆ ನೀಡಲಾಗಿದ್ದ ಸಂಬಳವನ್ನು ಎಣಿಸತೊಡಗಿದರು ಮಾಸ್ತರು.

ಕೊನೆಯ ಬೆಂಚಿನಲ್ಲಿ ಕೂತಿದ್ದ ಗುಂಡ ಕುತೂಹಲ ತಡೆಯಲಾರದೆ ''ಏನ್ಸಾರ್ ಅದು?'' ಎಂದ.

''ಏನಿಲ್ಲಪ್ಪ ನನ್ನ ತಿಂಗಳ ಸಂಬಳ?''

''ಹೌದಾ ಸಾರ್? ತಾವು ಎಲ್ಲಿ ಕೆಲಸ ಮಾಡೋದು?'' ಗುಂಡನ ಮರು ಪ್ರಶ್ನೆ.

ಇಬ್ಬರು ಗೆಳತಿಯರು ಭೇಟಿಯಾದಾಗ

ಆಕೆ: ನನ್ನ ಮದುವೆ ತುಂಬಾ ತುರ್ತಾಗಿ ನಡೆದಿದ್ದರಿಂದ ನಿನ್ನನ್ನು ಆಹ್ವಾನಿಸಲಾಗಲಿಲ್ಲ. ಏನೂ ತಿಳಿದುಕೊಳ್ಳಬೇಡ ಕಣೇ.

ಈಕೆ: ಪರವಾಗಿಲ್ಲ ಬಿಡೇ, ಮುಂದಿನ ಸಲವಾದರೂ ಮರೆಯದೆ ಆಹ್ವಾನಿಸು.

ನಿಮ್ಮ ಹೆಂಡ್ತಿ ಅಂದ್ಕೊಳ್ಳಿ

ಕಿಟ್ಟಿ: ಹೋಗಲಿ ಬಿಡಪ್ಪ, ಸಾವು ಎಲ್ಲರಿಗೂ ಬರುವಂಥದ್ದೇ ಅದಕ್ಕಾಗಿ ಎಷ್ಟು ಅಂತ ಅಳ್ತೀಯ.

ನಾಣಿ: ಏನು ಮಾಡಲಿ? ಹಿಂದೆ ನನ್ನ ತಾಯಿ ಸತ್ತಾಗ ಹೀಗೆ ದುಃಖಿಸುತ್ತಿದ್ದೆ. ಎಷ್ಟೋ ಮಹಿಳೆಯರು 'ನನ್ನನ್ನೇ ನಿಮ್ಮ ತಾಯಿ ಅಂದುಕೊಂಡು ಸಮಾಧಾನ ಮಾಡಿಕೊಳ್ಳಿ' ಅಂದರು. ನನ್ನ ಅಕ್ಕ ಸತ್ತಾಗಲೂ ಹೀಗೆಯೇ ಆಯಿತು.

ಕಿಟ್ಟಿ: ಹೋಗಲಿ ಬಿಡು, ಹಿಂದಿನದನ್ನು ಯಾಕೆ ಜ್ಞಾಪಿಸಿಕೊಳ್ಳುತ್ತಿ?

ನಾಣಿ: ಅದೇ ನನಗೆ ಹೆಚ್ಚು ದುಃಖ ಕೊಡ್ತಿದೆ. ಈ ಸಲ ನನ್ನ ಹೆಂಡ್ತಿ ಸತ್ತಿದ್ದಾಳೆ. ''ನನ್ನನ್ನೇ ನಿಮ್ಮ ಹೆಂಡ್ತಿ ಅಂದ್ಕೊಳ್ಳಿ'' ಅಂತ ಹೇಳುವವರು ಒಬ್ಬರೂ ಬೇಡವೇ?!

■ ಟಿ.ವಿ. ವೆಂಕಟರಮಣಯ್ಯ

ಒಳನೋಟ

ಸ್ಥಿರ ಶೀರ್ಷಿಕೆಗಳು











ವಿದ್ಯೆ - ಉದ್ಯೋಗ

ಟಪಾಲು



ಸತ್ತು ಬದುಕಿದ ರೂಪಿಣಿ - ಯಾರು ಸರಿ?

-ಜಿ.ಎನ್. ಮೋಹನ್, ಗುಲ್ಬರ್ಗಾ.

'ಸತ್ತು ಬದುಕಿದ ರೂಪಿಣಿ-ಯಾರು ಸರಿ?' ಮುಖಪುಟ ಲೇಖನ ಚೆನ್ನಾಗಿ ಬಂದಿದೆ. ಮಾಧ್ಯಮ ವಿಮರ್ಶೆ ಅಪರೂಪವಾಗಿರುವ ಈ ದಿನಗಳಲ್ಲಿ ಈ ಲೇಖನ ಸಕಾಲಿಕ. ಮಂಡಿಸಿದ ರೀತಿಯೂ ಚೆನ್ನಾಗಿದೆ.

ಅಗತ್ಯವಿರಲಿಲ್ಲ

-ಪಿ. ಶ್ರೀಕಾಂತ, ವಿದ್ಯಾನಗರ.

ಒಬ್ಬ ಲಂಕೇಶ್, ಒಬ್ಬ ರವಿಬೆಳಗೆರೆ 'ರಿವೇಂಜ್'ಗಳನ್ನು 'ಬಿಸಿಲ ಬದುಕ'ಲ್ಲಿ ಮುಖಪುಟದ ಪ್ರಾಮುಖ್ಯ ಕೊಟ್ಟು ಅಚ್ಚು ಮಾಡುವ ಅವಶ್ಯಕತೆ ಇರಲಿಲ್ಲ. ಈ ರೀತಿಯ ಕಾಂಟ್ರವರ್ಸಿಗಳಿಗೆ ಅವರವರ ಖಾಸ್ ಪತ್ರಿಕೆಗಳೇ ಸಾಕಾಗಿದ್ದವು. ಪಾಪುಲರ್ ವ್ಯಕ್ತಿಗಳ 'ಪರ್ಸನಲ್ ಲೈಫ್' ಬಗ್ಗೆ ಪ್ರತಿಯೊಬ್ಬರಿಗೂ ಆಸಕ್ತಿ ಇರುತ್ತದೆಯಾದರೂ ಅದಕ್ಕೆ ಬದುಕೇ ವೇದಿಕೆ ಮಾಡಿಕೊಂಡಿದ್ದು ನಿಜಕ್ಕೂ ಸರಿಬರಲಿಲ್ಲ. ಸುಮ್ಮನೇ ಪುಟ ಹಾಳು ಮಾಡಿದಿರಿ. ಬದಲಿಗೆ ಉಪಯುಕ್ತ ಲೇಖನ ಪ್ರಕಟಿಸಬಹುದಿತ್ತು.

ಹಾಯ್-ಲಂಕೇಶ್: ಹೋಲಿಕೆ ಸರಿಯಲ್ಲ!

ಈ ಸಲದ ಸಂಚಿಕೆಯಲ್ಲಿ ರೂಪಿಣಿ ಪ್ರಕರಣ ಕುರಿತು ಪ್ರಕಟವಾದ ಲೇಖನಗಳನ್ನು ಓದಿದೆ. ರೂಪಿಣಿ ಸತ್ತಿದ್ದಾಳೆ ಎಂಬ ವರದಿಯನ್ನು ಬರೆಯುತ್ತ 'ಹಾಯ್ ಬೆಂಗಳೂರ್' ಪತ್ರಿಕೆ ಓದುಗರಿಗೆ ನೀಡಿದ ವಿಕೃತ ಬರಹದಿಂದ ಆರಂಭವಾಗಿ ರೂಪಿಣಿ ಬೆಂಗಳೂರಿಗೆ ಆಗಮಿಸಿ ತಾನಿನ್ನೂ ಬದುಕಿದ್ದೇನೆ ಎಂದು ಸಾಬೀತು ಪಡಿಸುವಲ್ಲಿಯವರೆಗೆ 'ಲಂಕೇಶ್ ಪತ್ರಿಕೆ' ನೀಡಿದ ಬರಹಗಳು ತುಂಬ ಜವಾಬ್ದಾರಿಯಿಂದ ಕೂಡಿವೆ. ಆದರೆ ಈ ಎರಡೂ ಪತ್ರಿಕೆಗಳಲ್ಲಿ ನಿಮ್ಮ ಲೇಖಕರು ಕೆಲವು ಸಮಾನ ಅಂಶಗಳನ್ನು ಗುರುತಿಸಿ ಈ ಎರಡೂ ಪತ್ರಿಕೆಗಳು ಸ್ವಚ್ಛ ಪತ್ರಿಕೋದ್ಯಮದಿಂದ ಕೊಂಚ ದೂರವೇ ಎಂಬ ತೀರ್ಪು ಕೊಡಲು ಯತ್ನಿಸಿದ್ದಾರೆ. ಇದು ಸರಿ ಅಲ್ಲ ಎಂಬುದನ್ನು ನಾನು ಹೇಳ ಬಯಸುವೆ.

'ಹಾಯ್ ಬೆಂಗಳೂರ್' ಪತ್ರಿಕೆಯನ್ನು ಲಂಕೇಶ್ ಪತ್ರಿಕೆಗೆ ಹೋಲಿಸುವಂತೆಯೇ ಇಲ್ಲ! ಅಷ್ಟರ ಮಟ್ಟಿಗೆ 'ಲಂಕೇಶ್ ಪತ್ರಿಕೆ' ಕರ್ನಾಟಕದಲ್ಲಿ ಒಂದು ಹೊಸ ಆಲೋಚನಾಕ್ರಮದ ಪೀಳಿಗೆಯನ್ನೇ ಸೃಷ್ಟಿಸಿದೆ. 'ಲಂಕೇಶ್ ಪತ್ರಿಕೆ' ಕರ್ನಾಟಕದ ಓದುಗರಲ್ಲಿ ಒಂದು ಸದಭಿರುಚಿ ಮೂಡಿಸಿದೆ. ಸಾವಿರಾರು ತರುಣರ ಬೌದ್ಧಿಕ ವಿಕಾಸಕ್ಕೆ ನೆರವಾಗಿದೆ. ಮಹಿಳೆಯರೂ ಸೇರಿದಂತೆ ಶೋಷಣೆಗೊಳಗಾದವರ ದನಿಯಾಗಿದೆ. ಹೀಗೆ 'ಲಂಕೇಶ್ ಪತ್ರಿಕೆ'ಯ ಉತ್ತಮಾಂಶಗಳನ್ನು ಪಟ್ಟಿ ಮಾಡಬಹುದು. ಹಾಗಂತ ಲಂಕೇಶ್ ಪತ್ರಿಕೆಯಲ್ಲಿ ದೋಷಗಳೇ ಇಲ್ಲವೆನ್ನಲಾಗದು. 'ಲಂಕೇಶ್' ಕೂಡ ಮನುಷ್ಯ ಪ್ರಾಣಿಯೇ ಆಗಿರುವುದರಿಂದ ಅವರ ವ್ಯಕ್ತಿಗತ ಪ್ರತಿಷ್ಠೆ, ದುರಹಂಕಾರವೆನ್ನಿಸಬಹುದಾದ ನಡವಳಿಕೆ ಓದುಗರಿಗೆ ಕಿರಿಕಿರಿ ಉಂಟು ಮಾಡುವುದು ನಿಜ. ಆದರೆ 'ಲಂಕೇಶ್' ಪತ್ರಿಕೆ 'ಹಾಯ್ ಬೆಂಗಳೂರ್' ಪತ್ರಿಕೆಯ ಹಾಗೆ ಬರೀ ಕೊಲೆ ಸುಲಿಗೆಗಳ ವಿಕೃತ ವರದಿ ನೀಡಿಲ್ಲ! 'ಹಾಯ್ ಬೆಂಗಳೂರ್' ಪತ್ರಿಕೆ ಬರೀ ಕೊಲೆ ಸುಲಿಗೆಗಳ ಸುತ್ತ ಗಿರಕಿ ಹೊಡೆದು ರೌಡಿಗಳನ್ನೇ ಹೀರೋ ಮಾಡಲು ಹೊರಟಿದೆ. ಸುಳ್ಳೆಷ್ಟೋ ಖರೆ ಎಷ್ಟೋ ಪುಟ ತುಂಬಿಸಲಿಕ್ಕಾಗಿ ಸೃಷ್ಟಿಯಾಗುತ್ತಿರುವ 'ಹಾಯ್ ಬೆಂಗಳೂರ್' ಪತ್ರಿಕೆಯ ಪುಟಗಳು ಯುವ ಜನಾಂಗವನ್ನು ಕೆಟ್ಟ ದಾರಿಗೆ ಎಳೆಯುವುದಂತೂ ನಿಜ. ಅಪ್ರಾಪ್ತ ವಯಸ್ಕರ ಮೇಲೆ 'ಹಾಯ್ ಬೆಂಗಳೂರ್' ಪತ್ರಿಕೆ ಮಾಡುತ್ತಿರುವ ಕೆಟ್ಟ ಪರಿಣಾಮ ತುಂಬ ಆತಂಕಕಾರಿಯಾದುದಾಗಿದೆ!! ಹೀಗೆ ಒಟ್ಟಿನಲ್ಲಿ 'ಲಂಕೇಶ್' ಪತ್ರಿಕೆಯಲ್ಲೂ ಅನೇಕ ದೋಷಗಳು ಕಂಡುಬರಬಹುದಾದರೂ 'ಹಾಯ್ ಬೆಂಗಳೂರ್' ಪತ್ರಿಕೆಯ ಹಾಗೆ ಸಮಾಜಕ್ಕೊಂದು ಆತಂಕವಾಗಿಲ್ಲ. ಇದನ್ನು ನಿಮ್ಮ ಪತ್ರಿಕೆಯ ಲೇಖಕರು ಗಮನಿಸಬೇಕಾಗಿದೆ. ನಿಮ್ಮ ಪತ್ರಿಕೆಯ ಲೇಖಕರು ಈ ಎರಡೂ ಪತ್ರಿಕೆಗಳನ್ನು (ಹಾಯ್ ಮತ್ತು ಲಂಕೇಶ್) ವಿಶ್ಲೇಷಿಸುವಾಗ ತೋರಿದ ಸಂಯಮ ನನಗಂತೂ ತುಂಬ ಖುಷಿ ನೀಡಿತು. ಅವರಿಗೆ ನನ್ನ ನಮನಗಳನ್ನು ತಿಳಿಸಿರಿ.

-ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ಇಲಿ ಎಂದರೆ ಹುಲಿ

-ಚಂದ್ರಶೇಖರ ಪಾಟೀಲ, ಹೊಸಪೇಟೆ.

'ಇಲಿ ಹೋಯಿತೆಂದರೆ ಹುಲಿ ಹೋಯಿತು' ಎಂದು ಬರೆಯುವ ಇಂಥ ಪತ್ರಕರ್ತರ ಬಗ್ಗೆ ಬರೆಯುವುದಕ್ಕೆ ಖೇದವಾಗುತ್ತಿದೆ.

ಎಂತಹ ವಿಪರ್ಯಾಸ !

ಭಜಂತ್ರಿ, ತುಳಸೀಗೇರಿ

ಪತ್ರಿಕೋದ್ಯಮದಲ್ಲಿ ಪಾಳೇಗಾರಿಕೆ (ಪ್ರೊ. ಅಶೋಕ ಕುಮಾರ) ಲೇಖನ ಓದುಗರ ಕಣ್ಣು ತೆರೆಸುವಂತಿತ್ತು. ಪತ್ರಿಕೋದ್ಯಮದ ಪಾವಿತ್ರ್ಯವನ್ನು ಪತ್ರಿಕಾ ಧರ್ಮವನ್ನು ಮತ್ತು ಪತ್ರಿಕಾ ನೀತಿ ಸಂಹಿತೆಯನ್ನು ಕಾಪಾಡಿಕೊಂಡು ಬರಬೇಕಾದ ಪತ್ರಿಕೆಗಳು ಓದುಗರ ಹೆಸರಿನಲ್ಲಿ ಮಾಡುತ್ತಿರುವ ಹೇಯ ಕೃತ್ಯ ಎಂತಹ ವಿಪರ್ಯಾಸಕರ.

ಕುತಂತ್ರ

-ಕೆ.ಸಿ. ವಾಗೀಶ್, ಹರಿಹರ.

ಏಪ್ರಿಲ್ ತಿಂಗಳ 'ಬಿಸಿಲ ಬದುಕು' ಪತ್ರಿಕೆ ನನಗೆ ಬಂದು ತಲುಪಿತು. ಈ ಮೂವರಲ್ಲಿ ಯಾರು ಸರಿ? (ಪಿ. ಲಂಕೇಶ್, ರವಿ ಬೆಳಗರೆ, ಶ್ರೀಧರ್) ವಾದ ವಿವಾದ ಲೇಖನದಿಂದ ಪತ್ರಿಕಾ ರಂಗದಲ್ಲಿ ವಿಷಯಗಳು ಎಷ್ಟು ಸ್ಪಷ್ಟವಾಗಿರಬೇಕು, ಸತ್ಯ ಸುದ್ದಿ ಸುಳ್ಳು ಸುದ್ದಿ ನಡುವೆ ಎಷ್ಟು ಅಂತರ ಎಂಬುದು ಅರ್ಥವಾಯ್ತು. ಪ್ರಚಾರ ಗಿಟ್ಟಿಸುವ ಕುತಂತ್ರ ಎಷ್ಟು ಸಮಂಜಸ?

ಟಪಾಲು

ಸಚಿನ್

-ಪಿ.ಎಚ್. ದಯಾನಂದ, ಹೊನ್ನಾವರ.

ನಾರಾಯಣ ಎಂ.ಭಟ್‌ರವರು ಬರೆದ ಲೇಖನ 'ಸಚಿನ್ ಹ್ಯಾಪಿ ಬರ್ತ್‌ಡೇ' ಸುಂದರವಾದ ಚಿತ್ರಣದೊಂದಿಗೆ ಮೂಡಿ ಬಂದಿತ್ತು. ಇದನ್ನು ಪ್ರಕಟಿಸಿದ ಬದುಕಿಗೆ ನಾನು ಧನ್ಯ. ಇದೇ ರೀತಿ ಭಾರತೀಯ ಕ್ರಿಕೆಟ್ ತಂಡದ ನಾಯಕ ಮಹ್ಮದ್ ಅಜರುದ್ದೀನ್‌ರವರ ಬಗ್ಗೆ ಲೇಖನ ಪ್ರಕಟಿಸಿರಿ.

ಸಾಮಾನ್ಯ ಜ್ಞಾನ

-ಸಂತೋಷ ಬಂಡೆ, ನಾಗಠಾಣ.

ಇದು ಸ್ಪರ್ಧಾತ್ಮಕ ಯುಗ. ಸಾಮಾನ್ಯ ಜ್ಞಾನಕ್ಕೆ ಮೊದಲ ಆದ್ಯತೆ. ಆದ್ದರಿಂದ ನಮ್ಮ 'ಬಿಸಿಲ ಬದುಕು' ಪತ್ರಿಕೆಯಲ್ಲಿ ಸಾಮಾನ್ಯ ಜ್ಞಾನದ ಹೆಚ್ಚು ಹೆಚ್ಚು ವಿಷಯಗಳು ಮೂಡಿ ಬಂದು ವಿದ್ಯಾರ್ಥಿಗಳ, ಸ್ಪರ್ಧಾಳುಗಳ ಮನ ತಣಿಸಲಿ. ನಾವು ಕಳಿಸುವ ಪ್ರಶ್ನೆಗಳಿಗೆ ಆದ್ಯತೆ ಇದೆಯೇ?

ಬೆಲೆ ಹೆಚ್ಚಿಸಿ

-ಎಂ.ವಿ. ಬಾಪಟ್, ಸೊರಬ.

ನೀವು 'ಮನೆ' ಪತ್ರಿಕೆಯ ಬೆಲೆಯನ್ನು 3 ರೂ.ಗಳನ್ನಾದರೂ ಮಾಡಿರಿ. ಬಹಳ ಹಣವಿರುವ ದೊಡ್ಡ ದೊಡ್ಡ ಬಂಡವಾಳಶಾಹಿ ಪತ್ರಿಕೆಗಳೇ ಐದಾರು ರೂ.ಗಳಿಗೆ ಕಡಿಮೆ ಪತ್ರಿಕೆ ಕೊಡುವುದಿಲ್ಲ. ನೀವು ಹೆಚ್ಚಿನ ಕಷ್ಟನಷ್ಟ ಅನುಭವಿಸಬಾರದೆಂದು ನನ್ನ ಕಳಕಳಿಯ ಮನವಿ.

ಚಿಗುರು ಪ್ರತಿಭೆಗಳು

-ಎನ್.ಎಚ್.ಮೇರಾ, ಜಮಖಂಡಿ.

'ಸಾಧನೆಯತ್ತ ಚಿಗುರು ಪತ್ರಿಭೆಗಳು' ಲೇಖನದಲ್ಲಿ ಅಂಗವಿಕಲ ಪ್ರತಿಭೆಗಳನ್ನು ಪರಿಚಯಿಸಿದ ಉಮಾ ಬೆಳ್ತಂಗಡಿ ಅವರಿಗೆ ಹಾಗೂ ಪ್ರಕಟಿಸಿದ ತಮ್ಮ ಪತ್ರಿಕಾ ಬಳಗಕ್ಕೆ ಧನ್ಯವಾದಗಳು. ಇಂತಹ ಬರಹಗಳಿಗೆ ನಿಮ್ಮ ಪತ್ರಿಕೆ ಪ್ರೋತ್ಸಾಹ ನೀಡಲಿ ಎಂದು ಹಾರೈಸುವೆ.

ಪ್ರಸಿದ್ಧಿ ಪಡೆಯಲಿ

-ಶರಣಮ್ಮ ಸಾಲಿಮಠ, ಮಸ್ಕಿ.

ಈ ಪತ್ರಿಕೆ ನನಗೆ ತುಂಬಾ ಇಷ್ಟವಾಗಿದೆ. ಒಂದನೇ ತಾರೀಖು ಬಂತು ಎಂದರೆ ಈ ಪತ್ರಿಕೆಯನ್ನು ನೋಡಬೇಕು, ಓದಬೇಕು ಮತ್ತು ಅದರಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಕಳುಹಿಸಬೇಕು ಅಂತಾ ಕಾತರದಿಂದ ಕಾಯುತ್ತಾ ಇರುತ್ತೇನೆ.

ಉದಯ ಟಿ.ವಿ.ಯು ಪ್ರಸಿದ್ಧಿ ಪಡೆದಂತೆ ಈ ನನ್ನ ನೆಚ್ಚಿನ 'ಬಿಸಿಲ ಬದುಕು' ಮಾಸಪತ್ರಿಕೆ ಕೂಡಾ ಪ್ರಸಿದ್ಧಿ ಪಡೆಯಲಿ ಎಂದು ಹಾರೈಸುತ್ತೇನೆ.

ಕೋಚೆ ಚಿಂತನ

-ವೀರಭದ್ರ, ಮೈಸೂರು.

'ಕೋಚೆ ಚಿಂತನ' ಓದುಗರಲ್ಲಿ ಚಿಂತನೆಯನ್ನು ಹೊಡೆದೆಬ್ಬಿಸುವಂತಿರುತ್ತದೆ. ಕೋಚೆ ಯವರು ಜ್ಞಾಪಕದ ನಿಧಿ. ಅವರ ನೆನಪಿನ ಶಕ್ತಿ ಅಗಾಧವಾದುದು. ಅವರ ಸುಸಂಸ್ಕೃತ ಮನಸ್ಸು ದೇಶ ಹಾಗೂ ಯುವಜನತೆಗಾಗಿ ಮಿಡಿಯುತ್ತಿರುವುದು ನಮ್ಮ ಭಾಗ್ಯ. ಪ್ರತಿಯೊಬ್ಬರೂ ಅವರ ಚಿಂತನವನ್ನು ಓದಿ ಮನನ ಮಾಡಿಕೊಂಡರೆ ಖಂಡಿತವಾಗಿ ಒಳಿತಾಗುತ್ತದೆ, ದೇಶಕ್ಕೆ.

ಉಪ್ಪಿನಕಾಯಿ ಇಲ್ಲದ ಊಟ

-ರಾಜೇಶ ಡಿ. ಸಂಗನಗೌಡ, ಸುರೇಬಾನ

ನಿಮ್ಮ ಪತ್ರಿಕೆ ನನ್ನ ಕೈ ಸೇರಿತು. ಆದರೆ ಊಟದಲ್ಲಿ ಉಪ್ಪಿನಕಾಯಿ ಇಲ್ಲದ ರೀತಿ! ಅದು ಹೇಗೆಂದರೆ ಪ್ರತಿ ತಿಂಗಳು 4ನೇ ಪುಟದಲ್ಲಿ ಸರಸ ವಾರ್ತೆ ಇರುತ್ತಿತ್ತು. ಈ ಬಾರಿ ಅದು ಇರಲಿಲ್ಲ. ಏಕೆ ಎಂಬುದು ನಮಗೆ ತಿಳಿಯಲಿಲ್ಲ. ನೀವು ಅದರಲ್ಲಿ ಅಶ್ಲೀಲ ಫೋಟೋ ಕೊಡದಿದ್ದರೂ ಅದನ್ನು ಪ್ರಕಟಗೊಳಿಸಿ. ಏಕೆಂದರೆ ಬರೆ ಸುದ್ದಿ, ಉದ್ಯೋಗವಿದ್ದರೆ ಪತ್ರಿಕೆ ಪ್ರಚಾರವಾಗುವುದಿಲ್ಲ. ಈಗ ಅಂತಹ ಸುದ್ದಿನೂ ಬೇಕು. ಮುಂದಿನ ತಿಂಗಳು ಪ್ರಕಟಿಸುತ್ತೀರಿ ಎಂದು ನಂಬಿರುವೆ.

ಕ್ರೀಡೆ ಇಲ್ಲ

-ಮಂಜುನಾಥ ಜಿ.ಎಮ್., ಬೆಳವಡಿ

ಕ್ರೀಡೆಗೆ ಹೆಚ್ಚು ಪ್ರಾಶಸ್ತ್ಯ ಇಲ್ಲ ಎಂದು ನನ್ನ ಭಾವನೆ. ದಯವಿಟ್ಟು ರಾಹುಲ ಡ್ರಾವಿಡ್‌ರ ಸಾಧನೆಗಳನ್ನು ಪ್ರಕಟಿಸಿರಿ. ಸಾಧ್ಯವಾದರೆ ಈ ಕನ್ನಡ ಕಣ್ಮಣಿಯ ಸಂದರ್ಶನ ಪ್ರಕಟಿಸಿರಿ.

ಸಂವೇದನೆ

-ಶ್ರೀಕಾಂತ ಎನ್.ಪೂಜಾರ, ಮೂಡಲಗೇರಿ.

ಏಪ್ರಿಲ್ ತಿಂಗಳಲ್ಲಿ ಪ್ರಕಟವಾದ ಸಂವೇದನೆಯಲ್ಲಿ ಮೂಡಿ ಬಂದ 'ಬದುಕಿಲ್ಲದ ಚಿತ್ರ' ಲೇಖನ ತುಂಬಾ ಮಾರ್ಮಿಕವಾಗಿ ಮೂಡಿ ಬಂದಿರುತ್ತದೆ. ಲೇಖಕರಾದ ಎಂ.ಎಸ್.ಮೂರ್ತಿಯವರಿಗೆ ಅನಂತ ವಂದನೆಗಳು.

ಅರ್ಥ - ಅಪಾರ್ಥ

ಈಗಿನ **ಹುಗಿಯರು** ಬಾಬ್‌ಕಟ್ ಹೊಡಿಸುತ್ತಿದ್ದಾರಲ್ಲ?
[**ಕನ್ನಡಮ್ಮ**, 31.1.99] -ಪ್ರವೀಣ ಶಿಂಧೆ, ಧಾರವಾಡ.

ಬಿಜೆಪಿಯಿಂದ ಗದಗ **ನಗಸಭೆ** ಸದಸ್ಯೆ ಪವಾರ್ ಉಚ್ಚಾಟನೆ.
[***ಸಂಯುಕ್ತ ಕರ್ನಾಟಕ***, 1.3.99] -ನಾಗು ಪಾಟೀಲ್, ಗದಗ.

ರಾಮಕೃಷ್ಣ **ಹಗಡೆ** ಮುಂದಿನ ಮುಖ್ಯಮಂತ್ರಿ ಆಗಬೇಕೆಂಬುದೇ ಲೋಕಶಕ್ತಿಯ ಅಪೇಕ್ಷೆ.
[***ಜನತಾ ವಾಣಿ***, 11.2.99] - ಕೆ. ಚಂದ್ರಮೌಳಿ, ಹರಪನಹಳ್ಳಿ.

.......ದೂರ ಸ್ಥಳಗಳಿಗೆ ಸೇವೆ ಸಲ್ಲಿಸಲು ಖಾಸಗಿಯವರಿಗೆ **200** ಇಸ್ವಿ ಜನವರಿಯಿಂದ ಮುಕ್ತ ಅನುಮತಿ ನೀಡಲಾಗುವುದು.
[***ಸಂಯುಕ್ತ ಕರ್ನಾಟಕ***, 27.3.99] -ಬಸವರಾಜ್ ಕರಕರಡ್ಡಿ, ಧಾರವಾಡ.

ಏಪ್ರಿಲ್ 1 ರಿಂದ **ಕಟ್ಟಗಳ** ಮೇಲಿನ ಕಂದಾಯ ಪರಿಷ್ಕರಿಸಲು ತೀರ್ಮಾನ.
[**ಆಂದೋಲನ**, 25.3.99] -ವಿನ್ಸೆಂಟ್, ಕೊಳ್ಳೇಗಾಲ.

ಮುಂದಿನ ಶತಮಾನದ ಪ್ರಥಮ ಅಖಿಲ **ಭಾರದ** 68ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಹೊಸ ಪ್ರವೃತ್ತಿಗೆ ನಾಂದಿ ಹಾಡಬೇಕು.
[**ದಿಕ್ಸೂಚಿ**, ಏಪ್ರಿಲ್ 1999] - ರವಿ ದೇವರಡ್ಡಿ, ಹಮ್ಮಿಗಿ.

ಹೈದರಾಬಾದ್ ತಂಡದವರು ಈಗ **ಸೆಮಿ ಫೈಲ್‌ನಲ್ಲಿ** ಮಧ್ಯ ಪ್ರದೇಶವನ್ನು ಎದುರಿಸಲಿದ್ದಾರೆ.
[**ಪ್ರಜಾವಾಣಿ**, 4.4.99] -ಕೆ. ವರಗಪ್ಪ, ಶ್ರೀಧರಗಡ್ಡೆ

...ಖ್ಯಾತ ನಾಟಕಗಾರ ಗಿರೀಶ್ ಕಾರ್ನಾಡ್ ಅವರಿಗೆ ಭಾರತೀಯ ಸಾಹಿತ್ಯ ಲೋಕದ ಅತ್ಯುನ್ನತ ಪ್ರಶಸ್ತಿಯಾಗಿರುವ **ಭಾರತ ರತ್ನ**ವನ್ನು ಪ್ರದಾನಿಸುವ ಕಾರ್ಯಕ್ರಮದಲ್ಲಿ ಅಟಲ್ ನುಡಿದರು.
[**ಕನ್ನಡ ಜನಾಂತರಂಗ**, 28.3.99] -ಅಶ್ವಿನ್ ಪದವಿನಂಗಡಿ, ಮಂಗಳೂರು.



ಉಣ್ಣದ ಮಗುವಿಗೆ ಔಷಧಿ ಬೇಕೆ?

■ ಡಾ. ವಿನೋದ ಛೆಬ್ಬಿ

ತನ್ನ ಮಗು ಸರಿಯಾಗಿ ಉಣ್ಣುವುದಿಲ್ಲ ಎಂಬುದು ಬಹುಪಾಲು ಅಮ್ಮಂದಿರ ದೂರು. ಅದಕ್ಕಾಗಿ ವೈದ್ಯರನ್ನು ಸಂಪರ್ಕಿಸಿ ಔಷಧಿಗಾಗಿ ಒತ್ತಾಯಿಸುತ್ತಾರೆ. ಇದು ಎಷ್ಟು ಸರಿ?

ವಿಶ್ವ ತಾಯಂದಿರ ದಿನಾಚರಣೆ (ಮೇ 13) ವಿಶೇಷ ಲೇಖನ

ಎರಡು ಹೆಣ್ಣು ಮಕ್ಕಳ ನಂತರ ಹುಟ್ಟಿದ ಮಗ ಚಿರಂಜೀವಿಗೆ ಈಗ ಮೂರು ವರ್ಷ. ಅಪರೂಪವಾದ ಮಗನಿಗೆ ಅಪ್ಪ-ಅಮ್ಮಂದಿರು ಎಷ್ಟು ಮಾಡಿದರೂ ಕಡಿಮೆಯೆ. ಆದರೇನು, ಅವನು ಸರಿಯಾಗಿ ತಿನ್ನುವುದೇ ಇಲ್ಲವಲ್ಲ? ಚಾಕಲೇಟು ಕೊಟ್ಟರೂ, ಬಿಸ್ಕೇಟು ಕೊಟ್ಟರೂ ಅವನು ತಿನ್ನುವುದೇ ಒಂದು, ಹೆಚ್ಚೆಂದರೆ ಎರಡು. ಊಟವಂತೂ ಕೇಳುವುದೇ ಬೇಡ. ಒಂದೇ ತುತ್ತಿಗೆ ಸಾಕು ಎಂದು ಮುಖ ತಿರುವುತ್ತಾನೆ. ಸದಾ ಆಟದಲ್ಲೇ ಮುಳುಗಿರುವ ಹುಡುಗನನ್ನು ಹಿಡಿದು ಬಾಯಿಗೆ ತುತ್ತು ಹಾಕಿ ಸಾಕಾಗಿದೆ. ಅಂಗಡಿಯಿಂದ ಅವನಿಗೆಂದು ತಂದಿಟ್ಟ ತಿಂಡಿಗಳನ್ನೆಲ್ಲ ಅವನ ಅಕ್ಕಂದಿರೇ ಮುಗಿಸಿದರೂ ಅವನಿಗೆ ಮಾತ್ರ ಸ್ವಲ್ಪವೂ ಬೇಜಾರಿಲ್ಲ. ಎಷ್ಟೇ ಖರ್ಚಾದರೂ ಸರಿ, ಒಳ್ಳೆಯ ಟಾನಿಕ್ ಒಂದನ್ನು ಬರೆಸಿಕೊಳ್ಳಲೇ ಬೇಕೆಂಬ ಹಠದಿಂದ ಈ ದಂಪತಿ ನನ್ನ ಮುಂದೆ ಕುಳಿತುಕೊಂಡಿರುವಾಗ, 'ಮುಂಜಾನೆಯಿಂದ ಒಂದು ಅಗಳೂ ಮುಟ್ಟದಿರುವ' ಅವರ ವಂಶೋದ್ಧಾರಕ ತನ್ನಮ್ಮನ ಹಿಡಿತದಿಂದ ಬಿಡಿಸಿಕೊಂಡು ಆಡಲು ಹೊರಗೋಡುವ ಆತುರದಲ್ಲಿದ್ದಾನೆ.

ಪ್ರತಿಭಾ ಮತ್ತು ಕಮಲಾಕರ್ ಪೈ ಒಂದೇ ಬ್ಯಾಂಕಿನ ಎರಡು ಬೇರೆ ಬೇರೆ ಶಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಒಂಭತ್ತು ತಿಂಗಳ ಮಗುವೊಂದು ಅಪ್ಪನ ತೊಡೆಯೇರಿ ಕುಳಿತು ನಿಸ್ತೇಜವಾದ ಕಣ್ಣುಗಳಿಂದ ಶೂನ್ಯವನ್ನು ದಿಟ್ಟಿಸುತ್ತಿದೆ. ಮೇಜಿನ ಮೇಲಿರುವ ವೈದ್ಯಕೀಯ ಕಾಗದಗಳು ಮಗುವಿನಲ್ಲಿ ಯಾವ ಕಾಯಿಲೆಯೂ ಇಲ್ಲವೆಂದು ಆಧಾರಸಹಿತ ಘೋಷಿಸುತ್ತಿವೆ. ಆಗಾಗ ಪ್ರತಿಭಾ ತನ್ನ ಆರೋಪಭರಿತ ದೃಷ್ಟಿಯನ್ನು ಪಕ್ಕದಲ್ಲಿ ನಿಂತಿರುವ ಕೆಲಸದ ಹುಡುಗಿಯ ಕಡೆಗೆ ಹರಿಸುತ್ತಾಳೆ. ಹತ್ತು ವರ್ಷದ ಆ ಹುಡುಗಿಯನ್ನು ತೋರಿಸಿ, ''ಮಗುವಿಗಾಗಿ ಇಟ್ಟಿರುವ ಆಹಾರವನ್ನೆಲ್ಲ ಇವಳೇ ಕಬಳಿಸುತ್ತಾಳೆ!'' ಎಂದು ಇಂಗ್ಲೀಷಿನಲ್ಲಿ ಗಂಡನ ಹತ್ತಿರ ದೂರುತ್ತಾಳೆ. ಆ ಹುಡುಗಿಯ ಕೂದಲು ನೋಡಿದರೆ ಸಾಕು, ಸಾರಜನಕದ ಕೊರತೆ ಎದ್ದು ಕಾಣುತ್ತದೆ. ಅವಳ ಕಣ್ಣುಗಳಲ್ಲಿರುವ ಅಮಾಯಕ ಕಳೆಯು ಅವಳ ಕುಟುಂಬದ ದಾರಿದ್ರ್ಯವನ್ನು ತೋರಿಸುತ್ತಿದೆ.

ಆರೋಗ್ಯವಂತನಾದ 12 ವರ್ಷದ ತನ್ನ



ಡಾ. ವಿನೋದ ಛೆಬ್ಬಿ


ಇವರು ಮೂಲತಃ ಬಾಗಲಕೋಟೆಯ ಛೆಬ್ಬಿ ಊರಿನವರಾದರೂ ಕರ್ನಾಟಕದ ವಿವಿಧ ಶಾಲಾ-ಕಾಲೇಜುಗಳಲ್ಲಿ ಕಲಿತವರು. ದೇಶಕ್ಕೆ ಸ್ವಾತಂತ್ರ್ಯ ದೊರಕಿದ ವರ್ಷ ಹುಟ್ಟಿದ ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಮಂಗಳೂರಿನಿಂದ, ಬಿಎಸ್‌ಸಿ ಪರೀಕ್ಷೆಯನ್ನು ಗುಲಬರ್ಗಾದ ಸರಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಿಂದ, ಎಂ.ಬಿ.ಬಿ.ಎಸ್ ಶಿಕ್ಷಣವನ್ನು ಬಳ್ಳಾರಿಯ ಸರಕಾರಿ ವೈದ್ಯಕೀಯ ಕಾಲೇಜಿನಿಂದ ಕಲಿತಿದ್ದಾರೆ. ಕಳೆದ ಕಾಲು ಶತಮಾನಗಳಿಂದ ರೋಗಿಗಳಿಗೆ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಮೂಲತಃ ಕುಟುಂಬ ವೈದ್ಯರಾದ ಇವರು ಮನೋವಿಜ್ಞಾನ, ಲೈಂಗಿಕ ವಿಜ್ಞಾನ, ದಾಂಪತ್ಯ ಸಮಾಲೋಚನೆಯಲ್ಲಿ ಅಂತಾರಾಷ್ಟ್ರೀಯ ಅಧ್ವರ್ಯುಗಳಾದ ಇಂಗ್ಲೆಂಡಿನ ಡಾ.ಜಾನ್ ಬ್ಯಾಂಕ್ರೋಫ್ಟ್, ಅಮೆರಿಕದ ಡಾ.ಬ್ಯಾರಿ ಮೆಕಾರ್ಥಿ, ಭಾರತದ ಡಾ.ಮಹೀಂದರ್ ವತ್ಸಾ ಮುಂತಾದವರಿಂದ ತರಬೇತಿ ಪಡೆದಿದ್ದಾರೆ. ಮಾನಸಿಕ ಮತ್ತು ಮನೋಸಾಮಾಜಿಕ ಸಮಸ್ಯೆಗಳು, ಮಕ್ಕಳ ಮತ್ತು ಹದಿವಯಸ್ಕರ ಸಮಸ್ಯೆಗಳು, ಲೈಂಗಿಕ ಸಮಸ್ಯೆಗಳು ಮತ್ತು ದಾಂಪತ್ಯ ಸಮಸ್ಯೆಗಳು ಇವರ ವಿಶೇಷ ಆಸಕ್ತಿಯ ಕ್ಷೇತ್ರಗಳಾಗಿವೆ. ಇವರ ಅನೇಕ ಲೇಖನಗಳು ಇಂಡಿಯನ್ ಮೆಡಿಕಲ್ ಅಸೋಸಿಯೇಶನ್‌ನ ಪತ್ರಿಕೆ, ಕನ್ನಡ ಪ್ರಭ, ಸುಧಾ, ಇಂಡಿಯನ್ ಎಕ್ಸ್‌ಪ್ರೆಸ್, ಟೈಂಸ್ ಆಫ್ ಇಂಡಿಯಾ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಬೆಂಗಳೂರಿನ ಭಾರತೀಯ ಕುಟುಂಬ ಯೋಜನಾ ಸಂಸ್ಥೆಯಲ್ಲಿ ಇವರು ಗೌರವ ಸಲಹೆಗಾರರಾಗಿದ್ದಾರೆ. ಬೆಂಗಳೂರಿನ ಯಲ್ಲಮ್ಮ ದಾಸಪ್ಪ ಆಸ್ಪತ್ರೆಯಲ್ಲಿ ಲೈಂಗಿಕ ಸಮಸ್ಯಾ ತಜ್ಞರಾಗಿ ಕಾರ್ಯ ನಿರ್ವಹಿಸುತ್ತಿರುವ ಇವರು ತಮ್ಮ ಸ್ವಂತ ಚಿಕಿತ್ಸಾಲಯವನ್ನು ಯಶವಂತಪುರದಲ್ಲಿ ನಡೆಸುತ್ತಿದ್ದಾರೆ. ಇಸ್ರೋ, ಭಾರತೀಯ ವಿಜ್ಞಾನ ಸಂಸ್ಥೆ ಹಾಗೂ ಕರ್ನಾಟಕ ವಿದ್ಯುತ್ ನಿಗಮಗಳಿಗೆ ಸಲಹಾ ವೈದ್ಯರಾಗಿಯೂ ಡಾ. ಛೆಬ್ಬಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ವಿಳಾಸ: ಡಾ.ವಿನೋದ ಛೆಬ್ಬಿ, 14, ಮತ್ತೀಕೆರೆ ಮುಖ್ಯರಸ್ತೆ,
ಬೆಂಗಳೂರು - 54, ದೂರವಾಣಿ: 3377693,
ಪೇಜರ್: 9628-808680

ಮಗನ ಶರ್ಟನ್ನು ಕಾಮಾಕ್ಷಮ್ಮ ಒತ್ತಾಯದಿಂದ ನನ್ನೆದುರೇ ತೆಗೆಸಿ, ''ನೀವೇ ನೋಡಿ ಡಾಕ್ಟ್ರೇ, ಎದೆಯ ಮೂಳೆಗಳು ಹೇಗೆ ಕಾಣುತ್ತಿವೆ ಅಂತ. ನನ್ನ ಸ್ನೇಹಿತೆಯರೆಲ್ಲರೂ ಇವನಿಗೆ ಟಿಬಿ ಆಗಿದೆಯಾ, ಯಾಕಿಷ್ಟು ಸಣ್ಣಗಿದ್ದಾನೆ? ಎಂದು ಕೇಳುತ್ತಿದ್ದಾರೆ. ನಾನು ಎಷ್ಟು ಜನಕ್ಕೆ ಅಂತ ಉತ್ತರ ಕೊಡಲಿ?'' ಎಂದು ದೂರುತ್ತಾಳೆ. ತನ್ನ ಗೆಳತಿಯರ ಮುಂದೆ ತನ್ನ ಮಗನನ್ನು ಶರಟುಬಿಚ್ಚಿ ಏಕೆ ನಿಲ್ಲಿಸುತ್ತಾಳೆಂದು ನನಗೆ ಅರ್ಥವಾಗುವುದಿಲ್ಲ. ಕೆದಕಿ ಕೇಳಿದಾಗ ಅವರ ಯಜಮಾನರೂ ಚಿಕ್ಕವರಿದ್ದಾಗ ಇದೇ ರೀತಿ ಇದ್ದರೆಂದು ಒಪ್ಪಿಕೊಳ್ಳುತ್ತಾಳೆ. ''ಆಗಿನ ಕಾಲದಲ್ಲಿ ಈಗಿರುವಷ್ಟು ಒಳ್ಳೆಯ ಟಾನಿಕ್‌ಗಳು ಇರಲಿಲ್ಲವಲ್ಲ?'' ಎಂದು ವಾದಿಸುತ್ತಾಳೆ.

ಜಸ್ಮಿನ್ ಎಲ್ಲಕ್ಕಿಂತ ಮುಂದು. ತನ್ನ ಗಂಡ ಅಮೆರಿಕೆಯಿಂದ ಕಳಿಸಿಕೊಟ್ಟ ಸೆಂಟೈಲ್ ಚಾರ್ಟ್ ನನ್ನ ಮುಂದೆ ಇಡುತ್ತ, ''ನೋಡಿ ಡಾಕ್ಟರ್, ಅಮೆರಿಕೆಯ ಮಟ್ಟ ನೋಡಿದರೆ ನನ್ನ ಮಗು ಏನೂ ಬೆಳೆದೇ ಇಲ್ಲ.'' ಎಂದು ದೂರುತ್ತಾಳೆ. ಅವಳ ತೊಡೆಯ ಮೇಲೆ ಮಲಗಿರುವ ನಾಲ್ಕು ತಿಂಗಳ ಮಗು ಎಂಟು ತಿಂಗಳ ಮೈ ಹೊತ್ತುಕೊಂಡಿದೆ.

ಇಂಥ ನೂರಾರು ಉದಾಹರಣೆಗಳು ನಮಗೆ ದಿನನಿತ್ಯ ಕಾಣುತ್ತವೆ. ಹಾಗೆ ನೋಡಿದರೆ, ಈಗಿನ ಕಾಲದಲ್ಲಿ ತನ್ನ ಮಗು ಚೆನ್ನಾಗಿ ಊಟ ಮಾಡುತ್ತದೆಯೆಂದು ಹೇಳಿಕೊಳ್ಳುವ ತಾಯಿಯೇ ಇಲ್ಲವೆಂದು ಹೇಳಬಹುದು. ಆದರೂ - ಕೆಲವು ಸಂದರ್ಭಗಳ ಹೊರತಾಗಿ - ಮಗು ಮಾತ್ರ ಯಾವ ಕೊರತೆಯನ್ನೂ ತೋರಿಸದೆ ಆರೋಗ್ಯಕರವಾಗಿ ಬೆಳೆಯುವುದನ್ನು ನೋಡುತ್ತೇವೆ. ಹೀಗೇಕೆ? ಈ ಪ್ರಶ್ನೆಗೆ ಉತ್ತರ ಕೊಡುವ ಮುನ್ನ ನಮ್ಮ ಸುತ್ತಲಿನ ಪರಿಸರವನ್ನು, ಸಮಾಜವನ್ನು, ಕುಟುಂಬಗಳನ್ನು ಗಮನಿಸೋಣ.





ಕೆಲವು ದಶಕಗಳ ಮುಂಚೆ ಜನರು ಹೆಚ್ಚಿನ ಮಟ್ಟಿಗೆ ಅವಿಭಕ್ತ ಕುಟುಂಬಗಳಲ್ಲಿ ವಾಸಿಸುತ್ತಿದ್ದರು. ಒಂದು ಕುಟುಂಬದಲ್ಲಿ ಹತ್ತಾರು ಮಕ್ಕಳಿದ್ದು ಅವರ ಜವಾಬ್ದಾರಿಯನ್ನು ಕುಟುಂಬದ ಆಸ್ತಿಯನ್ನು ನೋಡಿಕೊಳ್ಳುವ ತರಹ ಹಿರಿಯರೇ ನೋಡಿಕೊಳ್ಳುತ್ತಿದ್ದರು. ಆಗ ಮಕ್ಕಳ ಲಾಲನೆ-ಪಾಲನೆ ಒಂದು ಸಾಮೂಹಿಕ ಚಟುವಟಿಕೆಯಾಗಿತ್ತು. ಮಕ್ಕಳು ಕಲಿಯುವ ಸಮಯದಲ್ಲಿ ಅವರ ಪಾಲಕರೂ ಮನೆಯ ಹಿರಿಯರಿಂದ ಕಲಿಯುತ್ತಿದ್ದರು. ಬರಬರುತ್ತ ಕುಟುಂಬಗಳು ಚಿಕ್ಕವಾದ ಹಾಗೆ ಮಕ್ಕಳ ಜವಾಬ್ದಾರಿಯು ನೇರವಾಗಿ ತಂದೆ-ತಾಯಿಯರ ಹೆಗಲ ಮೇಲೇರಿತು. ಆದರೆ, ಮಾರ್ಗದರ್ಶನ ಮಾಡಲು ಹಿರಿಯರು ಕುಟುಂಬದಲ್ಲಿಲ್ಲವಲ್ಲ? ಆದುದರಿಂದ ಮಕ್ಕಳ ಪಾಲನೆ-ಪೋಷಣೆಯನ್ನು ಯುವ ತಂದೆ-ತಾಯಿಯರೇ ಹೊರುವ ಹಾಗಾಯಿತು. ಕಡಿಮೆ ತಿಳಿವಳಿಕೆಯುಳ್ಳ ಇವರಿಗೆ ಹೆಚ್ಚಿನ ಜವಾಬ್ದಾರಿಯ ಬಗೆಗೆ ಆಂತಕ ಉಂಟಾದುದು ಸಹಜ ತಾನೆ?

ಆತಂಕಪಡುವ ತಾಯಂದಿರು

ತಮ್ಮ ಮಕ್ಕಳು ಸರಿಯಾಗಿ ಊಟ ಮಾಡುವುದಿಲ್ಲವೆಂದು ತಕರಾರು ಮಾಡುವ ತಾಯಂದಿರಿಗೆ ಈ ಕೆಳಗಿನ ಕಾರಣಗಳಲ್ಲಿ ಒಂದಕ್ಕಿಂತ ಹೆಚ್ಚು ಅನ್ವಯವಾಗುತ್ತವೆ:

1. ಚಿಕ್ಕ ಕುಟುಂಬದಿಂದ ಬಂದವರು; ಅಪರೂಪವಾಗಿ, ಬಹಳ ಮುದ್ದಿನಿಂದ ಬೆಳೆಸಲ್ಪಟ್ಟವರು. 2. ಬಾಲ್ಯದಲ್ಲಿ ಮತ್ತು ಕಿಶೋರಾವಸ್ಥೆಯಲ್ಲಿ ಯಾವ ಜವಾಬ್ದಾರಿಯನ್ನೂ ಹೊರದೆ ದೊಡ್ಡವರಾಗಿರುವವರು. 3. ಮಕ್ಕಳನ್ನು ಬೆಳೆಸುವುದರ ಬಗೆಗೆ ತಮ್ಮ ಗಂಡಂದಿರ ಜೊತೆ ತೀವ್ರ ಭಿನ್ನಾಭಿಪ್ರಾಯವಿರುವವರು. 4. ಉಪವಾಸದಿಂದ ಅಥವಾ ಖಾಯಿಲೆಯಿಂದ ನರಳಿದ ಮಕ್ಕಳ ಕಟು ಅನುಭವವಿರುವವರು. 5. ಏಕೈಕ ಮಗುವಿರುವ ಕುಟುಂಬ. 6. ತಾಯಿಯೇ ಎಲ್ಲ ಜವಾಬ್ದಾರಿ ಹೊತ್ತಿರುವ ಕುಟುಂಬ. 7. ಚಿಕ್ಕ ವಯಸ್ಸಿನ ತಾಯಂದಿರು. 8. ಮನೆಯ ಹೊರಹೋಗಿ ದುಡಿಯುವ ತಾಯಂದಿರು. 9. ಕೌಟುಂಬಿಕ ಪೀಡನೆಗೊಳಗಾದ ತಾಯಂದಿರು. 10. ಹೆಚ್ಚಿದ ನಗರೀಕರಣ.

ಯಾವುದೇ ಒಂದು ಕೆಲಸದ ಪರಿಣಾಮವನ್ನು ಅಳೆಯಲು ನಮಗೆ ಒಂದು ಅಳತೆಗೋಲು ಬೇಕು ತಾನೆ? ಮಗುವಿಗೆ ಉಣ್ಣಿಸುವುದರಲ್ಲೂ ಇದೇ ಮಾತು ಅನ್ವಯಿಸುತ್ತದೆ. ದೊಡ್ಡ ಕುಟುಂಬಗಳಲ್ಲಿ ಹಲವಾರು ಮಕ್ಕಳು ಒಟ್ಟಿಗೆ ಕುಳಿತು ಊಟ ಮಾಡುವಾಗ ಬೇರೆ ಮಕ್ಕಳ ಉದಾಹರಣೆಯು ಕಣ್ಣೆದುರು ಇರುವುದರಿಂದ ತಾಯಂದಿರಿಗೆ ಯಾವ ಯೋಚನೆಯೂ ಕಾಡುವುದಿಲ್ಲ. ಅದಲ್ಲದೆ, ಮಕ್ಕಳು ಪರಸ್ಪರರ ಮಾದರಿಯನ್ನು ಅನುಸರಿಸುವುದರಿಂದ ಸ್ಪರ್ಧಾಭಾವನೆಯಿಂದ ಊಟ ಮಾಡುತ್ತವೆ. ಆದರೆ ಅದೇ ಒಂಟಿ ಮಗುವಿಗೆ ತಿನ್ನಿಸುವಾಗ ಮಾತ್ರ ಅದು ತಿನ್ನುವ ಆಹಾರದ ಪ್ರಮಾಣ ಕಡಿಮೆಯೆನಿಸಿ ತಾಯಂದಿರು ಅನವಶ್ಯಕವಾಗಿ ಆತಂಕ ಪಡುತ್ತಾರೆ. ಅದರಲ್ಲಂತೂ ಅದು ಏಕೈಕ ಮಗುವಾಗಿದ್ದರೆ ಆತಂಕ ಇನ್ನೂ ಜಾಸ್ತಿಯಾಗುತ್ತದೆ.

ಬೇಕರಿಯ ಭಕ್ತ

ನನ್ನ ನೆರೆಮನೆಯಲ್ಲಿ ಹತ್ತು ವರ್ಷದ ಹುಡುಗನೊಬ್ಬನಿದ್ದಾನೆ. ತಂದೆ-ತಾಯಿಯ ಏಕೈಕ ಸಂತಾನ. ಅವನು ಮನೆಯಲ್ಲಿ ಮಾಡಿದ ಅಡಿಗೆಯನ್ನು ಮುಟ್ಟುವುದಿಲ್ಲ - ಮೊಟ್ಟೆಯ ಆಮ್ಲೇಟ್ ಒಂದರ ಹೊರತಾಗಿ. ಅವನು ತಿನ್ನುವ ಎಲ್ಲ ವಸ್ತುಗಳೂ ಹತ್ತಿರದ ಬೇಕರಿಯಿಂದ ಬರಬೇಕು. ದಿನಾಲೂ ಅವರಪ್ಪ ಅವನನ್ನು ಬೇಕರಿಗೆ ಕರೆದುಕೊಂಡು ಹೋಗಿ ಅವನಿಗೆ ಬೇಕಾದ ಆ ದಿನದ 'ರೇಶನ್' ಕೊಡಿಸುತ್ತಾರೆ. ಕೇಕ್, ಪುಡ್ಡಿಂಗ್, ಪೇಸ್ಟ್ರೀಸ್, ಐಸ್ ಕ್ರೀಂ, ಕ್ಯಾಡ್‌ಬರೀಸ್, ಫೈವ್ ಸ್ಟಾರ್ - ಯಾವುದಾದರೂ ಸರಿ. ಅದೇ ಅವನ ಬೆಳಗಿನ ತಿಂಡಿ; ಅದನ್ನೇ ಅವನು ಶಾಲೆಯ ಮಧ್ಯಾಹ್ನದ ಊಟಕ್ಕೆಂದು ಕೊಂಡೊಯ್ಯುತ್ತಾನೆ. ಮತ್ತೆ ರಾತ್ರಿಯ ಊಟಕ್ಕೇ? ಅದೇ! ಈ ಪದ್ಧತಿ ಕಳೆದ ಏಳು ವರ್ಷಗಳಿಂದ ನಡೆದುಕೊಂಡು ಬಂದಿದೆ.

ಹಿಂದೆ: ಅವನು ಮೂರು ವರ್ಷದವನಿದ್ದಾಗ ತೀವ್ರವಾದ ಜ್ವರ ಹತ್ತು ದಿನ ಸತಾಯಿಸಿತ್ತಂತೆ. ಅವನು ಆಗ ಏನೂ ತಿನ್ನದಿದ್ದಾಗ ಕೇಕ್ ಮತ್ತು ಚಾಕಲೇಟು ಕೊಡುತ್ತಿದ್ದರಂತೆ. ಅಂದಿನಿಂದ ಅದೇ ರೂಢಿಯಾಗಿದೆ. ಜ್ವರ ನಿಂತ ಮೇಲೆ ದಿನನಿತ್ಯದ ಆಹಾರ ಕೊಡಬಹುದಿತ್ತಲ್ಲ? ಹೌದು, ಆದರೆ ಅದೇ ಬೇಕೆಂದು ವಿಪರೀತ ಹಠ ಮಾಡುತ್ತಿದ್ದ. ಒಬ್ಬನೇ ಮಗ ಅಲ್ಲವೆ, ಅವನನ್ನು ಬಿಟ್ಟು ಇನ್ನಾರು ತಿನ್ನುವವರಿದ್ದಾರೆ ಅಂತ ಸುಮ್ಮನಾದೆವು.

ಈಗ : ಅವನ ತೂಕ 64 ಕೆ.ಜಿ. ನೋಡಲು ಕೊಬ್ಬಿನ ಮುದ್ದೆಯಂತಿದ್ದಾನೆ. ಅವನ ಉದ್ದಗಲಗಳು ಸುಮಾರು ಒಂದೇ ಸಮನಾಗಿವೆ. ಓಡುವುದಂತೂ ಬಿಡಿ, ಬೇಗ ಬೇಗ ನಡೆಯಲೂ ಆಗುವುದಿಲ್ಲ. ಶಾಲೆಯಲ್ಲಿ ಕುಳಿತುಕೊಳ್ಳಲು ಪ್ರತ್ಯೇಕವಾದ ಜಾಗವನ್ನು ಕಾದಿರಿಸಲಾಗಿದೆ. ಸಹಪಾಠಿಗಳ ಅಪಹಾಸ್ಯಕ್ಕೆ ಗುರಿಯಾಗುವುದು ದಿನನಿತ್ಯದ ಪರಿಪಾಠವಾಗಿದೆ.

ಮುಂದೆ: ಯಾವ ಹುಡುಗಿಯೂ ಇವನನ್ನು ಸ್ವೀಕರಿಸಲಾರಳು. ಯಾವ ಖಾಯಿಲೆಯೂ ಇವನನ್ನು ಬಿಡಲಾರದು. ಯಾವಾಗಲಾದರೂ ಅಪಘಾತವಾಗಬಹುದು.

ತಮ್ಮ ಮಕ್ಕಳು ಕಡಿಮೆ ಊಟ ಮಾಡುತ್ತಾರೆಂದು ಚಿಂತಿಸುವ ತಾಯಂದಿರು ಚಾಕಲೇಟು, ಬಿಸ್ಕೇಟು, ವೇಫರ್, ಬನ್ ಇತ್ಯಾದಿಗಳ ಮೂಲಕ ಎಷ್ಟೊಂದು ಆಹಾರವನ್ನು ಅವರು ತಮ್ಮ ಹೊಟ್ಟೆಯಲ್ಲಿ ಇಳಿಸುತ್ತಾರೆಂದು ಲೆಕ್ಕವಿಡುವುದಿಲ್ಲ. ಅನ್ನವೊಂದೆ ಆಹಾರವಲ್ಲ. ಮಕ್ಕಳು ಏನು ತಿಂದರೂ ಅದು ಆಹಾರವೇ. ಅದರಲ್ಲಂತೂ ಸಿಹಿ ತಿಂಡಿಗಳಲ್ಲಿ, ಕೊಬ್ಬಿನ ಪದಾರ್ಥಗಳಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಶಕ್ತಿಯ ಮೂಲವಿರುತ್ತದೆ. ಇಂಥ ಆಹಾರವನ್ನು ಸ್ವಲ್ಪವೇ ತಿಂದರೆ ಸಾಕು, ಹೊಟ್ಟೆ ತುಂಬಿ ಗಂಟೆಗಟ್ಟಲೆ ಹಸಿವೆ ಆಗುವುದೇ ಇಲ್ಲ. ಉದಾಹರಣೆಗೆ, ಮೂರು ವರ್ಷದ ಮಗುವಿಗೆ ಎರಡು ಕ್ಯಾಡ್‌ಬರೀಸ್ ಎಕ್ಲೇರ್ಸ್ ಚಾಕಲೇಟುಗಳು ಅಥವಾ ಒಂದು ಲೋಟ ಬೋರ್ನ್‌ವಿಟಾ, ಹಾರ್ಲಿಕ್ಸ್, ಕಾಂಪ್ಲಾನ್ ಒಂದು ಪೂರ್ಣ ಪ್ರಮಾಣದ ಊಟಕ್ಕೆ ಸಮಾನ! ಈ ರೀತಿ ಹೊಟ್ಟೆ ತುಂಬಿಸಿಕೊಂಡ ಮಗುವಿಗೆ ಅನ್ನ ಹೇಗೆ ಹಿಡಿಸೀತು?

ಮಕ್ಕಳು ಪ್ರೀತಿಯ ನಡವಳಿಕೆಗೆ ದೊಡ್ಡವರ ಕಲ್ಪನೆಯನ್ನು ಮೀರಿ ಪ್ರತಿಸ್ಪಂದಿಸುತ್ತವೆ. ಪ್ರೀತಿ, ವಾತ್ಸಲ್ಯಗಳು ಮಗುವಿನ ಬೆಳವಣಿಗೆಗೆ ಆಹಾರದಷ್ಟೇ ಮುಖ್ಯವಾದುವು. ಆದರೆ ಕೆಲವು ಮಕ್ಕಳಲ್ಲಿ ಅನಿವಾರ್ಯವಾಗಿ ಪ್ರೀತಿಯ ಕೊರತೆ ಉಂಟಾಗುತ್ತದೆ. ಇಂಥ ಮಗುವು ಬೇಡವಾಗಿರುವ ಹೆಣ್ಣು ಮಗುವಾಗಿರಬಹುದು; ಬೇಡವಾದ ಸಂದರ್ಭದಲ್ಲಿ ಹುಟ್ಟಿರಬಹುದು; ಅಥವಾ ಮನಸ್ತಾಪ ತುಂಬಿದ ಕುಟುಂಬದಲ್ಲಿ ಪ್ರವೇಶಿಸಿರಬಹುದು. ಮನೆಯಲ್ಲಿ ಸಾವಿನಂಥ ಅಘಟಿತ ಘಟನೆಯುಂಟಾದಾಗ ಅದರ ಹೊರೆಯನ್ನು ಅದೇ ಹುಟ್ಟಿದ ಅಮಾಯಕ ಶಿಶುವಿನ ಮೇಲೆ ಹೊರಿಸುವಂಥ ಮೂಢ ಹಿರಿಯರು ನಮ್ಮ ಸಮಾಜದಲ್ಲಿ ಕಡಿಮೆಯೇನಿಲ್ಲ. ಇಂಥ ಸಂದರ್ಭದಲ್ಲೆಲ್ಲ ಬಲಿಯಾಗುವುದು ಮಗುವೇ. ಅಪ್ಪನ ಕುಡಿತಕ್ಕೆ, ಅತ್ತೆ-ಸೊಸೆಯರ ಜಗಳಕ್ಕೆ ಅಥವಾ ಕುಟುಂಬದ ಬಡತನಕ್ಕೆ ಎರವಾಗುವುದು ಮಗುವಿಗೆ ಸಿಗಬೇಕಾದ ಪ್ರೀತಿ, ಸಂರಕ್ಷಣೆ ಮತ್ತು ಕಾಳಜಿ. ಇಂಥ ಮಗುವಿಗೆ ಹೊಟ್ಟೆ ತುಂಬ ಊಟ ಸಿಕ್ಕಿದರೂ ಕೂಡ ಮನಃಪೂರ್ತಿ ಪ್ರೀತಿ ಸಿಕ್ಕದಿದ್ದಲ್ಲಿ ಮಗು ಆಹಾರವನ್ನು ನಿರಾಕರಿಸುತ್ತದೆ. ಕಣ್ಣೀರುಗರೆಯುತ್ತ ಉಣ್ಣಿಸುವ ತಾಯಂದಿರ ಮಕ್ಕಳು ಯಾವತ್ತೂ ಸರಿಯಾಗಿ ಉಣ್ಣಲಾರವು.

ಸದಾ ಆಶಾವಾದಿಯಾದ ಈ ತಾಯಂದಿರು ತಮ್ಮ ಮಕ್ಕಳಿಗೆ ತಿನ್ನಿಸುವ ಉಪಾಯಗಳು ಹಲವಾರು. ಕಂಪೌಂಡ್ ಗೋಡೆಯ ಮೇಲೆ ಕೆಲವರು ತಮ್ಮ ಮಗುವನ್ನು ಕೂಡಿಸಿಕೊಂಡು, 'ನಾಯಿ ನೋಡು, ಗಾಡಿ ನೋಡು'' ಎಂದು ರಸ್ತೆಯ ಅನೇಕಾನೇಕ 'ಅದ್ಭುತ'ಗಳನ್ನು ತೋರಿಸಿ, ಅದು ಆಶ್ಚರ್ಯದಿಂದ ಬಾಯಿ ತೆರೆದಾಗ ಫಕ್ಕನೆ ಅದರ ಬಾಯಲ್ಲಿ ತುತ್ತನ್ನಿಳಿಸಿದರೆ, ಇನ್ನು ಕೆಲವರು ಮನೆಯೊಳಗೆ ಟಿ.ವಿ. ಹಾಕಿಕೊಂಡು ಇದೇ ಕೆಲಸ ಮಾಡುತ್ತಾರೆ. ಇಂಥ ಉಪಾಯಗಳು ನಿರಪಾಯಕಾರಿಯಾಗಿದ್ದಲ್ಲಿ ಅನುಸರಿಸಬಹುದೇನೋ? ಆದರೆ ಅತಿ ತಿನ್ನಿಸುವ ಭೂತ ಹಿಡಿದಿರುವ ಕೆಲವು ತಾಯಂದಿರು ಮಗುವಿಗೆ ಭೂತ-ದೆವ್ವಗಳ, ಡಾಕ್ಟರರ ಇಂಜೆಕ್ಷನ್ ಭಯ ಒಡ್ಡುವವರೆಗೂ ಮುಂದುವರೆಯುತ್ತಾರೆ. (ಇವರಿಗೆ ಬಹುಶಃ ಡಾಕ್ಟರ್ ಮತ್ತು ದೆವ್ವಗಳ ಮಧ್ಯೆ ವ್ಯತ್ಯಾಸ ಕಾಣುವುದಿಲ್ಲವೇನೊ?). ಈ ರೀತಿಯ ಉಪಾಯಗಳಿಂದ ಭಯಗೊಂಡ ಮಗುವಿನ ಬಾಯಿಯಲ್ಲಿರುವ ಜೊಲ್ಲು ಬತ್ತಿ ಹೋಗಿ ನುಂಗಲು ಕಷ್ಟವಾಗುವುದಲ್ಲದೆ, ಜಠರ ರಸದ ಉತ್ಪಾದನೆ ಕುಗ್ಗಿ ಆಹಾರ ಜೀರ್ಣವಾಗುವುದಕ್ಕೆ ಖಂಡಿತವಾಗಿಯೂ ತೊಂದರೆಯಾಗುತ್ತದೆ.

ಕುಟುಂಬದಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾದಷ್ಟೂ, ಇರುವ ಕೆಲವೇ ಮಕ್ಕಳ ಮೂಲಕ ಈಡೇರಬೇಕಾದ ಅಪೇಕ್ಷೆಗಳು ಹೆಚ್ಚುತ್ತವೆ. ಇರುವ ಒಂದೇ ಮಗು ಚೆನ್ನಾಗಿ ತಿನ್ನಲಿ ಎಂದು ಎಲ್ಲ ಹೆತ್ತವರ ಅಪೇಕ್ಷೆ ತಾನೆ? ಮಗುವಿಗೆ ತಿನ್ನಿಸುವ ಅನೇಕ ಸಂದರ್ಭಗಳಲ್ಲಿ ಈ ಅಪೇಕ್ಷೆ ಅತಿಯಾಗುತ್ತದೆ. ತನ್ನ ಮಗು ಎಲ್ಲ ಮಕ್ಕಳಿಗಿಂತ ಚೆನ್ನಾಗಿ ಬೆಳೆಯಲೆಂಬ ಆಸೆ ಹೊತ್ತ ತಾಯಿ ಅದಕ್ಕೆ ಮಿತಿ ಮೀರಿ ತಿನ್ನಿಸುವ ಪ್ರಯತ್ನ ಮಾಡುತ್ತಾಳೆ.

ಈ ತಾಯಂದಿರು ಹೀಗೆ ವರ್ತಿಸುವುದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ, ಹೆಚ್ಚುತ್ತಿರುವ ಪ್ರಪಂಚದ ಜನಸಂಖ್ಯೆಯಲ್ಲಿ ಚಿಕ್ಕದಾದ ಕುಟುಂಬಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವ ಈ ಕಾಲದಲ್ಲಿ ಕಡಿಮೆ ಸಂಖ್ಯೆಯ ಮಕ್ಕಳಿಂದಲೇ ತಮ್ಮ ಆಶೋತ್ತರಗಳನ್ನು ಹೆತ್ತವರು ನೆರವೇರಿಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಅವರು ತಮ್ಮೆಲ್ಲ ಪೋಷಕಶಕ್ತಿಯನ್ನು ಇರುವ ಒಂದೋ ಅಥವಾ ಎರಡೋ ಮಕ್ಕಳ ಮೇಲೆ ಕೇಂದ್ರೀಕರಿಸಬೇಕಾಗುತ್ತದೆ. ಇದರಲ್ಲಿ ತಾಯಿಯ ಪಾಲಿನ ಕೆಲಸ ಯಥೇಚ್ಛವಾಗಿ ಉಣಬಡಿಸುವುದು. ಸ್ಪರ್ಧಾತ್ಮಕ ಜಗತ್ತಿನಲ್ಲಿ ಹುಟ್ಟಿರುವ ತಮ್ಮ ಮಕ್ಕಳು ತಿನ್ನದ ಹೊರತು ಮುಂದೆ ಬರಲಾರರೆಂಬ ಆತಂಕ ಇವರನ್ನು ಸದಾ ಕಾಡುತ್ತಿರುತ್ತದೆ. ಇದರ ಪರಿಣಾಮವೇ ಒತ್ತಾಯದ ಆಹಾರಪ್ರಾಶನ. ಆದರೆ ಬೇಡವೆಂದು

ಮಗು ಮುಖ ತಿರುವಿದಾಗ ಅವಳಿಗೆ ನಿರಾಸೆಯಾಗಿ, ಟಾನಿಕ್, ವಿಟಮಿನ್‌ಗಳ ಆಸರೆಯಲ್ಲಿ ಆಸೆ ಕಾಣುತ್ತಾಳೆ. ಇಂಥ ತಾಯಿಯ ಮಗು ಗಂಟೆಗಟ್ಟಲೆ ಉಪವಾಸವಿದ್ದರೂ ಊಟ ಕೇಳುವುದಿಲ್ಲ. ಯಾಕೆ ಗೊತ್ತೆ? ಹಸಿವೆಯಾದಾಗ ಊಟ ಕೇಳುವ ಪದ್ಧತಿಯನ್ನು ಮಗುವಿಗೆ ಕಲಿಸಿಯೇ ಇಲ್ಲವಲ್ಲ! ತನಗೆ ಹಸಿವೆಯಾದಾಗ ತನ್ನ ತಾಯಿಯೇ ಅದನ್ನು ಗುರುತಿಸಿ ಉಣ್ಣಿಸುವ ವಾಡಿಕೆಯಿರುವಾಗ, ಕೇಳಿ ಪಡೆಯುವ ವಿಚಾರವೇ ಮಗುವಿನ ಬುದ್ಧಿಗೆ ಹೊಳೆಯುವುದಿಲ್ಲ! ಇಲ್ಲಿ ಮಗುವಿನ ಹಸಿವೆಯನ್ನು ಗುರುತಿಸುವ ನರಕೇಂದ್ರ ತಾಯಿಯಲ್ಲಿ ಇರುತ್ತದೆ!

ಉದ್ಯೋಗ ನಿರತ ತಾಯಂದಿರಿಗೆ ಅವರದೇ ಆದ ಬೇರೆ ಸಮಸ್ಯೆಯಿದೆ. ಬೇರೆಯವರ ತರಹ ತಾವು ಪೂರ್ಣ ಸಮಯ ತಾಯಂದಿರಾಗಿಲ್ಲವೆಂಬ ಕೀಳರಿಮೆಯಿಂದ ಇವರು ನರಳುತ್ತಾರೆ. ತಮ್ಮ ಗೈರುಹಾಜರಿಯ ಸಮಯದಲ್ಲಿ ಬೇರೆಯವರು ತನ್ನ ಮಗುವನ್ನು ಹೇಗೆ ನೋಡಿಕೊಳ್ಳುವರೋ ಎಂಬ ಶಂಕೆ ಇವರನ್ನು ಸದಾ ಕಾಡುತ್ತಿರುತ್ತದೆ. ಮನೆಯಲ್ಲಿ ಅರ್ಥ ಮಾಡಿಕೊಂಡು ನಡೆದುಕೊಳ್ಳುವ ಹಿರಿಯರಿದ್ದರೆ ನೆಮ್ಮದಿಯ ಉಸಿರು ಹಾಕುತ್ತಾರೆ. ಕೆಲಸದವರ ಮೇಲೆ ಜವಾಬ್ದಾರಿಯನ್ನು ಬಿಟ್ಟ ತಾಯಿಯ ಮನಃಸ್ಥಿತಿ ದೇವರಿಗೇ ಪ್ರೀತಿ. ಮಗುವಿನ ತಾಯಿ ಮತ್ತು ಮನೆಯ ಬೇರೆ ಸದಸ್ಯರ ಮಧ್ಯೆ ತಿಕ್ಕಾಟವಿದ್ದಲ್ಲಿ, ಪರಿಸ್ಥಿತಿಯ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವುದರಲ್ಲಿಯೇ ಅವಳ ಹೆಚ್ಚಿನ ಶಕ್ತಿ ವ್ಯಯವಾಗುವುದರಿಂದ ತನ್ನ ಮಗುವಿನ ಕಡೆಗೆ ತಾನು ತಕ್ಕಷ್ಟು ಗಮನ ಕೊಡುತ್ತಿಲ್ಲವೆಂಬ ಕೊರಗು ಅವಳನ್ನು ಕೊರೆಯುತ್ತಿರುತ್ತದೆ. ಈ ಕೊರತೆಯನ್ನು ಅವಳು ಮಗುವಿಗೆ ಹೆಚ್ಚು ತಿನ್ನಿಸುವ ಪ್ರಯತ್ನದ ಮೂಲಕ ನೀಗಿಸಿಕೊಳ್ಳಲು ಯತ್ನಿಸುತ್ತಾಳೆ. ಇದಕ್ಕೆ ಪೂರಕವಾಗಿ ಬೇರೆಯವರ ಮಕ್ಕಳು ತಿನ್ನುವ ಪ್ರಮಾಣವನ್ನು ತನ್ನ ಮಗುವಿನ ಆಹಾರದ ಜೊತೆಗೆ ಹೋಲಿಸಿಕೊಂಡು ಕೊರಗುತ್ತಾಳೆ.

ಅತಿ ಉಣ್ಣಿಸುವ ತಾಯಂದಿರಿಗೆಲ್ಲ ತಮ್ಮ ಮಗುವಿಗೆ ಎಷ್ಟು ಆಹಾರ ಅಗತ್ಯವೆಂದು ಗೊತ್ತಿರುವುದಿಲ್ಲ. ಮೂರು-ನಾಲ್ಕು ವರ್ಷದ ಮಕ್ಕಳು ಚೆನ್ನಾಗಿ ಊಟ ಮಾಡುತ್ತಾರಾದರೂ ನಂತರ ಅವರು ತಿನ್ನುವ ಆಹಾರದ ಪ್ರಮಾಣ ಕಡಿಮೆಯಾಗುತ್ತದೆ. ಈ ವಯಸ್ಸಿನಲ್ಲಿ ಮಗು ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ಬಹಳ ತೀವ್ರವಾಗಿ ಬೆಳೆಯುತ್ತಿರುತ್ತದೆ. ಅದು ತನ್ನ ಪರಿಸರದ ಜೊತೆಗೆ ಪ್ರತಿದಿನ ಹೊಂದಾಣಿಕೆ ಮಾಡಿಕೊಳ್ಳುತ್ತಿರುತ್ತದೆ. ಈ ಸಂದರ್ಭದಲ್ಲಿ ಮಗುವಿಗೆ ಕಾತರ ಮತ್ತು ಆತಂಕದ ಭಾವನೆಗಳು ಉಂಟಾಗಿ ಊಟದ ಕಡೆಗೆ ಗಮನ ಸ್ವಾಭಾವಿಕವಾಗಿಯೇ ಕಡಿಮೆಯಾಗುತ್ತದೆ. ಆದುದರಿಂದ ಈ ವಯಸ್ಸಿನ ಆರೋಗ್ಯವಂತ ಮಗುವೊಂದರ ತೂಕ ತಿಂಗಳುಗಟ್ಟಲೇ ಇದ್ದಷ್ಟೇ ಇರಬಹುದು ಅಥವಾ ಮುಂಚೆಗಿಂತ ಕಡಿಮೆಯಾಗಬಹುದು. ಈ ಪ್ರಸಂಗದಲ್ಲಿ ಎಲ್ಲ ತಾಯಂದಿರೂ ಗಾಬರಿಯಾಗುತ್ತಾರೆ. ಅದರಲ್ಲೂ ಮಗುವಿನ ಪಕ್ಕೆಲುಬುಗಳು ಕಂಡರಂತೂ ಮುಗಿದೇ ಹೋಯಿತು, ವೈದ್ಯರ ಹತ್ತಿರ ಟಾನಿಕ್‌ಗಾಗಿ ಓಡುತ್ತಾರೆ. ಆದರೆ, ಇದು ಎಲ್ಲ ಮಕ್ಕಳಿಗೂ ಆಗುತ್ತದೆಂಬ ವಿಷಯ ಆಗ ಅವರ ಗಮನಕ್ಕೆ ಬರುವುದೇ ಇಲ್ಲ!

ಇನ್ನು ಕೆಲವು ಸಂದರ್ಭಗಳಲ್ಲಿ ತಾಯಂದಿರು ಮಕ್ಕಳಿಗೆ ತಿನ್ನಲು ಎಷ್ಟೊಂದು ಒತ್ತಾಯ ಮಾಡುತ್ತಾರೆಂದರೆ ಮಕ್ಕಳಿಗೆ ಊಟದ ಹೆಸರು ಎತ್ತಿದರೆ ಸಾಕು, ತಮ್ಮ ನಿರಾಕರಣೆಯನ್ನು ನಾನಾ ರೀತಿಯಲ್ಲಿ ತೋರಿಸಲು ತೊಡಗುತ್ತಾರೆ. ಚಿಕ್ಕ ಮಕ್ಕಳು ವಾಕರಿಕೆಯ ಮೂಲಕ, ಸ್ವಲ್ಪ ದೊಡ್ಡ ಮಕ್ಕಳು ಹೊಟ್ಟೆ ನೋವೆಂದು ಹೇಳುವುದರ ಮೂಲಕ ನಿರಾಕರಣೆಯನ್ನು ತೋರ್ಪಡಿಸುವುದು ಸಾಮಾನ್ಯ. ಇದನ್ನು ಗಮನಿಸಿದರೂ ಗಮನಿಸದವರಂತೆ ತಾಯಂದಿರು ಆಹಾರ ತುರುಕುವ ತಮ್ಮ (ವ್ಯರ್ಥ) ಪ್ರಯತ್ನವನ್ನು ಮುಂದುವರಿಸಿಕೊಂಡೇ ಬರುತ್ತಾರೆ.



ಈ ರೀತಿಯ ಒತ್ತಾಯದ ಅನ್ನಪ್ರಾಶನದ

ಹಸಿವೆ ಹೆಚ್ಚಿಸುವುದಕ್ಕೆ ಔಷಧಿ ಇದೆಯೇ?

ಹೆತ್ತವರು ಒತ್ತಾಯಿಸಿದಾಗ ವೈದ್ಯರು ಮಗುವಿನ ಹಸಿವೆಯನ್ನು ಹೆಚ್ಚಿಸಲು ಕೆಲವು ಔಷಧಿಗಳನ್ನು ಶಿಫಾರಸು ಮಾಡುತ್ತಾರೆ. ಇದರಲ್ಲಿ ಸೈಪ್ರೋಹೆಪ್ಟಾಡೀನ್, ಲೈಸೀನ್, ಮದ್ಯಸಾರ (alcohol) ಪಚನಕಾರಕ ಕಿಣ್ವಗಳು (digestive enzymes) ಮತ್ತು ವಿಟಮಿನ್‌ಗಳು ಇರುತ್ತವೆ.

ಸೈಪ್ರೋಹೆಪ್ಟಾಡೀನ್ ಹಸಿವೆಯನ್ನು ಉಂಟು ಮಾಡಿದರೂ ಅದರಿಂದ ತೂಕಡಿಕೆ, ಮಂಪರು ಉಂಟಾಗಬಹುದು. ಇದರಿಂದ ಮಗುವಿನ ಕಲಿಕೆಯಲ್ಲಿಯ ಕ್ಷಮತೆ ಕಡಿಮೆಯಾಗುತ್ತದೆ.

ಲೈಸೀನ್ ಎಂಬುದೊಂದು ಅಮೈನೋಎಸಿಡ್. ಇದು ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸುವುದಾದರೂ, ಅದಕ್ಕೆ ಬೇರೆ ಅಮೈನೋಎಸಿಡ್‌ಗಳ ಸಹಯೋಗ ಬೇಕೇಬೇಕು. ಆದರೆ ಟಾನಿಕ್‌ಗಳಲ್ಲಿ ಇದೊಂದೇ ಇರುವುದರಿಂದ ಏನೂ ಪ್ರಯೋಜನವಿಲ್ಲ.

ಮದ್ಯಸಾರವು ಹೊಟ್ಟೆಯ ಸ್ನಾಯುಗಳನ್ನು ಕುಗ್ಗಿಸುವ ಮೂಲಕ ಹಸಿವೆಯ ಅನಿಸಿಕೆಯನ್ನು ಕೃತಕವಾಗಿ ಉಂಟು ಮಾಡುತ್ತವೆ. ಇದರಿಂದ ಮಕ್ಕಳಿಗೆ ಮದ್ಯದ ದುರಭ್ಯಾಸವಾಗುವುದಲ್ಲದೆ ಯಕೃತ್ತು (liver) ನಾಶವಾಗುವ ಸಂಭವವಿದೆ.

ಪಚನಕಾರಕ ಕಿಣ್ವಗಳು ತಿಂದ ಆಹಾರ ಅರಗುವುದಕ್ಕೆ ಸಹಾಯ ಮಾಡುತ್ತವೆಯೇ ವಿನಾ ಹಸಿವೆಯನ್ನು ಹೆಚ್ಚಿಸುವುದಿಲ್ಲ. ಇದರ ದೀರ್ಘಕಾಲದ ಸೇವನೆಯಿಂದ ಅನ್ನನಾಳದಲ್ಲಿ ಸ್ವಾಭಾವಿಕವಾಗಿ ಉತ್ಪತ್ತಿಯಾಗುವ ಕಿಣ್ವಗಳ ಪ್ರಮಾಣ ಕಡಿಮೆಯಾಗಿ ತೊಂದರೆಯುಂಟಾಗಬಹುದು.

ವಿಟಮಿನ್‌ಗಳು ನಮಗೆ ಬೇಕು, ನಿಜ. ಆದರೆ ಟಾನಿಕ್‌ಗಳಲ್ಲಿರುವ ಕೃತಕ ಮೂಲದ ವಿಟಮಿನ್‌ಗಳ ದೀರ್ಘಕಾಲದ ಸೇವನೆಯಿಂದ ದೇಹಕ್ಕೆ ಅಪಾಯವಾಗಬಹುದು. ಇದರ ಬದಲು ನಮ್ಮ ಆಹಾರದಲ್ಲಿಯೇ ಇರುವ ಹಣ್ಣುಗಳು, ತರಕಾರಿಗಳು, ಮೊಳಕೆ ಬರಿಸಿದ ಧಾನ್ಯ, ಮೊಸರು, ಹುಳಿ ಬರಿಸಿದ ಇಡ್ಲಿ ದೋಸೆಗಳಂಥ ಸಮೃದ್ಧ ವಸ್ತುಗಳಿಂದ ಸ್ವಾಭಾವಿಕ ಮೂಲದ ವಿಟಮಿನ್‌ಗಳನ್ನು ಪಡೆಯಬಹುದಲ್ಲ?

ಮೇಲೆ ಹೇಳಿದ ಔಷಧಿಗಳಲ್ಲಿ ಸಾಮಾನ್ಯವಾಗಿರುವ ಒಂದು ದೋಷವಿದೆ. ಇದನ್ನು ನಿಲ್ಲಿಸಿದ ನಂತರ ಹಸಿವೆ ಕಡಿಮೆಯಾಗಿ ತೂಕ ಪುನಃ ಮುಂಚಿನ ಸ್ಥಿತಿಗೆ ಮರಳುತ್ತದೆ!

ಮೂಲಕ ಏನಾದರೂ ತೊಂದರೆಯಿದೆಯೆ? ಬೇಕಾದಷ್ಟಿದೆ. ಮಗು ನುಂಗಲು ತಯಾರಿಲ್ಲದಿರುವಾಗ ಅದರ ಬಾಯಲ್ಲಿ ಆಹಾರ 'ತುರುಕು'ವುದರಿಂದ ಮಗುವಿಗೆ ಉಸಿರು ಕಟ್ಟಬಹುದು. ಹೊಟ್ಟೆಗೆ ಅನ್ನ ಅಗತ್ಯಕ್ಕಿಂತ ಬೇಗ ಬೇಗ ಇಳಿಯುವುದರಿಂದ ಮಗುವಿಗೆ ಅಜೀರ್ಣವಾಗಬಹುದು. ನೀವು ಕೊಡುವ ಮನೆಯ ಆಹಾರ ಬೇಡವಾಗಿ ಕೃತಕ ಆಹಾರದ ದಾಸನಾಗಬಹುದು. ಪೌಷ್ಟಿಕಾಂಶದ ಕೊರತೆಯಿಂದ ನರಳಬಹುದು. ಉಪವಾಸವನ್ನು ಕೂಡ ಅನುಭವಿಸಬಹುದು. ಆಹಾರವನ್ನು ನಿರಾಕರಿಸಲಿಕ್ಕಾಗಿ ಮಗು ಹೊಟ್ಟೆ ನೋವು, ಎದೆ ನೋವು, ತಲೆ ನೋವು ಮುಂತಾದ ಕಾರಣಗಳನ್ನು ಮುಂದೆ ಮಾಡುವ ಅಭ್ಯಾಸ ಮಾಡಿಕೊಂಡಾಗ, ಮುಂದೆ ಅದೇ ನಿಜವಾದ ಖಾಯಿಲೆಯಾಗಿ ಪರಿಣಮಿಸಬಹುದು.

ನೀವು ಮಗುವಿಗೆ ಅಗತ್ಯಕ್ಕಿಂತ ಹೆಚ್ಚು ಉಣ್ಣಿಸುತ್ತೀರಾದ್ದರಿಂದ ಮಗು ಈಗ ಗುಂಡಗೆ, ಮುದ್ದಾಗಿ ಕಂಡರೂ ಬೆಳೆದಾಗ ಬೊಜ್ಜು ಸಂಗ್ರಹವಾಗುವುದು ಖಂಡಿತ. ಇದು ವಯಸ್ಕರಲ್ಲಿ ಕಾಣುವ ಮಧುಮೇಹ, ಹೃದಯ ದೌರ್ಬಲ್ಯ, ರಕ್ತದ ಅತಿ ಒತ್ತಡ ಮುಂತಾದ ಹತ್ತಾರು ಖಾಯಿಲೆಗಳಿಗೆ ಮತ್ತು ಅಕಾಲ ಮರಣಕ್ಕೆ ನಾಂದಿಯಾಗಬಹುದು.

ತಮ್ಮ ಮಕ್ಕಳು ತೆಳ್ಳಗಿದ್ದಾರೆ ಎಂದು ಕೊರಗುವ ಹೆತ್ತವರಿಗೆ ಒಂದು ಸಂತೋಷದ ಸಮಾಚಾರ: ವೈಜ್ಞಾನಿಕ ಸಂಶೋಧನೆಯ ಪ್ರಕಾರ ತೆಳ್ಳಗಿರುವವರು ಸ್ಥೂಲಕಾಯರಿಗಿಂತ ಶೇಕಡಾ 30 ರಷ್ಟು ಹೆಚ್ಚು ವರ್ಷ ಬದುಕುತ್ತಾರೆ!



ಕಡಿಮೆ ತಿನ್ನುವ ಮಗುವಿಗೆ ಅನಾರೋಗ್ಯವೇ?

ಬೆಳವಣಿಗೆಯಲ್ಲಿ ಕಾಲಿಟ್ಟ ನಿಮ್ಮ ಮಗು ಕಡಿಮೆ ತಿಂದು ತೂಕ ಕಳೆದುಕೊಳ್ಳಲು ಆರಂಭಿಸಿದಾಗ ಅದರ ಆರೋಗ್ಯ ಸರಿಯಾಗಿದೆಯೆ ಎಂಬ ಯೋಚನೆ ನಿಮಗಿದೆಯೆ? ಹಾಗಾದರೆ ಈ ವಿಷಯವನ್ನು ಗಮನಿಸಿ:

■ ಮಗು ತನ್ನ ಬುದ್ಧಿಮಟ್ಟದಲ್ಲಿ ಬೆಳಿಯುತ್ತಿದೆಯೆ?

■ ಮಗುವಿನ ಎತ್ತರ ಹೆಚ್ಚಾಗುತ್ತಿದೆಯೇ?

■ ಮಗು ಆಟದಲ್ಲಿ ಆಸಕ್ತಿ ತೋರಿಸುತ್ತಿದೆಯೆ?

ಇವು ಮೂರು ಹೌದು ಎಂದಾದಲ್ಲಿ ನಿಮ್ಮ ಮಗುವಿನ ಆರೋಗ್ಯದಲ್ಲಿ ಏನೂ ನ್ಯೂನತೆಯಿಲ್ಲವೆಂದು ಧೈರ್ಯವಾಗಿರಿ.

ಉಪಾಯವೇನು?

7-8 ತಿಂಗಳ ನಿಮ್ಮ ಮಗು ಸ್ಥಿರವಾಗಿ ಕುಳಿತುಕೊಳ್ಳುವುದನ್ನು ಕಲಿತಾಗ ಅದನ್ನು ನಿಮ್ಮ ಜೊತೆಗೆ ಊಟಕ್ಕೆ ಕೂಡಿಸಿಕೊಳ್ಳಿ, ಅದಕ್ಕೂ ಒಂದು ತಟ್ಟೆ ಪ್ರತ್ಯೇಕವಾಗಿಡಿ. ನೀವು ತಿನ್ನುವ ಆಹಾರವನ್ನೇ ಅದರ ತಟ್ಟೆಯಲ್ಲಿ ಬಡಿಸಿ. ಕಲಸಿ ತಿನ್ನುವುದಕ್ಕೆ ತಯಾರು ಮಾಡಿ ಕೊಡಿ. ಈ ವಯಸ್ಸಿನಲ್ಲಿ ಎಲ್ಲ ಮಕ್ಕಳೂ ಕೈಗೆ ಸಿಕ್ಕಿದ ವಸ್ತುವನ್ನು ಬಾಯಲ್ಲಿ ಹಾಕಿಕೊಂಡು ಅದರ ವಸ್ತುಸ್ಥಿತಿಯ ಅನುಭವ ಪಡೆಯುತ್ತಾರಲ್ಲವೆ? ಅದನ್ನೇ ನಿಮ್ಮ ಮಗು ತನ್ನ ಆಹಾರದ ಜೊತೆಗೆ ಶುರು ಮಾಡಲಿ. ತಾನು ಮುಂದೆ ತಿನ್ನಬೇಕಾದ ಆಹಾರ ಪದಾರ್ಥಗಳ ರುಚಿಯನ್ನು ಈಗಲೇ ಅನುಭವಿಸಲು ಶುರು ಮಾಡಲಿ. ಅಂದರೆ ನೀವು ತಿನ್ನುವ ನಿತ್ಯದ ಆಹಾರ ರೂಪುಗೊಳ್ಳುತ್ತಿರುವ ಅದರ ವ್ಯಕ್ತಿತ್ವದ ಭಾಗವಾಗಿಬಿಡುತ್ತದೆ. ಇಂಥ ಮಗು ಬೆಳೆದ ಮೇಲೆ "ಅದು ಬೇಡ, ಇದು ಬೇಡ" ಎಂದು ಮನೆಯ ನಿತ್ಯದ ಆಹಾರವನ್ನು ನಿರಾಕರಿಸುವುದಿಲ್ಲ. ಇಲ್ಲಿ ಕೆಲವು ವಿಷಯಗಳಿಗೆ ನೀವು ವಿಶೇಷ ಗಮನ ಕೊಡಬೇಕಾಗಬಹುದು.

■ ಈ ಆಹಾರ ಬಿಸಿಯಾಗಿರದೆ ಬರೀ ಬೆಚ್ಚಗೆ ಇರಲಿ. ಖಾರವಾಗಿಲ್ಲದಿರಲಿ. ಸಿಹಿ ಪದಾರ್ಥವಿದ್ದರೆ ಇನ್ನೂ ಒಳ್ಳೆಯದು.

■ ಆಹಾರವನ್ನು ಕುತೂಹಲದಿಂದ ಹಿಸುಕಿ ನೋಡುವ, ತಿನ್ನದೆ ಬರೀ ಮುಖಕ್ಕೆ ಮೆತ್ತಿಕೊಳ್ಳುವ, ಅದರ ಜೊತೆಗೆ ಆಟವಾಡುವ ಪ್ರವೃತ್ತಿ ಮಗುವಿಗೆ ಹೆಚ್ಚಾಗಿರುತ್ತದೆ. ಕೆಲವೊಮ್ಮೆ ತನ್ನ ಮೈಮೇಲೆಲ್ಲ - ಬಾಯೊಂದನ್ನು ಬಿಟ್ಟು - ಅನ್ನ ಸುರಿದುಕೊಳ್ಳಬಹುದು. ಇದರಿಂದ ನಿಮಗೆ ಬೇಸರವಾಗದಿರಲಿ.

■ ಮಗುವಿನ ಈ ಆಟವನ್ನು ನೋಡುತ್ತ ಅದರ ಜೊತೆಗೆ ನೀವೂ ಆಟವಾಡುತ್ತ ಅದರ ಮೂಲಕ ನಿಮ್ಮ ಬೇಕು ಬೇಡಗಳನ್ನು ಕಲಿಸಿರಿ. ಅಂದರೆ ಶಿಸ್ತು ಈಗಿನಿಂದಲೇ ಪ್ರಾರಂಭವಾಗಲಿ.

■ ನಿಮ್ಮ ಊಟವಾದ ಮೇಲೆ ಅದರ ಬಾಯಲ್ಲಿ ತುತ್ತಿಡಿ. ಆಗ ಮಗುವಿನ ಗಮನ ನಿಮ್ಮ ಮುಖದ ಕಡೆಗಿರಲಿ. ಬೇರೆ ಯಾವ ಆಕರ್ಷಕ ವಸ್ತುವಿನ ಸಹಾಯವನ್ನೂ ಪಡೆಯಬೇಡಿ. ಶುರುಶುರುವಿಗೆ ನಿಮ್ಮ ಮಗು ಕಡಿಮೆ ಉಂಡರೂ ಕೆಲವು ತಿಂಗಳ ನಂತರ ತಾನೇ ಸ್ವತಃ ಉಣ್ಣಲು ಕಲಿಯುತ್ತದೆ. ಹಸಿವೆಯಾದಾಗ ಕೇಳಲು ಕಲಿಯುತ್ತದೆ.

■ ನಿತ್ಯದ ಊಟವಲ್ಲದೆ ಬೇರೆ ಏನಾದರೂ ಆಹಾರ ಕೊಡಬೇಕಾಗಿದ್ದಲ್ಲಿ ಅದಕ್ಕೆ ಊಟವನ್ನು ಬಿಟ್ಟು ಬೇರೆ ಸಮಯವನ್ನು ನಿಗದಿ ಮಾಡಿ.

■ ಕೊಬ್ಬಿನಿಂದ ಕೂಡಿದ ಪದಾರ್ಥಗಳಾಗಿದ್ದರೆ (ಉದಾ: ಕೆನೆ, ತುಪ್ಪ, ಐಸ್‌ಕ್ರೀಮ್, ಜಾಮೂನಿನಂಥ ಕರಿದ ಸಿಹಿ ತಿಂಡಿಗಳು, ಚಾಕೋಲೇಟ್ ಇತ್ಯಾದಿ) ಅವುಗಳನ್ನು ಊಟವಾದ ಮೇಲೆ ಕೊಡಿ. ಮಗು ಈಗಾಗಲೇ ಇಂಥ ತಿಂಡಿಯೊಂದನ್ನು ತಿಂದಿದ್ದಾದಲ್ಲಿ ಅದು ಊಟ ಮಾಡಿದೆ ಎಂದೇ ಅರ್ಥ. ಆಗ ನೀವು ಎಷ್ಟೇ ಒತ್ತಾಯಿಸಿದರೂ ಅದು ತಿನ್ನಲಾರದು. ಯಾಕೆಂದರೆ, ಕೊಬ್ಬು ಬೇರೆ ಎಲ್ಲ ವಿಧದ ಆಹಾರಕ್ಕಿಂತ ಎರಡು ಪಾಲು ಹೆಚ್ಚು ಶಕ್ತಿಯನ್ನು ಕೊಡುತ್ತದೆ.

ಮಕ್ಕಳು ಆರೇಳು ವರ್ಷಕ್ಕೂ ಹೆಚ್ಚಿನವರಾಗಿದ್ದಲ್ಲಿ ಅವರು ಈಗಾಗಲೇ ಕೆಲವು ರೀತಿಗಳನ್ನು ಕಲಿತುಬಿಟ್ಟಿರುತ್ತಾರೆ. ಇವರ ಕೆಲವು ಆಹಾರಾಭ್ಯಾಸಗಳಿಗೆ ನೀವೇ ಕುಮ್ಮಕ್ಕು ಕೊಟ್ಟಿರುವುದರಿಂದ, ಇಂಥವರ ಜೊತೆಗೆ ನೀವು ಬೇರೆ ರೀತಿ ವರ್ತಿಸಬೇಕಾಗುತ್ತದೆ.

ಮೊದಲು ನೀವು ಅವರಿಗೆ ತಿನ್ನಲು ಒತ್ತಾಯ ಮಾಡುವುದನ್ನು ನಿಲ್ಲಿಸಬೇಕಾಗುತ್ತದೆ. ಅದಕ್ಕಾಗಿ ನೀವು ನಿಮ್ಮ ಮಗುವನ್ನು ಎದುರಿಗೆ ಕೂಡಿಸಿಕೊಂಡು ನಿಮ್ಮ ಉದ್ದೇಶವನ್ನು ತಿಳಿಸಬೇಕಾಗುತ್ತದೆ. ಇದನ್ನು ನೀವು ಹೇಳುವ ರೀತಿ ಬಹಳ ಮುಖ್ಯವಾದುದು. ಶಿಸ್ತು ಕಲಿಸುವ ಹೆತ್ತವರ ರೀತಿಯಲ್ಲೋ, ತೀರ ಮುದ್ದಾದ ರೀತಿಯಲ್ಲೋ ಹೇಳಿದರೆ ಅವರು ಕೇಳಲಿಕ್ಕಿಲ್ಲ. ಬದಲಿಗೆ, ಒಬ್ಬ ಪ್ರೌಢ ಇನ್ನೊಬ್ಬ ಪ್ರೌಢನಿಗೆ ಹೇಳುವ

ರೀತಿಯನ್ನು ಉಪಯೋಗಿಸಬೇಕು. ಅಂದರೆ ಇದರಲ್ಲಿ ವಿಷಯದ ಬಗೆಗೆ ಮಾಹಿತಿ ಇರಬೇಕು. ನಿಮ್ಮ ಉದ್ದೇಶವನ್ನು ನಯವಾದ ರೀತಿಯಲ್ಲಿ ವಿವರಿಸಬೇಕು. ಅದಕ್ಕಾಗಿ ಅದು ಏನು ಮಾಡಬೇಕೆಂದು, ಹೇಗೆ ವರ್ತಿಸಬೇಕೆಂದು ತಿಳಿಸಬೇಕು. ಅದಕ್ಕೆ ತಪ್ಪಿದರೆ ಅದರ ದುಷ್ಪರಿಣಾಮ ಏನಾಗಬಹುದೆಂದೂ ವರ್ಣಿಸಬೇಕು. ಸ್ಪಷ್ಟಪಡಿಸಬೇಕು.

ಯಾವಾಗ ಊಟ ಮತ್ತು ತಿಂಡಿ ತಿನ್ನಬೇಕು ಎನ್ನುವುದನ್ನು ಮಗು ಮತ್ತು ನೀವು ಕೂಡಿಕೊಂಡು ಒಂದು ವೇಳಾಪಟ್ಟಿಯನ್ನು ತಯಾರು ಮಾಡಿ. ಇದರಲ್ಲಿ ಮಗುವಿನ ಆರೋಗ್ಯಕ್ಕೆ ಅನುಕೂಲವಾದ ಶಿಸ್ತಿರಲಿ. ಇದರಲ್ಲಿರುವ ನಿಯಮಗಳನ್ನು ನೀವು ಮತ್ತು ಮಗು ಇಬ್ಬರೂ ಮೀರಕೂಡದು.

ನೀವು ಆಡುವ ಮಾತುಗಳು

'ಇನ್ನು ಮೇಲೆ ನಾನು ಊಟ ಮಾಡಲು ನಿನಗೆ ಒತ್ತಾಯ ಮಾಡುವುದಿಲ್ಲ' ಎಂಬ ಆಶ್ವಾಸನೆ, 'ನಿನಗೆಷ್ಟು ಬೇಕೋ ಅಷ್ಟು ನೀನೇ ತಿನ್ನಬಹುದು. ಯಾವುದಕ್ಕೂ ನಾನು ಏನೂ ಅನ್ನುವುದಿಲ್ಲ' ಎಂಬ ಆಯ್ಕೆ, 'ಆದರೆ ನಾನು ಅಡಿಗೆ ಮಾಡಿದ್ದರಲ್ಲೇ ನೀನು ಆರಿಸಿಕೊಳ್ಳಬೇಕು' ಎಂಬ ಕರಾರು, 'ಊಟವಾದ ಕೊನೆಯ ಪಕ್ಷ ಎರಡು ಗಂಟೆಗಳ ನಂತರ ನಿನಗೆ ಬೇಕಾದ ತಿಂಡಿ' ಎಂಬ ರಿಯಾಯಿತಿ, 'ಊಟದ ಬದಲು ತಿಂಡಿಯನ್ನು ಕೊಡುವುದಿಲ್ಲ' ಎಂಬ ನಿಮ್ಮ ನಿರ್ಧಾರ-ಇವೆಲ್ಲವೂ ಅಚಲವಾಗಿರಲಿ.

■ ಮಕ್ಕಳಿಗೆ ಮನೆಯ ತಿಂಡಿಯ ಅಭ್ಯಾಸ ಮಾಡಿಕೊಡಿ. ಯಾವುದೇ ಕಾರಣಕ್ಕೂ ಹೊರಗಿನ ತಿಂಡಿಗಳ ರುಚಿ ಹಚ್ಚಿಸುವುದು ಬೇಡ. ಹೀಗೆ ಮಾಡುವುದರಿಂದ ಹಣವೂ ಉಳಿತಾಯ; ಆರೋಗ್ಯಕ್ಕೂ ಒಳ್ಳೆಯದು. ಮೊದಮೊದಲು ಕಷ್ಟವೆನಿಸಿದರೂ ನಂತರ ನಿಮ್ಮ ಮಗುವಿನ ಆರೈಕೆಯನ್ನು ಸಂಪೂರ್ಣವಾಗಿ ಕೈಗೊಂಡ ತೃಪ್ತಿ ನಿಮ್ಮದಾಗಿರುತ್ತದೆ.



■ ಮನೆಯಲ್ಲಿ ತಿಂಡಿಯ ಬ್ಯಾಂಕ್ ಮಾಡಿ ಅದರಲ್ಲಿ ಮನೆಯಲ್ಲಿ ಮಾಡಿದ, ಹೊರಗಿನಿಂದ ತಂದ ಅಥವಾ ಬೇರೆಯವರು ಕೊಟ್ಟ ಎಲ್ಲ ತಿಂಡಿಗಳನ್ನು ಸಂಗ್ರಹಿಸಿ. ಇದನ್ನು ಮಗುವಿನ ಕೈಗೆ ಬೀಳದಂತೆ ಬಚ್ಚಿಡಿ. ಸಾಧ್ಯವಿದ್ದರೆ ಬೀಗ ಹಾಕಿಡಿ. ಮಗುವು ಹೊತ್ತಲ್ಲದ ಹೊತ್ತಿನಲ್ಲಿ ಕೇಳಿದರೆ ನಿರ್ದಾಕ್ಷಿಣ್ಯವಾಗಿ ನಿರಾಕರಿಸಿ. ಆದರೆ ಸರಿಯಾದ ಹೊತ್ತಿನಲ್ಲಿ ಕೇಳಿದರೆ ಪ್ರೀತಿಯಿಂದ ತೆಗೆದು ಕೊಡಿ.

■ ಮಗುವಿನ ಜವಾಬ್ದಾರಿ ನೋಡಿಕೊಳ್ಳಲು ಕೆಲಸದವಳೊಬ್ಬಳು ನಿಮ್ಮಲ್ಲಿದ್ದರೆ ಅವಳ ಬಡತನದ ಹಿನ್ನೆಲೆಯನ್ನು ಅರ್ಥ ಮಾಡಿಕೊಂಡು ಅವಳನ್ನು ಚೆನ್ನಾಗಿ ನೋಡಿಕೊಳ್ಳಿ. ಒಂದು ವೇಳೆ ಅವಳು ಮಗುವಿನ ಪಾಲಿನ ತಿಂಡಿಯನ್ನು ತಿನ್ನುವುದು ಕಂಡು ಬಂದರೆ, ಇಬ್ಬರಿಗೂ ಸಾಲುವಂತೆ ಹೆಚ್ಚು ತಿಂಡಿ ಇಡಿ.

ನಿಮಗೊಂದಿಷ್ಟು ಕಿವಿಮಾತು

■ ಇದೆಲ್ಲದಕ್ಕೂ ಮೊದಲು ನೀವು ನಿಮ್ಮ ಮನಸ್ಸನ್ನು ಗಟ್ಟಿ ಮಾಡಿಕೊಳ್ಳಬೇಕು. ಕೆಲವು ಸಲ ಮಗು ಹಠ ಮಾಡಬಹುದು; ಇಡೀ ದಿನ ಊಟ ಮಾಡದೆಯೆ ಇರಬಹುದು. ಬೆಳೆದ ಮಗುವಾದರೆ ಏನೂ ತಿನ್ನದೆಯೆ ಶಾಲೆಗೆ ಹೋಗುವಾಗ ನಿಮ್ಮ ಮನಸ್ಸು ಚುರ್ರೆನ್ನಬಹುದು. ಧೈರ್ಯವಾಗಿರಿ. ಅದರ ಇಡೀ ಜೀವವನ್ನೇ ಬದಲಾಯಿಸಿಬಿಡುವಂಥ ಮುಖ್ಯವಾದ ಕೆಲಸಕ್ಕೆ ಕೈ ಹಾಕಿದ್ದೀರಿ. ಇಂಥ ಸಂದರ್ಭದಲ್ಲಿ ನೀವು ಅನುನಯದಿಂದ, ಪ್ರೀತಿಯಿಂದ ಅದರ ಮನವೊಲಿಸಿ ನಿಮ್ಮ ಹಾದಿಗೆ ತರಬೇಕೇ ವಿನಾ ಅದರ ಹಠಕ್ಕೆ ತಲೆಬಾಗಿ 'ಇದೊಂದು ಸಲ ಪರವಾಗಿಲ್ಲ' ಎಂದುಕೊಂಡು ನಿಮ್ಮ ನಿರ್ಧಾರವನ್ನು ಸಡಿಲಗೊಳಿಸಕೂಡದು.

■ ಹಾಗೆಯೇ, ಅದಕ್ಕೆ ದೈಹಿಕ ಶಿಕ್ಷೆ ಕೊಡಕೂಡದು. ಪ್ರತಿ ಸಲ ಅದು ಹಠ ಮಾಡುವಾಗ ನಿಮ್ಮ ಬುದ್ಧಿ ಉಪಯೋಗಿಸಿ, ಕೋಪಾವೇಶಗಳನ್ನಲ್ಲ. ಪರಿಸ್ಥಿತಿ ನಿಮ್ಮ ಕೈ ಮೀರಿ ಹೋಗುತ್ತಿದೆಯೆನ್ನಿಸಿದರೆ ಮಗುವಿನಿಂದ ಸ್ವಲ್ಪ ಹೊತ್ತು ದೂರವಿರಿ.

■ ಇನ್ನೊಂದು ಮಗುವಿಗೆ ಹೋಲಿಸಿ ನಿಮ್ಮ ಮಗುವನ್ನು ಅಳೆಯಬೇಡಿ. ಯಾಕೆಂದರೆ ಎತ್ತರ-ಕುಳ್ಳ, ತೆಳು-ದಪ್ಪ, ಕಪ್ಪು-ಬಿಳುಪು ಮುಂತಾದ ಘಟಕಗಳು ಅನುವಂಶಿಕವಾಗಿ ಬರುವ ಹಾಗೆ ಜಾಸ್ತಿ ಅಥವಾ ಕಡಿಮೆ ತಿನ್ನುವುದೂ ವಂಶವಾಹಿಗಳ ಮೇಲೆ ಅವಲಂಬಿಸಿದೆ.

■ ನೀವು ಕಲಿಸುವ ಪಾಠವನ್ನು ಅನುಸರಿಸಲು ಮಗುವಿಗೆ ಅನೇಕ ತಿಂಗಳುಗಳೇ ಹಿಡಿಯಬಹುದು. ಅಲ್ಲಿಯವರೆಗೆ ಅದು ನಿಮ್ಮ ದೃಷ್ಟಿಯಲ್ಲಿ ಕಡಿಮೆಯೇ ತಿನ್ನಬಹುದು. ಅಲ್ಲಿಯವರೆಗೂ ಯೋಚನೆ ಬೇಡ, ತಾಳ್ಮೆಯಿರಲಿ.

■ ಮಕ್ಕಳು ಆಹಾರದ ವಿಷಯದಲ್ಲಿ ಎಷ್ಟೇ ಕೆಟ್ಟು ಹೋಗಿದ್ದರೂ ಅವರನ್ನು ಸುಧಾರಿಸಲು ಸಾಧ್ಯವಿದೆ.

■ ಮಗುವಿನ ಹಸಿವೆಯನ್ನು ಹೆಚ್ಚು ಮಾಡಲು ಯಾವ ಔಷಧಿ ಅಥವಾ ಟಾನಿಕ್‌ನ ಅಗತ್ಯವಿಲ್ಲವೆಂಬುದು ನಿಮಗೆ ಚೆನ್ನಾಗಿ ತಿಳಿದಿರಲಿ.


ಇಷ್ಟೆಲ್ಲ ಸರಿಯಾಗಿ ಅನುಸರಿಸಿದರೂ ಕೂಡ ನಿಮ್ಮ ಮಗು ಸರಿಯಾಗಿ ಊಟ ಮಾಡದಿದ್ದಲ್ಲಿ ಅದರಲ್ಲೂ ವಿಶೇಷವಾಗಿ ಪಕ್ಕದ ಮನೆಯ ಊಟ ತಿಂಡಿಗಳನ್ನೇ ಹೆಚ್ಚಾಗಿ ಬಯಸುತ್ತಿದ್ದಲ್ಲಿ - ಏನು ಮಾಡಬಲ್ಲಿರಿ? ನೀವು ಮಾಡುವ ಅಡಿಗೆಯ ರುಚಿಯನ್ನು ಮತ್ತು ತಿಂಡಿಗಳ ವೈವಿಧ್ಯವನ್ನು ಹೆಚ್ಚಿಸಿಕೊಳ್ಳಿ! ಕೊನೆಯದಾಗಿ, ನಿಮಗಾಗಿ ಎರಡು ಪ್ರಶ್ನೆಗಳು:

1. ವೈದ್ಯರು ಟಾನಿಕ್‌ಗಳನ್ನು ಜನರ ಒತ್ತಾಯದ ಮೇಲೆ ಮಾತ್ರ ಬರೆದು ಕೊಡುತ್ತಾರೆ. ಹೀಗೇಕೆ?


2. ಬ್ರೂಸ್ ಲೀ, ಜಾಕೀ ಚಾನ್, ಪಿ.ಟಿ. ಉಷಾ ಮುಂತಾದವರು ಅತಿ ಚಟುವಟಿಕೆಯುಳ್ಳವರಾಗಿದ್ದರೂ ಕೂಡ ಅವರೆಲ್ಲರೂ ಮೂಳೆ ಕಾಣುವ ಹಾಗೆ ತೆಳ್ಳಗೇ ಇದ್ದಾರೆ. ಹೀಗೇಕೆ?

■





ವಿಶ್ವಕಪ್ - 1999



ವಿಶ್ವಕಪ್ ಭಾರತ ಗೆದ್ದೀತೆ?

■ ಆಲ್‌ರೌಂಡರ್

ಮೊದಲ ಚೆಂಡ್‌ನ ಎಸೆತದಿಂದ ಕೊನೆಯ ವಿಕೆಟ್, ಕೊನೆಯ ರನ್ ತನಕ ಸಮೂಹ ಸನ್ನಿ ಹಿಡಿಸುವ ಆಟ ಕ್ರಿಕೆಟ್. ಅಮೆರಿಕಾದಲ್ಲಿ ಬೇಸ್‌ಬಾಲ್‌ನಂತೆ ಈ ಖಂಡದ ರಾಷ್ಟ್ರೀಯ ಆಟದಂತಾಗಿರುವ ಕ್ರಿಕೆಟ್‌ಗೆ ಮಾರುಹೋಗದಿರುವವರ ಸಂಖ್ಯೆ ತುಂಬಾ ಕಡಿಮೆ ಎನ್ನಬಹುದು.

ಈ ಆಟದ ಪ್ರತಿಷ್ಠಿತ ಕಪ್ - ವಿಶ್ವಕಪ್. '75ರಿಂದ ಪ್ರಾರಂಭವಾಗಿರುವ ವಿಶ್ವಕಪ್ ಕ್ರಿಕೆಟ್ ಪ್ರಿಯರೆಲ್ಲರೂ ಎದುರುನೋಡುವ ಮಹಾಯಜ್ಞ. 99ರ ವಿಶ್ವಕಪ್ ಮೇ 14ರಿಂದ ಪ್ರಾರಂಭವಾಗಿ ಜೂನ್ 2ರಂದು ಇಂಗ್ಲೆಂಡ್‌ನ ಲಾರ್ಡ್ಸ್‌ನಲ್ಲಿ ಮುಗಿಯುತ್ತದೆ. ಭಾಗವಹಿಸುತ್ತಿರುವ 12 ತಂಡಗಳಲ್ಲಿ ಒಂದು ಜಯಶಾಲಿಯಾಗುತ್ತದೆ, ಪ್ರಾರಂಭದಿಂದ ಅಂತ್ಯದವರೆಗೆ ಜನರನ್ನು ಚಾರ್ಜ್ ಆಗಿ ಇಟ್ಟಿರುತ್ತದೆ.

ಇತಿಹಾಸ

1975ರ ಜೂನ್ 7 ರಂದು ಭಾರತದ ಮದನ್‌ಲಾಲ್ ಚೆಂಡೆಸೆಯುವುದರೊಂದಿಗೆ ಮೊದಲ ವಿಶ್ವಕಪ್ ಪ್ರಾರಂಭವಾಯಿತು. ಇಲ್ಲಿಯತನಕ 6 ವಿಶ್ವಕಪ್‌ಗಳು ನಡೆದಿದ್ದು, ವೆಸ್ಟ್‌ಇಂಡೀಸ್ 2ರಲ್ಲಿ ಗೆದ್ದಿದೆ. 83ರಲ್ಲಿ ಭಾರತ, 87ರಲ್ಲಿ ಆಸ್ಟ್ರೇಲಿಯಾ, 92ರಲ್ಲಿ ಪಾಕಿಸ್ತಾನ, 96ರಲ್ಲಿ ಶ್ರೀಲಂಕಾ ಗೆದ್ದಿದೆ. 99ರ ವಿಜಯ ಮಾಲೆ ಯಾರ ಕೊರಳಿಗೆ ಬೀಳಬಹುದು?

ತಲೆಕೆಳಗಾದ ಲೆಕ್ಕ

ನಿಗದಿತ ಓವರುಗಳ ಪಂದ್ಯಗಳಲ್ಲಿ ಇಂಗ್ಲೆಂಡಿನ ಪರಿಣತಿ ಹಾಗೂ 5 ದಿನದ ಪಂದ್ಯಗಳಲ್ಲಿ ಆಸ್ಟ್ರೇಲಿಯಾಕ್ಕಿದ್ದ ಅನುಭವದಿಂದಾಗಿ 1975ರ ವಿಶ್ವಕಪ್‌ನಲ್ಲಿ ಫೈನಲ್ ಪಂದ್ಯ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾದ ನಡುವೆ ನಡೆಯುತ್ತದೆ ಎಂದು ಎಲ್ಲರೂ ಅಂದುಕೊಂಡಿದ್ದರು. ಆದರೆ ಹಾಗಾಗಲಿಲ್ಲ. ಶ್ರೀಲಂಕಾವನ್ನು ಸುಲಭವಾಗಿ ಮಣಿಸಿ, ಪಾಕಿಸ್ತಾನದ ವಿರುದ್ಧ ರೋಮಾಂಚಕ ಜಯಗಳಿಸಿದ ವಿಂಡೀಸ್ ತಂಡ ನಂತರ ಓವಲ್‌ನಲ್ಲಿ ಆಸ್ಟ್ರೇಲಿಯಾವನ್ನು ಹಣಿಯಿತು. ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಗೆದ್ದ ವಿಂಡೀಸ್ ಫೈನಲ್‌ನಲ್ಲಿ ಆಸ್ಟ್ರೇಲಿಯಾವನ್ನು ಮತ್ತೊಮ್ಮೆ ಸೋಲಿಸಿ, ಪದಕವನ್ನು ಎತ್ತಿಕೊಂಡಿತು.



ಅತಿವೇಗಕ್ಕೆ ಬಲಿ

1979ರಲ್ಲಿ ಭಾರತ, ಶ್ರೀಲಂಕಾ, ನ್ಯೂಜಿಲೆಂಡ್‌ನ್ನು ಮೊದಲ ಸುತ್ತಿನಲ್ಲಿ ಮಣಿಸಿದ ವಿಂಡೀಸ್ ತಂಡಕ್ಕೆ ಸೆಮಿಫೈನಲ್‌ನಲ್ಲಿ ಪಾಕಿಸ್ತಾನದಿಂದ ತೀವ್ರ ಪ್ರತಿರೋಧ ಎದುರಾಯ್ತು. ಆದರೆ ಕಾಲಿನ್ ಕ್ರಾಪ್ಟ್ 12 ಚೆಂಡುಗಳಲ್ಲಿ ಪಂದ್ಯದ ಓಟವನ್ನೇ ಬದಲಿಸಿಬಿಟ್ಟರು. ಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಲಾಯ್ಡ್ 138 ರನ್ ಪೇರಿಸಿದರು. ಚೆನ್ನಾಗಿ ಆಡಲು ಪ್ರಾರಂಭಿಸಿದ ಇಂಗ್ಲೆಂಡ್ ವಿಂಡೀಸ್‌ರ ಅತಿವೇಗದ ಚೆಂಡೆಸೆತಕ್ಕೆ ಕುಸಿದು ಬಿದ್ದಿತು. 11 ರನ್ನಿಗೆ 7 ವಿಕೆಟ್ ಕಳೆದುಕೊಂಡು, 92 ರನ್ನುಗಳಿಂದ ಸೋತು ಶರಣಾಯ್ತು. ಕಪ್ ಮತ್ತೊಮ್ಮೆ ವಿಂಡೀಸ್ ಬಗಲಿಗೆ ಬಿತ್ತು.

ಭಾರತದ ಗೆಲುವು

1983ರಲ್ಲಿ ಮೊದಲ ಪಂದ್ಯದಲ್ಲೇ ಭಾರತಕ್ಕೆ ವಿಂಡೀಸ್ ಸೋತು ಹೋಯಿತು. ಆದರೆ ಆಸ್ಟ್ರೇಲಿಯಾ ಭಾರತವನ್ನು ಸೋಲಿಸಿತು. ನಂತರ ಪಂದ್ಯಗಳಲ್ಲಿ ಜಿಂಬಾಬ್ವೆಯನ್ನು ಸೋಲಿಸಿದ ಭಾರತ, ವೆಸ್ಟ್‌ಇಂಡೀಸ್ ಕೈಯಲ್ಲಿ ಸೋಲನ್ನೊಪ್ಪಿತು. ಮುಂದಿನೆರಡು ಪಂದ್ಯಗಳಲ್ಲಿ ಗೆಲ್ಲಲೇಬೇಕಾದ ಸ್ಥಿತಿ. ಜಿಂಬಾಬ್ವೆಯ ವಿರುದ್ಧ ಮುಂಪಡೆಯ 5 ಕಾಲಾಳುಗಳನ್ನು ಕಳೆದುಕೊಂಡು ದುಸ್ಥಿತಿಯಲ್ಲಿದ್ದ ತಂಡವನ್ನು ಪಾರು ಮಾಡಿದ್ದು ಜೀವಮಾನದಲ್ಲಿನ ಶ್ರೇಷ್ಠ ಆಟವಾಡಿದ ಕಪಿಲ್‌ದೇವ್. ಸೆಮಿಫೈನಲ್‌ಗೆ ಮೊದಲು ಆಸ್ಟ್ರೇಲಿಯಾವನ್ನು ಸೋಲಿಸಿದ ಭಾರತ, ನಂತರ ಫೈನಲ್‌ನಲ್ಲಿ 183 ರನ್ನಿಗೆ ಔಟಾಗಿ, ನಂತರ ವೆಸ್ಟ್‌ಇಂಡೀಸ್‌ನ್ನು ಸೋಲಿಸಿಬಿಟ್ಟಿತು.

ನಾಲ್ಕು ಹೋಗಿ ಆರು!

1987ರಲ್ಲಿ ಮೊದಲ ಪಂದ್ಯದಲ್ಲೇ ಭಾರತ ಆಸ್ಟ್ರೇಲಿಯಾದ ವಿರುದ್ಧ ಸೋತಿತು. ಡೀನ್ ಜೋನ್ಸ್ ಹೊಡೆದ ಚೆಂಡನ್ನು ಮೊದಲು 4 ಎಂದು ಗಣಿಸಿ, ಅನಂತರ 6 ಎಂದು ತೀರ್ಮಾನಿಸಿದ್ದರಿಂದ ಆಸ್ಟ್ರೇಲಿಯಾ ಒಂದು ರನ್ನಿನಿಂದ ಗೆದ್ದಿತು. ಈ ಅದೃಷ್ಟದ ಗೆಲುವು ಆಸ್ಟ್ರೇಲಿಯಾದ ಅಂತಿಮ ವಿಜಯಕ್ಕೆ ಬುನಾದಿ ಹಾಕಿತು. ನಂತರ ನ್ಯೂಜಿಲೆಂಡ್ ವಿರುದ್ಧ ಗೆದ್ದ ಆಸ್ಟ್ರೇಲಿಯಾ, ಸೆಮಿಫೈನಲ್ಸ್‌ನಲ್ಲಿ ಪಾಕಿಸ್ತಾನವನ್ನು ಲಾಹೋರ್‌ನಲ್ಲಿ ಸೋಲಿಸಿಬಿಟ್ಟಿತು. ಇನ್ನೊಂದು ಸೆಮಿಫೈನಲ್ಸ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ ಸೋತಿತು. ಈಡನ್ ಗಾರ್ಡನ್‌ನಲ್ಲಿ ಭಾರತೀಯರ ಅಪೂರ್ವ ಪ್ರೋತ್ಸಾಹದೊಡನೆ ಇಂಗ್ಲೆಂಡನ್ನು ಸೋಲಿಸಿದ ಅಲನ್ ಬಾರ್ಡರ್ ಕಪ್‌ನ್ನು ಆಸ್ಟ್ರೇಲಿಯಾಕ್ಕೆ ಕೊಂಡೊಯ್ದರು.

ಅನಿರೀಕ್ಷಿತ

'92ರಲ್ಲಿ ಪಾಕಿಸ್ತಾನ ಗೆಲ್ಲುವುದೆಂದು ಯಾರೂ ಅಂದುಕೊಂಡಿರಲಿಲ್ಲ. ಮೊದಲ ಮೂರು ಪಂದ್ಯಗಳಲ್ಲಿ ಅದು ಸೋತು ಹೋಯಿತು. ಇಂಗ್ಲೆಂಡ್ ವಿರುದ್ಧ ಪಾಕ್ ಅತೀ ಕಡಿಮೆ ಸ್ಕೋರಿಗೆ (116) ಔಟಾಯಿತು. ಎರಡು ಬಾರಿ

ಮಳೆ ಬಂದು, ತಂಡಕ್ಕೆ 1 ಪಾಯಿಂಟ್ ಲಭಿಸಿತು. ಇಮ್ರಾನ್‌ಗೆ ಅದೃಷ್ಟದ ಬೆಂಬಲ ತನ್ನ ಕಡೆಗಿದೆ ಎಂದು ಗೊತ್ತಾಯಿತು. ಅತ್ಯಂತ ಕಠಿಣ ಪರಿಸ್ಥಿತಿ ಬಂದಾಗ ಹುಲಿಗಳಾಗುವ ಪಾಕಿಸ್ತಾನ ಮತ್ತೆ ಹಿಂತಿರುಗಿ ನೋಡಲಿಲ್ಲ. ನಂತರದ ಎಲ್ಲ ಪಂದ್ಯಗಳಲ್ಲಿ ತಂಡ ಗೆದ್ದಿತು. ಫೈನಲ್‌ನಲ್ಲಿ ಆಸ್ಟ್ರೇಲಿಯಾವನ್ನು ಸೋಲಿಸಿತು.

ಹೊಸ ಅಧ್ಯಾಯ

'96-ಕ್ರಿಕೆಟ್‌ನ ಪುಸ್ತಕಗಳಲ್ಲಿ ಸ್ಥಾನವೇ ಇಲ್ಲದಿದ್ದ ಶ್ರೀಲಂಕಾ ಹೊಸ ಅಧ್ಯಾಯ ಬರೆದ ವರ್ಷ. ಪಾಕಿಸ್ತಾನವನ್ನು ಒಂದು ದಿನದ ಹಾಗೂ ಟೆಸ್ಟ್ ಸರಣಿಯಲ್ಲಿ ಶ್ರೀಲಂಕಾ ಸೋಲಿಸಿತ್ತು. ನಂತರ ಶಾರ್ಜಾದಲ್ಲೂ ಅದು ಗೆದ್ದಿತು. 3 ಟೆಸ್ಟ್‌ಗಳ ಸರಣಿಯಲ್ಲಿ ಅದು ಆಸ್ಟ್ರೇಲಿಯಾಕ್ಕೆ ಸೋತರೂ ತ್ರಿಕೋಣ ಪಂದ್ಯದಲ್ಲಿ ವಿಂಡೀಸ್‌ನ ಮೇಲೆ ಗೆದ್ದು, ಫೈನಲ್‌ನಲ್ಲಿ ಆಸ್ಟ್ರೇಲಿಯಾದ ವಿರುದ್ಧ ಸೋತಿತ್ತು. ಇಷ್ಟೆಲ್ಲಾ ಅನುಭವ ಇಟ್ಟುಕೊಂಡು ಹೊರಟಿದ್ದ ಶ್ರೀಲಂಕಾದ ನಾಯಕತ್ವ ವಹಿಸಿದ್ದು ಅರ್ಜುನ ರಣತುಂಗ. ಶ್ರೀಲಂಕಾದಲ್ಲಿ ಆಡಲು ಆಸ್ಟ್ರೇಲಿಯಾ ಹಾಗೂ ವಿಂಡೀಸ್ ತಂಡಗಳು ನಿರಾಕರಿಸಿದವು. ಇದೊಂದು ರೀತಿಯಲ್ಲಿ ಶ್ರೀಲಂಕಾಕ್ಕೆ ಎಸೆದ ಸವಾಲಾಗಿತ್ತು. ಮೊದಲು ಜಿಂಬಾಬ್ವೆಯನ್ನು ನಂತರ ದೆಹಲಿಯಲ್ಲಿ ಭಾರತವನ್ನು ಸೋಲಿಸಿದ ಶ್ರೀಲಂಕಾ, ಕ್ಯಾಂಡಿಯಲ್ಲಿ 388 ರನ್ ಮಾಡಿ ಕೀನ್ಯಾವನ್ನು ಸೋಲಿಸಿತು. ಫೈಸಲಾಬಾದ್‌ನಲ್ಲಿ ಇಂಗ್ಲೆಂಡ್‌ನ್ನು ಸೋಲಿಸಿ, ಕಲ್ಕತ್ತಾದಲ್ಲಿ ಭಾರತದ ನಡುವಣ ಪಂದ್ಯದಲ್ಲಿ ಗಲಾಟೆ ಆಗಿದ್ದರಿಂದ, ಪಂದ್ಯ ಮುಗಿಯದೆ ಶ್ರೀಲಂಕಾಕ್ಕೆ ಗೆಲುವು.

ಇನ್ನೊಂದು ಸೆಮಿಫೈನಲ್‌ನಲ್ಲಿ ವಿಂಡೀಸ್‌ನ್ನು ಸೋಲಿಸಿದ ಆಸ್ಟ್ರೇಲಿಯಾವನ್ನು ಮಾರ್ಚ್ 17 ರಂದು ಶ್ರೀಲಂಕಾ ಫೈನಲ್‌ನಲ್ಲಿ ಸೋಲಿಸಿ ಬಿಟ್ಟಿತು.

ಈಗಿನ ಸ್ಪರ್ಧೆ

1999, ಮೇ 14 ರಿಂದ ಜೂನ್ 20. ಭಾಗ ವಹಿಸುತ್ತಿರುವ 10 ತಂಡಗಳನ್ನು 2 ಗುಂಪುಗಳನ್ನಾಗಿ ವಿಭಾಗಿಸಲಾಗಿದೆ. ಮೊದಲ ಗುಂಪಿನಲ್ಲಿ ಶ್ರೀಲಂಕಾ, ಭಾರತ, ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ಜಿಂಬಾಬ್ವೆ ಮತ್ತು ಕೀನ್ಯಾ ಇದ್ದರೆ 2ನೇ ಗುಂಪಿನಲ್ಲಿ ಆಸ್ಟ್ರೇಲಿಯಾ, ವೆಸ್ಟ್‌ಇಂಡೀಸ್, ಪಾಕಿಸ್ತಾನ, ನ್ಯೂಜಿಲೆಂಡ್, ಬಾಂಗ್ಲಾದೇಶ ಹಾಗೂ ಸ್ಕಾಟ್‌ಲೆಂಡ್‌ಗಳಿವೆ. ಭಾರತ ಮೊದಲ ಪಂದ್ಯವನ್ನು ದಕ್ಷಿಣ ಆಫ್ರಿಕಾ ವಿರುದ್ಧ ಆಡಲಿದೆ.

ಪ್ರತಿ ಗುಂಪಿನಿಂದ 3 ತಂಡಗಳು ಸೂಪರ್ ಸಿಕ್ಸ್ ಹಂತಕ್ಕೆ ಬರುತ್ತಿವಾದ್ದರಿಂದ ಎಲ್ಲಾ ಪಂದ್ಯಗಳೂ ಮುಖ್ಯ. ಎ ಗುಂಪಿನಲ್ಲಿ ದಕ್ಷಿಣ ಆಫ್ರಿಕಾ ಪರಿಪೂರ್ಣ ತಂಡ, ಅದರಲ್ಲಿ ಆಲ್‌ರೌಂಡರ್‌ಗಳ ಸಂಖ್ಯೆ ಹೆಚ್ಚು ಇದೆ. ಡೊನಾಲ್ಡ್, ಶೌನ್ ಪೊಲ್ಲಾಕ್, ಲಾನ್ಸ್ ಕ್ಲೂಸೆನರ್ ಮತ್ತು ಜಾಕ್ವೆಸ್ ಕಾಲ್ಲಿಸ್ ಉತ್ತಮ ಚೆಂಡೆಸೆತಗಾರರು. ಕ್ರೋನಿಯ, ರೋಡ್ಸ್ ಉತ್ತಮ ದಾಂಡಿಗರಲ್ಲದೆ, ಅತ್ಯುತ್ತಮ ಕ್ಷೇತ್ರರಕ್ಷಕರು. ಈ ತಂಡಕ್ಕೆ ಬಾಬ್‌ವೂಲ್ಮರ್‌ನಂತಹ ತಜ್ಞನ ಬೆಂಬಲವಿದೆ. 1992ರಲ್ಲಿ ಮೊದಲ ಬಾರಿಗೆ ಸ್ಪರ್ಧಿಸಿದ ದಕ್ಷಿಣ ಆಫ್ರಿಕಾ ಫೈನಲ್ ತಲುಪಿತು. '96ರಲ್ಲಿ ಕ್ವಾರ್ಟರ್ ಫೈನಲ್ ತಲುಪಿದೆ. ಕಳೆದ ವರ್ಷ ಮಿನಿ ವಿಶ್ವಕಪ್ ಎನ್ನಿಸಿಕೊಂಡಿರುವ ವಿಲ್ಸ್ ಇಂಟರ್‌ನ್ಯಾಷನಲ್ ಕಪ್ ಗೆದ್ದಿರುವ ಅದು, ವಿಶ್ವಕಪ್ ಗೆಲ್ಲುತ್ತದೆ ಎನ್ನಲಾಗಿರುವ ಫೇವರೆಟ್ ತಂಡ.

96ರ ವಿಶ್ವಕಪ್ ನಂತರ ತಂಡಗಳ ಸಾಧನೆ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶ ಇಲ್ಲ	ಡ್ರಾ	ಶೇ. ಯಶಸ್ಸು
ದಕ್ಷಿಣ ಆಫ್ರಿಕಾ	62	48	13	1	-	78.32
ಶ್ರೀಲಂಕಾ	67	39	24	3	1	61.19
ವಿಂಡೀಸ್	36	20	16	-	-	55.55
ಇಂಗ್ಲೆಂಡ್	33	16	15	1	1	51.51
ಪಾಕಿಸ್ತಾನ	95	46	46	3	-	50.0
ಭಾರತ	104	43	52	8	1	45.6
ಆಸ್ಟ್ರೇಲಿಯಾ	56	26	30	-	-	46.42
ನ್ಯೂಜಿಲೆಂಡ್	53	19	29	2	3	40.56

ವಿಶ್ವಕಪ್-1999



ವಿಶ್ವ ಕಪ್‌ನಲ್ಲಿ ದಾಖಲೆಗಳು

ಅತೀ ಹೆಚ್ಚು ರನ್ ಹೊಡೆದ ತಂಡ - ಶ್ರೀಲಂಕಾ. ಕೀನ್ಯಾ ವಿರುದ್ಧ ಕ್ಯಾಂಡಿಯಲ್ಲಿ. 50 ಓವರ್‌ಗಳಲ್ಲಿ 5 ವಿಕೆಟ್‌ಗೆ 398 ರನ್.

ಅತಿ ಕಡಿಮೆ ರನ್ - 40.3 ಓವರ್‌ನಲ್ಲಿ 45 ರನ್, 1979ರಲ್ಲಿ ಕೆನಡಾ ಇಂಗ್ಲೆಂಡ್ ವಿರುದ್ಧ ಮ್ಯಾಂಚೆಸ್ಟರ್‌ನಲ್ಲಿ.

ಹೆಚ್ಚು ರನ್ ಹೊಡೆದಾತ - ಗ್ಯಾರಿ ಕಿರ್‌ಸ್ಟೆನ್, ಔಟಾಗದೆ 188, ಎಮಿರೇಟ್ಸ್ ವಿರುದ್ಧ 96ರಲ್ಲಿ.

ಅತ್ಯುತ್ತಮ ಚೆಂಡೆಸೆತ : ವಿನ್‌ಸ್ಟನ್ ಡೇವಿಸ್, 59ಕ್ಕೆ 7 ವಿಕೆಟ್, ಆಸ್ಟ್ರೇಲಿಯಾ ವಿರುದ್ಧ, 83ರಲ್ಲಿ.

ಒಂದು ವರ್ಲ್ಡ್ ಕಪ್‌ನಲ್ಲಿ ಅತೀ ಹೆಚ್ಚು ರನ್ ಸೇರಿಸಿದಾತ : ಸಚಿನ್ ತೆಂಡೂಲ್ಕರ್, '96ರಲ್ಲಿ 523 ರನ್.

ಅತೀ ಹೆಚ್ಚು ಪಂದ್ಯಗಳನ್ನು ಆಡಿದವರು : ಜಾವೇದ್ ಮಿಯಾಂದಾದ್, 6 ಕಪ್‌ಗಳಲ್ಲಿ 33 ಪಂದ್ಯಗಳು.

ವಿಶ್ವಕಪ್‌ನಲ್ಲಿ ಹೆಚ್ಚು ರನ್ ಹೊಡೆದಾತ - ಜಾವೇದ್ ಮಿಯಾಂದಾದ್, 1083 ರನ್.

ಅತ್ಯುತ್ತಮ ಬ್ಯಾಟಿಂಗ್ ಸರಾಸರಿ : ಗ್ಯಾರಿ ಕಿರ್‌ಸ್ಟೆನ್, 78.20

ಅತೀ ಹೆಚ್ಚು ಶತಕಗಳನ್ನು ಹೊಡೆದವರು: 3 ಶತಕ, ಮಾರ್ಕ್‌ವಾಫ್, ರಮೀಜ್ ರಾಜಾ, ವಿವಿಯನ್ ರಿಚರ್ಡ್ಸ್.

ಒಂದೇ ಕಪ್‌ನಲ್ಲಿ ಹೆಚ್ಚು ಶತಕ ಹೊಡೆದವರು : ಮಾರ್ಕ್‌ವಾಫ್, 96ರ ಕಪ್‌ನಲ್ಲಿ 3 ಶತಕ.


ಒಂದೇ ಕಪ್‌ನಲ್ಲಿ ಅತೀ ಹೆಚ್ಚು ಅರ್ಧ ಶತಕ ಹೊಡೆದಾತ :

ಡೇವಿಡ್ ಬೂನ್, 5 ಅರ್ಧಶತಕ, 1987ರಲ್ಲಿ

ವಿಶ್ವಕಪ್‌ಗಳಲ್ಲಿ ಅತೀ ಹೆಚ್ಚು ವಿಕೆಟ್ ಪಡೆದಾತ : ಇಮ್ರಾನ್‌ಖಾನ್, 34 ವಿಕೆಟ್.

ವಿಶ್ವಕಪ್ ಒಂದರಲ್ಲಿ ಅತಿ ಹೆಚ್ಚು ವಿಕೆಟ್ ಪಡೆದಾತ : ಕ್ರೇಗ್‌ಮ್ಯಾಕ್‌ಡರ್ಮಾಟ್, 18 ವಿಕೆಟ್, 1987ರಲ್ಲಿ.

ಪಂದ್ಯವೊಂದರಲ್ಲಿ ಅತೀ ಹೆಚ್ಚು 4 ರನ್ ಹೊಡೆದಾತ: ಡೆನಿಸ್ ಅಮಿಸ್, ಲಾರ್ಡ್ಸ್‌ನಲ್ಲಿ ಭಾರತದ ವಿರುದ್ಧ, 18.



ವಿಶ್ವಕಪ್ - 1999

ವಿಶ್ವ ಕಪ್‌ನಲ್ಲಿ ದಾಖಲೆಗಳು

ಪಂದ್ಯವೊಂದರಲ್ಲಿ ಅತೀ ಹೆಚ್ಚು 6 ರನ್ ಹೊಡೆದಾತ: ರಿಚರ್ಡ್ಸ್, ಶ್ರೀಲಂಕಾದ ವಿರುದ್ಧ ಕರಾಚಿಯಲ್ಲಿ 7, 87ರಲ್ಲಿ.

ವಿಶ್ವಕಪ್‌ಗಳಲ್ಲಿ ಅತೀ ಹೆಚ್ಚು ಕ್ಯಾಚ್ : 12, ಕ್ಲೈವ್‌ಲಾಯ್ಡ್, ಡೆಸ್ಮಂಡ್ ಹೇಯ್ನ್ಸ್, ಕಪಿಲ್ ದೇವ್.

ವಿಶ್ವಕಪ್‌ಗಳಲ್ಲಿ ಅತೀ ಹೆಚ್ಚು ಸ್ಟಂಪಿಂಗ್ - 6, ಕಿರಣ್‌ಮೋರೆ.

ವಿಶ್ವಕಪ್‌ನಲ್ಲಿ ಹೆಚ್ಚು ಬಾರಿ ನಾಯಕತ್ವ ವಹಿಸಿದವರು-ಕ್ಲೈವ್‌ಲಾಯ್ಡ್, ಅಜರುದ್ದೀನ್ 3 ಬಾರಿ.

ನಿರಂತರವಾಗಿ ಅತೀ ಹೆಚ್ಚು ಪಂದ್ಯಗಳನ್ನಾಡಿದಾತ -ಕಪಿಲ್‌ದೇವ್, 26 ಪಂದ್ಯಗಳು.

ಅತೀ ಹೆಚ್ಚು ಪಂದ್ಯಗಳನ್ನು ಗೆದ್ದ ತಂಡ - ವೆಸ್ಟ್ ಇಂಡೀಸ್, ಇಂಗ್ಲೆಂಡ್, ತಲಾ 25.

ಒಂದೇ ಕಪ್‌ನಲ್ಲಿ ಅತೀ ಹೆಚ್ಚು ಜಯಗಳಿಸಿದ ತಂಡ - ನ್ಯೂಜಿಲೆಂಡ್, 92ರಲ್ಲಿ 7 ವಿಜಯ.

ಅತಿ ವೇಗದ 50 ರನ್-29 ಚೆಂಡುಗಳಲ್ಲಿ 50 ರನ್, ಅರ್ಜುನ ರಣತುಂಗ, ಕೀನ್ಯಾ ವಿರುದ್ಧ 96ರಲ್ಲಿ.

ಅತೀ ವೇಗದ ಶತಕ -ಕಪಿಲ್‌ದೇವ್ 72 ಚೆಂಡುಗಳಲ್ಲಿ ಜಿಂಬಾಬ್ವೆ ವಿರುದ್ಧ, 1983

ಶತಕ ಬಾರಿಸಿದ ಕಿರಿಯ - ರಿಕಿ ಪಾಂಟಿಂಗ್ (ಆಸ್ಟ್ರೇಲಿಯಾ), ವೆಸ್ಟ್ ಇಂಡೀಸ್ ವಿರುದ್ಧ 96ರಲ್ಲಿ 21 ವರ್ಷ, 76 ದಿನ.

ಕಪ್ ಒಂದರಲ್ಲಿ ಅತಿ ಹೆಚ್ಚು ವಿಕೆಟ್ - ಬಿನ್ನಿ, 18 ವಿಕೆಟ್, 83 ರಲ್ಲಿ.

ಅತೀ ಮಿತವ್ಯಯ ಚೆಂಡೆಸೆತಗಾರ - ಬಿಷನ್ ಸಿಂಗ್‌ಬೇಡಿ, 12-8-6-1, 75ರಲ್ಲಿ

ಪಂದ್ಯವೊಂದರಲ್ಲಿ 3 ಕ್ಯಾಚ್ ಹಿಡಿದವರು - ಕ್ಲೈವ್ ಲಾಯ್ಡ್, ಡರ್ಮಾಟ್ ರೀವ್, ಇಜಾಜ್ ಅಹ್ಮದ್, ಅಲನ್‌ಬಾರ್ಡರ್, ಕ್ರಿಸ್ ಕೇರ್ನ್ಸ್.

ನಾಯಕನಾಗಿ ಹೆಚ್ಚು ಪಂದ್ಯಗಳನ್ನಾಡಿದಾತ - ಇಮ್ರಾನ್‌ಖಾನ್, 22 ಪಂದ್ಯ.

ನಾಯಕನಾಗಿ ಹೆಚ್ಚು ಪಂದ್ಯ ಗೆದ್ದವರು - ಕ್ಲೈವ್ ಲಾಯ್ಡ್, 17ರಲ್ಲಿ 15 ಪಂದ್ಯಗಳ ಗೆಲುವು.

ವಿಶ್ವಕಪ್‌ನಲ್ಲಿ ವೆಸ್ಟ್ ಇಂಡೀಸನ್ನು ಮೊದಲ ಬಾರಿಗೆ ಸೋಲಿಸಿದ ತಂಡ - ಭಾರತ, 1983ರಲ್ಲಿ.



ಅಫ್ರಿದಿ



ಜಯಸೂರ್ಯ

ಆಸ್ಟ್ರೇಲಿಯಾ ಉತ್ತಮ ದಾಂಡಿಗರನ್ನೊಳಗೊಂಡ ತಂಡ. ಮಾರ್ಕ್‌ವಾಘ್ ಮತ್ತು ಗಿಲ್‌ಕ್ರಿಸ್ಟರ ಪ್ರಾರಂಭಜೋಡಿ ಪ್ರಸ್ತುತದ ಅತ್ಯುತ್ತಮ ಜೋಡಿಗಳಲ್ಲೊಂದು. ಮ್ಯಾಕ್‌ಗ್ರಾರ್ತ್ ಉತ್ತಮ ಬೌಲರ್, ಶೇನ್‌ವಾರ್ನೆ ಮತ್ತೆ ತಮ್ಮ ಫಾರಂ ಕಂಡುಕೊಂಡಿದ್ದಾರೆ, ಆಟಗಾರನೊಬ್ಬ ಆ ದಿನದ ತನ್ನ ಆಟದಿಂದಾಗಿ ಪಂದ್ಯವನ್ನೇ ಬದಲಿಸಿಬಿಡಬಹುದಾದ್ದರಿಂದ ಯಾರೂ ನಗಣ್ಯರಲ್ಲ.

ಪಾಕಿಸ್ತಾನ ಅತ್ಯಂತ ಅಪಾಯಕಾರಿ ತಂಡಗಳಲ್ಲೊಂದು. ಕೆಣಕಿದರೆ ಸಿಂಹದಂತೆ ಆಡಬಲ್ಲ ಪಾಕ್‌ನ ಬ್ಯಾಟಿಂಗ್-ಬೌಲಿಂಗ್ ಎರಡೂ ಸಶಕ್ತ. ಅಕ್ರಂ-ಅಖ್ತರ್-ಸಖ್ಲೈನ್-ಮುಷ್ತಾಕ್ ಅಹ್ಮದ್ ಚತುಷ್ಕೂಟ ಎಂಥವರಿಗೂ ನೀರು ಕುಡಿಸಬಲ್ಲದು. ಷಾಹೀದ್ ಅಫ್ರಿದಿಯನ್ನು ಹೇಗೆ ಮರೆತೀರಿ, ನೀವು?

ವಿಂಡೀಸ್ ತಂಡ 2 ಸಲ ವಿಶ್ವಕಪ್ ಗೆದ್ದಿದೆ. ಆದರೆ 1987, 92ರಲ್ಲಿ ಅದಕ್ಕೆ ಸೆಮಿಫೈನಲ್ ತಲುಪುವುದು ಸಾಧ್ಯವಾಗಲಿಲ್ಲ. ಪೂನಾದಲ್ಲಿ ಕೀನ್ಯಾಕ್ಕೆ ಅದು 73ರನ್‌ನಿಂದ ಸೋತು ಹೋಯಿತು. ಆದರೆ ಲಾರಾ ಇತ್ತೀಚೆಗೆ ತನ್ನ ಫಾರಂ ಕಂಡುಕೊಂಡಿದ್ದಾರೆ. ನಂಬಬಹುದಾದ ಚಂದ್ರಪಾಲ್, ಕಾರ್ಲ್‌ಹೂಪರ್ ಇದ್ದಾರೆ. ಆಂಬ್ರೋಸ್-ವಾಲ್ಷ್‌ರ ಬೌಲಿಂಗ್‌ನಲ್ಲಿ ಮೊದಲಿನ ಬೆಂಕಿ ಇಲ್ಲ, ಆದರೆ ಅವರನ್ನು ಕಡೆಗಣಿಸುವಂತಿಲ್ಲ.

ನ್ಯೂಜಿಲೆಂಡ್ ಖ್ಯಾತನಾಮರಿಲ್ಲದ ತಂಡ, ಆದರೆ ಅದಕ್ಕೆ ಇಂಗ್ಲೆಂಡ್‌ನಲ್ಲಿ ಆಡಿದ ಅನುಭವವಿದೆ. ಆಫ್ರಿಕಾ ಹೊರತು ಪಡಿಸಿದರೆ ಜಿಂಬಾಬ್ವೆಯ ಕ್ಷೇತ್ರ ಪಾಲನೆ ಸೂಪರ್. ಆ ತಂಡ ಒಂದೆರಡು ಶಾಕ್ ನೀಡಿದಲ್ಲಿ ಆಶ್ಚರ್ಯವಿಲ್ಲ. ಇಂಗ್ಲೆಂಡ್ ತಂಡ ದುಸ್ಥಿತಿಯಲ್ಲಿದೆ. ಶ್ರೀಲಂಕಾ ಕಷ್ಟಕರ ಸ್ಥಿತಿಯಲ್ಲಿದ್ದರೂ, ಅದು 'ಅಂಡರ್ ಡಾಗ್' ಆಗಿಯೇ ವಿಶ್ವಕಪ್ ಗೆದ್ದಿತ್ತು ಎಂಬುದನ್ನು ಮರೆಯಬಾರದು. ತಂಡದ ಅರ್ಧದಷ್ಟು ಆಟಗಾರರು ಮುದಿಯಾಗಿದ್ದಾರೆ. ರಣತುಂಗ, ಡಿಸಿಲ್ವ, ಜಯಸೂರ್ಯ ಇರುವ ತಂಡವನ್ನು ತಳ್ಳಿಹಾಕುವುದು ಕಷ್ಟ. ಅದರ ಬೌಲಿಂಗ್ ವಿಧಾನ ಇಂಗ್ಲೆಂಡ್‌ನಲ್ಲಿ ಗಳಿಸುವ ಯಶಸ್ಸಿನ ಮೇಲೆ ತಂಡದ ವಿಜಯ ನಿಂತಿದೆ.


ಭಾರತ ಕಪ್‌ಗೆಲ್ಲಬಹುದೇ?

ಹೌದು ಮತ್ತು ಇಲ್ಲ! ಇಂಗ್ಲೆಂಡ್‌ನ ಅಂಕಣಗಳು ಚೆಂಡೆಸೆತಗಾರನಿಗೆ ಸಹಾಯವಾಗಬಲ್ಲವು ವೇಗದ ಇಲ್ಲವೇ ಮಧ್ಯಮ ವೇಗಿಗಳು ಅಲ್ಲಿ ಯಶಸ್ವಿಯಾಗಿದ್ದಾರೆ. ಸ್ಪಿನ್ ಬೌಲರ್‌ಗಳಿಗೆ ಚಳಿಗಾಲವಾದ್ದರಿಂದ ಚೆಂಡನ್ನು ಹಿಡಿಯುವುದೇ ಕಷ್ಟವಾಗಿಬಿಡುತ್ತದೆ. ಅನಿಲ್ ಕುಂಬ್ಳೆ ಇಂಗ್ಲೆಂಡ್‌ನಲ್ಲಿ ಋತುವೊಂದರಲ್ಲಿ 100 ವಿಕೆಟ್ ತೆಗೆದಿದ್ದರು ಎನ್ನುವುದನ್ನು ಮರೆಯಬಾರದು. ಸ್ಪಿನ್ ಹಾಗೂ ಅತಿವೇಗದ ನಡುವಿನ ರೀತಿ ಚೆಂಡನ್ನು ಎಸೆಯುವ ಕುಂಬ್ಳೆ ನಿರಾಶೆಪಡಿಸಲಿಕ್ಕಿಲ್ಲ.

ಟಾಸ್ ಗೆಲ್ಲುವುದು ನಿರ್ಣಾಯಕ ಅಂಶ. ಟಾಸ್ ಗೆದ್ದು ಎದುರಾಳಿಯನ್ನು ಬೇಗ ಪೆವಿಲಿಯನ್‌ಗೆ ಹಿಂತಿರುಗಿಸಿದರೆ, 2ನೇ ಬಾರಿ ಬ್ಯಾಟ್ ಮಾಡುವ ತಂಡಕ್ಕೆ ಪಿಚ್‌ನ ಮೇಲೆ ಮತ್ತೊಮ್ಮೆ ರೋಲರ್ ಓಡಿಸುವುದರಿಂದ ಅನುಕೂಲವಾಗುವ ಸಾಧ್ಯತೆ ಇದೆ. ತಾಂತ್ರಿಕವಾಗಿ ಪರಿಪೂರ್ಣವಾದ ಬ್ಯಾಟ್ಸ್‌ಮನ್‌ಗಳು ಇಂಗ್ಲೆಂಡಿನಲ್ಲಿ ಯಶಸ್ವಿಯಾಗುತ್ತಾರೆ. ರಾಹುಲ್, ಸಚಿನ್, ಅಜರ್, ಗಂಗೂಲಿ ಇಂಗ್ಲೆಂಡ್‌ನಲ್ಲಿ ಚೆನ್ನಾಗಿ ಆಡಬಲ್ಲರು. ಅಜರ್, ಸಚಿನ್‌ಗೆ ಅಪಾರ ಅನುಭವವಿದ್ದರೆ, ಗಂಗೂಲಿ, ರಾಹುಲ್ ತಾಂತ್ರಿಕವಾಗಿ ಪರಿಪೂರ್ಣ. ಅವರ ಯಶಸ್ಸು ಅವರ ಅನುಭವ, ತಾಂತ್ರಿಕ ಜ್ಞಾನವನ್ನು ಎಷ್ಟರಮಟ್ಟಿಗೆ ಬಳಸಿಕೊಳ್ಳುತ್ತಾರೆ ಎನ್ನುವುದರ ಮೇಲೆ ಅವಲಂಬಿಸಿದೆ. ಶ್ರೀನಾಥ್ ನಿಸ್ಸಂಶಯವಾಗಿ ಪ್ರಪಂಚದ ಅತ್ಯುತ್ತಮ ಬೌಲರ್‌ಗಳಲ್ಲೊಬ್ಬ. ಭಾರತದ ನಿಜವಾದ ಬೆಟ್-ವೆಂಕಟೇಶ್ ಪ್ರಸಾದ್. ಸನ್ನಿವೇಶ ಬಯಸಿದಂತೆ ಚೆಂಡೆಸೆಯಬಲ್ಲ ಪ್ರಸಾದ್, ನಿಧಾನಗತಿಯ



ಲಾರಾ



ಸಚಿನ್

ಬೌಲ್ ಮಾಡಬಲ್ಲ ರಾಬಿನ್‌ಸಿಂಗ್, ಗಂಗೂಲಿ, ಸಚಿನ್‌ರ ಸಂಯೋಜನೆ ಯಶಸ್ಸಾಗುವುದಿಲ್ಲ ಎನ್ನುವುದಕ್ಕೆ ಕಾರಣಗಳಿಲ್ಲ.

ಭಾರತ ಈಗಾಗಲೇ 2ಸಲ ಶ್ರೀಲಂಕಾವನ್ನು ಸೋಲಿಸಿದೆ. ಇದನ್ನೇ ಇಂಗ್ಲೆಂಡ್‌ನಲ್ಲಿ ಸಾಧಿಸ ಬೇಕು. ಲೀಸೆಸ್ಟರ್, ಬರ್ಮಿಂಗ್ ಹ್ಯಾಂ, ಓಲ್ಡ್ ಟ್ರಾಫರ್ಡ್ ಅಂಗಳಗಳಲ್ಲಿ ಭಾರತೀಯರು ಚೆನ್ನಾಗಿ ಆಡಿದ್ದಾರೆ. ಇಂಗ್ಲೆಂಡನ್ನು ಮೊನ್ನೆ ಭಾರತ ಸೋಲಿಸಿದೆ. ಆದ್ದರಿಂದ 2ನೇ ಘಟ್ಟ (ಅಂದರೆ ಸೂಪರ್ ಸಿಕ್ಸ್) ತಲುಪುವುದು ಭಾರತಕ್ಕೆ ಕಷ್ಟವಲ್ಲ.

ಕ್ಲೈವ್ ಲಾಯ್ಡ್ ('75, '79), ಕಪಿಲ್ ('83), ಬಾರ್ಡರ್ ('87), ಇಮ್ರಾನ್ ('92) ಮತ್ತು ರಣತುಂಗ ('96) ಇವರೆಲ್ಲ ತಂಡವನ್ನು ಸ್ಫೂರ್ತಿಯಿಂದ ಮುನ್ನೆಡೆಸಬಲ್ಲ ನಾಯಕರಾಗಿದ್ದರು. ಲಾಯ್ಡ್ ಅವರದ್ದು ಒಂದು ಮಹಾಗಾಥೆ. ಇಮ್ರಾನ್ ತಾವು ಬರುತ್ತಿದ್ದ 6ನೇ ಸ್ಥಾನದ ಬದಲು 3ನೇ ಸ್ಥಾನದಲ್ಲಿ ಬ್ಯಾಟ್ ಮಾಡಿದರು, ಚೆನ್ನಾಗಿ ರನ್ ಗಳಿಸಿದರು. ತಂಡ ತನ್ನಿಂತಾನೇ ಚೆನ್ನಾಗಿ ಆಡಿತು. ಕಪಿಲ್ ತಾವೇ ಆಡಿ, ತಂಡಕ್ಕೆ ಮಾದರಿಯಾಗುತ್ತಿದ್ದರು. ರಣತುಂಗ ನರಿಯಂತಹ ಚುರುಕು ಬುದ್ಧಿಯಿದ್ದಾತ, ಬಾರ್ಡರ್ ಸಹಜ ನಾಯಕ. ತಂಡ ಇವರೆಲ್ಲರನ್ನು ಗೌರವಿಸುತ್ತಿತ್ತು. ಅದನ್ನು ಅಜರ್ ವಿಷಯದಲ್ಲಿ ಹೇಳುವಂತಿಲ್ಲ. ಅಜರ್ ಬ್ಯಾಟಿಂಗ್ ದುರ್ಬಲವಾಗಿದೆ, ಅವರ ನಾಯಕತ್ವವನ್ನು ಯಾರೂ ಪ್ರಶ್ನಿಸದಿದ್ದರೂ, ಮಾಧ್ಯಮವನ್ನು ಟೀಕಿಸುವ, ಒಂಟಿಯಾಗಿ ಯಾರನ್ನೂ ಪ್ರಶ್ನಿಸದೆ - ಸ್ಫೂರ್ತಿ ತುಂಬದೆ ಇರುವ ಅವರ ನಡೆ ಗೆಲ್ಲುವ ತಂಡದ ನಾಯಕನ ಲಕ್ಷಣವಲ್ಲ.

'99ರ ತಂಡವು '83ರ ತಂಡಕ್ಕೆ ಹೋಲಿಸಿದರೆ ಹೆಚ್ಚು ಶಕ್ತ ಹಾಗೂ ಯೋಗ್ಯತೆಯುಳ್ಳ ತಂಡ. ಮದನ್‌ಲಾಲ್, ಬಿನ್ನಿ ಆಕ್ರಮಣಶೀಲ ಬೌಲರ್‌ಗಳಲ್ಲ ('83ರಲ್ಲಿ ಈ ಜೋಡಿ 35 ವಿಕೆಟ್ ತೆಗೆದಿತ್ತು). ಆಗಿನ ತಂಡದಲ್ಲಿ ಶ್ರೀನಾಥ್‌ರ ವೇಗ ಅಥವಾ ಕುಂಬ್ಳೆಯ ಸ್ಪಿನ್ ಇರಲಿಲ್ಲ. '83ರ ತಂಡ ಅಂಡರ್ ಡಾಗ್ ಆಗಿದ್ದು ಅದರ ಮೇಲೆ ಯಾವುದೇ ಒತ್ತಡ ಇರಲಿಲ್ಲ. '99ರ ಭಾರತ ತಂಡ ಹೆಚ್ಚು ಒಂದು ದಿನದ ಪಂದ್ಯಗಳನ್ನಾಡಿದೆ. '83ರ ತಂಡದ ಮುಖ್ಯಬಲ - ಸಾಧಿಸುವ ಗಟ್ಟಿತನ, ಛಲ, ಸರಳತೆ ಮತ್ತು ತಮ್ಮ ಮಿತಿಗಳ ಬಗೆಗಿನ ಅರಿವು. '83ರ ತಂಡದ 7, 8, 9 ಮತ್ತು 10ನೇ ಸ್ಥಾನದಲ್ಲಿ ಕೀರ್ತಿಅಜಾದ್, ಬಿನ್ನಿ, ಮದನ್‌ಲಾಲ್ ಮತ್ತು ಕಿರ್ಮಾನಿ ಆಡುತ್ತಿದ್ದರು. ಮೊದಲಿನ ಮೂವರು ತಮ್ಮ ರಾಜ್ಯಗಳ ತಂಡದಲ್ಲಿ 1 ರಿಂದ 6ರ ಸ್ಥಾನದಲ್ಲಿ ಆಡುತ್ತಿದ್ದ ಆಟಗಾರರು. '99ರ ತಂಡದಲ್ಲಿ ಈ ಸ್ಥಾನಗಳಲ್ಲಿ ಮೋಂಗಿಯಾ, ಅಗರಕರ್, ಕುಂಬ್ಳೆ ಮತ್ತು ಶ್ರೀನಾಥ್ ಇದ್ದಾರೆ. ಈ ಗುಂಪು ಮೇಲಿನ ಗುಂಪಿನ ಮಟ್ಟದ್ದಲ್ಲ. 6ನೇ ಸ್ಥಾನದಲ್ಲಿ ಆಡುವ ರಾಬಿನ್‌ಸಿಂಗ್ ಗಡುಸು ಆಟಗಾರ. ಆದರೆ ಆತ ಕಪಿಲ್‌ದೇವ್ ಅಲ್ಲ! ದುರ್ಬಲ ಕ್ಷೇತ್ರಪಾಲನೆ '99ರ ತಂಡದ ಇನ್ನೊಂದು ದೋಷ. ಇಂಗ್ಲೆಂಡ್‌ನ ಅಂಕಣಗಳು ದೊಡ್ಡದಾದ ಅಂಕಣಗಳಾದ್ದರಿಂದ ಹೊರ ಆವರಣದ ಕ್ಷೇತ್ರಪಾಲನೆ ಚುರುಕಾಗಿರಬೇಕಾಗುತ್ತದೆ.

ಚಂಚಲ ಜಯಲಕ್ಷ್ಮಿ

ಒಂದು ದಿನ ಪಂದ್ಯಗಳು ಚಂಚಲ. ವಿಶ್ವಕಪ್‌ನ ಇತಿಹಾಸ ನೋಡಿದರೆ, ಅದರಲ್ಲಿ ಅತ್ಯುತ್ತಮ ತಂಡ ಗೆದ್ದೇ ಗೆಲ್ಲುತ್ತದೆ ಎಂದು ಖಚಿತವಾಗುವುದಿಲ್ಲ. ಡೋಲಾಯಮಾನ ಸ್ಥಿತಿ. ಒಂದು ಚೆಂಡು, ಒಂದು ರನ್ ಔಟ್, ಒಂದೇ ಒಂದು ರನ್ ಇಡೀ ಪಂದ್ಯದ ತಿರುವನ್ನೇ ಬದಲಿಸಿಬಿಡುತ್ತದೆ.

95 ಕೋಟಿ ಭಾರತೀಯರು ಆಶಿಸುತ್ತಿದ್ದಾರೆ - ಸಚಿನ್ ಚೆಂಡುಗಳನ್ನು ಛಿದ್ರಮಾಡಲಿ, ರಾಹುಲ್, ಗಂಗೂಲಿ-ಜಡೇಜಾ ಚೆನ್ನಾಗಿ ಆಡಲಿ, ಅಜರ್ ಗೆಲುವಾಗಿ ಓಡಾಡಿಕೊಂಡಿರಲಿ, ವೆಂಕಿ-ಶ್ರೀನಾಥ್-ಕುಂಬ್ಳೆ ಚೆಂಡೆಸೆದರೆ ವಿಕೆಟ್ ಥೇಮ್ಸ್‌ನದಿಯಲ್ಲಿ ಹೋಗಿ ಬೀಳಲಿ.

ಭಾರತ ಗೆಲ್ಲಲಿ! ■

ವಿಶ್ವಕಪ್ - 1999



ವಿಶ್ವ ಕಪ್ ವೈಶಿಷ್ಟ್ಯಗಳು

- 1992ರಲ್ಲಿ ಇಂಗ್ಲೆಂಡ್ ಸೇರಿಸಿದ 253 ರನ್ನಿಗೆ ಉತ್ತರವಾಗಿ ದಕ್ಷಿಣ ಆಫ್ರಿಕಾ 13 ಚೆಂಡಿನಲ್ಲಿ 22 ರನ್ ಮಾಡಬೇಕಿತ್ತು, ಆದರೆ ನಿಯಮವನ್ನು ಜಾರಿಗೆ ತಂದಾಗ 1 ಚೆಂಡಿನಲ್ಲಿ 22 ರನ್ ಮಾಡಬೇಕಾದ ಪರಿಸ್ಥಿತಿ ಸೃಷ್ಟಿಯಾಯ್ತು!
- 1983ರಲ್ಲಿ ಆಡಿಧ 8 ಪಂದ್ಯಗಳಲ್ಲಿ 6 ರಲ್ಲಿ ಭಾರತೀಯರು ಮ್ಯಾನ್ ಆಫ್ ದಿ ಮ್ಯಾಚ್ ಆಗಿದ್ದರು.
- 1999ರ ವಿಶ್ವ ಕಪ್‌ಗೆ 7 ಜನ ಪ್ರಾಯೋಜಕರು. ಅವರು ಒಟ್ಟು 7.5. ದಶಲಕ್ಷ ಪೌಂಡ್ ಹಣ ಸುರಿದಿದ್ದಾರೆ.
- 10 ವಿಕೆಟ್‌ಗಳಲ್ಲಿ ಜಯಗಳಿಸಿದ ತಂಡಗಳು - 1975ಲ್ಲಿ ಭಾರತ ಪೂರ್ವ ಆಫ್ರಿಕಾ ಮೇಲೆ 1983ರಲ್ಲಿ ವೆಸ್ಟ್ ಇಂಡೀಸ್ ಜಿಂಬಾಬ್ವೆ ಮೇಲೆ, 1992ರಲ್ಲಿ ವೆಸ್ಟ್ ಇಂಡೀಸ್ ಪಾಕಿಸ್ತಾನದ ಮೇಲೆ.
- 1 ವಿಕೆಟ್‌ನಲ್ಲಿ ಜಯ ಗಳಿಸಿದ ತಂಡಗಳು - 1975ರಲ್ಲಿ ವಿಂಡೀಸ್ ಪಾಕಿಸ್ತಾನದ ವಿರುದ್ಧ, 1987ರಲ್ಲಿ ಪಾಕಿಸ್ತಾನ ವಿಂಡೀಸ್ ವಿರುದ್ಧ.
- 1 ರನ್‌ನಲ್ಲಿ ವಿಜಯ ದಕ್ಕಿಸಿಕೊಂಡ ತಂಡಗಳು - 1987 ಮತ್ತು 92ರಲ್ಲಿ ಆಸ್ಟ್ರೇಲಿಯಾ ಭಾರತದ ವಿರುದ್ಧ.
- ಅತೀ ದೊಡ್ಡ ವಿಜಯ : ಭಾರತದ ವಿರುದ್ಧ ಇಂಗ್ಲೆಂಡ್, 1975ರಲ್ಲಿ 202 ರನ್‌ನಿಂದ ವಿಜಯ.
- ವಿಶ್ವಕಪ್‌ನಲ್ಲಿ ಹೆಚ್ಚು ಶೂನ್ಯ ಹೊಡೆದವರು - 23 ಪಂದ್ಯಗಳಲ್ಲಿ 4 ಶೂನ್ಯ, ಕೃಷ್ಣಮಾಚಾರಿ ಶ್ರೀಕಾಂತ್.
- ವಿಶ್ವಕಪ್‌ನಲ್ಲಿ ಹ್ಯಾಟ್ರಿಕ್ ಗಳಿಸಿದಾತ : ಚೇತನ್ ಶರ್ಮಾ ನ್ಯೂಜಿಲೆಂಡ್ ವಿರುದ್ಧ ನಾಗಪುರ, 1987ರಲ್ಲಿ.
- ವಿಶ್ವಕಪ್‌ನಲ್ಲಿ ಮೊದಲ ಚೆಂಡು ಎಸೆದವರು : ಮದನ್‌ಲಾಲ್, 7 ಜೂನ್, 1975 ಇಂಗ್ಲೆಂಡ್ ವಿರುದ್ಧ.
- ಇತಿಹಾಸವನ್ನೇ ಬದಲಿಸಿದ ಬ್ಯಾಟಿಂಗ್ ಪ್ರದರ್ಶನ : ಕೆ.ಪಿ.ಎಲ್. ಜಿಂಬಾಬ್ವೆ ವಿರುದ್ಧ 175 ರನ್, 1983ರಲ್ಲಿ.

ಹೆಸರು ಬೇಳೆ ಆಂಬೊಡೆ

ಬೇಕಾಗುವ ಸಾಮಗ್ರಿಗಳು :

ಹೆಸರುಬೇಳೆ 2 ಕಪ್, 1/2 ಕಪ್ ಕಡಲೆಬೇಳೆ, 1/2 ಕಪ್ ಉದ್ದಿನ ಬೇಳೆ, ಉಪ್ಪು 2 ಚಮಚ, 4 ಹಸಿಮೆಣಸು, ಕೊತ್ತಂಬರಿ ಸೊಪ್ಪು 1 ಕಟ್ಟು, ಹಸಿ ಶುಂಠಿ 1 ಚೂರು, 2 ಚಮಚ ಜೀರಿಗೆ, ಇಂಗು, ಕರಿಯಲು ಎಣ್ಣೆ.

ಮಾಡುವ ವಿಧಾನ :

ಹೆಸರುಬೇಳೆ, ಉದ್ದಿನಬೇಳೆ, ಕಡಲೆಬೇಳೆಗಳನ್ನು ಬೇರೆ ಬೇರೆಯಾಗಿ 2 ಗಂಟೆ ನೀರಿನಲ್ಲಿ ನೆನೆಹಾಕಬೇಕು. ನಂತರ ಅದಕ್ಕೆ ಕೊತ್ತಂಬರಿ ಸೊಪ್ಪು, ಹಸಿ ಮೆಣಸು, ಶುಂಠಿ, ಇಂಗು, ಜೀರಿಗೆಯನ್ನು ಸೇರಿಸಿ ಗಟ್ಟಿಯಾಗಿರುವಂತೆ ರುಬ್ಬಬೇಕು. ಎಣ್ಣೆಯನ್ನು ಕಾಯಿಸಿಕೊಂಡು ಸಣ್ಣ ಸಣ್ಣ ಉಂಡೆ ಮಾಡಿ, ತಟ್ಟಿ ಕರಿಯಬೇಕು.

-ವಿಜಯಲಕ್ಷ್ಮಿ ಸುಬ್ಬರಾವ್,
ಕೈತೋಟ.

ನೆಲ್ಲಿಕಾಯಿ ಗುಳಂಬ (ಜಾಮ್)

ಬೇಕಾಗುವ ಸಾಮಗ್ರಿಗಳು :

1 ಕೆ.ಜಿ. ನೆಲ್ಲಿಕಾಯಿ (ದೊಡ್ಡಗಾತ್ರ)ದ್ದು, 1 ಕೆ.ಜಿ. ಸಕ್ಕರೆ, 10ರಿಂದ 15 ಗೋಡಂಬಿ ಚೂರುಗಳು, 10 ರಿಂದ 15 ಕರಿದ್ರಾಕ್ಷಿ, ಹಸಿ ಶುಂಠಿ, ಸ್ವಲ್ಪ ತುಪ್ಪ, ಏಲಕ್ಕಿ ಪುಡಿ.

ಮಾಡುವ ವಿಧಾನ :

ನೆಲ್ಲಿಕಾಯಿಗಳನ್ನು ಹೆರೆಯುವ ಮಣೆಯಿಂದ ತುರಿದಿಟ್ಟುಕೊಳ್ಳಿ. ದೊಡ್ಡ ಬಾಣಲೆಯಲ್ಲಿ ನೀರು



ಕುದಿಸಿ ನೆಲ್ಲಿಕಾಯಿ ತುರಿ ಹಾಕಿ ಪುನಃ ಕುದಿಸಿ ನಂತರ ಹತ್ತಿ ಬಟ್ಟೆಯಲ್ಲಿ ಸುರುವಿ ನೀರನ್ನೆಲ್ಲ ಬಸಿದು ಇಟ್ಟುಕೊಳ್ಳಿ.

ಮತ್ತೊಂದು ಬಾಣಲೆಯಲ್ಲಿ ಸಕ್ಕರೆ ತೊಯುವಷ್ಟು ನೀರನ್ನು ಹಾಕಿ ಕರಗಿಸಿ ಒಂದು ಎಳೆ ಬರುವ ತನಕ ಪಾಕ ಮಾಡಿರಿ. ಅದೇ ಪಾಕದಲ್ಲಿ ಬಸಿದ ನೆಲ್ಲಿಕಾಯಿ ತುರಿಯನ್ನೆಲ್ಲ ಹಾಕಿ ಸ್ವಲ್ಪ ಕುದಿಸಿ ದಟ್ಟ ಎಳೆ (ಕೈಯಿಂದ ಮುಟ್ಟಿ ಎಳೆದಾಗ) ಬರುವವರೆಗೆ ಕುದಿಸಿ ಕೆಳಗಿಳಿಸಿರಿ.

ತುಪ್ಪದಲ್ಲಿ ದ್ರಾಕ್ಷಿ ಮತ್ತು ಗೋಡಂಬಿ ಚೂರುಗಳನ್ನು ಕರಿದು ಹಾಕಿರಿ. ಶುಂಠಿ ರಸ ತೆಗೆದು ಹಾಕಿರಿ ಕೊನೆಗೆ ಏಲಕ್ಕಿ ಪುಡಿಯನ್ನು ಹಾಕಿ ಈಗ ಚೆನ್ನಾಗಿ ಎಲ್ಲವನ್ನು ಚೆನ್ನಾಗಿ ಬೆರೆಸಿ ಆರಿದ ನಂತರ ಗಾಜಿನ ಜಾಡಿಯಲ್ಲಿ ಗಾಳಿಯಾಡದಂತೆ ಭದ್ರವಾಗಿ ಮುಚ್ಚಿರಿಸಿ ಇದನ್ನು ಒಂದು ವರ್ಷಗಳವರೆಗೂ ಕೆಡದಂತಿಟ್ಟು ಉಪಯೋಗಿಸಬಹುದು.

- ರಾಜಶ್ರೀ ವಿನಾಯಕ ಗುಮಾಸ್ತೆ, ಕೊಪ್ಪಳ.

ಕುಂಬಳಕಾಯಿ ಗಾರಿಗೆ

ಬೇಕಾಗುವ ಸಾಮಗ್ರಿಗಳು:

ಬೂದುಕುಂಬಳ ಕಾಯಿ 1 ಕೆ.ಜಿ. ಯಷ್ಟು, ಅಕ್ಕಿ ಹಿಟ್ಟು 250 ಗ್ರಾಂ, ಬೆಲ್ಲ ಅರ್ಧ ಕೆಜಿ, 10 ಏಲಕ್ಕಿ, ಕರಿಯಲಿಕ್ಕೆ ತುಪ್ಪ.

ಮಾಡುವ ವಿಧಾನ :

ಕುಂಬಳಕಾಯಿಯನ್ನು ಹೋಳುಗಳನ್ನಾಗಿ ಮಾಡಿಕೊಂಡು ಬೆಲ್ಲ ಸೇರಿಸಿ ಸರಿಯಾಗಿ ಮಿದಿಯಿರಿ. ಏಲಕ್ಕಿ ಪುಡಿ ಸೇರಿಸಿ ಕದಡಿ ರೊಟ್ಟಿ ಮಾಡುವಂತೆ ತಟ್ಟಿ ಅಕ್ಕಿ ಹಿಟ್ಟಿನಲ್ಲಿ ಹೊರಳಾಡಿಸಿ (ಎರಡು ಕಡೆ) ಎಣ್ಣೆಯಲ್ಲಿ ಹಾಕಿ ಕರಿಯಿರಿ.

-ಕೆ. ವರಗಪ್ಪ,
ಬಳ್ಳಾರಿ.

ಬಾಳೆಹಣ್ಣಿನ ದೋಸೆ

ಬೇಕಾಗುವ ಸಾಮಗ್ರಿಗಳು:

ಅರ್ಧ ಕೆಜಿ ಅಕ್ಕಿ, ಹದಿನೈದು ಬಾಳೆಹಣ್ಣು, ಅರ್ಧ ತೆಂಗಿನ ತುರಿ, ಅದಕ್ಕೆ ತಕ್ಕಷ್ಟು ಉಪ್ಪು, ತುಪ್ಪ ಹಾಗೂ ಬೆಲ್ಲ.

ಮಾಡುವ ವಿಧಾನ :

ಸಾಕಷ್ಟು ಸಮಯ ಅಕ್ಕಿ ನೆನೆಸಿ ಚೆನ್ನಾಗಿ ತೊಳೆದು, ಸಿಪ್ಪೆ ಸುಲಿದ ಬಾಳೆಹಣ್ಣು, ತೆಂಗಿನ ತುರಿ ಮತ್ತು ಬೆಲ್ಲ ಸೇರಿ ಅಕ್ಕಿಯನ್ನು ರುಬ್ಬಬೇಕು. ರುಚಿಗೆ ಬೇಕೆಂದರೆ ಸ್ವಲ್ಪ ಉಪ್ಪು ಸೇರಿಸಿದ ಹಿಟ್ಟನ್ನು ದೋಸೆ ಕಾವಲಿಗೆ ತುಪ್ಪ ಅಥವಾ ಬೆಣ್ಣೆ ಸವರಿ ತೆಳುವಾಗಿ ಹಾಕಿ ಬಾಳೆಹಣ್ಣಿನ ದೋಸೆ ತಯಾರಾಗುತ್ತದೆ.

-ಶಂಕರ ಚ. ಸಿಂಪಿ, ಕಂದಗಲ್ಲ.

ಕಡ್ಲೆ ಬರ್ಫಿ

ಬೇಕಾಗುವ ಸಾಮಗ್ರಿಗಳು:

ಒಂದು ಲೋಟ ಶೇಂಗಾಬೀಜ, ಒಂದೂವರೆ ಲೋಟ ಸಕ್ಕರೆ.

ಮಾಡುವ ವಿಧಾನ :

ಶೇಂಗಾ ಬೀಜವನ್ನು ಹುರಿದುಕೊಂಡು ಸ್ವಲ್ಪ ಕುಟ್ಟಿ ಪುಡಿ ಮಾಡಿ. ಒಂದು ಪಾತ್ರೆಯಲ್ಲಿ ಸಕ್ಕರೆಯನ್ನು ಹಾಕಿ ಒಲೆಯ ಮೇಲೆ ಕರಗಲು ಇಡಬೇಕು. ಸಕ್ಕರೆ ಕರಗಿದ ಮೇಲೆ ಕೆಳಗಡೆ ಇಳಿಸಿಕೊಂಡು ಪುಡಿ ಮಾಡಿದ ಕಡ್ಲೆ ಬೀಜವನ್ನು ಅದರಲ್ಲಿ ಹಾಕಿ ಚೆನ್ನಾಗಿ ಕಲಸಿ, ಮಣೆಯ ಮೇಲೆ ಹರಡಿ ಲಟ್ಟಣಿಗೆಯಿಂದ ಲಟ್ಟಿಸಿ, ನಮಗೆ ಬೇಕಾದ ಆಕಾರದಲ್ಲಿ ಚಾಕುವಿನಿಂದ ಕತ್ತರಿಸಿ ಬರ್ಫಿ ತುಂಡುಗಳನ್ನು ತಟ್ಟೆಯಲ್ಲಿ ಅಂದವಾಗಿ ಜೋಡಿಸಿ ಬೇಕಾದಾಗ ಉಪಯೋಗಿಸಿಕೊಳ್ಳಬಹುದು.

-ದೀಪಾ ಕೂಲಹಳ್ಳಿ,
ಬೆಣ್ಣೆಹಳ್ಳಿ.

ನೀವೂ ಬರೆಯಬಹುದು

ನೀವು ಅಡಿಗೆ ಮಾಡುವುದರಲ್ಲಿ ನುರಿತವರಿರಬೇಕೆಂದಿಲ್ಲ. ನಿಮಗೆ ತಿಳಿದಿರುವ ವಿವಿಧ ತಿಂಡಿ ತಿನಿಸುಗಳ ತಯಾರಿ, ಬಳಕೆ, ಕೆಡದಂತಿಡುವ ವಿಧಾನಗಳ ಬಗೆಗೆ ಚುಟುಕಾಗಿ ಬರೆದು ಜೊತೆಗೊಂದು ಭಾವಚಿತ್ರ ಕಳಿಸಿ, 'ಅಡುಗೆ ಮನೆ' ಅಂಕಣ ತುಂಬಿರಿ.

ವಿಳಾಸ: ಸಂಪಾದಕರು, ಬಿಸಿಲ ಬದುಕು, ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರನಗರ, ಬೆಂಗಳೂರು - 560 079.



ಭೈರಪ್ಪನವರು ಎಬ್ಬಿಸಿದ್ದು ಬಿರುಗಾಳಿ ಅಲ್ಲ; ಅದು ಸುಂಟರಗಾಳಿ. ಇನ್ನೊಬ್ಬರ ಕಣ್ಣಲ್ಲಿ ಮಣ್ಣು ತೂರಲು ಹೋಗಿ ತಮ್ಮ ಕಣ್ಣಲ್ಲಿ ಮಣ್ಣು ಹಾಕಿಕೊಂಡಿದ್ದಾರೆ. ಭೈರಪ್ಪನವರನ್ನು ಕನಕಪುರ ಸಮ್ಮೇಳನ ದಿಗಂಬರಗೊಳಿಸಿದೆ. ಅವರಿಗೆ ಬಟ್ಟೆ ತೊಡಿಸಲು ಹೊರಟ ಕೋಚೆ ನಗೆಗೀಡಾಗಿದ್ದಾರೆ.

ಬಿರುಗಾಳಿ v/s ಸುಂಟರಗಾಳಿ

■ ಅಲ್ಲಮಪ್ರಭು ಬೆಟ್ಟದೂರು

ಕೋಚೆಯವರು ಏಪ್ರಿಲ್ 1999ರ 'ಬಿಸಿಲ ಬದುಕು' ಮಾಸಪತ್ರಿಕೆಯಲ್ಲಿ 'ಭೈರಪ್ಪನವರು ಎಬ್ಬಿಸಿದ ಬಿರುಗಾಳಿ!' ಎಂಬ ಲೇಖನದಲ್ಲಿ ಕನಕಪುರ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ. ಎಸ್. ಎಲ್. ಭೈರಪ್ಪನವರಾಡಿದ ಮಾತುಗಳನ್ನು ವಿಶ್ಲೇಷಿಸುವಾಗ ಕನಕಪುರ ಸಾಹಿತ್ಯ ಸಮ್ಮೇಳನದ ಸಂಪೂರ್ಣ ಚಟುವಟಿಕೆಗಳನ್ನು ಗಮನಿಸಿಲ್ಲವೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಭೈರಪ್ಪನವರ ಭಾಷಣಕ್ಕೆ ಎರಡು ರೀತಿಯಲ್ಲಿ ಪ್ರತಿಕ್ರಿಯೆಗಳು ಬಂದವು.

1. ಮುನಿವೆಂಕಟಪ್ಪನವರು ಭೈರಪ್ಪನವರ ಭಾಷಣದ ವಿಶ್ಲೇಷಣೆಗೆ ತೊಡಗಿದಾಗ ಸಂಘಟಕರಲ್ಲಿ ಒಬ್ಬರಾದ ಎಲ್ಲೇಗೌಡ ಬೆಸಗರಹಳ್ಳಿ ಅವರು ಮುನಿವೆಂಕಟಪ್ಪನವರ ಮಾತಿಗೆ ತಡೆಯೊಡ್ಡಿದಾಗ ನಾನು ಮತ್ತು ಗುಲ್ಬರ್ಗಾ ಜಿಲ್ಲೆಯ ಮಠಪತಿಯವರು ಕೂಡಿ ''ಪುರೋಹಿತಶಾಹಿ ಭೈರಪ್ಪನವರಿಗೆ ಧಿಕ್ಕಾರ'' ''ಪುರೋಹಿತಶಾಹಿ ಸಂಘಟಕರಿಗೆ ಧಿಕ್ಕಾರ'' ''ಪುರೋಹಿತಶಾಹಿ ವಿಚಾರಕ್ಕೆ ಧಿಕ್ಕಾರ'' ಎಂದು ಪ್ರತಿಭಟಿಸತೊಡಗಿದಾಗ ದಲಿತ ಯುವಕರ ದೊಡ್ಡ ಗುಂಪು ಸಮ್ಮೇಳನದ ಮುಂಭಾಗಕ್ಕೆ ಬಂದು ಪ್ರತಿಭಟಿಸತೊಡಗಿದರು. ನಂತರ ದಲಿತ ಬಂಡಾಯ ಬರಹಗಾರರು ಸಮ್ಮೇಳನದ ಹೊರಗೆ ಸಮಾಲೋಚನೆ ನಡೆಸಿ ಎರಡು ರೀತಿಯಲ್ಲಿ ಪ್ರತಿಭಟಿಸಲು ನಿರ್ಧರಿಸಿದರು.

2. ಸಮ್ಮೇಳನದ ಮುಂಭಾಗಕ್ಕೆ ಹೋಗಿ ಘೋಷಣೆ ಕೂಗುತ್ತ ಹೊರಗೆ ಹೋಗಿ ಸಭೆ ನಡೆಸಿ ಸಮ್ಮೇಳನಾಧ್ಯಕ್ಷರ ಭಾಷಣ ಪ್ರತಿಯನ್ನು ಅಂಬೇಡ್ಕರ್ ಮನುಸ್ಮೃತಿಯನ್ನು ಸಾಂಕೇತಿಕವಾಗಿ ಸುಟ್ಟಂತೆ ಸುಟ್ಟು ಜನಸಾಮಾನ್ಯರನ್ನು ವಿಚಾರ ಮಾಡಲು ಹಚ್ಚುವುದು ಮತ್ತು ಅದೇ ಸಮಯದಲ್ಲಿ ಪ್ರೊ. ಚಂದ್ರಶೇಖರ ಪಾಟೀಲರು ವೈಚಾರಿಕವಾಗಿ ಸಮ್ಮೇಳನಾಧ್ಯಕ್ಷರ ಭಾಷಣವನ್ನು ವಿಮರ್ಶಿಸಬೇಕೆಂದು ನಿರ್ಧರಿಸಲಾಯ್ತು. ಅಂತೆಯೇ ಮುಂದೆ ಎಲ್ಲಾ ಘಟನಾವಳಿಗಳು ಜರುಗಿದವು.


3. ಸಮ್ಮೇಳನದ ಹೊರಗೆ ಪ್ರತಿಭಟನಾ ಸಭೆಯಲ್ಲಿ ಸಮ್ಮೇಳನಾಧ್ಯಕ್ಷರ ಭಾಷಣದ ಒಂದು ಪ್ರತಿಯನ್ನು ಸಾಂಕೇತಿಕವಾಗಿ ಸುಡುತ್ತಾ ಭಾಷಣದ ಪ್ರತಿಗಳನ್ನು ಜನರಿಗೆ ತಲುಪಿಸಿದರೆ ಚರ್ಚೆ ಸಾಧ್ಯವೆಂದು ಹೇಳಿದರೂ ಸಾಹಿತ್ಯ ಪರಿಷತ್ತಿನವರು ಅತಿಥಿಗಳನ್ನು ಹೊರತುಪಡಿಸಿ ಯಾರಿಗೂ ಅಧ್ಯಕ್ಷರ ಭಾಷಣದ ಪ್ರತಿ ನೀಡಲಿಲ್ಲ. ಅಧ್ಯಕ್ಷರ ಭಾಷಣಕ್ಕೆ ತೀವ್ರ ಪ್ರತಿಕ್ರಿಯೆ ಬರುತ್ತದೆಯೆಂದೇ ಸಾಹಿತ್ಯ ಪರಿಷತ್ತಿನವರು ಊಹಿಸಿ ಅಧ್ಯಕ್ಷರ ಭಾಷಣದ ಪ್ರತಿಗಳನ್ನು ಹಂಚಲಿಲ್ಲ. ನಿಜಸ್ಥಿತಿ ಹೀಗಿರುವಾಗ ಕೋಚೆಯವರು ಪ್ರೊ. ಚಂದ್ರಶೇಖರ ಪಾಟೀಲರು ಭಾಷಣದ ಪ್ರತಿ ಸುಟ್ಟರೆಂದು ಹೇಳುವುದು ತಪ್ಪು. ಭಾಷಣದ ಪ್ರತಿಯನ್ನು ಮಲ್ಲಿಕಾ ಘಂಟಿಯವರು ಸುಟ್ಟರು. ಚಂಪಾ ಅವರು ತರ್ಕಬದ್ಧವಾಗಿ ಭೈರಪ್ಪನವರ ವಾದವನ್ನು ಅಲ್ಲಗಳೆದು ವೈಚಾರಿಕವಾಗಿ ಸುಟ್ಟರು. ಆದ್ದರಿಂದ ಚಂಪಾ ಆಗಲಿ, ನಾವಾಗಲಿ ಫ್ಯಾಸಿಷ್ಟ್ ಹೇಗೆ? ಮನುಸ್ಮೃತಿಯನ್ನು ಸುಟ್ಟ ಅಂಬೇಡ್ಕರರು ಫ್ಯಾಸಿಷ್ಟರೇ?

4. ಚಂಪಾ ಅವರು ಭೈರಪ್ಪನವರ ಕನ್ನಡಪರ ಆಲೋಚನೆಗಳನ್ನು ಸ್ವಾಗತಿಸಿ, ಅವರ ಪ್ರತಿಗಾಮಿ ಆಲೋಚನೆಗಳನ್ನು ಮಾತ್ರ ಖಂಡಿಸಿದ್ದಾರೆ. ನಿಜಸ್ಥಿತಿ ಹೀಗಿದ್ದರೂ ಕೋಚೆಯವರು ತಪ್ಪಾಗಿ ಭಾವಿಸಿದ್ದು ಯಾಕೆ?

ನವೋದಯ ಸಾಹಿತ್ಯವನ್ನು ಹೊರತುಪಡಿಸಿ ನವ್ಯ ಪ್ರಗತಿಶೀಲ; ದಲಿತ-ಬಂಡಾಯ ಸಾಹಿತ್ಯವನ್ನು ಶುದ್ಧ ಸಾಹಿತ್ಯವಲ್ಲವೆಂದು ಟೀಕಿಸಿದ್ದರೂ, ತಾವೊಬ್ಬ ಪ್ರಗತಿಶೀಲರೆಂದು ಹೇಳಿಕೊಳ್ಳುವ ಕೋಚೆ ಭೈರಪ್ಪನವರ ಶುದ್ಧ ಸಾಹಿತ್ಯದ ನಿಲುವನ್ನು ಟೀಕಿಸಿದರೂ, ಅವರ ಸಿಟ್ಟಿರುವುದು ಚಂಪಾ ಅವರ ಮೇಲೆ. ಪ್ರಗತಿಶೀಲ ಸಾಹಿತ್ಯದ ನಂತರ ಬರುವ ದಲಿತ-ಬಂಡಾಯದವರು ಪ್ರಗತಿಶೀಲ ಸಾಹಿತ್ಯವನ್ನು ತಮ್ಮ ಪರಂಪರೆಯೆಂದು ಗೌರವಿಸುವುದು ಕೋಚೆಯವರಿಗೆ ಗೊತ್ತಿಲ್ಲವೆ? ತಮ್ಮ ಪಂಥದ ಜೊತೆಗಾರರಾಗಿದ್ದ ಹೆಸರಾಂತ ಕಾದಂಬರಿಕಾರ ಬಸವರಾಜ ಕಟ್ಟೀಮನಿಯವರನ್ನು ಟೀಕಿಸಿದರೂ ಇವರು ಸುಮ್ಮನಿದ್ದಾರೆ.

ತಾತ್ವಿಕವಾಗಿ ಒಂದು ವಿಚಾರಧಾರೆಗೆ ಬದ್ಧರಾದವರು, ಹೋರಾಟರಂಗಕ್ಕೆ ಇಳಿದವರು ಸೃಜನಶೀಲತೆಯನ್ನು ಕಳೆದುಕೊಳ್ಳುತ್ತಾರೆಂದು ಹೇಳುವ ಭೈರಪ್ಪನವರು ತಾವು ವೈದಿಕ ಧರ್ಮ, ತತ್ವಗಳಿಗೆ ಬದ್ಧರಾಗಿದ್ದನ್ನು ಮರೆತುಬಿಡುತ್ತಾರೆ. ಇವರ ಸೃಜನಶೀಲ ಸಾಹಿತ್ಯವೂ ಈ ಹಿನ್ನೆಲೆಯಲ್ಲಿ ಅರ್ಥಕಳೆದುಕೊಂಡಿದೆ ಎಂಬುದನ್ನು ಕೋಚೆ ಗುರುತಿಸದೇ ಹೋಗಿದ್ದಾರೆ.


ಕಲೆ, ಸಾಹಿತ್ಯ ಹೀಗೆಯೇ ಇರಬೇಕೆಂದು ಫರ್ಮಾನು ಹೊರಡಿಸುವ, ಶುದ್ಧ ಸಾಹಿತ್ಯದ ಹೆಸರಿನಲ್ಲಿ ಜನಪರ ನಿಲುವುಗಳನ್ನು ವಿರೋಧಿಸುವ ಭೈರಪ್ಪನವರು ಫ್ಯಾಸಿಷ್ಟರೋ? ಸಾಂಕೇತಿವಾಗಿ ಒಂದು ಪ್ರತಿಯನ್ನು ಸುಟ್ಟು ಜನವಿರೋಧಿ ನಿಲುವುಗಳ ಕಡೆ ಜನರ ಗಮನ ಸೆಳೆದ ನಾವು ಫ್ಯಾಸಿಷ್ಟರೋ? ಜನರೇ ನಿರ್ಧರಿಸಲಿ. ಹೋರಾಟಗಾರರಾಗಿದ್ದ ವಚನಕಾರರು ಸೃಜನಶೀಲರೂ ಆಗಿದ್ದರು. ಹೋರಾಟವು ಸೃಜನಶೀಲತೆಯನ್ನು ಹೆಚ್ಚಿಸುತ್ತದೆ. ಈ ಬಗ್ಗೆ ಕೋಚೆ ಆಲೋಚಿಸಬೇಕು. ■



ಸಮೀರ್ ಜೈನ್

ಪತ್ರಿಕಾ ಸಮರ

ಕೋಣಗಳ ಕಾದಾಟ



ಶೋಭನಾ ಭಾರ್ತಿಯಾ

ಮೇ 3ರಂದು ಪತ್ರಿಕಾ ಸ್ವಾತಂತ್ರ್ಯ ದಿನಾಚರಣೆ. ಈ ಸಂದರ್ಭದ ವಿಶೇಷ ಲೇಖನ ಇಲ್ಲಿದೆ.

ಪತ್ರಿಕೆಯೊಂದರ ಪ್ರಸರಣ ಸಂಖ್ಯೆಗೂ, ಅದರ ಗುಣಮಟ್ಟಕ್ಕೂ ಸಂಬಂಧವಿಲ್ಲ. ಇಲ್ಲಿರುವುದು 'ಯಾರ ಕೈಯಲ್ಲಿ ಬಡಿಗೆ ಇದೆಯೋ, ಅವರದ್ದು ಎಮ್ಮೆ' ಎನ್ನುವ ನ್ಯಾಯ.

■ ಮಾಧವ ಐತಾಳ್

ಗುಟೆನ್‌ಬರ್ಗ್ ಮುದ್ರಣ ಯಂತ್ರವು ಕಲ್ಲಚ್ಚು, ಹಸ್ತಪ್ರತಿ, ಚರ್ಮಪತ್ರ ಮೊದಲಾದದ್ದನ್ನು ನಿವಾರಿಸಿದ ನಂತರ, ಮುದ್ರಣ ಕ್ಷೇತ್ರದಲ್ಲಿ ಭಾರೀ ಪ್ರಗತಿಯಾಗಿದೆ. ಮಾರುಕಟ್ಟೆ ವಿಸ್ತರಿಸಿದೆ. ರಾಷ್ಟ್ರೀಯ ಮಟ್ಟದ ಪತ್ರಿಕೆಗಳಲ್ಲದೆ, ರಾಜ್ಯ, ತಾಲ್ಲೂಕು, ಜಿಲ್ಲಾಮಟ್ಟದಲ್ಲೂ ಅನೇಕ ಪತ್ರಿಕೆಗಳು ತಲೆ ಎತ್ತಿವೆ. ಸಂಖ್ಯೆ ಹೆಚ್ಚಿದೆ ನಿಜ, ಅದನ್ನು ಗುಣಮಟ್ಟಕ್ಕೆ ಅನ್ವಯಿಸುವುದು ಕಷ್ಟವೇ. ಸ್ಪರ್ಧೆ ತೀವ್ರವಾಗಿ ಹೆಚ್ಚಿರುವುದರಿಂದ ಪತ್ರಿಕೆಗಳು ಚಿತ್ರ ವಿಚಿತ್ರ ಸರ್ಕಸ್‌ಗಳನ್ನು ಮಾಡುತ್ತಿವೆ. ಈ ಸರ್ಕಸ್‌ಗಳಲ್ಲಿ ಪತ್ರಿಕೆಗಳ ಬೆಲೆ ಇಳಿಸುವುದೂ ಒಂದು.

ಮೊದಲ ಬಾಣ

ದೆಹಲಿ ಎಂಬ ವೃದ್ಧಸೂಳೆ ದೇಶದ ಮಿದುಳಿದ್ದಂತೆ. ದೇಶದ ಅತ್ಯಂತ ದೊಡ್ಡ ಪತ್ರಿಕಾ ಮಾರುಕಟ್ಟೆಯಾಗಿರುವ ದೆಹಲಿಯಲ್ಲಿ ದೇಶದಲ್ಲಿ ಮಾರಾಟವಾಗುವ 10 ಇಂಗ್ಲಿಷ್ ಪತ್ರಿಕೆಗಳಲ್ಲಿ 9 ಮಾರಾಟವಾಗುತ್ತವೆ. ಇದರಿಂದಾಗಿ ದೆಹಲಿಯ ಮಾರುಕಟ್ಟೆಯ ಮೇಲೆ ಹಿಡಿತ ಸಾಧಿಸುವುದು ಪತ್ರಿಕೆಗಳ ಮುಖ್ಯ ಗುರಿಯಾಗಿರುತ್ತದೆ.

'94ರಲ್ಲಿ ಬೆಲೆ ಇಳಿಸುವ ಯುದ್ಧ ಪ್ರಾರಂಭಿಸಿದ್ದು ಬೆನೆಟ್ ಕೋಲ್ಮನ್ ಸಂಸ್ಥೆಯ ಸಮೀರ್ ಜೈನ್. 'ಫೈನಾನ್ಷಿಯಲ್ ಟೈಮ್ಸ್'ನ ಬೆಲೆಯನ್ನು ವಾರದ ಕೆಲದಿನ ಇಳಿಸಿದಾಗ, ಪತ್ರಿಕೆ ಕೆಲವೇ ದಿನಗಳಲ್ಲಿ ನಂ. 1 ಸ್ಥಾನವನ್ನು ಗಳಿಸಿತು. ನಂತರ ಟೈಮ್ಸ್ ಆಫ್ ಇಂಡಿಯಾದ ಬೆಲೆಯನ್ನು ಇಳಿಸಲಾಯ್ತು. ಉಳಿದೆಲ್ಲಾ ಪತ್ರಿಕೆಗಳೂ ಅನಿವಾರ್ಯವಾಗಿ ಬೆಲೆ ಇಳಿಸಬೇಕಾದ ಪರಿಸ್ಥಿತಿ ಉದ್ಭವಿಸಿತು. ಬೆಲೆ ಇಳಿಸಿದ್ದರಿಂದ ಟೈಮ್ಸ್ ಹಾಗೂ ಹಿಂದೂಸ್ತಾನ್ ಟೈಮ್ಸ್‌ನ ಪ್ರಸರಣ ಸಂಖ್ಯೆ ದುಪ್ಪಟ್ಟಾಯಿತು. 1994ರಲ್ಲಿ ಹಿಂದೂಸ್ತಾನ್ ಟೈಮ್ಸ್‌ನ ಪ್ರಸರಣ ಟೈಮ್ಸ್‌ಗಿಂತ ದುಪ್ಪಟ್ಟು ಇದ್ದಿತು. ಕಳೆದ ವರ್ಷ ಅವುಗಳ ಪ್ರಸರಣ ಸರಿ ಸುಮಾರು ಒಂದೇ ಆಗಿತ್ತು. ಹಿಂದೂಸ್ತಾನ್ ಟೈಮ್ಸ್‌ಗೆ ಇದರಿಂದ ಆತಂಕ ಉಂಟಾದದ್ದು ಸಹಜವೇ ಹೌದು.

ಬಿರ್ಲಾಮನೆತನಕ್ಕೆ ಸೇರಿದ ಹಿಂದೂಸ್ತಾನ್ ಟೈಮ್ಸ್‌ನ ಸಂಪಾದಕೀಯ ನಿರ್ದೇಶಕಿ ಶೋಭನಾ ಭಾರ್ತಿಯಾ 75ನೆ ವಾರ್ಷಿಕೋತ್ಸವದ ಕೊಡುಗೆ ಎಂದು ಹಿಂದೂಸ್ತಾನ್ ಟೈಮ್ಸ್‌ನ ಬೆಲೆಯನ್ನು ರೂ. 1.50 ರಿಂದ ರೂ. 1ಕ್ಕೆ ಇಳಿಸಿ ಸಮೀರ್‌ಜೈನ್ ವಿರುದ್ಧ ಸಡ್ಡು ಹೊಡೆದರು. ಇಧಾದ 3 ದಿನಗಳ ನಂತರ ರಾಮನವಮಿಯಂದು ಬುಧವಾರ ಹೊರತುಪಡಿಸಿ ಉಳಿದೆಲ್ಲಾ ದಿನ ರೂ. 1ಕ್ಕೆ ಟೈಮ್ಸ್ ಮಾರಲು ಕೋಲ್ಮನ್ ಸಂಸ್ಥೆ ನಿರ್ಧರಿಸಿತು. ಇನ್ನೊಂದು ಬೆಲೆ ಇಳಿತದ ಸಮರ ಪ್ರಾರಂಭವಾಯಿತು.

ಜಾಹೀರಾತಿಗಾಗಿ ಸಮರ

ಇಂಗ್ಲೀಷ್ ಪತ್ರಿಕೆಗಳ ಬೆಲೆ ಭಾರತದಲ್ಲಿ ಪ್ರಪಂಚದಲ್ಲೆಡೆಗೆ ಹೋಲಿಸಿದರೆ ಅತೀ ಕಡಿಮೆ ಇದೆ. ಆದಾಗ್ಯೂ ಇಲ್ಲಿ ಬೆಲೆ ಇಳಿತದ ಸಮರ ನಡೆಯುತ್ತಲೇ ಇದೆ. ದೇಶದ ಕೈಗಾರಿಕಾ ರಾಜಧಾನಿಯಾದ ಮುಂಬೈಯಲ್ಲಿ ನಂ. 1 ಪತ್ರಿಕೆಯಾಗಿರುವ ಟೈಮ್ಸ್‌ಗೆ ರಾಜಕೀಯ ರಾಜಧಾನಿಯಾದ ದೆಹಲಿಯಲ್ಲಿ ಸ್ಪರ್ಧೆಯೊಡ್ಡಿರುವುದು ಹಿಂದೂಸ್ತಾನ್ ಟೈಮ್ಸ್. ಇವೆರಡೂ ಜಾಹೀರಾತನ್ನು ಆಕರ್ಷಿಸಲು ನಿರಂತರ ಸರ್ಕಸ್ ನಡೆಸುತ್ತಿವೆ. ದೆಹಲಿಯ ಇಂಗ್ಲಿಷ್ ಪತ್ರಿಕೆ ಓದುವ ಗ್ರಾಹಕ ಚಿನ್ನದ ಮೊಟ್ಟೆ ಇಡುವ ಕೋಳಿ ಇದ್ದಂತೆ. ಅವನನ್ನು ಆಕರ್ಷಿಸಲು ಜಾಹೀರಾತುದಾರರು ಹೆಚ್ಚು ಪ್ರಸರಣವಿರುವ ಪತ್ರಿಕೆಯನ್ನು ಆಯ್ದುಕೊಳ್ಳುತ್ತಾರೆ. ಪತ್ರಿಕೆಗಳು ಪ್ರಸರಣದ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಬೆಲೆ ಇಳಿಸುತ್ತವೆ. ಪತ್ರಿಕೆಯೊಂದರ ಪ್ರಸರಣ ದೆಹಲಿಯಲ್ಲಿ ಕುಸಿದರೆ, ಜಾಹೀರಾತಿನ ಆದಾಯದ ಮೇಲೆ ಹೊಡೆತ

ಕೋಷ್ಟಕ: ದೆಹಲಿಯಲ್ಲಿ ಪ್ರಸರಣ ಸಂಖ್ಯೆ (ಲಕ್ಷಗಳಲ್ಲಿ)

ವರ್ಷ	1994	1995	1996	1997	1998
ಹಿಂದೂಸ್ತಾನ್ ಟೈಮ್ಸ್	3.45	4.41	5.02	5.45	5.66
ಟೈಮ್ಸ್ ಆಫ್ ಇಂಡಿಯಾ	1.83	3.11	4.17	4.75	5.46

ಬೀಳುವುದು ಖಂಡಿತ. ದೆಹಲಿಯ ಟೈಮ್ಸ್‌ಗೆ ಹೋಲಿಸಿದರೆ, ಹಿಂದೂಸ್ತಾನ್ ಟೈಮ್ಸ್‌ನ ಜಾಹೀರಾತಿನ ಆದಾಯದ ಮೊತ್ತ ಹೆಚ್ಚು. ಇದಕ್ಕೆ ಕಾರಣ ಟೈಮ್ಸ್ ತನ್ನ ಗುಂಪಿನ ಒಂದು ಪತ್ರಿಕೆಯಲ್ಲಿ ಜಾಹೀರಾತು ನೀಡಿದಲ್ಲಿ ಇನ್ನೊಂದು ಪತ್ರಿಕೆಯ ಜಾಹೀರಾತಿನಲ್ಲಿ ಸೋಡಿ ನೀಡುತ್ತದೆ. ಮುಂಬೈಯಲ್ಲಿ ಟೈಮ್ಸ್ ಬಲಾಢ್ಯವಾದ ಪತ್ರಿಕೆಯಾದ್ದರಿಂದ ಅದು ಆರ್ಥಿಕ ದುಸ್ಸಾಹಸ ಮಾಡಬಲ್ಲದು. ಹಿಂದೂಸ್ತಾನ್ ಟೈಮ್ಸ್‌ನ ಹಿಂದೆ ಬಿರ್ಲಾ ಗುಂಪಿದೆ, ಅದರ ಬಾಹುಬಲ ಕೂಡಾ ದೊಡ್ಡದು. ಇವೆರಡರ ಹಣಾಹಣಿಯಲ್ಲಿ ಒಳ್ಳೆಯ ಪತ್ರಿಕೆಗಳು ಮಣ್ಣು ಮುಕ್ಕಬೇಕಾಗಿ ಬಂದಿದೆ.

ಓದುಗ ನಗಣ್ಯ

ಉದ್ಯಮಕ್ಕೆ ಓದುಗ ನೀಡುವ ಹಣ ನಗಣ್ಯ. ಸ್ಪರ್ಧೆ ನಡೆಯುತ್ತಿರುವುದು ಜಾಹೀರಾತಿನ ಹಣಕ್ಕಾಗಿ, ಪತ್ರಿಕೆಯ ಗುಣಮಟ್ಟದ ಹೆಚ್ಚಳಕ್ಕಾಗಿಯಲ್ಲ. 'ಪತ್ರಿಕೆಗಳ ಬೆಲೆ ಇಳಿಸಿದಲ್ಲಿ ಅವು ಹೆಚ್ಚು ಓದುಗರನ್ನು ತಲುಪುತ್ತವೆ' ಎನ್ನುವುದು ಉದ್ಯಮದ ಹೇಳಿಕೆ. ಪತ್ರಿಕೆಯ ಪುಟವೊಂದರ ಮುದ್ರಣ ವೆಚ್ಚ 20 ಪೈಸೆ ಇದ್ದು, 24 ಪುಟಗಳ ಪತ್ರಿಕೆಯ ಮುದ್ರಣಕ್ಕೆ ರೂ.4.80 ತಗಲುತ್ತದೆ. ಹಂಚಿಕೆದಾರನಿಗೆ ಹಿಂದೂಸ್ತಾನ್ ಟೈಮ್ಸ್ ಮಾರಾಟವಾದ ಪ್ರತಿಯೊಂದಕ್ಕೆ 57.5 ಪೈಸೆ, ಟೈಮ್ಸ್ 50 ಪೈಸೆ ಕಮಿಷನ್ ನೀಡುತ್ತಿವೆ. ಹೀಗಿರುವಾಗ 1ರೂ.ಗೆ ಪತ್ರಿಕೆ ಮಾರುವುದು ಹೇಗೆ ಸಾಧ್ಯ? ಹಂಚಿಕೆದಾರನಿಗೆ ನೀಡಬೇಕಾದ ಕಮೀಷನ್ ಕೊಡಲೇಬೇಕು. ಇದರಿಂದಾಗಿ ತಗಲುವ ನಷ್ಟ ತುಂಬಿಕೊಳ್ಳಲು ಉಳಿದ ದಾರಿ ಜಾಹೀರಾತು. ಜಾಹೀರಾತನ್ನು ಗೆಲ್ಲಲು ಅನಾರೋಗ್ಯಕರ ಸ್ಪರ್ಧೆ ಪ್ರಾರಂಭವಾಗುತ್ತದೆ. ಟೈಮ್ಸ್ ಅನ್ನು ಪೂರ್ವಭಾಗದ ಮಾರುಕಟ್ಟೆಗೆ ಪೂರೈಸಲು ಕಲ್ಕತ್ತಾದಲ್ಲಿ ಮುದ್ರಿಸಿದರೆ, ಹಿಂದೂಸ್ತಾನ್ ಟೈಮ್ಸ್ ಕಲ್ಕತ್ತಾದ ಸ್ಟೇಟ್ಸ್‌ಮನ್ ಪತ್ರಿಕೆ ಜೊತೆ ಮುದ್ರಣ ವ್ಯವಸ್ಥೆ ಮಾಡಿಕೊಂಡಿದೆ. ಮದ್ರಾಸ್-ಬೆಂಗಳೂರಿನಲ್ಲಿಯೂ 1 ರೂ.ನ ಪತ್ರಿಕೆಗಳು ಶೀಘ್ರದಲ್ಲೇ ಬರಲಿವೆ. ದೆಹಲಿ-ಮುಂಬೈ ಹೊರತುಪಡಿಸಿದರೆ, ಬೆಲೆ ಇಳಿಸಿದ್ದರಿಂದಾಗಿ ಪತ್ರಿಕೆಯ ಪ್ರಸರಣ ಹೆಚ್ಚುವ ಅಥವಾ ಜಾಹೀರಾತು ಆದಾಯ ಹೆಚ್ಚುವ ಸಾಧ್ಯತೆ ಇಲ್ಲದಿರುವುದರಿಂದ ಲಾಭಾಂಶ ಕುಸಿಯುವ ಸಾಧ್ಯತೆಯೇ ಹೆಚ್ಚಾಗಿದೆ. 1997-98ರಲ್ಲಿ ಟೈಮ್ಸ್ ಮತ್ತು ಹಿಂದೂಸ್ತಾನ್ ಟೈಮ್ಸ್‌ನ ಆದಾಯ ಕ್ರಮವಾಗಿ 142 ಮತ್ತು 81 ಕೋಟಿ ರೂ. ಇದ್ದದ್ದು ಈ ವರ್ಷ ಅದು 110 ಮತ್ತು 65 ಕೋಟಿ ರೂ.ಗೆ ಇಳಿಯುವ ಸಾಧ್ಯತೆ ಇದೆ. ಲಾಭದ ಪ್ರಮಾಣ ನೋಡಿದರೆ ಸದ್ಯಕ್ಕೆ ಸಮರ ನಿಲ್ಲುವ ಸಾಧ್ಯತೆ ಇಲ್ಲ.

ಪತ್ರಿಕೆಯೊಂದು ಓದುಗನ ಬದಲು ಜಾಹೀರಾತನ್ನು ಆಧರಿಸಿದಲ್ಲಿ ಜಾಹೀರಾತು ಕಂಪನಿಯ ಮಾತು ಸಂಪಾದಕೀಯದಲ್ಲಿ ಪ್ರತಿಧ್ವನಿಸಲು ಪ್ರಾರಂಭಿಸುತ್ತದೆ. ಸಂಪಾದನಾ ನೀತಿ ಬದಲಾಗಿಬಿಡುತ್ತದೆ. ಪತ್ರಿಕೆಗಳು ಜಾಹೀರಾತಿಗೆ ಮಣಿಯುತ್ತವೆ ಎಂದಾದ ತಕ್ಷಣ ಜಾಹೀರಾತು ಸಂಸ್ಥೆಗಳು ಪತ್ರಿಕೆಗಳನ್ನು ಕುಣಿಸಲು ಪ್ರಾರಂಭಿಸುತ್ತವೆ. ಪತ್ರಿಕೆಯ ಒಡೆಯ ಹೇಳಿದಂತೆ ಬರೆಯುವ ಪತ್ರಕರ್ತರು ಹುಟ್ಟಿಕೊಳ್ಳುತ್ತಾರೆ. ಹಾಗೆ ಬರೆಯದಿದ್ದವರನ್ನು ಜಾಗ ಖಾಲಿ ಮಾಡಿಸಲಾಗುತ್ತದೆ. ಹೆಚ್.ಕೆ.ದುವಾ ಪ್ರಕರಣವನ್ನು ನೋಡಿ. ದೇಶದ ಮೂರು ಪ್ರತಿಷ್ಠಿತ ಪತ್ರಿಕೆಗಳ ಸಂಪಾದಕರಾಗಿದ್ದ ದುವಾ ಪ್ರಭಾವಶಾಲಿ ಪತ್ರಕರ್ತ. ಅವರನ್ನು 'ಟೈಮ್ಸ್' ಸಂಪಾದನಾ ಸಲಹೆಗಾರ ಎಂದು ನೇಮಿಸಿಕೊಂಡಿತು. ಅವರ ಪ್ರಭಾವವನ್ನು ಬಳಸಿಕೊಂಡು ಬೆನೆಟ್ ಕೋಲ್ಮನ್‌ನ ನಿರ್ದೇಶಕರ ವೈಯಕ್ತಿಕ, ಆರ್ಥಿಕ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಸಂಸ್ಥೆ ಪ್ರಯತ್ನಿಸಿತು. ಇಂತಹದ್ದನ್ನೆಲ್ಲಾ ಒಪ್ಪದ ದುವಾರಿಗೆ ಕಿರುಕುಳ ಕೊಟ್ಟು ಕೊನೆಗೆ ಕೆಲಸದಿಂದ ತೆಗೆದು ಹಾಕಲಾಯ್ತು. ಇದನ್ನು ಪ್ರೆಸ್ ಕೌನ್ಸಿಲ್ ಹಾಗೂ ನ್ಯಾಯಾಲಯ ಎರಡೂ ತೀವ್ರವಾಗಿ ಖಂಡಿಸಿವೆ. ತಾನು ಗೆಲ್ಲಬೇಕು ಎಂಬ ಹಟದಿಂದ ಏನನ್ನಾದರೂ ಮಾಡಲು ಸಮೀರ್ ಜೈನ್ ಸಿದ್ಧವಿರುವುದರಿಂದ ಪತ್ರಕರ್ತರು ತಮ್ಮ ಸ್ವಾತಂತ್ರ್ಯ ಕಳೆದುಕೊಂಡಿದ್ದಾರೆ. ಪತ್ರಿಕೆಗಳಲ್ಲಿ ಪೂರ್ಣಾವಧಿಯ ಪತ್ರಕರ್ತರ ಬದಲು ಸ್ವತಂತ್ರ ಪತ್ರಕರ್ತರು, ತಾತ್ಕಾಲಿಕ ಪತ್ರಕರ್ತರನ್ನು ಬಳಸಿಕೊಳ್ಳಲಾಗುತ್ತಿದೆ.

ಬೆಕ್ಕಿಗೆ ಗಂಟೆ ಕಟ್ಟುವವರ್ಯಾರು?

ಪತ್ರಿಕೆಯೊಂದರ ಪ್ರಸರಣ ಸಂಖ್ಯೆಗೂ, ಅದರ ಗುಣಮಟ್ಟಕ್ಕೂ ಸಂಬಂಧವಿಲ್ಲ. ಇಲ್ಲಿರುವುದು 'ಯಾರ ಕೈಯಲ್ಲಿ ಬಡಿಗೆ ಇದೆಯೋ, ಅವರದ್ದು ಎಮ್ಮೆ' ಎನ್ನುವ ನ್ಯಾಯ. ಓದುಗನಿಗೆ ಕಡಿಮೆ ಬೆಲೆಯಲ್ಲಿ ಪತ್ರಿಕೆ ಸಿಗುತ್ತದೆ ನಿಜ. ಆದರೆ ವಿಷಯ ವೈವಿಧ್ಯ, ಗುಣಮಟ್ಟ, ಆಯ್ಕೆಯ ಸ್ವಾತಂತ್ರ್ಯ ಹೆಚ್ಚುವುದಿಲ್ಲ. ಮುಖಪುಟಗಳು ರಂಜಿತ ವಿಷಯಗಳಿಂದ, ಊಹಾಪೋಹದ ಸುದ್ದಿಗಳಿಂದ, ಸೆಕ್ಸ್, ಕ್ರೈಮ್ ಸುದ್ದಿಗಳಿಂದ ತುಂಬಿ ಹೋಗುತ್ತವೆ. ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಶಕ್ತಿ ಇರುವ ಪತ್ರಿಕೆಗಳು ಜನರನ್ನು, ಅಧಿಕಾರಿಗಳನ್ನು ರಾಜಕಾರಣಿಗಳನ್ನು ತಪ್ಪುದಾರಿಗೆಳೆದುಬಿಡುತ್ತವೆ. ಈ ಬೆಕ್ಕುಗಳ ಕೊರಳಿಗೆ ಗಂಟೆ ಕಟ್ಟುವವರು ಯಾರು? ಜನರು, ಪ್ರೆಸ್ ಕೌನ್ಸಿಲ್ ಅಥವಾ ನ್ಯಾಯಾಲಯ? ■

ಕಿವಿ ಮಾತು

■ ನುಗ್ಗೆ ಸೊಪ್ಪಿನ ಬಳಕೆಯಿಂದ ಕಾಮಾಲೆ ರೋಗವೂ, ಅದರಿಂದ ಬರುವ ಸಂಜೆಗಣ್ಣು ರೋಗವೂ ಗುಣವಾಗುತ್ತದೆ.

■ ಪ್ರತಿನಿತ್ಯ ಬೆಳಿಗ್ಗೆ ಈರುಳ್ಳಿ ಬೆಳ್ಳುಳ್ಳಿಗಳೆರಡನ್ನು ತಿನ್ನುವುದರಿಂದ ಕಾಮಾಲೆ ತಗ್ಗುವ ಸಂಭವವಿದೆ.

■ ಗೋಲಿಯ ಗಾತ್ರದ ಅರಿಶಿನದ ಗಂಧವನ್ನು ಒಂದು ಬಟ್ಟಲು ಮೊಸರಿನಲ್ಲಿ ಕದಡಿ, ಪ್ರತಿದಿನ ಬೆಳಿಗ್ಗೆ ಸೇವಿಸುತ್ತಿದ್ದರೆ ಅರಿಶಿನ ಕಾಮಾಲೆ ಗುಣವಾಗುವುದು. ಈ ಚಿಕಿತ್ಸೆಯನ್ನು ಏಳೆಂಟು ದಿನಗಳವರೆಗೆ ಮುಂದುವರಿಸಬೇಕು.

■ ಬೇವಿನ ಸೊಪ್ಪಿನಿಂದ ರಸ ತೆಗೆದು, ಕಲ್ಲು ಸಕ್ಕರೆ ಸೇರಿಸಿ, ಸೇವಿಸುತ್ತಿದ್ದರೆ ಕಾಮಾಲೆ ಗುಣವಾಗುವುದು.


■ ಸೋರೆಕಾಯಿಯ ಹೋಳುಗಳನ್ನು ಹಾಕಿ ಗಂಜಿ ಮಾಡಿ ಬೆಳಿಗ್ಗೆ ಸೇವಿಸಬೇಕು. ಈ ಹೋಳುಗಳನ್ನು ಅರೆದು ತಲೆಗೆ ಹಚ್ಚಬೇಕು.

■ ಒಂದು ಟೀ ಚಮಚ ನಿಂಬೆರಸ ಮತ್ತು ಚೆನ್ನಾಗಿ ಮಾಗಿದ ಒಂದು ಬಾಳೆಹಣ್ಣನ್ನೂ ಒಂದು ಊಟದ ಚಮಚ ಜೇನಿನೊಂದಿಗೆ ಒಂದು ವಾರ ಸೇವಿಸಿದರೆ ಅನುಕೂಲ.

■ ಹಕ್ಕರಿಕೆ ಸೊಪ್ಪಿನ ತಾಜಾ ಒಂದು ಲೋಟ ರಸಕ್ಕೆ ಹಾಲು ಅಥವಾ ನೀರನ್ನು ಸೇರಿಸಿ, ಪ್ರತಿ ರಾತ್ರಿ ಅಥವಾ ಬೆಳಿಗ್ಗೆ ಕುಡಿದರೆ, ಅರಿಶಿನ ಕಾಮಾಲೆ ಬರದಂತೆ ತಡೆಯಬಹುದು.

ಕನ್ನಡಿಗರ 'ಕೊಂಡು ಓದದ' ಹವ್ಯಾಸದ ಬಗ್ಗೆ ಲೇಖನ ಕಳುಹಿಸಿದ್ದೆ. ನಿಮ್ಮ ಮನೆಗೆ ಈ ತಿಂಗಳ "ಬಿಸಿಲ ಬದುಕು" ಮಾಸಪತ್ರಿಕೆ ಬಂದಿದೆಯಾ? ಸ್ವಲ್ಪ ನೋಡಿ ಕೊಡ್ತೇನೆ.





ಸಾವಿನ ಬಾಗಿಲು ಡ್ರಗ್ಸ್

ನಟಿ ಜೀನತ್ ಅಮಾನ್ ತನ್ನ ಸಪೂರವಾದ ಆದರೆ ಮಜಭೂತಾದ ಏರಿಳಿತಗಳನ್ನುಳ್ಳ ಶರೀರವನ್ನು 'ದಂ ಮಾರೋ ದಂ' ಎಂದು ಕುಣಿಸುವುದಕ್ಕಿಂತ ಮೊದಲೇ ಗೋವಾದ ಕಡಲ ತೀರದಲ್ಲಿ, ಅಪ್ರಸಿದ್ಧ ಅರಣ್ಯ ತಂಗುದಾಣಗಳಲ್ಲಿ ಮಾದಕ ವಸ್ತುಗಳು ನೆಲೆಯೂರಿಬಿಟ್ಟಿದ್ದವು. ಯೌವ್ವನದ ಸಹಜಗುಣವಾದ ಸಮಾಜವನ್ನು ಧಿಕ್ಕರಿಸುವಿಕೆ, ವ್ಯವಸ್ಥೆಯ ವಿರುದ್ಧ ಬಂಡಾಯ, ಹಳೆಯದೆನ್ನುವ ಎಲ್ಲವನ್ನೂ ತಿರಸ್ಕರಿಸಿ ಬಿಡುವ ಮನೋಭಾವ- ಇವೆಲ್ಲದಕ್ಕೂ ಒದಗಿಬಂದದ್ದು 'ಡ್ರಗ್ಸ್'.

ಜೀನತ್‌ಗೆ ಈಗ ವಯಸ್ಸಾಗಿ ಬಿಟ್ಟಿದೆ. ಆದರೆ ಆಕೆ ಹೇಳಿದ 'ದಂ'ನ ಹೊಸ ಆವೃತ್ತಿಗಳು 'ಕೂಲ್' ಮತ್ತು 'ಫ್ಯಾಷನ್' ಎನ್ನಿಸಿಕೊಂಡು ಮೇಲ್ ಸ್ತರದ ಜನರಿಂದ ಕೆಳವರ್ಗದೆಡೆಗೆ ಹರಿದು ಬಂದು, ಯುವಜನರನ್ನು ದಾರಿ ತಪ್ಪಿಸಿಬಿಡುತ್ತಿವೆ.

ಹೈಟೆಕ್ ಮಾದಕವಸ್ತುಗಳು

ಮೊದಲು ಇದ್ದ ಭಂಗಿ, ಚರಸ್, ಹೆರಾಯಿನ್‌ನ ಬದಲು ಕೊಕೈನ್, ಎಕ್ಸ್‌ಟಸಿ, ಆ್ಯಸಿಡ್ ಮತ್ತು ಸ್ಪೀಡ್ ಎಂಬ ವಿಚಿತ್ರ ಹೆಸರನ್ನುಳ್ಳ ಮತ್ತಕಾರಕಗಳು ಇಂದು ಮಾರುಕಟ್ಟೆಗೆ ಬಂದಿವೆ.

ಹಳೆಯಕಾಲದ ಮತ್ತಕಾರಕಗಳಿಗೂ ಇಂದಿನವಕ್ಕೂ ಇರುವ ಮುಖ್ಯ ವ್ಯತ್ಯಾಸವೆಂದರೆ ಹೆರಾಯಿನ್ ಮತ್ತು ಭಂಗಿ ಮೊದಲಾದವು ಶಾಮಕ ಶಕ್ತಿಯುಳ್ಳವು. ವ್ಯಕ್ತಿಯ ಆತಂಕಗಳನ್ನು ತಾತ್ಕಾಲಿಕವಾಗಿ ಇಲ್ಲವಾಗಿಸಿ, ಕನಸಿನಲ್ಲಿರುವ ಭಾವನೆಯನ್ನು ಹುಟ್ಟು ಹಾಕಿ ನಿದ್ರೆಗೊಯ್ಯುವಂತಹವು. ಆದರೆ ಹೊಸ ಮತ್ತಕಾರಕಗಳು ಉತ್ತೇಜಕ ಗುಣವುಳ್ಳವು. ವ್ಯಕ್ತಿಯ ಸಂಕೋಚಗುಣವನ್ನು ಬದಿಗೊತ್ತಿ, ಮುನ್ನುಗ್ಗಿಸುವ ಶಕ್ತಿಯುಳ್ಳವು. ವ್ಯಕ್ತಿಯ ಶಕ್ತಿಯನ್ನೆಲ್ಲ ಕ್ರೋಢೀಕರಿಸಿ ಸ್ವಯಂ ನಿಯಂತ್ರಣವನ್ನು ಛಿದ್ರಮಾಡಿಬಿಡಬಲ್ಲವು.


ತಾನೇ ಚಕ್ರವರ್ತಿ ಎನ್ನುವ ಭ್ರಮೆಯನ್ನು ಹುಟ್ಟಿಸಬಲ್ಲ ಇವು ಅಸಾಧ್ಯವಾದದ್ದು ಸಾಧ್ಯ ಎನಿಸುವ ಮನಃಸ್ಥಿತಿಯನ್ನು ಸೃಷ್ಟಿಸುತ್ತವೆ. ವಾಸ್ತವಕ್ಕಿಂತ ಭ್ರಮೆ ಸುಂದರ, ಭ್ರಮಾತ್ಮಕ ಲೋಕವನ್ನು ಸೃಷ್ಟಿಸುವ ಇವು, ದೂರಕಾಲದಲ್ಲಿ ಮನುಷ್ಯನ ಮನಃಸ್ಥೈರ್ಯವನ್ನೇ ಹರಣಮಾಡಿಬಿಡುತ್ತವೆ.

ಸೇವನೆ ಏಕೆ?

ಶ್ರೀಮಂತ ಯುವಜನರಿಗೆ ಡ್ರಗ್ಸ್ ಸೇವಿಸುವುದು ಘನತೆಯ ಮಾನದಂಡವಾಗಿರುವುದರಿಂದ, ಸೇವಿಸದವ ಗುಗ್ಗು ಎನ್ನಿಸಿಕೊಳ್ಳುತ್ತಾನೆ. ಯುವಜನ ಅಗತ್ಯವಿಲ್ಲದಿದ್ದರೂ ಮಾದಕವಸ್ತು ಸೇವಿಸುತ್ತಾರೆ. ತಾಕತ್‌ನ ಪ್ರದರ್ಶನದ ನಂತರ ಇದು ಅಂಟುಜಾಡ್ಯವಾಗಿ ಬಿಡುತ್ತದೆ, ತಪ್ಪಿಸಿಕೊಳ್ಳುವುದು ಅಸಾಧ್ಯವಾಗಿಬಿಡುತ್ತದೆ.

> **ಹಳೆಯ ಡ್ರಗ್ಸ್‌ಗಳಂತೆ ಇವುಗಳನ್ನು ಬಿಟ್ಟಾಗ ವಿಪರೀತ ಮೈನೋವು, ಕಣ್ಣುರಿ, ನಾಲಗೆ ಒಣಗುವುದು ಕಡಿಮೆ. ಆದರೆ ಮಾನಸಿಕವಾಗಿ ವಿಪರೀತ ಹಿಂಸೆಯಾಗುತ್ತದೆ. ಮನಸ್ಸು ಅದಕ್ಕಾಗಿ ತೀವ್ರವಾಗಿ ಹಂಬಲಿಸುತ್ತದೆ. ಸುಲಭವಾಗಿ ಸಿಗುವುದರಿಂದ ಬಿಡಬೇಕೆಂದಿದ್ದರೂ ಬಿಡಲಾಗುವುದಿಲ್ಲ.**

■ ತಥಾಗತ



'ಡ್ರಗ್ಸ್' ಸೇವನೆಯ ಇನ್ನೊಂದು ಕಾರಣ ತಮಾಷೆಯ ವ್ಯಾಪ್ತಿಯನ್ನು ವಿಸ್ತರಿಸುವ ಹಂಬಲ. ಮೊದಲು ಪಾರ್ಟಿ ಎಂದರೆ ಒಂದಷ್ಟು ಕುಣಿತ, ಒಂದೆರಡು ಪೆಗ್ ಕುಡಿತಕ್ಕಷ್ಟೇ ಸೀಮಿತವಾಗಿತ್ತು. ಈಗ ಪಾರ್ಟಿಯ ಅರ್ಥ ವಿಸ್ತರಿಸಿಬಿಟ್ಟಿದೆ. ಬಾಹುವಿನಲ್ಲೊಬ್ಬಳು ಬಾಲೆ, ಬಾಯಲ್ಲೊಂದು ಗುಳಿಗೆ, ಗಟ್ಟಿ ಡ್ರಮ್ ಸಂಗೀತ ಇರಲೇಬೇಕು. ಇಂತಹದ್ದೇ ಪಾರ್ಟಿಯೊಂದನ್ನು ಮುಗಿಸಿ ಬೆಳಗಿನ ಜಾವದಲ್ಲಿ ಹೊರಟಿದ್ದ ಮೂರು ಜನ ಯುವಕರು ದೆಹಲಿಯ ರಸ್ತೆಯೊಂದರಲ್ಲಿ ರಾತ್ರಿ ಕಾವಲು ಕಾಯುತ್ತಿದ್ದ 5 ಜನ ಪೊಲೀಸರನ್ನು, ಕಾರಿನಿಂದ ಗುದ್ದಿಸಿ ಕೊಂದರು. ಶ್ರೀಮಂತರಾದ ಅವರಪ್ಪಂದಿರು ಪ್ರಕರಣವನ್ನು ಮುಚ್ಚಿ ಹಾಕಲು ಎಲ್ಲ ಪ್ರಯತ್ನ ನಡೆಸಿದರು. ಕೊನೆಗೆ ದಾಖಲಾದ ಪ್ರಕರಣ ತೆಳುವಾಗಿದ್ದು, ಆ ಯುವಕರಿಗೆ ಶಿಕ್ಷೆಯಾಗುವ ಸಾಧ್ಯತೆ ಬಹಳ ಕಡಿಮೆ ಇದೆ.

ದುಬಾರಿಯಾದ ಈ ಮತ್ತಕಾರಕಗಳಿಂದ ಪೀಡಿತರಾಗಿ, ಅದರ ಜಾಲದಿಂದ ಬಿಡಿಸಿಕೊಳ್ಳಬೇಕೆಂದು ಆಸ್ಪತ್ರೆಗಳಲ್ಲಿ ದಾಖಲಾಗುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ದಾಖಲಾದವರಲ್ಲಿ ಅರ್ಧಭಾಗ ಶ್ರೀಮಂತರ ಮಕ್ಕಳು. ಇವರಿಗೆ ತಮ್ಮ ಅಭ್ಯಾಸಗಳ ಬಗ್ಗೆ ಯಾವುದೇ ಅಪರಾಧ ಮನೋಭಾವ ಇರುವುದಿಲ್ಲ, ನಾಚಿಕೆ ಆಗುವುದಿಲ್ಲ. ಈ ಮತ್ತಕಾರಕಗಳ ಕುರಿತಾದ ಇನ್ನೊಂದು ಮಿಥ್ಯೆ- ಇವು ಅಂಟಿಕೊಳ್ಳುವಂತಹವಲ್ಲ, ವ್ಯಕ್ತಿಯೊಬ್ಬ ಇವುಗಳ ಸೇವನೆಯನ್ನು ಬಿಡಬೇಕೆಂದಿದ್ದಲ್ಲಿ ಸುಲಭವಾಗಿ ಬಿಟ್ಟುಬಿಡಬಹುದು ಎಂಬ ನಂಬಿಕೆ. ಹಳೆಯ ಡ್ರಗ್ಸ್‌ಗಳಂತೆ ಇವುಗಳನ್ನು ಬಿಟ್ಟಾಗ ತೀವ್ರ ದೈಹಿಕ ಬದಲಾವಣೆಗಳು ಕಾಣಿಸಿಕೊಳ್ಳುವುದಿಲ್ಲ, ವಿಪರೀತ ಮೈನೋವು, ಕಣ್ಣುರಿ, ನಾಲಗೆ ಒಣಗುವುದು ಕಡಿಮೆ. ಆದರೆ ಮಾನಸಿಕವಾಗಿ ವಿಪರೀತ ಹಿಂಸೆಯಾಗುತ್ತದೆ. ಮನಸ್ಸು ಅದಕ್ಕಾಗಿ ತೀವ್ರವಾಗಿ ಹಂಬಲಿಸುತ್ತದೆ. ಸುಲಭವಾಗಿ ಸಿಗುವುದರಿಂದ ಬಿಡಬೇಕೆಂದಿದ್ದರೂ ಬಿಡಲಾಗುವುದಿಲ್ಲ.

ಅಫೀಮ್ ಸ್ವರ್ಗ

ಮುಂಬೈ ದೆಹಲಿ ರಾಜಮಾರ್ಗದ ಮಾಲ್ವಾ ಮೇವಾರ್ ಪ್ರಾಂತ್ಯ ಪ್ರಪಂಚದ ಅತ್ಯಂತ ದೊಡ್ಡದಾದ, ಕಾನೂನು ಬದ್ಧವಾಗಿ ಅಫೀಮು ಬೆಳೆಯುವ ಪ್ರದೇಶ. ದೇಶದಲ್ಲಿ ಇಂದು 32,000 ಹೆಕ್ಟೇರ್‌ನಲ್ಲಿ ಅಫೀಮನ್ನು ಬೆಳೆಯಲಾಗುತ್ತಿದ್ದು ಅದರಲ್ಲಿ ಸುಮಾರು ಅರ್ಧ ಭಾಗವನ್ನು ಈ ಪ್ರದೇಶ ಪೂರೈಸುತ್ತದೆ. ಕೇಂದ್ರ ಮಾದಕ ವಸ್ತು ಬ್ಯೂರೋ ಜನರಿಗೆ ಅಫೀಮು ಬೆಳೆಯಲು ಪಟ್ಟಾ ನೀಡುತ್ತದೆ. ಎಕರೆ ಒಂದಕ್ಕೆ ಪಟ್ಟಾ ನೀಡಲು 5,000 ರೂ. ಲಂಚ ಹೊಡೆಯುತ್ತಿರುವ ಬ್ಯೂರೋನ ಅಧಿಕಾರಿಗಳು ಈ ವರ್ಷ 50 ಕೋಟಿ ರೂ.ಗೂ ಹೆಚ್ಚು ಹಣವನ್ನು ಸಂಗ್ರಹಿಸಿದ್ದಾರೆ. ಸರ್ಕಾರ ಕೆ.ಜಿ. ಅಫೀಮಿಗೆ ಕನಿಷ್ಠ ದರ ರೂ. 500 ಕೊಡುತ್ತದೆ. ಆದರೆ ಕಳ್ಳ ಮಾರುಕಟ್ಟೆಯಲ್ಲಿ ಕೆ.ಜಿ. ಒಂದಕ್ಕೆ ಬೆಲೆ ರೂ. 10-15 ಸಾವಿರ ಇದೆ. ಇದನ್ನು ಸಂಸ್ಕರಿಸಿ ಉತ್ಪಾದಿಸುವ ಹೆರಾಯಿನ್‌ಗೆ ಕೆ.ಜಿ. ಒಂದಕ್ಕೆ 1.5-2 ಲಕ್ಷ ರೂ. ಗಿಟ್ಟುತ್ತದೆ. ಎಕರೆಯೊಂದಕ್ಕೆ 40,000 ರೂ. ಗಳಿಸುವವ ಪಟ್ಟಾ ಒಂದಕ್ಕೆ 5000 ರೂ. ಸಂತೋಷವಾಗಿ ಕೊಡುತ್ತಾನೆ.

ಬೆಳೆದ ಅಫೀಮಿನ ಗಿಡ ಕತ್ತರಿಸಿ, ಅದರ ರಸವನ್ನು ಒಣಗಿಸಿ, ಪುಡಿ ಮಾಡಿ ಇನ್ನಷ್ಟು ಸಂಸ್ಕರಿಸಿ ಹೆರಾಯಿನ್ ತಯಾರಿಸುತ್ತಾರೆ. ರಸ ರಹಿತ ಒಣಗಿದ ಹೂವಿನಿಂದ ಸರಾಯಿ ಭಟ್ಟಿ ಇಳಿಸುತ್ತಾರೆ.

ಈ ಪ್ರದೇಶವನ್ನು ಪೊಲೀಸರಿಂದ ರಕ್ಷಿಸಲು ರಾಜಕಾರಣಿಗಳು, ಡಾನ್‌ಗಳು ಕಟಿಬದ್ಧರಾಗಿ ನಿಂತಿದ್ದಾರೆ. ಮುಂಬೈನ ಡಾನ್‌ಗಳಾದ ಛೋಟಾ ಶಕೀಲ್, ಇರ್ಫಾನ್ ಗೋಗಾ (ಸದ್ಯಕ್ಕೆ ಕಣ್ಮರೆಯಾಗಿದ್ದಾರೆ) ಮತ್ತು ಮೊಹಮ್ಮದ್ ಶಫಿಯಂತಹ ಪ್ರಭಾವೀ ಹಂತಕರು ಬೆಳೆಗಾರರನ್ನು ಬೆಂಬಲಿಸುತ್ತಿದ್ದಾರೆ. ಬೆಳೆಗಾರರಿಗೆ ಹೆಚ್ಚು ಪಟ್ಟಾ ವಿತರಿಸಬೇಕೆಂದ ಉದಯ್‌ಲಾಲ್ ಅಂಜನಾ ಕಳೆದ ಚುನಾವಣೆಯಲ್ಲಿ ಭಾಜಪದ ವಿದೇಶಾಂಗ ಸಚಿವ ಜಸವಂತ್ ಸಿಂಗ್ ಅವರನ್ನು ಸೋಲಿಸಿದ್ದ. ಅಂಜನಾಗೆ ಭಾರೀ ಬೆಂಬಲ ನೀಡಿದ ಬೆಳೆಗಾರರು ಹಣ-ಮತಗಳನ್ನು ಸುರಿದು ಬಿಟ್ಟರು.

ಡಾನ್‌ಗಳು - ರಾಜಕಾರಣಿಗಳ ಬೆಂಬಲದಿಂದ ಬೆಳೆಗಾರರು ಯಾರೂ ಅಲ್ಲಾಡಿಸಲಾಗದಷ್ಟು ಗಟ್ಟಿಯಾಗಿದ್ದಾರೆ. ಕಳ್ಳಸಾಗಾಣಿಕೆ ಹೆಚ್ಚಿದೆ. ಔಷಧಕ್ಕಿಲ್ಲದ ಅಫೀಮು ಮೆಟ್ರೋಪಾಲಿಟನ್ ನಗರಗಳ ಡಬ್ಬಾ ಅಂಗಡಿಗಳ ಮೂಲಕ ಯುವಜನರನ್ನು ತಲುಪಿ ಸಮಾಜವನ್ನೇ ಅಲುಗಾಡಿಸುತ್ತಿವೆ.

ಇವುಗಳ ಬಳಕೆಯ ನಂತರದ ಸ್ಥಿತಿ ತೀವ್ರವಾದದ್ದಾಗಿರುತ್ತದೆ. ಡ್ರಗ್ಸ್ ನಿಮ್ಮಲ್ಲಿ ಹುಟ್ಟಿಸುವ ಕಲ್ಪಾಶಕ್ತಿ ಬಸಿದು ಹೋದ ನಂತರ ಉಳಿಯುವುದು ಶಕ್ತಿಹೀನ ದೇಹ, ಯೋಚಿಸಲಾರದ ಮಿದುಳು. ತೀವ್ರ ಆತಂಕ, ಅಶಾಂತತೆ, ಕಣ್ಣಮುಂದೆ ನಡೆಯುವ, ಬೇರೆಯವರಿಗೆ ಕಾಣದ ರಿಂಗಣ ಇವೆಲ್ಲಾ ವ್ಯಕ್ತಿಯನ್ನು ಹೈರಾಣ ಮಾಡಿಬಿಡುತ್ತವೆ. ವ್ಯಕ್ತಿ ಕೂರಲಾರ, ನಿಲ್ಲಲಾರ, ಮಲಗಲಾರ.

ಸುಲಭವಾಗಿ ಸಿಗುತ್ತವೆ

ಮೊದಲು ಡ್ರಗ್ಸ್‌ನ್ನು ಹುಡುಕಿಕೊಂಡು ಅಲೆಯಬೇಕಾದ ಸ್ಥಿತಿ ಇತ್ತು. ಈಗದು ಬದಲಾಗಿದೆ. ಡ್ರಗ್ಸ್‌ಗಾಗಿ ಕೊಳೆಗೇರಿಗಳನ್ನು, ಚರಂಡಿ ರಹಿತ ಗಲ್ಲಿಗಳನ್ನು ಅಲೆಯಬೇಕಾಗಿಲ್ಲ, ಸಿಗಬಹುದಾದ ಸ್ಥಳ ಪೂರೈಸಬಹುದಾದ ವ್ಯಕ್ತಿಗಳ ಬಗ್ಗೆ ಸುಲಭವಾಗಿ ಮಾಹಿತಿ ಲಭಿಸುತ್ತದೆ. ಸ್ಮ್ಯಾಕ್ ಮತ್ತು ಹಶೀಷ್‌ಗಳು ಪ್ರಸಿದ್ಧ ಕಾಲೇಜುಗಳ ಬಳಿ ಸುಲಭವಾಗಿ ಸಿಗುತ್ತವೆ. ಕೊಕೈನ್ ಮತ್ತು ಎಕ್ಸ್‌ಟಸಿಯ ಬಹುಪಾಲು ವಿದೇಶದಿಂದ ಕಳ್ಳಸಾಗಣೆಯಾಗಿ ಬರುವಂತಹವು.

ಶ್ರೀಮಂತ ಯುವಕನೊಬ್ಬ ಡ್ರಗ್ಸ್ ಸೇವಿಸುವುದನ್ನು ಕಂಡು, ಅವನನ್ನು, ಅವನ ಬದುಕಿನ ಶೈಲಿಯನ್ನು ತನ್ನ ಆದರ್ಶ ಎಂದುಕೊಂಡಿರುವ ಮಧ್ಯಮ - ಕೆಳವರ್ಗದ ಯುವಕರು ಅನುಸರಿಸಲು ಪ್ರಾರಂಭಿಸಿದಾಗ ಸಮಸ್ಯೆ ಉದ್ಭವವಾಗುತ್ತದೆ. ಹೆಚ್ಚು ಬೆಲೆಯ ಡ್ರಗ್ಸ್ ಕೊಳ್ಳಲಾರದ ಇವರು ಕೆಳದರ್ಜೆಯ ಬೆರಕೆ ಮತ್ತಕಾರಕಗಳಿಗೆ ಮೊರೆ ಹೋಗುತ್ತಾರೆ. ವಿಸ್ಕಿಗೆ ದುಡ್ಡಿಲ್ಲದ ಕುಡುಕ ಸಾರಾಯಿ ಕುಡಿದಂತೆ. ಹಣದ ಕೊರತೆ ಬಿದ್ದಾಗ ಸಹಜವಾಗಿಯೇ ಅಡ್ಡದಾರಿ ಹಿಡಿಯುತ್ತಾನೆ, ಕಳ್ಳತನ ಮಾಡುತ್ತಾನೆ, ಸಾಮಾಜಿಕ ತಲ್ಲಣಗಳು ಶುರುವಿಟ್ಟುಕೊಳ್ಳುತ್ತವೆ.

ಇನ್ನೊಂದು ದುರಂತವೆಂದರೆ ಡ್ರಗ್ಸ್ ಸೇವಿಸುವವರು ಅದರ ಸೇವನೆ ಒಂದು ಜಾಡ್ಯ ಎಂದುಕೊಳ್ಳುವುದಿಲ್ಲ. ಗೆಳೆಯರ ಗುಂಪಿನಲ್ಲಿ 'ಜೋಶ್'ನಲ್ಲಿ ಡ್ರಗ್ಸ್ ಸೇವಿಸುವ ಇವರು, ಪರಿಸ್ಥಿತಿ ಹತೋಟಿ ಮೀರಿ ಪೋಷಕರಿಗೆ ಗೊತ್ತಾದಾಗ ವೈದ್ಯನ ಬಳಿ ಓಡುತ್ತಾರೆ. ಅಷ್ಟು ಹೊತ್ತಿಗೆ ನಿಯಂತ್ರಣ ತಪ್ಪಿ ಹೋಗಿರುತ್ತದೆ.

ಕಾನೂನು ಹೇಳುವುದೇನು?

ಮಾದಕವಸ್ತು ನಿಯಂತ್ರಣ ಕಾಯಿದೆಯೊಂದು ಇದೆ. ಅದನ್ನು ಜಾರಿಗೊಳಿಸಲು ಬ್ಯೂರೋ ಒಂದಿದೆ. ಕಾನೂನಿನ ಪ್ರಕಾರ ಕೊಕೈನ್, ಎಕ್ಸ್‌ಟಸಿ, ಆ್ಯಸಿಡ್ ಮತ್ತು ಸ್ಪೀಡ್‌ಗಳ

ಬಗೆ ಬಗೆಯ ಡ್ರಗ್ಸ್‌ಗಳು

ಕೊಕೈನ್ : ಸ್ವಾಭಾವಿಕ ಮೂಲದ, ಬಿಳಿಯ ಬಣ್ಣವುಳ್ಳ ಭಾರೀ ಪ್ರಭಾವಶಾಲಿ ದುಬಾರಿ ಡ್ರಗ್. ಶುದ್ಧಪುಡಿಗೆ ಗ್ರಾಂ. ಒಂದಕ್ಕೆ 3000-5000ರೂ. ಇದ್ದು, ಇದರ ಇನ್ನಿತರ ಹೆಸರುಗಳು ಬ್ಲೋ, ಐಸ್, ಕ್ಯಾಂಡಿ.ಸೇವಿಸಿದಾಗ ವ್ಯಕ್ತಿಯಲ್ಲಿ ಅಪಾರ ಶಕ್ತಿಯಿದೆ ಎನ್ನುವ ಭ್ರಮೆಯನ್ನು ಹುಟ್ಟಿಸುವ ಇದನ್ನು ತ್ಯಜಿಸುವುದು ಕಷ್ಟ.

ಹೃದಯಾಘಾತ, ಅಪಸ್ಮಾರಕ್ಕೆ ಕಾರಣವಾಗಬಲ್ಲುದು. ಸೇವನೆಯನ್ನು ನಿಲ್ಲಿಸಿದ ವ್ಯಕ್ತಿ ಮಾನಸಿಕವಾಗಿ ದುರ್ಬಲನಾಗಿ, ಆತ್ಮಹತ್ಯಾತ್ಮಕ ಮನಃಸ್ಥಿತಿ ಬೆಳೆಸಿಕೊಳ್ಳುತ್ತಾನೆ.

ಎಕ್ಸ್‌ಟಸಿ :ಫೀನೈಲ್ ಈಥೈಲ್ ಅಮೈನ್ ಗುಂಪಿಗೆ ಸೇರಿದ ರಸಾಯನಿಕ. ಆಡಂ, ಎಕ್ಸ್, ಸಿ ಮೊದಲಾದ ಹೆಸರನ್ನುಳ್ಳ ಇದರ ದೀರ್ಘಕಾಲದ ಬಳಕೆಯು ಬಿಡಲಾಗದ ವ್ಯಸನವಾಗಿಬಿಡುತ್ತದೆ. ನೆನಪಿನ ಶಕ್ತಿಯನ್ನು ಕೊಲ್ಲುವ ಇದು, ಮಿದುಳಿನ ಸಂರಚನೆಯಲ್ಲಿ ಬದಲಾವಣೆ ತರಬಲ್ಲುದು.

ಆ್ಯಸಿಡ್ : ಲೈಸರ್ಜಿಕ್ ಆ್ಯಸಿಡ್ ಡೈ ಈಥೈಲ್ ಅಮೈಡ್-25 ಎನ್ನುವ ಹೆಸರಿನ ದ್ರವ. ಎಲ್ ಎಸ್ ಡಿ, ಬ್ಲಾಟರ್ ಎಂಬಿತ್ಯಾದಿ ಹೆಸರನ್ನುಳ್ಳ ಇದನ್ನು ಸೇವಿಸಿದಾತ ತೀವ್ರ ಭ್ರಮಾತ್ಮಕ ಸ್ಥಿತಿ ತಲುಪುತ್ತಾನೆ. ಕೇಳದ ಶಬ್ದಗಳು ಕೇಳಿಸುತ್ತವೆ, ಬೇರೆಯವರಿಗೆ ಕಾಣಿಸದ ದೃಶ್ಯಗಳು ಕಾಣಿಸುತ್ತವೆ. ಮಾನಸಿಕ ಸ್ಥಿತಿಯನ್ನು ಅಸ್ತವ್ಯಸ್ತಗೊಳಿಸಬಲ್ಲ ಇದು, ವ್ಯಕ್ತಿಯ ಆತಂಕಸ್ಥಿತಿಯನ್ನು ಹೆಚ್ಚಿಸಿಬಿಡುತ್ತದೆ.

ಸ್ಪೀಡ್ : ಆಂಪಿಟಮೈನ್ ಗುಂಪಿಗೆ ಸೇರಿದ ರಸಾಯನಿಕ. ಗ್ಲಾಸ್, ಕ್ರಿಸ್ಟಲ್, ಕ್ರಾಂಕ್ ಇದರ ಇನ್ನಿತರೆ ಹೆಸರುಗಳು. ತೀವ್ರ ವ್ಯಸನಕಾರಿಯಾದ ಇದರ ಬಳಕೆಯ ನಂತರದ ಪರಿಣಾಮಗಳು ತೀವ್ರತರದ್ದಾಗಿರುತ್ತವೆ. ವ್ಯಕ್ತಿ ವಿನಾಕಾರಣ ಹಿಂಸೆಗೆ ಇಳಿಯುತ್ತಾನೆ. ಮಾನಸಿಕ ಸ್ಥಿಮಿತ ಕಳೆದುಕೊಳ್ಳುತ್ತಾನೆ.

ವ್ಯಸನ

ಕಳ್ಳಸಾಗಾಣಿಕೆಗೆ 10 ವರ್ಷ ಜೈಲುವಾಸ ವಿಧಿಸಬಹುದು. ಸ್ವಂತ ಬಳಕೆಗಾಗಿ ಸ್ವಲ್ಪ ಪ್ರಮಾಣದ ಡ್ರಗ್ಸ್ ಹೊಂದಿದಾತನಿಗೆ 1 ವರ್ಷ ಜೈಲು ಅಥವಾ ದಂಡ ಅಥವಾ ಎರಡನ್ನೂ ವಿಧಿಸಬಹುದು. ಮೊದಲಬಾರಿಯ ಅಪಾದಿತ ಅದರ ಸೇವನೆಯನ್ನು ತ್ಯಜಿಸಲು ಇಚ್ಛಿಸಿ, ಚಿಕಿತ್ಸೆಗೊಳಪಡಲು ಸಿದ್ಧನಿದ್ದಲ್ಲಿ ಆತನನ್ನು ಶಿಕ್ಷೆಗೆ ಒಳಪಡಿಸದೆ ಬಿಟ್ಟುಬಿಡಬಹುದು. 1998ರಲ್ಲಿ ಬ್ಯೂರೋ 1300 ಕೆ.ಜಿ.ಗೂ ಹೆಚ್ಚಿನ ಪ್ರಮಾಣದ ಹೆರಾಯಿನ್ ಅನ್ನು ವಶಪಡಿಸಿಕೊಂಡಿದ್ದರೆ, ಸಿಕ್ಕ ಕೊಕೈನ್ ಪ್ರಮಾಣ 2 ಕೆ.ಜಿ. ಎಕ್ಸ್‌ಟಸಿ ಏನೇನೂ ಸಿಗಲಿಲ್ಲ. ಅಮೆರಿಕ, ಯುರೋಪ್‌ನ ಮಾರು ಕಟ್ಟೆಯಲ್ಲಿ ಮಾಲು ತುಂಬಿ ಹೋಗಿರುವುದರಿಂದ ಲ್ಯಾಟಿನ್ ಅಮೆರಿಕಾದ ಡ್ರಗ್ ಕಾರ್ಟೆಲ್‌ಗಳು ಭಾರತದೆಡೆಗೆ ನೋಡುತ್ತಿವೆ. ಇದರೊಟ್ಟಿಗೆ ದೇಶೀ ಉತ್ಪಾದಕರೂ ಸೇರಿಕೊಂಡಿದ್ದಾರೆ.

70ರ ಕೊನೆಯ ಭಾಗದಲ್ಲಿ ಶುದ್ಧ ಹೆರಾಯಿನ್ ತುಂಬಾ ದುಬಾರಿಯಾಗಿದ್ದು, ಶ್ರೀಮಂತರಿಗೆ ಮಾತ್ರ ಎಟಕುತ್ತಿತ್ತು. 80ರ ಆದಿಭಾಗದಲ್ಲಿ ಮಾರುಕಟ್ಟೆಗೆ ಕಂದು ಬಣ್ಣದ ಹೆರಾಯಿನ್ ಸ್ಮಾಕ್ ಬಂದಿತು. ಎಲ್ಲೆಡೆ ವ್ಯಸನಿಗಳು ಆತ್ಮಹತ್ಯೆ ಮಾಡಿಕೊಳ್ಳತೊಡಗಿದರು. ಸರ್ಕಾರಕ್ಕೆ ಆಶ್ಚರ್ಯ ಚಕಿತನಾಗಿ ಬಾಯಿಬಿಟ್ಟುಕೊಂಡು ಕೂರುವುದನ್ನು ಬಿಟ್ಟರೆ ಬೇರೇನನ್ನೂ ಮಾಡು ವುದು ಅಸಾಧ್ಯವಾಗಿಬಿಟ್ಟಿತು.

ಧೃತರಾಷ್ಟ್ರನಪ್ಪುಗೆ

ಮಹಾಭಾರತದ ಪ್ರಸಂಗ ಇದು. ಯುದ್ಧ ಮುಗಿದು ಕೌರವರೆಲ್ಲ ಹತರಾಗಿದ್ದಾರೆ. ತನ್ನ ಮಕ್ಕಳಲ್ಲಿಬಹುಪಾಲು ಜನರನ್ನು ಕೊಂದ ಭೀಮನನ್ನು ಅಪ್ಪಿಕೊಳ್ಳುವ ಆಸೆಯನ್ನು ಧೃತರಾಷ್ಟ್ರ ವ್ಯಕ್ತಪಡಿಸಿದ್ದಾನೆ. ಭೀಮನ ಬದಲು ಉಕ್ಕಿನ ಅಸ್ಥಿಪಂಜರವನ್ನು ಧೃತರಾಷ್ಟ್ರನ ಅಪ್ಪುಗೆಗೆ ಒಡ್ಡುತ್ತಾನೆ ಕೃಷ್ಣ. ಧೃತರಾಷ್ಟ್ರನ ಮುದಿಬಾಹುಗಳು ಅಸ್ಥಿಪಂಜರವನ್ನೇ ಭೀಮನೆಂದು ಬಗೆದು ತಬ್ಬಿಕೊಂಡು ಪುಡಿಪುಡಿ ಮಾಡಿಬಿಡುತ್ತವೆ. ತನ್ನೆಲ್ಲ ಮಕ್ಕಳನ್ನು ಕೊಂದ ಭೀಮನ ಕೊಲೆ ಧೃತರಾಷ್ಟ್ರನ ಇಂಗಿತವಾಗಿತ್ತು. ಡ್ರಗ್ಸ್ ಸೇವನೆ ಕೂಡಾ ಧೃತರಾಷ್ಟ್ರನಪ್ಪುಗೆ ಇದ್ದಂತೆ. ಸೇವನೆ ಬಿಡದಿದ್ದಲ್ಲಿ ಸಾವು ಖಚಿತ.

ಗೊತ್ತಿದ್ದೋ ಗೊತ್ತಿಲ್ಲದೆಯೋ ವ್ಯಕ್ತಿಯೊಬ್ಬ ಮಾದಕವ್ಯಸನಿಯಾದಲ್ಲಿ ಅವನನ್ನು ಅವುಗಳಿಂದ ಬಿಡಿಸುವುದು ಸಾಧ್ಯ. ಆದರೆ ವ್ಯಕ್ತಿಗೆ ತಾನು ಮತ್ತಕಾರಕಗಳಿಂದ ಬಿಡುಗಡೆ ಹೊಂದಬೇಕೆಂಬ ಪ್ರಬಲ ಇಚ್ಛೆ ಇರಬೇಕು, ಅಷ್ಟೆ.

ಏಡ್ಸ್ ಚಿಂತನ



ಶ್ರೀಮತಿ ವಾಣಿಗಣಪತಿ ಇವರು ಇಂದು ಭಾರತದ ಪ್ರಮುಖ ಭರತನಾಟ್ಯ ಪಟು ಎನಿಸಿದ್ದಾರೆ. ಅಲ್ಲದೆ 'ಸಂಚಾರಿ' ಎಂಬ ನೃತ್ಯ ಶಾಲೆಯನ್ನು ನಡೆಸುತ್ತಾ ಸ್ವತಃ ಹಲವು ಆಸಕ್ತಿಯನ್ನು ಯುವಜನರಿಗೆ ತರಬೇತಿ ನೀಡುತ್ತಿದ್ದಾರೆ ಮತ್ತು ಜನತೆಯ ಆರೋಗ್ಯದ ಬಗ್ಗೆ ಕಳಕಳಿ ಹೊಂದಿದ್ದಾರೆ.


ಪ್ರಶ್ನೆ 1 : ಎ-ಗಂಡ, ಬಿ-ಹೆಂಡತಿ, ಸಿ-ಪರಪುರುಷ. ಸಿ ಯು ಬಿ ಜೊತೆ ಲೈಂಗಿಕ ಸಂಪರ್ಕ ಮಾಡಿದಾಗ ಏಡ್ಸ್ ರೋಗ ಬರುತ್ತದೆಯೇ?

- ವಿ.ಎಸ್.ಎಂ. ಗುಲ್ಬರ್ಗಾ

ಉ : ಬರಬಹುದು. ಸಿ ಯು ಬಿ ಯನ್ನಲ್ಲದೆ ಇತರರೊಡನೆ ಲೈಂಗಿಕ ಸಂಪರ್ಕ ಇರಿಸಿಕೊಂಡಿದ್ದಲ್ಲಿ ಮತ್ತು ಎಚ್.ಐ.ವಿ. ಸೋಂಕನ್ನು ಹೊಂದಿದ್ದಲ್ಲಿ ಬಿ ಗೆ ಏಡ್ಸ್ ಸೋಂಕು ಹರಡುತ್ತದೆ.

ಪ್ರಶ್ನೆ 2 : 4 ತಿಂಗಳಿಂದ ನನ್ನ ಗೆಳೆಯ ತನ್ನ ಸ್ನೇಹಿತನೊಡನೆ (ಗಂಡು) ಲೈಂಗಿಕ ಸಂಪರ್ಕ ಇಟ್ಟು ಕೊಂಡಿದ್ದಾನೆ ಮತ್ತು ನನ್ನನ್ನು ಕೇಳಿದನು ನನಗೆ ಭಯ ವಾಗುತ್ತಿದೆ. ಸಲಿಂಗ ಕಾಮದಿಂದ ಏಡ್ಸ್ ಬರುತ್ತದೆಯೇ?

- ಎಂ.ಸಿ.ವಿ. , ಬೆಳಗಾವಿ



ಉ : ಹೌದು, ಮೊದಲು ಎಚ್.ಐ.ವಿ. ಪತ್ತೆಯಾದದ್ದು ಸಲಿಂಗಕಾಮಿಗಳಲ್ಲೇ. ಗಂಡು + ಗಂಡು ಸಂಭೋಗ ತುಂಬಾ ಕಷ್ಟಕರವಾದ ಲೈಂಗಿಕ ಕ್ರಿಯೆಯಾಗಿದೆ. ಗುದ + ಶಿಶ್ನ ಬಳಸಿ ಸಂಭೋಗಿಸುವ ಸಂದರ್ಭದಲ್ಲಿ ಉಂಟಾಗುವ ಸಣ್ಣ ಗಾಯದ ಮೂಲಕ ಇಬ್ಬರಲ್ಲಿ ಯಾರೊಬ್ಬರು ಎಚ್.ಐ.ವಿ. ಸೋಂಕು ಉಳ್ಳವರಾಗಿದ್ದರೂ ಸಹ ಮತ್ತೊಬ್ಬರಿಗೆ ಎಚ್.ಐ.ವಿ. ಬರುತ್ತದೆ. ಸಲಿಂಗಕಾಮದ ಮೂಲಕ ಎಚ್.ಐ.ವಿ. ಸೋಂಕುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಪ್ರಶ್ನೆ 3 : ಎಚ್.ಐ.ವಿ. ಇರುವವರನ್ನು ಕಂಡು ಹಿಡಿಯುವುದು ಹೇಗೆ?

- ಪಿ.ಆರ್.ಎಸ್. ಗಜೇಂದ್ರಘಡ

ಉ : ಎಚ್.ಐ.ವಿ. ಸೋಂಕಿರುವವರನ್ನು ಕಣ್ಣಿನಿಂದ ನೋಡಿ ಕಂಡು ಹಿಡಿಯಲು ಸಾಧ್ಯವಿಲ್ಲ. ಅದನ್ನು "ಎಲೀಜಾ" (ELIZA) ಎಂಬ ವಿಶೇಷವಾದ ರಕ್ತ ಪರೀಕ್ಷೆಯಿಂದ ಮಾತ್ರ ಕಂಡು ಹಿಡಿಯಲು ಸಾಧ್ಯವಷ್ಟೇ. ಈ ರಕ್ತ ಪರೀಕ್ಷೆ ತೆಗೆದುಕೊಳ್ಳುವ ಮುಂಚೆ ಗೌಪ್ಯವಾಗಿ ಇಡಬಲ್ಲ ಒಬ್ಬ ಸಲಹೆಗಾರರನ್ನು ಭೇಟಿ ಮಾಡಬೇಕು.

ಪ್ರಶ್ನೆ 4 . ನನಗೆ 25 ವಯಸ್ಸು ಮದುವೆಯಾಗಿ 2 ತಿಂಗಳಾಗಿದೆ ಇನ್ನು 2 ವರ್ಷ ಮಗು ಬೇಡ ಅದಕ್ಕೆ ಯಾವ ರೀತಿಯ ಲೈಂಗಿಕ ಸಂಪರ್ಕವಿರಿಸಿಕೊಳ್ಳಬೇಕು ತಿಳಿಸಿ.

- ಕೆ.ಬಿ. ಬೆಂಗಳೂರು

ಉ : ನಾವು ಈ ವಿಷಯವಾಗಿ ಕೆಲಸ ಮಾಡುತ್ತಿಲ್ಲ. ಈ ಬಗ್ಗೆ ನಿಮ್ಮ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ಸಲಹೆಗಾರರನ್ನು ಭೇಟಿ ಮಾಡಿ ತಿಳಿಯಿರಿ.

ಓದುಗರಲ್ಲಿ ತಮಗೇನಾದರೂ ಎಚ್.ಐ.ವಿ./ಏಡ್ಸ್ ಬಗ್ಗೆ ಪ್ರಶ್ನೆಗಳಿದ್ದಲ್ಲಿ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ನಿಮ್ಮ ಮಾಹಿತಿಗಳನ್ನು ಗೋಪ್ಯವಾಗಿಡಲಾಗುವುದು.

ಆಸಕ್ತ ಸೇವಾಕರ್ತರು ದಯವಿಟ್ಟು ಸಂಪರ್ಕಿಸಿ :

ಏಡ್ಸ್ ಫೋರಂ - ಕರ್ನಾಟಕ

C/o ಸಂರಕ್ಷ 402, ಜಿ ಮಹಡಿ ಬ್ಲಾಕ್ 4, ರಂಕಾಪಾರ್ಕ್ ಅಪಾರ್ಟ್‌ಮೆಂಟ್ಸ್, 4, 5 ಮತ್ತು 6 ಲಾಲ್‌ಬಾಗ್‌ರಸ್ತೆ, ಬೆಂಗಳೂರು - 560 027. ✆ (080) 2238297

ಕ್ವಿಜ್-22ರ ಬಹುಮಾನ ವಿಜೇತರು

ಸುಮಂಗಲಾ ಡಿ.
D/o ಬಿ.ಎಸ್.ದಂತಾಪುರ,
C/o ಬೇಲಮಂಚಿ ಮಲ್ಲಿಕಾರ್ಜುನ್
ಯಾದಗಿರಿ,
ಗುಲ್ಬರ್ಗಾ ಜಿಲ್ಲೆ 585 201

ಲತಾ ನಿಂಗಪ್ಪ ಕರಡೀಗುದ್ದಿ
ಎನ್.ಎಂ.ಕರಡೀಗುದ್ದಿ
ನಂ. 10, ಆದಿತಿ ಅಪಾರ್ಟ್‌ಮೆಂಟ್ಸ್
ಮಹಂತೇಶ್ ನಗರ,
ಬೆಳಗಾವಿ ಜಿಲ್ಲೆ - 590 016

ಜಿ.ಜಿ.ಜ್ಯೋತಿ
D/o ಜಿ.ಆರ್.ಜಯಶೀಲಗೌಡ
ತುರುವನೂರು ಪೋಸ್ಟ್
ಚಿತ್ರದುರ್ಗ - 577 517

ಎಸ್.ಶ್ರೀವತ್ಸ
ನಂ.24, 9ನೇ ಸಿ ಕ್ರಾಸ್,
ಎಸ್‌ಬಿಐ ಕಾಲೋನಿ, ಸಾರಕ್ಕಿ ಗೇಟ್,
ಕನಕಪುರ ರಸ್ತೆ,
ಬೆಂಗಳೂರು - 560 078.

ಪ್ರವೀಣ್‌ಕುಮಾರ್ ಎ.ಸಿ.
S/o ಎ.ಚನ್ನಬಸಪ್ಪ
ಬಸವೇಶ್ವರ ನಿಲಯ, 3ನೇ ತಿರುವು,
ಶಾಂತೀನಗರ, ಶಿವಮೊಗ್ಗ ರೋಡ್,
ಶಿಕಾರಿಪುರ - 577 427

ಈ ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.

ಕ್ವಿಜ್ - 22ರ ಸರಿಯುತ್ತರ

1. ಕುಮಾರಿ ವೀಣಾ
2. ಮೇ 14
3. ಎಚ್.ಡಿ.ದೇವೇಗೌಡ
4. ಬಿಹಾರ
5. ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್

ಸೂಚನೆಗಳು

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು. ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **15 - 5 - 1999**

ವಿಜೇತರಿಗೆ 500 ರೂ. ಪುಸ್ತಕ ಬಹುಮಾನ

ಕ್ವಿಜ್ - 23

ಪ್ರವೇಶ ಪತ್ರ

ಹೆಸರು.....................................
ವಿಳಾಸ.....................................
....
....
ಪಿನ್ ಕೋಡ್......................... ದೂರವಾಣಿ.........................

1. 'ಬಿಸಿಲ ಬದುಕು' ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾದ "ಸಾಧನೆಯತ್ತ ಚಿಗುರು ಪ್ರತಿಭೆಗಳು" ಲೇಖನ ಬರೆದವರು ಯಾರು?
....
2. ವಾಜಪೇಯಿ ಸರಕಾರದ ಪತನಕ್ಕೆ ಕಾರಣಳಾದ ತಮಿಳುನಾಡಿನ ರಾಜಕಾರಣಿ ಯಾರು?
....
3. ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಯಾವ ನಗರಕ್ಕೆ ನೀರು ಸರಬರಾಜು ಆಗುತ್ತದೆ?
....
4. ಪೂನಾ-ಬೆಂಗಳೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಯ ಸಂಖ್ಯೆ ಎಷ್ಟು?
....
5. ವಿಶ್ವಕಪ್ ಕ್ರಿಕೆಟ್‌ಗೆ ಭಾರತ ತಂಡದ ನಾಯಕ ಯಾರು?
....

ಪ್ರವೇಶ ಪತ್ರವನ್ನು 15.5.99ರೊಳಗೆ ಕಳುಹಿಸಬೇಕಾದ ವಿಳಾಸ :
ಸಂಪಾದಕರು, **ಬಿಸಿಲ ಬದುಕು**, ಅಂಚೆ ಪೆಟ್ಟಿಗೆ 7951,
ಬಸವೇಶ್ವರನಗರ, ಬೆಂಗಳೂರು-79.

ಪಾರೂ ಹಲ್ಲು ಕೀಳಿಸಿದ್ದು

■ ಡಾ. ಎಚ್. ಎಸ್. ವೆಂಕಟೇಶ್

ದೇಹದಲ್ಲೇ ಸುಂದರವಾದ ಅಂಗ ಯಾವುದು?

ಅಪ್ಪಿ ತಪ್ಪಿ ಯಾರಾದರೂ ನಿಮ್ಮನ್ನು ಕೇಳಿದರೆ ನಿಮ್ಮ ಉತ್ತರವೇನು?

ಒಬ್ಬೊಬ್ಬರೂ ಒಂದೊಂದು ಉತ್ತರ ಹೇಳುವಿರಲ್ಲವೇ? ಒಂದು ವೇಳೆ ನಿಮ್ಮ ಉತ್ತರ ''ಹಲ್ಲು'' ಎಂದಿರೋ, ಅದೂ ಪರಮನ ಮುಂದೆ, ಅವನ ಸಾವಿಗೆ ನೀವೇ ಗ್ಯಾರಂಟಿ ಕಾರಣ. ಪರಮನಿಗೆ ಹಲ್ಲೆಂದರೆ ಅಸಹ್ಯ ಜುಗುಪ್ಸೆ - ಹಲ್ಲಿನಿಂದಲೇ ಅವನು ಜೀವನದಲ್ಲಿ ನಿರುತ್ಸಾಹ ಹೊಂದಿದ್ದು.

ಪರಮನಿಗೆ ಜೀವಮಾನದ ಮೊದಲ ಹಲ್ಲಿನ ಆಘಾತವಾದಾಗ ನಡೆದ ಘಟನೆ ನನಗೆ ಚೆನ್ನಾಗಿ ಜ್ಞಾಪಕವಿದೆ. ಆಗ ನಾವಿಬ್ಬರೂ ಶುದ್ಧ ಬ್ರಹ್ಮಚಾರಿಗಳು. ಒಮ್ಮೆ ಬೆಂಗಳೂರಿನಲ್ಲಿ ಹಳೆಯ ಸಿನಿಮಾಗಳ ನಾಸ್ಟಾಲ್ಜಿಯ ನಡೆದದ್ದು ನಿಮಗೆ ಜ್ಞಾಪಕವಿರಬಹುದು. ಅಂದು ನಾನು ಪರಮ ಇಬ್ಬರೂ ಪ್ರೇಕ್ಷಕರು, ಹಿಂದೆ ಒಬ್ಬ ವಯಸ್ಸಾದ ಮುದುಕರು.

ಯಾವುದೋ ಹಳೆಯ ಸಿನಿಮಾದ ಒಂದು ತಮಾಷೆ ದೃಶ್ಯ.

''ಓ್ಹ, ಓ್ಹ, ಓ್ಹ, ಓ್ಹ, ಹ್ಹಿ'' ಹಿಂದೆ ಇದ್ದ ಮುದುಕರು ಹಿಂದೆ ಮುಂದೆ ಬಾಗಿ ಬಿದ್ದು ಬಿದ್ದು ನಕ್ಕರು. ಪರಮನ ಭುಜದ ಮೇಲೆ ಏನೋ ಅಂಟಾದ ವಸ್ತು ಬಿದ್ದ ಅನುಭವ. ಸ್ವಲ್ಪ ಹೊತ್ತಿನಲ್ಲೇ, ಥಿಯೇಟರಿನ ಕತ್ತಲೆಯಲ್ಲಿ ಮುದುಕಪ್ಪ ಬಗ್ಗಿ ನೆಲವೆಲ್ಲಾ ಹುಡುಕುತ್ತಿದ್ದರು, ತಡವುತ್ತಿದ್ದರು.

''ಅಯ್ಯೋ ಪಾಪ, ಏನೋ ಬಿದ್ದೋಗಿರಬೇಕು'' ಪರಮ ಲೊಚಗುಟ್ಟಿ, ತಾನೂ ಹುಡುಕಿಕೊಡಲು ಕೈ ಹಚ್ಚಿದ, ಇವನ ಕೈಗೆ ಸಿಕ್ಕಿದ್ದು ಅಂಟಂಟಾದ ವಸ್ತು.

ಹಿಂದಿದ್ದ ತಾತ ನಕ್ಕಾಗ ಅವರ ಕಟ್ಟಿಸಿದ್ದ ಹಲ್ಲು ತುಪ್ಪುಕ್ಕನೇ ಕಳಚಿ ಬಿದ್ದಿತ್ತು. ಪರಮನ ಭುಜದ ಮೇಲೇ. ನಂತರ ನೆಲದ ಮೇಲೆ, ಸಿಕ್ಕಿದ್ದೂ ಪರಮನಿಗೇ. ಅಂದಿನಿಂದ ಪರಮನಿಗೆ 'ಕೃ-ದಂತ' ವ್ಯಾಕರಣದ್ದಲ್ಲ ಸ್ವಾಮೀ, ಇದು ಕೃತಕ ದಂತದ ಮೇಲೆ ಒಂದು ರೀತಿಯ ಜುಗುಪ್ಸೆ.

ಪರಮನಿಗೆ ಈ ಕಟ್ಟಿಸಿದ ಹಲ್ಲು ಜೀವಮಾನದ ಅತ್ಯಂತ ಜುಗುಪ್ಸೆ ಹುಟ್ಟಿಸಿದ್ದು ಅವನ ಸೋದರ ಮಾವನಿಂದ. ಒಂದು ದಿನ ಪರಮನ ಮನೆಗೆ ಬಂದ ಪುಣ್ಯಾತ್ಮ ಗ್ರಹಚಾರಕ್ಕೆ ಪರಮನ ಆಫೀಸಿನಲ್ಲೊಂದು ಮೀಟಿಂಗು, ಶಿಸ್ತಾಗಿ ಕೋಟು, ಬೂಟು ಧರಿಸಿದ್ದ ಪರಮ. ಮಾತನಾಡಲು ಎದ್ದು ನಿಂತು, ಯಾವುದೋ ಜ್ಞಾನದಲ್ಲಿ ಕೋಟಿನ ಜೇಬಿಗೆ ಕೈ ಹಾಕಿ ಹೊರಕ್ಕೆ ತೆಗೆದಾಗ 'ಟಕಕ್ಕೆಂದು'

ತುರಿಮಣೆ ಆಂಟಿ?
ಹೌದು ನಮ್ಮ ಪಾರುವೇ!
ನಿಮಗೆ ಹೇಳಿರಲಿಲ್ಲ ಅಲ್ಲವೆ.
ಅದೇ ನಮ್ಮ ಪರಮನ ಹೆಂಡತಿ -
ಪಾರೂ. ನಿಜ ಸುಂದರಿಯಾದರೂ,
ಒಂದೇ ಯಡವಟ್ಟು, ಅವಳು
ಎರಡೂ ತುಟಿಗಳನ್ನು
ಮುಚ್ಚಲಾಗುತ್ತಿರಲಿಲ್ಲ. ಎರಡು
ಹಲ್ಲುಗಳು ಹೊರಬರುತ್ತಿದ್ದವು.
ಅವಳನ್ನು ನೋಡಿದಾಗಲೆಲ್ಲಾ
ಬಂಗಾರಿ ನಗುತ್ತಿದ್ದಳು.



ಸದ್ದು ಮಾಡುತ್ತಾ ಬಿದ್ದದ್ದು - ಒಂದು ಜೊತೆ ಕಟ್ಟಿಸಿದ ಹಲ್ಲಿನ ಸೆಟ್ಟು. ಪರಮ ಕುದಿದು ಹೋದ. ಅವನ ಸೋದರ ಮಾವ ತನ್ನ ಕೋಟೆಂದು ತಿಳಿದು, ಪರಮನ ಕೋಟಿನ ಒಳಗೇ ಇಟ್ಟಿದ್ದ ತನ್ನ ಹಲ್ಲಿನ ಸೆಟ್ಟನ್ನು. ಅಂದಿನಿಂದ ಪರಮ ಈ ಹಲ್ಲಿನ ಅಂದರೆ ಕಟ್ಟಿಸಿದ್ದು - ಪರಮ ದ್ವೇಷಿ.

''ಪಪ್ಪಾ, ತುರಿಮಣೆ ಆಂಟಿ, ಅಂಕಲ್ಲು ಬಂದಿದಾರೆ, ಇಬ್ರೂ ಅಳ್ತಾಯಿದ್ದಂಗಿತ್ತು''. ಒಂದು ದಿನ ಆಫೀಸಿನಿಂದ ಬರುವಾಗ ಚೋಟು ಬಾಗಿಲ ಬಳಿಯೇ ಹೇಳಿದ್ದ.

ತುರಿಮಣೆ ಆಂಟಿ? ಹೌದು ನಮ್ಮ ಪಾರು ವೇ! ನಿಮಗೆ ಹೇಳಿರಲಿಲ್ಲ ಅಲ್ಲವೆ. ಅದೇ ನಮ್ಮ ಪರಮನ ಹೆಂಡತಿ - ಪಾರೂ. ನಿಜ ಸುಂದರಿಯಾದರೂ, ಒಂದೇ ಯಡವಟ್ಟು. ಅವಳು ಎರಡೂ ತುಟಿಗಳನ್ನು ಮುಚ್ಚಲಾಗುತ್ತಿರಲಿಲ್ಲ. ಎರಡು ಹಲ್ಲುಗಳು ಹೊರಬರುತ್ತಿದ್ದವು. ಅವಳನ್ನು ನೋಡಿದಾಗಲೆಲ್ಲಾ ಬಂಗಾರಿ ನಗುತ್ತಿದ್ದಳು.

'ಕಾರ್ಟೂನ್ ಮೊಲ' ಪಾರೂಗೆ ಬಂಗಾರಿ - ಅದೇ ನನ್ನ ಮಗಳು ಇಟ್ಟ ಹೆಸರು.

''ಥೂ, ಅದೆಂತದೇ? ಒಳ್ಳೆ ತೆಂಗಿನಕಾಯಿ ತುರಿಮಣೆಯಂತಿರೋದ್ನ?'' ಜಯ ಹೇಳಿದ್ದಳು.

ಈ ಕಿರಾತಕ ಮಕ್ಕಳೋ, 'ತುರಿಮಣೆ ಆಂಟಿ' ಎಂದೇ ನಾಮಕರಣ ಮಾಡಿದ್ದರು- ಪಾರೂಗೆ.

ಒಳಗೆ ಬಂದೆ, ಪಾರೂ ಪರಮ ಇಬ್ಬರೂ ಒಂದೊಂದು ದಿಕ್ಕಿಗೆ ಮುಖ ಊದಿಸಿ ಕುಳಿತಿದ್ದರು.

''ರ್‍ರೀ, ಯಾಕೋ ಅವ್ರಿಬ್ರ ಜೀವನ ಸರಿಹೋಗ್ಲಿಲ್ಲಾರ್‍ತ ಕಾಣುತ್ತೆ. ಐದಾರು ತಿಂಗ್ಳಿಂದ ಮಾತುಕತೆಯಿಲ್ವಂತೆ, ಮುಟ್ಟೋದು ಇಲ್ವಂತೆ, ನಿಮ್ಮ ಫ್ರೆಂಡಿಗೆ ಅದೇನು ರೋಗಾನೋ ಕೇಳಿ! ನೀವೇ ಕೇಳಿ, ಈ ಹಾಳಾದ ಗಂಡಸ್ರೇ ಹೀಗೆ?'' ಸನ್ನೆಯಿಂದ ಒಳಗೆ ಕರೆದ ಜಯ ಸಾರಾ ಸಗಟು ಉಗಿದಳು.

ಪಾರೂ, ಪರಮ ಹೀಗಿರಲಿಲ್ಲವಲ್ಲ? ಈಗೇನಾಯ್ತು? ತಲೆ ಕೆರೆದುಕೊಂಡೆ.

''ನಾನೆಲ್ಲಾ ವಿಚಾರಿಸ್ತೀನಿ, ನೀನು ಬಾಯಿ ಮಾಡ್ಬೇಡ'' ಜಯಳಿಗೆ ಹೇಳಿ ಹೊರಟೆ.

ದಾರಿಯುದ್ದಕ್ಕೂ, ಸ್ಕೂಟರಿನ ಹಿಂದೆ ಮುಸುಡಿ ಊದಿಸಿ ಕೂತ ಪರಮ. ನಾನೂ ದಾರಿಯಲ್ಲಿ ಕೆಣಕಲಿಲ್ಲ. ನಮ್ಮ ಮಾಮೂಲಿ ಹೋಟೆಲ್ಲು ಊರ ಹೊರಗಿನ ಕಾಕಾ ಚಾ ಅಂಗಡಿಯ ಹಗ್ಗದ ಮಂಚದ ಮೇಲೆ ಬಿದ್ದೆವು.

''ಪರಮ ಏನಾಯ್ತೋ?'' ಮೆಲ್ಲಗೆ ಕೇಳಿದೆ.

''ಗುರೂ, ನನ್ನ ಜೀವನ ಹೀಗಾಗ್ಬಾರ್ದಿತ್ತು. ನಾನು ಹಾಳಾಗ್ಹೋದೆ, ಇನ್ಮುಂದೆ ಬರೀ ಕನಸಿನಲ್ಲಿ ಕಾಲ ಕಳ್ಯೋಹಂಗಾಯ್ತು. ಇನ್ಮುಂದೆ ಜೀವನದಲ್ಲಿ ಏನ್ ಸುಖಾ ಐತೆ ಗುರೂ, ನಾನ್ಹಾಳಾಗಿ ಹೋದೆ'' ಕೈಹಿಡಿದು ಗಳಗಳ ಅತ್ತ ಪರಮ.

ನಿಜವಾಗಿಯೂ ಏನೋ ಗಂಭೀರವಾದದ್ದು ನಡೆದಿರಬೇಕೆನಿಸಿತ್ತು. ಬೆನ್ನು ಸವರುತ್ತಾ ಹೇಳಿದ್ದೆ.

''ಬೇಜಾರು ಮಾಡ್ಕೋಬೇಡ ಪರಮ. ಏನಾಯ್ತು ಹೇಳೋ?''

''ಇವ್ಳು ನನ್ನ ಮಾತ್ನ ಕೇಳ್ದೆ ಹಲ್ಲು ಕೀಳಿಸ್ಕೊಂಡ್ಲು. ಹೋದ್ರೆ ಹೋಗ್ಲೀಂತ ಇದ್ರೆ ಈಗ ಹಲ್ಲು ಕಟ್ಟಿಸ್ಕೊಂಡಿದಾಳೆ, ನಾನು ಹೇಗಯ್ಯಾ ಅದನ್ನ ಸಹಿಸ್ಲಿ?'' ಪರಮ ಆಕಾಶ ಬಿದ್ದವನಂತೆ, ಹರಳೆಣ್ಣೆ ಮುಖದಲ್ಲಿ ಹೇಳಿದ.

ಈಗರ್ಥವಾಗಿತ್ತು. ಪರಮ ಜೀವನದ ಸಾರ ಸರ್ವಸ್ವವನ್ನು ಯಾಕೆ ಬತ್ತಿಸಿಕೊಂಡಿದ್ದಾನೆಂದು.

''ಪಾರು ಹಲ್ಲು ಚೆನ್ನಾಗೇ, ಗಟ್ಟಿಯಾಗೇ ಇತ್ತಲ್ಲೋ'' ನಿಧಾನವಾಗಿ ಕೊಂಕಿದೆ, ನಾನು.

ಪರಮ ಹೇಳುತ್ತಾ ಹೋದ. ಆಗಾಗ ಕಣ್ಣೀರು. ಬಲು ಸಂಕಟ ಪಟ್ಟಿತು ಪ್ರಾಣಿ. ಸಾಲಾಗಿ ಮನೆಗಳನ್ನು ಕಟ್ಟಿದ್ದ ಒಂದು ವಠಾರದಲ್ಲಿ ಒಂದು ಗೂಡಿಗೆ ಪಾರು ಪರಮ ಬಂದಿದ್ದೇ ಬಂತು ಗ್ರಹಚಾರ. ಸ್ವಲ್ಪ ದಿನಗಳಲ್ಲೇ ಪ್ರಾರಂಭ ಜಗಳ ಪರಾಕಾಷ್ಠೆ ಮುಟ್ಟುತ್ತಿತ್ತು. ಮನೆ ಮುಂದಿದ್ದ ಕಸ ಪಕ್ಕದ ಮನೆ ಮುಂದಕ್ಕೆ ಜರುಗುತ್ತಿದ್ದುದೇ ಕಾರಣ. ಪರಮನ ಹೆಂಡತಿ ಹಳ್ಳಿ ಹೆಣ್ಣು. ದೈಹಿಕವಾಗಿ ಆ ವಠಾರದಲ್ಲಿ ಅವಳಿಗೆ ಯಾರೂ ಸಮರಿಲ್ಲ. ಪರಮನ್ನೂ ಸೇರಿ ಉಳಿದ ಜಡೆಗಳಿಗೆ ಉಳಿದುದ್ದು ಒಂದೇ ದಾರಿ ಮಾತಿನ ದಾಳಿ.

''ಆಹಾಹಾ, ಸುರಸುಂದರಿ ಉಬ್ಬಲ್ಲಮ್ಮ!
ಸುಂದರಿ, ಮಾತಾಡ್ನೋದು ತುಸ್ ತುಸ್ಸಂತ.
ಈ ಉಬ್ಬಲ್ಲಿಗೇ ಈ ತರಾ, ಇನ್ನೇನಾದ್ರೂ ಚೆನ್ನಾಗಿದ್ರೆ?''

ಪಾರೂಗೆ ಮಾತಿನ ಬಾಣ ಸಹಿಸಲಾಗಲಿಲ್ಲ. ಪರಮನಿಗೆ ಎರಡು ದಿನ ಹಸಿವು ತಡೆಯಲಾಗಲಿಲ್ಲ.

''ಹೋಗ್ಲಿ ಬೇರೆ ಮನೆ ನೋಡ್ತೀನಿ ಬಿಡೆ''

''ಇವರ್ಗೆಲ್ಲಾ ಭಯ ಪಟ್ಕೊಂಡು, ಮನೆ ಯಾಕ್ರೀ ಬಿಡ್ಬೇಕು''

''ನನ್ನ ಮತ್ತೇನು ಮಾಡೂಂತೀಯೆ?'' ಪಾರೂನ ಸತ್ಯಾಗ್ರಹದಲ್ಲಿ ಪರಮ ನಲುಗಿ ಹೋಗಿದ್ದ.

''ನಾಳೇನೇ ಹಲ್ಲಿನ ಡಾಕ್ಟ್ರನ್ನ ನೋಡೋಣ''

ಪರಮ ಅರ್ಧ ಸತ್ತದ್ದು ಆವಾಗಲೇ.

ಪರಮನ ತಲೆ ಅರ್ಧ ಹುಚ್ಚಾದದ್ದು ಡೆಂಟಲ್ ಕಾಲೇಜಿನ ಆಸ್ಪತ್ರೆಯಲ್ಲಿ ಬರ್‍ರೋಡಾಂಟಿಯ ಪರಿಹಾರಂಟಿಯ ಇತ್ಯಾದಿ ವಿಭಾಗಗಳನ್ನು ನೋಡಿ.

''ಇರೋ ಮೂರು ಜಾತಿ ಮೂವತ್ತೆರಡು ಹಲ್ಲಿಗೆ ಇಷ್ಟೊಂದು ವಿಭಾಗ, ಅದಕ್ಕೂ ಒಬ್ಬೊಬ್ಬ ಸ್ಪೆಷಲಿಸ್ಟು'' ಪರಮ ತನ್ನಷ್ಟಕ್ಕೆ ತಾನೇ ಗೊಣಗಿಕೊಂಡು ಹೊರಗೆ ಬಂದಿದ್ದ.

ಅಂದೇ ಕೊನೆ ಪಾರೂ ಹಿಂದೆ ಆಸ್ಪತ್ರೆಗೆ ಹೋದದ್ದು.

''ಹಿಂದಕ್ಕೆ ತಳ್ಳೋದು, ಮುಂದಕ್ಕೆ ತಳ್ಳೋದು, ಏನೂ ಬ್ಯಾಡ. ಎಲ್ಲಾ ಕಿತ್ಹಾಕಿ ಹೊಸ್ದಾಗಿ ಚೆನ್ನಾಗಿರೋತರ ಕಟ್ಕೊ'' ಒಬ್ಬ ಪ್ರೈವೇಟ್ ಹಲ್ಲಿನ ಡಾಕ್ಟ್ರ ಮುಂದೆ ಪಾರೂ ಕೂತಳು.

ಸಂಜೆ ಪರಮ ಬರುವ ವೇಳೆಗೇ, ಪಾರುವಿನ ನಾಲ್ಕೈದು ಹಲ್ಲು ಮಾಯ. ಅದೇ ಬಾಯಲ್ಲಿ ಪಾರೂ ನಕ್ಕಾಗ ಇವನಿಗೆ ಮೈ ಪರಚಿಕೊಂಡಂತಾಯ್ತು.

''ಹಲ್ಲು ಇಲ್ದಿದ್ರೂ ಎಂಗೋ ಸಹಿಸ್ಕೋತಿದ್ದೆ

ಕಿವಿ ಮಾತು

● ಬೆಳಗಿನ ವೇಳೆಯಲ್ಲಿ ಎದ್ದ ತಕ್ಷಣ ನೀರನ್ನು (ವಿಶೇಷವಾಗಿ ಹಿಂದಿನ ರಾತ್ರಿ ತಾಮ್ರದ ಪಾತ್ರೆಯಲ್ಲಿ ಶೇಖರಿಸಿಟ್ಟಿದ್ದ) ಹೆಚ್ಚಾಗಿ ಕುಡಿಯುವುದರಿಂದ ಮಲಬದ್ಧತೆಯಾಗದಂತೆ ನೋಡಿಕೊಳ್ಳಬಹುದು.

● ರಸಬಾಳೆ ಹಣ್ಣಿಗೆ ಮಲಬದ್ಧತೆಯನ್ನು ಹೋಗಲಾಡಿಸುವ ಗುಣವಿದೆ. ಅದನ್ನು ರಾತ್ರಿ ಊಟದ ನಂತರ ಸ್ವಲ್ಪ ಜೇನುತುಪ್ಪದೊಡನೆ ಬೆರೆಸಿ ಸೇವಿಸಬೇಕು.

● ಗುಲಾಬಿಯ ಎಸಳುಗಳನ್ನು ಮಡಕೆಯಲ್ಲಿ ಹಾಕಿ, ನೀರಿನಲ್ಲಿ ಕುದಿಸಿ, ಬೆಳಿಗ್ಗೆ ಮತ್ತು ರಾತ್ರಿ ಸಕ್ಕರೆ ಬೆರೆಸಿ ಕುಡಿದರೆ ಮಲಬದ್ಧತೆ ನೀಗುತ್ತದೆ; ಮೂಲವ್ಯಾಧಿಯ ಕಾವು ತಗ್ಗುತ್ತದೆ.

● ಪ್ರತಿ ನಿತ್ಯ ಊಟದಲ್ಲಿ ಯಥೇಚ್ಛವಾಗಿ ಸೊಪ್ಪನ್ನು ಉಪಯೋಗಿಸುತ್ತಿದ್ದರೆ ಮಲಬದ್ಧತೆಯಾಗುವ ಸಂಭವ ಕಡಿಮೆ.

● ಬಿಸಿ ಅನ್ನಕ್ಕೆ ಮೊಸರು ಮತ್ತು ಪೇಣ ಖರ್ಜೂರವನ್ನು ಹಾಕಿ ಕಲಸಿ ತಿಂದರೆ ಮಲಬದ್ಧತೆ ನೀಗುತ್ತದೆ.

● ಒಂದು ನಿಂಬೆಹಣ್ಣಿನ ರಸಕ್ಕೆ ಅರ್ಧ ಚಮಚ ಅಡಿಗೆ ಉಪ್ಪನ್ನು ಬೆರೆಸಿ, ಮೂರು ದಿನ ಬೆಳಿಗ್ಗೆ ಸೇವಿಸುವುದರಿಂದ ಮಲಬದ್ಧತೆ ಗುಣವಾಗುತ್ತದೆ.

ಕಿವಿ ಮಾತು

■ ಒಂದು ಬಟ್ಟಲು ನೀರಿಗೆ ಒಂದು ಚಮಚ ಜೇನು ತುಪ್ಪವನ್ನು ಹಾಕಿ, ಒಂದು ನಿಂಬೆ ಹಣ್ಣಿನ ರಸವನ್ನು ಸೇರಿಸಿ ಕುಡಿದರೆ ಹೃದಯ ದೌರ್ಬಲ್ಯವಿರುವವರ ಹೃದಯಕ್ಕೆ ಕೆಲಸ ಮಾಡಲು ಚಾಲನೆ ದೊರೆಯುತ್ತದೆ.

■ ಸಿಹಿ ಮಾದಲಹಣ್ಣು ಹೃದಯಕ್ಕೆ ಒಳ್ಳೆಯದು.

■ ಹೃದಯ ಸಂಬಂಧದ ವ್ಯಾಧಿಗಳಿಗೆ ನೆಲ್ಲಿಕಾಯಿ ಸೇವನೆ ಒಳ್ಳೆಯದು.

■ ಹೃದ್ರೋಗದಲ್ಲಿ ಬಿಳಿ ಮತ್ತಿ ಮರದ ತೊಗಟೆಯ ಕಷಾಯವನ್ನು ಸೇವಿಸುತ್ತಾ ಬಂದರೆ ಅನುಕೂಲ ದೊರೆಯುವುದು.

■ ಹೃದಯದ ಕಾರ್ಯಾಚರಣೆಯ ಅವ್ಯವಸ್ಥೆಯನ್ನು, ಜೇನಿನೊಂದಿಗೆ ಸೇಬನ್ನು ತಿನ್ನುವ ಮುಖಾಂತರ, ಸರಿಪಡಿಸಬಹುದು.

■ ನೇರಳೆಹಣ್ಣು ನರ ಮತ್ತು ಹೃದಯಗಳಿಗೆ ಚೈತನ್ಯ ತುಂಬುವ ಶಕ್ತಿ ಹೊಂದಿದೆ.

■ ಪ್ರತಿನಿತ್ಯ ನೂರು ಗ್ರಾಂ.ಗಳಷ್ಟು ಹುರುಳಿ ಕಾಯಿಯನ್ನು ಬೇಯಿಸುತ್ತಾ ತಿಂದರೆ ಹೃದಯ ಸಂಬಂಧವಾದ ವ್ಯಾಧಿಗಳು ದೂರವಾಗುವುವು.

■ ಚೆನ್ನಾಗಿ ಪಕ್ವವಾದ ಬಾಳೆಹಣ್ಣು ಹೃದ್ರೋಗಿಗಳಿಗೆ ಉತ್ತಮ ಆಹಾರ, ಅದರಲ್ಲು ಹಣ್ಣಿನ ಹಳದಿ ಬಣ್ಣದ ಸಿಪ್ಪೆಯ ಮೇಲೆ ಕಪ್ಪು ಚುಕ್ಕೆಗಳಿರುವ ಪಚ್ಚ ಬಾಳೆಹಣ್ಣು ಉತ್ತಮ.

ಗುರು, ಆದ್ರೆ ಮುಂದೆ ಅವ್ರು ಮಾಡಿದ್ದು ಮಾತ್ರಾ ನಂಗೆ ಜೀವ್ನಾನೇ ಬೇಡಾಂತ ಅನ್ನಿಸ್ಬಿಡ್ತು. ಅವ್ಳ್ನ ನೋಡಿದ್ರೆ ಯಾಕೋ ಒಂಥರಾ ಅಸಯ್ಯ ಆಗ್ತದೆ'' ಪರಮನಂದ.

''ಅದೇನು ಮಾಡಿದ್ಲಪ್ಪ?''

''ಅದೇ ಗುರೂ, ಹಲ್ಲು ಕಟ್ಟಿಸ್ಕೊಂಡ್ಲು''

ಈಗರ್ಥವಾಯ್ತು. ಪರಮನ ಜುಗುಪ್ಸೆಗೆ ಕಾರಣ ಪಾರೂ ಹಲ್ಲು ಕಟ್ಟಿಸಿದ್ದು. ಪಾರೂ ಸುಂದರವಾಗಿ ಕಾಣಲು ಕೃತಕ ಹಲ್ಲು ಬೇಕೇ ಬೇಕಿತ್ತು. ಅವಳ ಒರಿಜಿನಲ್ ಹಲ್ಲನ್ನು ಕಿತ್ತು ಬಿಸಾಕಲಾಗಿದೆ. ಪಾರುವಿನ ಸುಂದರ ನಗು ಕೃತಕ ಹಲ್ಲಿನಿಂದ ಬಂದು ಪರಮನಲ್ಲಿ ಜುಗುಪ್ಸೆ ಹೆಚ್ಚಿಸುತ್ತಿದೆ. ಯಾರ ಕಡೆ ಮಾತನಾಡಲಿ? ಇವರ ಸಂಸಾರ ಸುಖಮಯ ಮಾಡಲು ಏನು ಮಾಡಬಹುದು? ಯೋಚಿಸಿದೆ. ಒಂದೂ ಅರ್ಥವಾಗಲಿಲ್ಲ.

''ನಿಮ್ಮ ಫ್ರೆಂಡು ಮಠಾನೇನಾದ್ರೂ ಕಟ್ತಾರೇನ್ರೀ?'' ಜಯ ಕೇಳಿದ್ದು ಜ್ಞಾಪಕಕ್ಕೆ ಬಂತು. ಪರಮ ಮಠ ಕಟ್ಟುವುದು, ನಾನು ಎಲ್ಲರನ್ನೂ ಹದ್ದುಬಸ್ತಿನಲ್ಲಿಡುವ ಯಜಮಾನನಾಗುವುದು ಹುಡುಗಾಟದ ಮಾತೇ ಸ್ವಾಮಿ?

ಇದೇ ಯೋಚನೆಯಲ್ಲಿ ವಾಪಸ್ಸು ಹೊರಟೆ, ಪರಮನನ್ನಂತೂ, ಪ್ರಾಕ್ಟಿಕಲ್ಲಾಗಿ ಎಳೆದುಕೊಂಡೇ ಬರಬೇಕಾಯ್ತು.

''ಇದಕ್ಕೆಲ್ಲಾ ಯೋಚ್ನೆ ಮಾಡ್ಬೇಡ ಪರಮ. ಮದುವೆ ಮಾಡಿಸಿದ ದೇವರು ಸಂಸಾರ ನಡೆಸಲು ಬಿಡ್ದೆ ಇರ್ತಾನಾ?'' ಹೇಳಿದೆ.

''ಇದ್ಯಾವ್ದು ಗುರೂ, ಹೊಸಾ ಗಾದೆ?''

''ನಿನ್ನ ಸಂಸಾರ ಚೆನ್ನಾಗಿರ್ಲೀಂತ ದೇವ್ರೇ ಆಡ್ಸಿದ್ದು, ಸುಮ್ನೆ ಬಾ'' ರೇಗಿದೆ. ಪರಮನ-ಯೋಚನೆಯಲ್ಲೇ ಸ್ಕೂಟರ್ ಓಡಿಸುತ್ತಿದ್ದೆ.

ತನ್ನ ಸಂಸಾರ ಮತ್ತೆ ಫೆವಿಕಾಲ್ ನಂತೆ ಆಗಬಹುದೆಂದು ಖುಷಿಯಲ್ಲಿ, ಹಿಂದೆ ಪರಮ ಏಕೋ, ಏನೋ?

''ಅಯ್ಯಯ್ಯೋ ಗುರೂ... ಲಾರಿ ಬಂತಪ್ಪೋ'' ಪರಮ ಕೂಗಿದ್ದೇ ಗೊತ್ತು.

ಬ್ರೇಕುಗಳನ್ನು ಒತ್ತಿ, ಹ್ಯಾಂಡಲ್ ತಿರುಗಿಸಿದೆ, ಧೊಪ್ಪೆಂದು ಬಿದ್ದುದೇ ಜ್ಞಾಪಕ.

''ಏನಾದ್ರೂ ಉಪಾಯ ಹೇಳೋಂದ್ರೆ... ಸಾಯ್ಸಕ್ಕೇ ಪ್ಲಾನ್ ಮಾಡ್ಬಿಟ್ಯಲ್ಲೋ'' ಕಿರುಚಿದ್ದ ಪರಮ.

ಜಯ -ಪಾರೂ ಇಬ್ಬರಿಗೂ ಗಾಬರಿ ನಮ್ಮ ಅವತಾರ ನೋಡಿ.

ಸುಮಾರು ಐದಾರು ತಿಂಗಳು ನನ್ನ ಪರಮನ ಭೇಟಿಯಾಗಲಿಲ್ಲ. ಬಹುಶಃ ಇಷ್ಟೊತ್ತಿಗೆ ಪರಮನ ಡೈವೋರ್ಸು ಕೇಸು ಕೋರ್ಟ್ನಲ್ಲಿ ಫೈಲಾಗಿ, ಒಂದೆರಡು ಹಿಯರಿಂಗು ಆಗಿರಬಹುದೆಂದು ಭಾವಿಸಿದ್ದೆ.

ಒಂದು ದಿನ ಆಫೀಸಿನಿಂದ ಬಂದಾಗ ಸಿಡಿಲು ಬಡಿದಂತಾಯ್ತು.

ಜೀವನದಲ್ಲಿ ಜುಗುಪ್ಸೆ ಹೊಂದಿ ಇಷ್ಟು ಹೊತ್ತಿಗೆ ಪರಮ ಗ್ಯಾರಂಟಿ ಮಠ ಕಟ್ಟಿರುತ್ತಾನೆಂದು ನಾನು ಭಾವಿಸಿದ್ದೆ. ಅಂತಹ ಪರಮ, ಪಾರೂ ಜೊತೆ ಕಿಲಕಿಲ ನಗುತ್ತಾ ಕೂತಿದ್ದ, ಆಶ್ಚರ್ಯ!

''ಅಣ್ಣಾ, ನಿಮ್ಮಿಂದ್ಲೇ ನನ್ನ ಸಂಸಾರ ಉಳೀತು'' ಪಾರು ಸಂತೋಷದಿಂದ ಹೇಳಿದಳು.

''ನಿಜವಾಗ್ಲೂ ನೀನೇ ಕಣಯ್ಯಾ ನನ್ನ ಫ್ರೆಂಡು. ಗುರೂ, ಆವತ್ತು ಸ್ಕೂಟ್ರಿಂದ ಬೀಳ್ಸಿ ನಂಗೆ ಉಪಕಾರ ಮಾಡ್ದೆ'' ಮೂಳೆ ಮುರಿಯುವಂತೆ ಅಪ್ಪಿಕೊಂಡಿದ್ದ.

ಅಂದು ಸ್ಕೂಟರಿಂದ ಬಿದ್ದ ಪರಮ, ನನ್ನನ್ನು ಕೊಲೆ ಗಡುಕನೆಂದು ಭಾವಿಸಿ ದೂರವಾಗಿದ್ದ. ಒಂದೆರಡು ದಿನದಲ್ಲೇ ಅವನ ಮುಂದಿನ ಹಲ್ಲುಗಳು 'ಲಳ ಲಳ' ಅಲ್ಲಾಡಿ ಬಿದ್ದಿದ್ದವು. ಮುಸುಡಿಗೆ ಬಿದ್ದ ಏಟಿನ ಪ್ರಭಾವ.

ಈಗ ಅಸಹ್ಯ ಪಡುವ ಸರದಿ ಪಾರೂದಾಯ್ತು. ಅಂತಹ ಮುಖಾರವಿಂದ ವಠಾರದ ಚಿಕ್ಕ ಮಕ್ಕಳೆಲ್ಲಾ ಪರಮನನ್ನು ಕಂಡು ಕಿರುಚುತ್ತಿದ್ದವು. ಪರಮ ಕನಲಿ ಹೋಗಿದ್ದ.

ಕೊನೆಗೂ ಪಾರೂ ದಾರಿಗೇ ಬಂದ. ಅದೇ ಕೃತಕ ದಂತದ ಅಳವಡಿಕೆ- ಅರ್ಥವಾಗಲಿಲ್ವೆ, ಬಿದ್ದ ಹಲ್ಲನ್ನು ಕಟ್ಟಿಸಿಕೊಂಡ. ಪಾರು ಪರಮ ಇಬ್ಬರೂ ಕಿಲಕಿಲ ನಕ್ಕರು- ಕತೆ ಹೇಳಿ.

''ಇದೂ ಒಂತರಾ ಚೆನ್ನಾಗಿದೆ ಕಣಯ್ಯಾ'' ಪರಮ ಬಾಯಿಗಿಂಜಿ ಕಟ್ಟಿಸಿದ ಹಲ್ಲು ತೋರಿಸಿದ.

''ಪಪ್ಪಾ, ನೀನು ಅಮ್ಮ ಯಾವಾಗ್ಲೂ ಕಿತ್ತಾಡ್ತಾನೇ ಇರ್ತೀರಿ. ನಿಮ್ಮಿಬ್ರಿಗೂ ಈತರಾ ಏನಾದ್ರೂ ಆದ್ರೆ ಎಷ್ಟು ಚೆನ್ನಲ್ಲಾ?'' ಪಕ್ಕದಲ್ಲಿದ್ದ ಬಂಗಾರಿ ಹೇಳಿದಳು.

''ಇವ್ರಿಗೆ ಯಾವಾಗ ದೇವ್ರು ಒಳ್ಳೆ ಬುದ್ದಿಕೊಡ್ತಾನೋ?'' ಜಯ ಮೂತಿ ಕೊಂಕಿಸಿದಳು.


''ಅದ್ಯಾಕೆ ಯೋಚ್ನೆ ಮಾಡ್ತೀಮಮ್ಮಿ, ನಿಂಗೂ ಇಂಗಾದಾಗ ನಿಮ್ಮಿಬ್ರಲ್ಲೂ ಪ್ರೀತಿ ಜಾಸ್ತಿಯಾಗುತ್ತೆ ಅಲ್ವೇನಪ್ಪಾ?'' ಚೋಟು ಹೇಳುತ್ತಾ ನನ್ನ ಅರ್ಧ ಬೋಡಾದ ಬುರುಡೆ ತೋರಿಸಿದ.

ಎಲ್ಲರೂ ಹೋ, ಹೋ ಎಂದು ಕೂಗಿದರು.

''ಅಯ್ಯಪ್ಪ, ಪ್ರೀತಿಗೀತಿ ಜಾಸ್ತಿಯಾಗದಿದ್ರೂ ಬೇಡ, ಆದ್ರೆ ಇಂಗಾಗೋದು ಮಾತ್ರಾ ಬೇಡಾಪ್ಪ'' ಜಯ ಬೋಡು ಮಂಡೆಯ ಮೇಲೆ ಟಪ್ಪೆಂದು ತಟ್ಟಿದಳು.

ಎಲ್ಲರೂ ನಗುತ್ತಿರುವಾಗ ಪೆಕರನಾದವನು ನಾನು.

■






ಚಿಣ್ಣರನ್ನು ನುಂಗಿದ 'ಶಕ್ತಿಮಾನ್'

'ಶಕ್ತಿಮಾನ್' ನಂತಹ ಕಾರ್ಯಕ್ರಮಗಳನ್ನಾಗಲಿ ಅಥವಾ ಇಂತಹ ಯಾವುದೇ ಕಾರ್ಯಕ್ರಮಗಳನ್ನಾಗಲಿ ಟಿವಿಯಿಂದ ಪೂರ್ತಿ ಹೊರದೂಡುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸುತ್ತೇವೆಂದುಕೊಂಡರೆ 'ನೆಗಡಿಯಾದವನಿಗೆ ಮೂಗು ಕತ್ತರಿಸಿಕೊ' ಎಂದು ಹೇಳುವಷ್ಟು ಮೂರ್ಖತನವಾಗುತ್ತದೆ.

■ ಪ್ರೊ. ಎನ್. ಎಸ್. ಅಶೋಕ್‌ಕುಮಾರ್

ಭೂಪಾಲ್‌ನ ದಿನಸಿ ವ್ಯಾಪಾರಿಯಾದ ರಮೇಶ್ ಗುಪ್ತನ ಮಗ ಆಕ್ಕಿ ಮಂಡಿಯಿಂದ 'ಶಕ್ತಿಮಾನ್'ನಂತೆ ಜಿಗಿಯುತ್ತೇನೆ ಎಂದು ಭ್ರಮಿಸಿ ನೇರವಾಗಿ ತಲೆಯನ್ನು ನೆಲಕ್ಕೆ ಅಪ್ಪಳಿಸಿ ಪ್ರಾಣ ಕಳೆದುಕೊಂಡ. ರಾಜಸ್ತಾನದ ಪದ್ಮರಾಮ್ ವೃತ್ತಿಯಲ್ಲಿ ಕ್ಷೌರಿಕ. ಅವನ ಏಳು ವರ್ಷದ ಮಗ ''ಮಹಡಿಯ ಮೇಲೆ ನಿಂತು 'ಶಕ್ತಿಮಾನ್'ನಂತೆ ಗಿರಿಗಿರಿ ಸುತ್ತಿ ಅದೃಶ್ಯನಾಗುತ್ತೇನೆ'' ಎಂದು ಸ್ನೇಹಿತರ ಎದಿರು ಜಂಭದಿಂದ ಹೇಳುತ್ತಲೇ ಅಲ್ಲಿಂದ ಜಾರಿ ನೆಲಕ್ಕೆ ಬಿಡಿದು ಆಸ್ಪತ್ರೆ ಸೇರಿ ಎರಡು ದಿನ ನರಳಿ ಕೊನೆಯುಸಿರೆಳೆದ. ನಮ್ಮ ರಾಜ್ಯದ ಹುಬ್ಬಳ್ಳಿಯ ವಿಠಲ್ ಕುಲಕರ್ಣಿ, ಹಿಂದೂಸ್ತಾನ್ ಲೀವರ್ ಲಿಮಿಟೆಡ್‌ನಲ್ಲಿ ಒಬ್ಬ ಗಾರ್ಡ್. ಈತನ ಎಂಟು ವರುಷದ ಮಗಳು ವರ್ಷಾ ಕುಲಕರ್ಣಿ ತನ್ನ ಸ್ನೇಹಿತೆಯ ಜೊತೆ ಆಟವಾಡುತ್ತಿರುವಾಗ 'ಶಕ್ತಿಮಾನ್'ನನ್ನು ನೆನೆಸಿಕೊಂಡು, ನಾವು ಏನೇ ಮಾಡಿಕೊಂಡರೂ ಶಕ್ತಿಮಾನ್ ಬಂದು ನಮ್ಮನ್ನು ರಕ್ಷಿಸುತ್ತಾನೆ ಎಂದು ಭ್ರಮಿಸಿ ಮೈಗೆ ಬೆಂಕಿ ಹಚ್ಚಿಕೊಂಡು 'ಶಕ್ತಿಮಾನ್' ಬರಮಾಡಿಕೊಳ್ಳಲು ಕೂಗಾಡಿ ಕೊನೆಗೆ ಆಸ್ಪತ್ರೆಯಲ್ಲಿ ಅಸುನೀಗಿದಳು.

ಇತ್ತೀಚಿನ ದಿನಗಳಲ್ಲಿ ಇಂತಹ ಕರುಣಾಜನಕ ಸುದ್ದಿಗಳನ್ನು ನಾವು ಓದುತ್ತಿದ್ದೇವೆ. ಈ ಪರಿಯ ಅನಾಹುತಗಳು ಏಕೆ ಸಂಭವಿಸುತ್ತಿವೆ? ನಿಜಕ್ಕೂ ಟಿ.ವಿ. ಇಂದು ಅಂತಹ ಒಂದು ಅನಾಹುತಕಾರಿ 'ಪೆಟ್ಟಿಗೆ'ಯಾಗಿ ನಮ್ಮ ಮನೆಗಳನ್ನು ಹೊಕ್ಕಿದೆಯೆ? ಈ 'ಶಕ್ತಿಮಾನ್' ನಂತಹ ಕಾರ್ಯಕ್ರಮಗಳು ದೂರದರ್ಶನದಲ್ಲಿ ಬರುತ್ತಿರುವುದೇ ಒಂದು ದುರಂತವೆ? ಏಕೆಂದರೆ ಯಾವ ಒಂದು ಚಾನಲ್ ಕೂಡ ಕನಸಿನಲ್ಲಿಯೂ ನಂಬಲಾಗದ ನೋಡುಗರ ಸಂಖ್ಯೆ ಇಂದು ದೂರದರ್ಶನಕ್ಕಿದೆ. ಇತರೆ ಚಾನಲ್‌ಗಳಿಗೆ 20 ರಿಂದ 25 ಮಿಲಿಯನ್ ನೋಡುಗರು ಇದ್ದರೆ, ದೂರದರ್ಶನವೊಂದಕ್ಕೆ ಸುಮಾರು 300 ಮಿಲಿಯನ್‌ನಷ್ಟು ನೋಡುಗರ ಸಂಖ್ಯೆ ಇದೆ. ಅಂದರೆ ಸರಿ ಸುಮಾರು ದೇಶದ



ಮೂಲೆ ಮೂಲೆಗಳಲ್ಲಿ ನೋಡುಗರಿದ್ದಾರೆಂದಾಯಿತು. ಇದೇ 'ಶಕ್ತಿಮಾನ್' ಧಾರಾವಾಹಿಯ ಜನಪ್ರಿಯತೆಗೆ ಕಾರಣ. ಈ ಜನಪ್ರಿಯತೆಯೇ ಇಂದು ಇದಕ್ಕೆ ಮುಳುವಾಗಿದೆಯೆ?

ಈ ದೇಶದಲ್ಲಿ ಟಿ.ವಿ. ಕಾರ್ಯಕ್ರಮ ನೋಡುವಿಕೆ ನಮ್ಮ ಬದುಕಿನ ಒಂದು ಅವಿಭಾಜ್ಯ ಅಂಗವಾಗಿಹೋಗಿದೆ. ಮಕ್ಕಳಿಂದ ಹಿಡಿದು ಮುದುಕರವರೆಗೆ ಎಲ್ಲರನ್ನೂ ಇದು ಗಾಢವಾಗಿ ಆಮರಿಕೊಂಡಿದೆ. ಕೆಲಸಕ್ಕೆ ಹೋಗುವ ತಂದೆ ತಾಯಿಗಳಿಗೆ ಟಿ.ವಿ. ಮಕ್ಕಳ ''ಬೇಬಿ ಸಿಟ್ಟಿಂಗ್'' ಆಗಿದ್ದರೆ, ಪಿಂಚಣಿ ಪಡೆಯುತ್ತಿರುವ ಅಜ್ಜ-ಅಜ್ಜಿಯರಿಗೆ ಸಮಯ ಕೊಲ್ಲುವ ಸಾಧನವಾಗಿ ಮಾರ್ಪಟ್ಟಿದೆ ಟಿ.ವಿ. ಇದು ನಮ್ಮೆಲ್ಲರ ಒಂದು 'ಮಿತ್ರ ಸೈತಾನ'.

ಆದರೆ ಈ ಸಾಧನದ ಸಾಧಕ-ಬಾಧಕಗಳಿಗೆ ನಾವು ತಯಾರಾಗಿದ್ದೇವೆಯೇ? ಟಿ.ವಿ. ನಮ್ಮ ದೇಶಕ್ಕೆ ಬಂದು ದಶಕಗಳೇ ಕಳೆದಿದ್ದರೂ ಇಂದು ಕೂಡಾ ಇದರ ಕುತೂಹಲ ಕಡಿಮೆಯಾಗಿಲ್ಲ. ಹಾಗಾಗಿ ಟಿವಿ ನಮಗೆಲ್ಲಾ ಒಂದು ರೀತಿಯ ಅಯಾಸ್ಕಾಂತ. ರೇಡಿಯೋ ಬರೇ ಕಿವಿಗೆ ಮಾತ್ರ ತಂಪನ್ನೆರೆಯುತ್ತಿತ್ತು. ಆದರೆ ಟಿವಿ ಕಿವಿಗಲ್ಲದೆ ಕಣ್ಣಿಗೂ ಖುಷಿ ಕೊಡುವುದರಿಂದ ಈ ಸಾಧನದಿಂದ ತಪ್ಪಿಸಿಕೊಳ್ಳುವುದು ಅಷ್ಟು ಸುಲಭವಲ್ಲ.


'ಕಣ್ಣಿನಿಂದ ನೋಡುವುದನ್ನು ಮಾತ್ರ

ನಂಬಲು ಸಾಧ್ಯ.' ಈ ಹೇಳಿಕೆಯು ಟಿವಿ ಕಾರ್ಯಕ್ರಮಗಳ ಮಟ್ಟಿಗೆ ಅಕ್ಷರಶಃ ನಿಜ. ಆದರಲ್ಲೂ ಈ ನೋಡುಗರು ಮಕ್ಕಳಾಗಿದ್ದರಂತೂ ಈ ಹೇಳಿಕೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ಹಾಗಾಗಿ 'ಶಕ್ತಿಮಾನ್' ಅಂತಹ ಟಿವಿ ಧಾರಾವಾಹಿಗಳು ಇಂದು ಮಕ್ಕಳ ಮೇಲೆ ಗಾಢ ಪರಿಣಾಮ ಬೀರಲು ಸಾಧ್ಯವಾಗಿದೆ.

ಮಹಾಭಾರತದ ಟಿವಿ ಧಾರಾವಾಹಿಯಲ್ಲಿ 'ಭೀಷ್ಮ'ನಾಗಿ 'ಪಿತಾಶ್ರೀ' ಆಗಿ ಎಲ್ಲರ ಮನಸ್ಸನ್ನು ಗೆದ್ದಿದ್ದ, ಒಂದು ಕಾಲದಲ್ಲಿ ಅತ್ಯಂತ ಜನಪ್ರಿಯರಾಗಿದ್ದ ಮುಖೇಶ್ ಖನ್ನಾ 'ಶಕ್ತಿಮಾನ್' ಧಾರಾವಾಹಿಯ ನಾಯಕ - ಅಂದರೆ ಈತನೇ ಶಕ್ತಿಮಾನ್. ಈತನ ಕಟ್ಟುಮಸ್ತಾದ ದೇಹ, ಆರು ಅಡಿ ಎತ್ತರದ ನಿಲುವು, ಗಡಸು ಮುಖ ಮತ್ತು ಅತ್ಯಂತ ಗಾಢವಾಗಿ ಪ್ರಭಾವ ಬೀರುವ ಗಡಸು ಧ್ವನಿ- ಈ ಎಲ್ಲಾ ಅಂಶಗಳು ಈತ ನಿರ್ವಹಿಸುತ್ತಿರುವ ಈ 'ಅದೃಶ್ಯ ವ್ಯಕ್ತಿ' 'ಶಕ್ತಿಮಾನ್'ಗಾಗಿ ಮಾಡಿಸಿಟ್ಟಹಾಗಿದೆ. ಮಕ್ಕಳ ಎಳೆಯ ಮನಸ್ಸಿನ ಮೇಲೆ ಪ್ರಭಾವ ಬೀರಲು ಇಷ್ಟು ಸಾಕು. ಖನ್ನಾರ ವರ್ಣರಂಜಿತ ಉಡುಪುಗಳು ಸಹ ಅವರನ್ನು ಮಕ್ಕಳ ಮನಸ್ಸಿನಲ್ಲಿ ಆರಾಧ್ಯ ದೈವವನ್ನಾಗಿಸಿವೆ.

ಇದೇ 'ಶಕ್ತಿಮಾನ್' ಒಂದು ಪಕ್ಷ ಒಬ್ಬ ಹುಡುಗನಾಗಿದ್ದರೆ ಬಹುಶಃ ಇಂತಹ ಒಂದು ದುರಂತ ಸಂಭವಿಸುತ್ತಿರಲಿಲ್ಲವೇನೋ? ಏಕೆಂದರೆ ಮಕ್ಕಳು ಬಹಳ ಬೇಗನೆ ಅಂತಹ ಒಂದು ಪಾತ್ರದ ಜೊತೆ ಗುರುತಿಸಿಕೊಳ್ಳುತ್ತಾರೆ. ನೀವು 'ಗ್ಲೂಕಾನ್-ಡಿ'ಯ ಒಂದು ಜಾಹೀರಾತನ್ನು ಟಿವಿಯಲ್ಲಿ ನೋಡಿರಬಹುದು. ಅಲ್ಲಿ ಒಂದು ಹುಡುಗ ಸೂಪರ್‌ಮ್ಯಾನ್ ಉಡುಪಿನಲ್ಲಿ ಹಾರಿಬಂದು ತುಂಬಾ ದಣಿದಿರುವಂತೆ ಕಾಣುವ ಡಬ್ಬಲ್‌ಡೆಕ್ಕರ್ ಬಸ್ಸಿನ ಚಾಲಕನಿಗೆ ಗ್ಲೂಕಾನ್-ಡಿ ಕೊಡುತ್ತಾನೆ. ಅದನ್ನು ಕುಡಿದ ಚಾಲಕ ಗೆಲುಮುಖದಲ್ಲಿ ಬಸ್ಸನ್ನು ಓಡಿಸಿಕೊಂಡು ಹೋಗುತ್ತಾನೆ. (ನಿಮಗೆ ನೆನಪಿರಬಹುದು, ಇಷ್ಟೆಲ್ಲಾ ನಡೆಯುವುದು ರಸ್ತೆಯ ಮಧ್ಯದಲ್ಲಿ - ದಟ್ಟವಾದ ವಾಹನಗಳ ಓಡಾಟದ ನಡುವೆ). ಹಾರಿ ಬಂದು ಈ ಹುಡುಗ ಹಾಗೇ ಹಾರಿ ಹೋಗುತ್ತಾನೆ. ಈ ಜಾಹೀರಾತು ಎಷ್ಟು ಬಾರಿ ದೂರದರ್ಶನದಲ್ಲಿ ತೋರಿಸಿದ್ದರೂ ಎಲ್ಲಿಯೂ ಯಾವುದೇ ರೀತಿಯ ಅಹಿತಕರ ಘಟನೆ ನಡೆದ ವರದಿ ಪತ್ರಿಕೆಗಳಲ್ಲಿ ಕಂಡಿಲ್ಲ.

ಆದರೆ ಹಾಗೆಯೇ ಈ 'ತಂಮ್ಸ್‌ಅಪ್' ಜಾಹೀರಾತನ್ನು ನೋಡಿ. ಈ ಜಾಹೀರಾತಿನಲ್ಲಿ ಬೂಗೀ ಜಂಪ್ (ಎರಡು ಕಾಲಿಗೆ ಒಂದು ಮಾದರಿಯ ಹಗ್ಗವನ್ನು ಕಟ್ಟಿಕೊಂಡು ಹಲವಾರು ಅಡಿ ಎತ್ತರದಿಂದ ಕೆಳಗೆ ಹಾರಿ ಅದೇ ರಭಸದಿಂದ ಮತ್ತೆ ಮೇಲೆ ಜಿಗಿಯುವುದು) ಮಾಡಿ ರಸ್ತೆಯಲ್ಲಿ ಹೋಗುತ್ತಿರುವ ವಾಹನದಿಂದ ಈ ಪಾನೀಯವನ್ನು ಮೇಲೆ ಎತ್ತುವುದನ್ನು ತೋರಿಸಿದಾಗ



ಮಕ್ಕಳು ಈ ರೀತಿ ಮಾಡಲು ಹೋಗಿ ಪ್ರಾಣ ಕಳೆದುಕೊಂಡ ಘಟನೆಗಳು ಪತ್ರಿಕೆಗಳಲ್ಲಿ ವರದಿಯಾದಾಗ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದ ಇಂತಹ ಜಾಹೀರಾತನ್ನು ದೂರದರ್ಶನದವರು ಬಲವಂತವಾಗಿ ನಿಲ್ಲಿಸಬೇಕಾಯಿತು.

ಈ ಮೇಲೆ ತಿಳಿಸಿದ ಎರಡು ಉದಾಹರಣೆಗಳನ್ನು ನೋಡಿದಾಗ ಸಂವಹನ ತಜ್ಞ ಮತ್ತು ಸಂಶೋಧಕ ವಿಲ್‌ಬರ್ ಶ್ರಾಮ್ ಅವರು ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ: ''ಮಕ್ಕಳು ಯಾವಾಗಲೂ ದೊಡ್ಡವರು ಮಾಡುವ ಕೆಲಸಗಳನ್ನು ಮಾಡಲು ಬಯಸುತ್ತಾರೆ. ಆದರೆ ಅವರ ವಯಸ್ಸಿನವರೇ ಮಾಡುವ ಕೆಲಸಗಳನ್ನು ಮಾಡಲು ಬಯಸುವುದಿಲ್ಲ. ಏಕೆಂದರೆ ಹುಡುಗನಾಗಿ ನಾನು ಮಾಡಲಾಗದಿದ್ದನ್ನು ಇನ್ನೊಬ್ಬ ಅದೇ ವಯಸ್ಸಿನ ಹುಡುಗ ಹೇಗೆ ಮಾಡಲು ಸಾಧ್ಯ ಎನ್ನುವುದು ಮಕ್ಕಳ ವಾದ'' ಎನ್ನುತ್ತಾರೆ ವಿಲ್‌ಬರ್ ಶ್ರಾಮ್. 'ಶಕ್ತಿಮಾನ್', 'ಬೂಗೀ ಜಂಪಿಂಗ್' ಅಂತಹ ಉದಾಹರಣೆಯೊಂದಿಗೆ ಗ್ಲೂಕಾನ್-ಡಿ ಅಂತಹ ಉದಾಹರಣೆಗಳನ್ನು ವಿಮರ್ಶಿಸಿದಾಗ ಈ ಸಂಶೋಧಕರ ಮಾತು ಸತ್ಯವೆನ್ನಿಸುತ್ತದೆ. ಮಕ್ಕಳು ಅನುಕರಿಸುವುದು ದೊಡ್ಡವರು ಮಾಡುವುದನ್ನು, ತಮ್ಮ ವಯಸ್ಸಿನವರೇ ಮಾಡುವುದನ್ನಲ್ಲ.

ಮಕ್ಕಳು ಯಾವಾಗಲೂ 'ಅನುಕರಣೆಯ ಮಾದರಿ' ಒಂದನ್ನು ಹುಡುಕುತ್ತಿರುತ್ತಾರೆ. ಶಕ್ತಿಮಾನ್ ಮಕ್ಕಳಿಗೆ ಒಬ್ಬ ಮಾದರಿ ವ್ಯಕ್ತಿಯಾಗಿ ಕಂಡಿರುವುದು ಮಕ್ಕಳ ತಪ್ಪಲ್ಲ. ಮಕ್ಕಳಿಗೆ ಭ್ರಮೆ ಮತ್ತು ವಾಸ್ತವಿಕತೆಯ ಅರಿವು ಬಹಳ ಕಡಿಮೆ. ಮಿಥ್ಯ ಮತ್ತು ಸತ್ಯಗಳ ಅಂತರ ಅವರಿಗೆ ಕಾಣುವುದಿಲ್ಲ. ದೊಡ್ಡವರ ತರಹ ಅವರು ಒಂದು ವಿಷಯವನ್ನು ಜಟಿಲ ಸನ್ನಿವೇಶದಲ್ಲಿ ನೋಡಲು ಬಯಸುವುದಿಲ್ಲ. ಅವರಿಗೆ ಎಲ್ಲವೂ ತಿಳಿಯಾಗಿ ಕಾಣಿಸುತ್ತದೆ. ಇದ್ದದ್ದು ಇದ್ದ ಹಾಗೇ ಕಾಣಿಸುತ್ತದೆ. ಆದ್ದರಿಂದ 'ಶಕ್ತಿಮಾನ್'ನ ದೃಶ್ಯ-ಅದೃಶ್ಯ ಕಣ್ಣ ಮುಂದೆಯೇ ನಡೆಯುವ ಸಾಮಾನ್ಯ ತಿಳಿಯಾದ ವಿಷಯ. ಹಾಗಾಗಿ ಮಕ್ಕಳು ಅದನ್ನು ಅನುಕರಿಸುತ್ತಾರೆ. ಅನುಕರಿಸುವುದು ಮಕ್ಕಳ ಒಂದು ಸ್ವಾಭಾವಿಕ ಪ್ರಕ್ರಿಯೆ.

'ಶಕ್ತಿಮಾನ್' ಧಾರಾವಾಹಿಯನ್ನು ಲಕ್ಷಾಂತರ ವೀಕ್ಷಕರು ನೋಡಿದ್ದಾರೆ. ಅಂತಹವರಲ್ಲಿ ನಮಗೆ ಸಿಕ್ಕಿರುವ ದುರಂತದಲ್ಲಿ ಕೊನೆಗೊಂಡಿರುವ ಉದಾಹರಣೆಗಳು ಬೆರಳೆಣಿಕೆಯಷ್ಟು ಮಾತ್ರ. ಇದೂ ಕೂಡ

ಖಂಡಿತಾ ಸಂಭವಿಸಬಾರದಿತ್ತು. ಆದರೆ ಸಂಭವಿಸಿದೆ. ಇದಕ್ಕೆ ಕಾರಣವನ್ನು ಹುಡುಕಬೇಕಾಗಿದೆ ಮತ್ತು ಒಂದು ಖಾಯಂ ಉತ್ತರವನ್ನು ಕಂಡುಕೊಳ್ಳಬೇಕಿದೆ.

ಮೊದಲು ಹೇಳಿದ ಲಕ್ಷ್ಮಿಯಾಗಲಿ, ವರ್ಷಾ ಕುಲಕರ್ಣಿಯಾಗಲಿ ಅಥವಾ ಪದ್ಮರಾಮ್ ಮಗನಾಗಲಿ, ಇವರೆಲ್ಲಾ ಅತ್ಯಂತ ಸಾಮಾನ್ಯ ವರ್ಗದಿಂದ ಬಂದಿರುವವರು. ಒಬ್ಬ ದಿನಸಿ ವ್ಯಾಪಾರಿಯಾದರೆ, ಮತ್ತೊಬ್ಬ ಕ್ಷೌರಿಕ, ಮಗದೊಬ್ಬ ಗಾರ್ಡ್. ಅಂದರೆ ಅಪ್ಪಂದಿರಾಗಿ ಇವರು ಮಕ್ಕಳಿಗೆ ಯಾವ ಕಾರ್ಯಕ್ರಮ ನೋಡಬೇಕು, ಯಾವ ಕಾರ್ಯಕ್ರಮ ನೋಡಬಾರದು ಎಂದು ತಿಳಿಹೇಳುವಷ್ಟು ವ್ಯವಧಾನವಾಗಲಿ, ಅಂತಹ ಶಿಕ್ಷಣವಾಗಲಿ, ಆ ಹಿನ್ನೆಲೆಯಾಗಲಿ ಇರದವರು. ವಿಠಲ್ ಕುಲಕರ್ಣಿಯವರಿಗೆ ಅವರ ಮಗಳು ಸತ್ತ ಮೇಲೆಯೇ 'ಶಕ್ತಿಮಾನ್' ಅಂತಹ ಒಂದು ಕಾರ್ಯಕ್ರಮ ದೂರದರ್ಶನದಲ್ಲಿ ಬರುತ್ತಿರುವುದು ಗೊತ್ತಾಯಿತಂತೆ! ಇಂತಹ ಮುಗ್ಧ ತಂದೆ-ತಾಯಿಗಳು ಮಕ್ಕಳಿಗೆ ಏನು ತಾನೆ ಹೇಳಿ ಕೊಡಲು ಸಾಧ್ಯ? ಆದರೆ ಒಂದಂತು ಸತ್ಯ. ಇನ್ನು ಮುಂದೆ ಇಂತಹ ಅನಾಹುತಗಳನ್ನು ತಡೆಯಬೇಕಾದರೆ ಮೊದಲು ತಂದೆ-ತಾಯಿಗಳಿಗೆ ಶಿಕ್ಷಣ ನೀಡಬೇಕಾಗುತ್ತದೆ.

ಅಂದರೆ ಟಿವಿ ಕಾರ್ಯಕ್ರಮವನ್ನು ನಿರ್ಮಿಸುವವರು, ಶಿಕ್ಷಣ ತಜ್ಞರು, ಸಂಹವನ ತಜ್ಞರು ಇಂದು ಶೀಘ್ರವಾಗಿ ಈ ಸಮಸ್ಯೆ ಕಡೆ ಗಮನ ಹರಿಸಬೇಕಾಗಿದೆ. ಟೆಲಿವಿಷನ್ ನಂತಹ ಒಂದು ಪ್ರಭಾವಿ ಮಾಧ್ಯಮವನ್ನು ಹೇಗೆ ಬಳಸಿಕೊಳ್ಳಬೇಕಾಗಿದೆ ಎನ್ನುವುದನ್ನು ವಿಚಾರ ಮಾಡಬೇಕಿದೆ. ನಾವು ಅದಷ್ಟು ಬೇಗ ಈ ಕಡೆ ಗಮನ ಹರಿಸದಿದ್ದರೆ, ಕೇವಲ ಶೇ.39ರಷ್ಟು ಅಕ್ಷರ ಜ್ಞಾನ ಇರುವ ನಮ್ಮಂತಹ ದೇಶಕ್ಕೆ ಟಿವಿ ಮಾಧ್ಯಮ ಒಂದು ಭಯಂಕರ ಸ್ವಪ್ನವಾಗುವ ಸಾಧ್ಯತೆ ಇದೆ.

'ಶಕ್ತಿಮಾನ್'ನಂತಹ ಕಾರ್ಯಕ್ರಮಗಳನ್ನಾಗಲಿ ಅಥವಾ ಇಂತಹ ಯಾವುದೇ ಕಾರ್ಯಕ್ರಮಗಳನ್ನಾಗಲಿ ಟಿವಿಯಿಂದ ಪೂರ್ತಿ ಹೊರದೂಡುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸುತ್ತೇವೆಂದುಕೊಂಡರೆ 'ನೆಗಡಿಯಾದವನಿಗೆ ಮೂಗು ಕತ್ತರಿಸಿಕೊ' ಎಂದು ಹೇಳುವಷ್ಟು ಮೂರ್ಖತನವಾಗುತ್ತದೆ. ತಜ್ಞರು ಮಾಡಬೇಕಾದ ಮೊದಲ ಕೆಲಸವೆಂದರೆ ತಂದೆ ತಾಯಿಯರ, ಅದರಲ್ಲೂ, ಸ್ಲಮ್‌ಗಳಲ್ಲಿರುವ, ಹಳ್ಳಿಗಾಡಿನಲ್ಲಿರುವ, ಸಣ್ಣಪುಟ್ಟ ನಗರಗಳಲ್ಲಿ ಇರುವವರಿಗೆ ಟಿವಿ ಕಾರ್ಯಕ್ರಮಗಳ ಸಾಧಕ-ಬಾಧಕಗಳ ಬಗ್ಗೆ ಶಿಕ್ಷಣ ಕೊಡಬೇಕಿದೆ.

ಕಿವಿ ಮಾತು

■ ದಾಳಿಂಬೆ ಹಣ್ಣಿನ ದಿಂಡನ್ನು ಬೇಯಿಸಿ ಕಷಾಯ ತಯಾರಿಸಿ, ಆ ಕಷಾಯಕ್ಕೆ ಉಪ್ಪು ಸೇರಿಸಿ, ಹಲವು ಸಲ ಬಾಯಿ ಮುಕ್ಕಳಿಸಿದರೆ ಬಾಯಿ ಹುಣ್ಣು ಗುಣವಾಗುವುದು.

■ ಬಾಯಿಹುಣ್ಣಿರುವಾಗ ನುಗ್ಗೇಕಾಯಿ ಸೇವನೆ ಹಿತಕಾರಿ.

■ ಗೋರಂಟಿ ಬೇರಿನ ಕಷಾಯ ಮಾಡಿ ಬಾಯಿ ಮುಕ್ಕಳಿಸುವುದರಿಂದ ಬಾಯಿಹುಣ್ಣು ನೀಗುತ್ತದೆ.

■ ಸ್ವಲ್ಪ ಅಗಸೆ ಸೊಪ್ಪನ್ನು ಬಿಡಿಸಿ, ಸ್ವಲ್ಪ ನೀರು ಬೆರೆಸಿ, ಒಲೆಯ ಮೇಲಿಡಬೇಕು. ಸ್ವಲ್ಪ ಸಮಯದ ಬಳಿಕ ಸೊಪ್ಪು ಬೆಂದು, ಅದರ ಸಾರಾಂಶ ನೀರಿನಲ್ಲಿ ಬೆರೆತಿರುವುದು. ಅದರಲ್ಲಿ ಸಣ್ಣ ಈರುಳ್ಳಿಯನ್ನು ಹೆಚ್ಚಿ ಹಾಕಿ, ಮೆಣಸು ಮತ್ತು ಜೀರಿಗೆ, ಸ್ವಲ್ಪ ಉಪ್ಪನ್ನು ಪುಡಿ ಮಾಡಿ ಹಾಕಿ, ಸ್ವಲ್ಪ ಒಳ್ಳೆಣ್ಣೆಯನ್ನು ಕಾಯಿಸಿ ಅದರಲ್ಲಿ ಹಾಕಿ ಬೆಳಗಾಗೆದ್ದು ಬರೀ ಹೊಟ್ಟೆಯಲ್ಲಿ ಸೇವಿಸಿದರೆ ಬಾಯಿಹುಣ್ಣು ನೀಗುತ್ತದೆ.

■ ಹುಣಸೆ ಎಲೆಯಿಂದ ಕಷಾಯ ತಯಾರಿಸಿ, ಆ ಕಷಾಯದಿಂದ ಬಾಯಿ ಮುಕ್ಕಳಿಸುತ್ತಾ ಬಂದರೆ ಬಾಯಿ ಹುಣ್ಣು ಗುಣವಾಗುತ್ತದೆ.

■ ಬಡೇ ಸೊಂಪನ್ನು ಅಗಿದು ತಿಂದರೆ ಬಾಯಲ್ಲಿನ ಗುಳ್ಳೆಗಳು ನೀಗುವುವು.

ಅವರನ್ನು ತಿದ್ದಿತೀಡದ ಹೊರತು ಮಕ್ಕಳನ್ನೂ ತಿದ್ದಲು ಸಾಧ್ಯವಿಲ್ಲ. ಇದನ್ನು ಮಾಡದ ಹೊರತು 'ಶಕ್ತಿಮಾನ್'ನಂತಹ ಕಾರ್ಯಕ್ರಮಗಳನ್ನು ದೂರುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ.

'ಶಕ್ತಿಮಾನ್' ಧಾರಾವಾಹಿಯಿಂದ ನಡೆದ ಅನಾಹುತಗಳು ಒಂದಾದರೆ, ಇದೇ 'ಶಕ್ತಿಮಾನ್' ಧಾರಾವಾಹಿಯಿಂದ ಈ ಸಮಾಜಕ್ಕೆ ಒಳ್ಳೆಯದು ಕೂಡ ಆಗಿದೆ. ಇದು ಇಂತಹ ಧಾರಾವಾಹಿಯ ವಿಪರ್ಯಾಸವಿರಬಹುದು. ಆದರೆ ಇದು ನಿಜ. ಯಾವುದೇ ಸರಕಾರ ಉಗ್ರಗಾಮಿಗಳಿಂದ ಕೂಡಿರುವ ಕಾಶ್ಮೀರದಲ್ಲಿ ಯುವಕರನ್ನು-ಮಕ್ಕಳನ್ನು ಬೇರೆಡೆಗೆ ಸೆಳೆಯಲಾಗದಿರುವುದನ್ನು 'ಶಕ್ತಿಮಾನ್'ನಂತಹ ಕಾರ್ಯಕ್ರಮಗಳು ಮಾಡಿ ತೋರಿಸಿವೆ. ಇವತ್ತು ಶಕ್ತಿಮಾನ್ ಧಾರಾವಾಹಿ ಅತ್ಯಂತ ಜನಪ್ರಿಯ ಧಾರಾವಾಹಿಯಾಗಿ ಪ್ರಸಾರವಾಗುತ್ತಿದೆ. ಅಲ್ಲದೆ ಈ ಧಾರಾವಾಹಿ ಯುವಕರನ್ನು-ಮಕ್ಕಳನ್ನು ಹಿಂಸಾಚಾರದಿಂದ ಬೇರೆಡೆಗೆ ಸೆಳೆಯಲು ಒಂದು ಸಾಧನವಾಗಿ ಪರಿಣಮಿಸಿದೆ ಮತ್ತು ಅಲ್ಲಿ ತಂದೆ-ತಾಯಂದಿರು ನಿರಾಳವಾಗಿ ಉಸಿರಾಡುವಂತೆ ಮಾಡಿದೆ.

ದೇಶದ ಬೇರೆ ಬೇರೆ ಭಾಗಗಳಲ್ಲಿ ಮಕ್ಕಳು ಆಟವಾಡಲು ಗೊಂಬೆ ಇತ್ಯಾದಿಗಳನ್ನು ತಮ್ಮ ತಂದೆ ತಾಯಿಗಳಿಂದ ಕೇಳಿದರೆ, ಕಾಶ್ಮೀರದ ಮಕ್ಕಳ ಕೋರಿಕೆಯೇ ಬೇರೆ ರೀತಿಯದು. ಇಲ್ಲಿ ಉಗ್ರಗಾಮಿಗಳ ಛಾಪು ಮಕ್ಕಳ ಮೇಲೆ ಎಷ್ಟಿದೆಯೆಂದರೆ, ಮಕ್ಕಳು ಆಟಕ್ಕೆ ಬಳಸುವುದು ಎಕೆ-47 ಅಥವಾ ಕಲಾಶ್ನಿಕೋವ್ ಮಾದರಿಯ ಗನ್ನುಗಳನ್ನು ಮಾತ್ರ!! ಇಲ್ಲಿಯ ಮಕ್ಕಳಿಗೆ ಈ ರೀತಿಯ ಆಟದ ಸಾಮಾನು ಅತ್ಯಂತ ಪ್ರಿಯವಾದುದು. ಈದ್ ಹಬ್ಬ ಬಂತೆಂದರೆ ಮಕ್ಕಳು ಈ ಮಾದರಿಯ ಗನ್ನುಗಳನ್ನು ಕೊಳ್ಳಲು ತಂದೆ-ತಾಯಂದಿರಿಗೆ ದುಂಬಾಲು ಬೀಳುತ್ತಾರೆ. ಈ ರೀತಿಯ ಗನ್ನುಗಳನ್ನು ಕೊಡಿಸುವುದರಿಂದ ಮಕ್ಕಳ ಮೇಲೆ ಆಗುವ ಪರಿಣಾಮ ಎಂತಹುದು ಎಂದು ಗೊತ್ತಿದ್ದರೂ ಇಲ್ಲಿ ತಂದೆ-ತಾಯಂದಿರು ನಿರುಪಾಯರು. ಆದರೆ ಈ ಸಲದ ಈದ್ ಹಬ್ಬಕ್ಕೆ ಮಕ್ಕಳ ಕೋರಿಕೆ ತಂದೆ ತಾಯಂದಿರಿಗೆ ಆಶ್ಚರ್ಯ ಮತ್ತು ಸಂತೋಷವನ್ನುಂಟು ಮಾಡಿತ್ತು. ಕಾರಣ ಮಕ್ಕಳು ಈ ಹಬ್ಬಕ್ಕೆ ಕೇಳಿದ್ದು 'ಶಕ್ತಿಮಾನ್' ಧಾರಾವಾಹಿಯಲ್ಲಿ ಮುಖೇಶ್ ಖನ್ನಾ ಉಡುವ ರಠಿಗು ರಂಗಿನ ಉಡುಪನ್ನು!! ಮತ್ತು ಮಸೀದಿಗೆ ಹೋಗುವ ಮುನ್ನ ಮಾಮೂಲಿ ಮುಸ್ಲಿಂ ಉಡುಪನ್ನು ತ್ಯಜಿಸಿ ಶಕ್ತಿಮಾನ್ ಉಡುಪನ್ನು ಮಾತ್ರ ಧರಿಸಿಕೊಂಡು ಮಸೀದಿಗೆ ಬರುವುದಾಗಿ ಮಕ್ಕಳು ಪಟ್ಟು ಹಿಡಿದದ್ದು ಬಹುಶಃ ಈ ಧಾರಾವಾಹಿಯ ಸ್ವಾಗತಾರ್ಹ ಪರಿಣಾಮ ಎನಿಸುತ್ತದೆ.

ಈ ಉಡುಪಿನ ಹಾವಳಿ ಎಷ್ಟಿತ್ತೆಂದರೆ ಕಾರ್ಯಕ್ರಮದ ಕೊನೆಯಲ್ಲಿ ನಿರ್ಮಾಪಕರು ಟಿವಿ ಪರದೆ ಮೇಲೆ ಈ ಉಡುಪು ಸಿಗುವ ಅಂಗಡಿಗಳ ಬಗ್ಗೆ ಮಾಹಿತಿ ಕೊಡಬೇಕಾಗುತ್ತಿತ್ತು.

ಈ ಉದಾಹರಣೆ ಮತ್ತು ಈ ಲೇಖನದ ಮೊದಲಲ್ಲೇ ಹೇಳಿದ ಉದಾಹರಣೆಗಳು 'ಶಕ್ತಿಮಾನ್'ನಂತಹ ಕಾರ್ಯಕ್ರಮಗಳನ್ನು ಯಾವ ರೀತಿ ಸಮಾಜದ ಒಳಿತಿಗೆ ಬಳಸಿಕೊಳ್ಳಬಹುದು ಎಂಬ ಬಗ್ಗೆ ತಜ್ಞರು ತೀರ್ಮಾನಿಸಬೇಕಾದ ಘಳಿಗೆ ಈಗ ಬಂದಿದೆ ಎನ್ನುವುದನ್ನು ಸಾಬೀತು ಪಡಿಸುತ್ತವೆ. ■

ಸಂವೇದನೆ

■ ಎಂ. ಎಸ್. ಮೂರ್ತಿ


'ವಿನ್ಯಾಸ', ನಂ. 132, 1ನೇ ಮಹಡಿ, ಗಾಂಧಿ ಬಜಾರ್ ಸರ್ಕಲ್, ಬಸವನಗುಡಿ, ಬೆಂಗಳೂರು-4.

ಅಳಿಸಲಾಗದ ದೇಸೀ ನಗು

ಎಪ್ಪತ್ತರ ದಶಕದಲ್ಲಿ ನಮಗಿದ್ದ ಸಾಹಿತ್ಯಾಸಕ್ತಿ ಈವತ್ತಿನ ಮಕ್ಕಳಿಗಿರುವ ಟಿ.ವಿ. ಆಕರ್ಷಣೆಗಿಂತಲೂ ಒಂದು ಪಟ್ಟು ಹೆಚ್ಚೇ ಎನ್ನಬಹುದು. ಬಹುಶಃ ಆಗ ಟಿ.ವಿ. ಇಲ್ಲದ ಕಾರಣವಿರಬಹುದು ಅಥವಾ ನಮಗೇ ಸಾಹಿತ್ಯದ ಬಗ್ಗೆ ಅಷ್ಟೊಂದು ಪ್ರಾಮಾಣಿಕವಾದ ಆಸಕ್ತಿ ಇದ್ದಿರಬಹುದು. ಅಂತೂ ಆಗಿನ ಸಾವಿರಾರು ಸಾಹಿತ್ಯಾಸಕ್ತರಲ್ಲಿ ನಾನೂ ಒಬ್ಬನಾಗಿದ್ದೆ.

ಕಾರಂತ, ಭೈರಪ್ಪ, ಚಿತ್ತಾಲ, ಕೆ.ಸದಾಶಿವ ಇತ್ಯಾದಿ ಸಾಹಿತಿಗಳೊಂದಿಗೆ ನನ್ನ ಆಸಕ್ತಿ ಕೆರಳಿಸಿದ ಕವಿಗಳೆಂದರೆ ಬೇಂದ್ರೆ, ನರಸಿಂಹಸ್ವಾಮಿ, ಕುವೆಂಪು, ಗಂಗಾಧರ ಚಿತ್ತಾಲ ಮತ್ತು ವಿ.ಸೀತಾರಾಮಯ್ಯ. ವೀಸೀ ಅವರ ಕೃತಿಗಳನ್ನು ಅಷ್ಟಾಗಿ ನಾನು ಓದಿಲ್ಲದಿದ್ದರೂ ಅದು ಹೇಗೋ ಅವರ ಬಗ್ಗೆ ನನ್ನಲ್ಲಿ ಗೌರವ ಭಾವನೆ ಮೂಡಿತ್ತು. ವೀಸೀ ಅವರ ''ಯಮ್ಮ ಮನೆಯಂಗಳದೀ....'' ಚಿತ್ರಗೀತೆ ಆಕಾಶವಾಣಿಯಲ್ಲಿ ಪ್ರಸಾರವಾಗುವ ಮುನ್ನ ಮತ್ತು ನಂತರ ಈ ಗೀತೆಯನ್ನು ರಚಿಸಿದವರು ವೀಸೀ ಎಂದು ಆಕಾಶವಾಣಿ ಉದ್ಘೋಷಕರು ಹೇಳುವಾಗೆಲ್ಲ ನನ್ನ ಕಿವಿ ನೆಟ್ಟಗಾಗುತ್ತಿತ್ತು. ಕಾರಣ ಇಷ್ಟೇ. ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಐದಾರು ದಶಕಗಳಿಂದಲೂ ವಾಸವಾಗಿದ್ದ ನಮಗೆ ಬಡಾವಣೆಯಲ್ಲಿ ವಾಸಿಸುತ್ತಿದ್ದ ಪ್ರಖ್ಯಾತರ ಹೆಸರುಗಳು ಎಲ್ಲಿ ಕಂಡರೂ ಅವರು ನಮ್ಮವರು, ನಮಗೆ ಹತ್ತಿರದವರು ಎಂಬಂತೆ ಮಾತನಾಡಿಕೊಳ್ಳುತ್ತಿದ್ದೆವು. ಆ ಸಂದರ್ಭದಲ್ಲಿ ನನಗೆ ವೀ.ಸೀತಾರಾಮಯ್ಯ ಎಂಬ ಹೆಸರಿನ ಕಪ್ಪು ಬಿಳುಪಿನ ಬೋರ್ಡು ಇದ್ದ ಆ ಮನೆ ಕಣ್ಣ ಮುಂದೆ ಬರುತ್ತಿತ್ತು! ಚಾಮರಾಜಪೇಟೆಯ ರಾಯನ್ ಸರ್ಕಲ್‌ಗೆ ಹತ್ತಿರವಿದ್ದ ಒಂದು ಕಾರ್ನರ್‌ನ ಹಳೆಯ ಕಾಲದ ಕಾಂಪೌಂಡುಮನೆ, ಕಾಂಪೌಂಡಿನ ಮೇಲೆ ಹಬ್ಬಿಸಿದ್ದ ಮಲ್ಲಿಗೆಯ ಬಳ್ಳಿ, ಪುಟ್ಟ ಅಂಗಳದ ನಂತರ ಜಾಲರಿ ಇರುವ ಬಾಗಿಲು, ಅಪ್ಪಟ ದೇಸಿ ವಾತಾವರಣದ ಮನೆ. ಆ ಕಡೆ ಹಾದು ಹೋಗುವಾಗಲೆಲ್ಲಾ ನನಗೆ 'ವೀಸೀ'ಯವರು ಇರಬಹುದು ಒಳಗೆ ಎಂಬ ಕುತೂಹಲ. ಆ ಕಡೆ ಒಮ್ಮೆ ನೋಡಿ ಮುನ್ನಡೆಯುವುದು ಅಭ್ಯಾಸವಾಯಿತು.

ಆಗ ನನಗಿದ್ದ ಆಸಕ್ತಿಗಳು ಅನೇಕ. ಸಾಹಿತ್ಯ, ಸಂಗೀತಗಳಲ್ಲಿ ವಿಶೇಷ ಆಸಕ್ತಿಯಿಂದ ನನ್ನನ್ನು ತೊಡಗಿಸಿಕೊಂಡಿದ್ದೆ. ಜೊತೆಗೆ ನನ್ನದೇ ಅಭಿರುಚಿಗಳನ್ನು ಇಷ್ಟಪಡುವ ಕೆಲ ಸ್ನೇಹಿತರ ಸಾಥೀ ಕೂಡ ಇರಿಸಿಕೊಂಡಿದ್ದೆ. ಅವರೆಲ್ಲರೊಂದಿಗೆ ಹಳೆಯ ಹೊಸ ಪುಸ್ತಕದ ಅಂಗಡಿ, ಸಾಹಿತ್ಯ ಗೋಷ್ಠಿಗಳು, ಸಂಗೀತ ಕಛೇರಿಗಳು, ಸಿನಿಮಾಗಳಿಗೆ ತಪ್ಪದೇ ಹೋಗುತ್ತಿದ್ದೆ. ಕೆಲವೊಮ್ಮೆ ಒಬ್ಬನೇ ಅಷ್ಟಿಷ್ಟು ಉಳಿಸಿದ ಹಣದೊಂದಿಗೆ ಮೆಜೆಸ್ಟಿಕ್‌ಗೆ ನಡೆದು ಹೋಗಿ ಹಳೆಯ ಪುಸ್ತಕದ ಅಂಗಡಿಗಳನ್ನು ಜಾಲಾಡಿ ಒಂದೇ ಪುಸ್ತಕ ಕೊಳ್ಳುವಷ್ಟು ಹಣ ಮಾತ್ರ ಇದ್ದರೂ ಖ್ಯಾತ, ಪ್ರಖ್ಯಾತರ ಎಲ್ಲ ಪುಸ್ತಕಗಳನ್ನು ಬದಿಗಿರಿಸಿ, ಯಾವುದು ಕೊಳ್ಳುವುದು, ಯಾವುದನ್ನು ಬಿಡುವುದು ತಿಳಿಯದೆ ಕೊಳ್ಳಲಾಗದ ಕೆಲವು ಪುಸ್ತಕಗಳ ಕಥೆಗಳನ್ನು ಅಲ್ಲಿಯೇ ನಿಂತು ಓದಿ ಮುಗಿಸುತ್ತಿದ್ದೆ. ಅವುಗಳಲ್ಲಿ ಒಂದೆರಡು ಪುಸ್ತಕ ಆರಿಸಿ ಆ ಒಂದೆರಡರಲ್ಲಿ ಒಂದನ್ನು ಇರುವ ಹಣಕ್ಕೆ ತೂಗಿಸಿ ಹೆಮ್ಮೆಯಿಂದ ಕೊಂಡು ತರುತ್ತಿದ್ದೆ. ಅನೇಕ ಬಾರಿ ಆ ಪುಸ್ತಕಗಳ ರಾಶಿಯಲ್ಲಿ ವೀಸೀಯವರ ಹೆಸರು ಇರುವ ಪುಸ್ತಕಗಳೂ ಕೈಗೆ ಸಿಗುತ್ತಿದ್ದವು. ಕಾವ್ಯಕ್ಕಾಗಿ ಇರುವ ಸ್ವಲ್ಪವೇ ಹಣ ಹಾಕುವುದು ಹೇಗೆ? ಎಂದು ಯೋಚಿಸಿ ಅಲ್ಲಿಯೇ ತಿರುವಿ ಹಾಕಿ ಇವರು ನಮಗೆ ಗೊತ್ತಿರುವವರು ಎಂದುಕೊಂಡು ಪುಸ್ತಕವನ್ನು ಮತ್ತೆ ಮತ್ತೆ ನೋಡಿ ಅಲ್ಲಿಯೇ ಇರಿಸಿ ಕಾರಂತರದ್ದೊ, ಭೈರಪ್ಪನವರದ್ದೊ ಪುಸ್ತಕ ಕೊಂಡು ತರುತ್ತಿದ್ದೆ.




ನಮ್ಮ ಸಾಹಿತ್ಯದ ಆಸಕ್ತಿಯಿಂದ ಆಗಾಗ ನಡೆಯುವ ವಿಚಾರ ಸಂಕಿರಣಗಳು, ಸಾಹಿತ್ಯ ಚರ್ಚೆಗಳಿಗೆ ತಪ್ಪದೇ ಭೇಟಿ ನೀಡಿ 'ಇಡೀ ಕನ್ನಡ ಸಾಹಿತ್ಯ ನಮ್ಮದೇ ಸೊತ್ತು' ಎನ್ನುವಂತೆ ಹೆಮ್ಮೆಯಿಂದ ಕೂತು ಅಲ್ಲಿ ನಡೆದ ಸಾಹಿತ್ಯ ಚರ್ಚೆಯನ್ನು, ಸಾಹಿತಿಗಳ ಅದ್ಭುತವಾದ ವಾಕ್

ಪ್ರವಾಹವನ್ನು ಆನಂದಿಸುತ್ತಿದ್ದೆವು. ಅಂತಹ ಕಮ್ಮಟಗಳಲ್ಲಿ, ಗೋಷ್ಠಿಗಳಲ್ಲಿ ಆಗಾಗ ವೀಸೀ ಅವರ ಹೆಸರು ಬರುತ್ತಿತ್ತು. ಅನೇಕ ಸಾಹಿತಿಗಳಿಗೆ ಅವರು ಗುರುಗಳಾಗಿ, ಸ್ನೇಹಿತರಾಗಿ-ಅವರು ಮಾಡುತ್ತಿದ್ದ ಪಾಠದ ಬಗ್ಗೆ, ಅವರ ನಡಾವಳಿಗಳ ಬಗ್ಗೆ, ಅವರ ಜೀವನ ಶಿಸ್ತನ್ನು ಕುರಿತು, ಆತ್ಮೀಯತೆಯನ್ನು ನೆನಪು ಮಾಡಿಕೊಂಡು ಪ್ರೀತಿಯಿಂದ ಮಾತಾನಾಡುತ್ತಿದ್ದ ಸಾಹಿತಿಗಳ ಮಾತುಗಳನ್ನು ತನ್ಮಯನಾಗಿ ಕೇಳುತ್ತಿದ್ದೆ. ನಾನೂ ಕೂಡ ಅವರ ಶಿಷ್ಯನಾಗದುದಕ್ಕೆ ಬೇಸರವಾಗುತ್ತಿತ್ತು. ಅವರ ಶಿಷ್ಯರ ಆ ಮಾತಿನಿಂದ ನನಗೆ ಒಬ್ಬ ಸಾಹಿತಿಯೂ ಗುರುಗಳಾಗಲಿಲ್ಲವೆಂದೋ ಅಥವಾ ನಮ್ಮ ಗುರುಗಳು ಸಾಹಿತಿಗಳಾಗಿರಲಿಲ್ಲವೆಂತಲೂ ದುಃಖಪಡುತ್ತಿದ್ದೆ.

ನಾನು ಪಿ.ಯು.ಸಿ. ಓದುವ ಸಂದರ್ಭದಲ್ಲಿ ಸುಬ್ಬರಾಯರ ಕಲಾಮಂದಿರಕ್ಕೆ ಆರ್ಟ್ ಡಿಪ್ಲೋಮಾಗೆ ಸೇರಿದ್ದೆ. ಒಬ್ಬರನ್ನು ಎದುರಿಗೆ ಕೂರಿಸಿ ಯಥಾವತ್ತು ಅವರ ಭಾವಚಿತ್ರ ರಚಿಸುವುದೆಂದರೆ ನನಗೆ ಸಂಭ್ರಮ. ಅದರಲ್ಲೂ ಅನೇಕರು ನಾನು ಹಾಗೆ ರಚಿಸಿದ ಕಲಾಕೃತಿಗಳನ್ನು ಇಷ್ಟಪಡುತ್ತಿದ್ದುದು ನನ್ನ ಉತ್ಸಾಹವನ್ನು ಇಮ್ಮಡಿಗೊಳಿಸುತ್ತಿತ್ತು. ಓದುವ ಆಸಕ್ತಿ ಇದ್ದ ನನಗೆ ಮಹಾನ್ ಕಲಾವಿದರ ಜೀವನ ಚರಿತ್ರೆಗಳನ್ನು ಪರೀಕ್ಷೆಗಾಗಿ ಓದಲೇಬೇಕಾದ ಸಂದರ್ಭವನ್ನು ಸರಿಯಾಗಿ ಬಳಸಿಕೊಂಡೆ. ಅನೇಕ ಕಲಾವಿದರು ತಮ್ಮ ಜೀವನಾವಧಿಯಲ್ಲಿ ತಾವು ಮೆಚ್ಚಿದ ವ್ಯಕ್ತಿಗಳ ಭಾವಚಿತ್ರಗಳನ್ನು ರಚಿಸುವ ಪರಿಪಾಠ ಬೆಳೆಸಿಕೊಂಡಿದ್ದರು. ಅಂತಹ ಕಲಾವಿದರಲ್ಲಿ ನಾನು ಗಮನಿಸಿದ ಮುಖ್ಯರೆಂದರೆ ಡಾವಿಂಚಿ, ಮೈಕೆಲೆಂಜೆಲೋ, ರಾಫೆಲ್, ರೆಂಬ್ರಾಂಟ್, ಸೆಜಾನ್, ರೋಡಿನ್ ಮತ್ತು ರಷಿಯಾದ ಇಲ್ಯಾ ರೆಪಿನ್. ಈಗಲೂ ನಮ್ಮ ಅನೇಕ ಕಲಾವಿದರು ತಿಳಿಯದ ರಷಿಯಾದ ಮಹಾನ್ ಕಲಾವಿದ ಇಲ್ಯಾ ರೆಪಿನ್ ಆಗ ನನಗೆ ಹೆಚ್ಚು ಕುತೂಹಲ ಕೆರಳಿಸಿದ ಕಲಾವಿದ. ರೆಪಿನ್-87 ವರ್ಷದ ತನ್ನ ಜೀವಿತದ ಅವಧಿಯಲ್ಲಿ ಅನೇಕ ಅದ್ಭುತ ಕಲಾಕೃತಿಗಳನ್ನು ರಚಿಸಿದ್ದಾನೆ. ಆ ಕೃತಿಗಳು ಕೇವಲ ಕೃತಿಗಳಲ್ಲ ಅಥವಾ ವ್ಯಕ್ತಿಗಳ ಭಾವಚಿತ್ರಗಳೂ ಅಲ್ಲ. ಮನುಷ್ಯನ ವಿಭಿನ್ನ ಅಂತರಿಕ ವ್ಯಕ್ತಿತ್ವವನ್ನು ಕಲಾತ್ಮಕವಾಗಿ ಸೆರೆಹಿಡಿದ ಕೃತಿಗಳವು. ಸಾಹಿತಿ ಟಾಲ್‌ಸ್ಟಾಯ್ - ರೆಪಿನ್‌ನ ಸ್ನೇಹಿತ, ಸಮಕಾಲೀನ ಸಾಹಿತಿ. ಇಬ್ಬರು ಸುತ್ತಾಡಿ ಕಳೆದ ಸಮಯಗಳನ್ನೂ, ಸಂದರ್ಭಗಳನ್ನೂ ರೆಪಿನ್ ತನ್ನ ಕೃತಿಗಳ ಮೂಲಕ ದಾಖಲಿಸಿದ್ದಾನೆ. ಟಾಲ್‌ಸ್ಟಾಯ್ ಸಾಹಿತ್ಯ ರಚನೆಗೆ, ಕುಳಿತ ಸಂದರ್ಭದಿಂದ, ವಿಶ್ರಾಂತಿ ಪಡೆದು, ವಾಯುವಿಹಾರಕ್ಕೆ ಹೋದ ಹಂತದದವರೆಗೂ ಸಹಜವಾಗಿ ತನ್ನ ಅದ್ಭುತ ಕಲಾ ಕೌಶಲ್ಯದಿಂದ ಕೃತಿ ರಚಿಸಿದ್ದಾನೆ. ಆ ಕೃತಿಗಳಲ್ಲಿ ನನಗೆ ಮುಖ್ಯವಾಗಿ ಕಂಡದ್ದು ರೆಪಿನ್‌ನ ಕಲಾ ಕೌಶಲ್ಯದೊಂದಿಗೆ, ರೆಪಿನ್ ಟಾಲ್‌ಸ್ಟಾಯ್‌ನ ಬಗ್ಗೆ ಇರಿಸಿಕೊಂಡಿದ್ದ ಆತ್ಮೀಯತೆ, ಪ್ರೀತಿ ಸಂಕೀರ್ಣವಾಗಿ ವ್ಯಕ್ತವಾಗಿರೋದು.

ಸಮುದ್ರದ ನೀರು ಉಪ್ಪು ಉಪ್ಪಾಗಿರಲು ಕಾರಣವೇನು?



ತಮ್ಮನ್ನು ಒಡಿಯಲು ಬಂದ ಮೀನುಗಾರರಿಗೆ ಹೆದರಿ ಹೆದರಿ ಮೀನುಗಳು ಬೆವತಿರುವುದರಿಂದ !

ಹೀಗೆ ರೆಪಿನ್‌ನ ಕೃತಿಗಳ ಗುಂಗು ನನ್ನನ್ನು ಆಗ ಆವರಿಸಿತ್ತು. ಅದರ ಪ್ರಭಾವದಿಂದ ನನ್ನ ಅನೇಕ ಮಿತ್ರರನ್ನು, ಮಿತ್ರರಲ್ಲದವರನ್ನು ಕೂರಿಸಿ ಅವರ ಹಾಗೇ ಕೃತಿ ರಚಿಸಲು ಪ್ರಯತ್ನಿಸುತ್ತಿದ್ದೆ. ಕೆಲವರು ನನ್ನ ಆ ಕೃತಿಗಳನ್ನು ಮೆಚ್ಚಿದ್ದರೆ ಕೆಲವರು ಅನಿವಾರ್ಯವೆಂಬಂತೆ ಕುಳಿತು ಎದ್ದರೆ ಮತ್ತೆ ಕೂರುವ ಅವಕಾಶದಿಂದ ದೂರ ಉಳಿಯುತ್ತಿದ್ದರು. ಅವರ ಉಡಾಫೆತನದಿಂದಲೋ ಅಥವಾ ಕಲೆಯ ಬಗ್ಗೆ ಅವರಿಗೆ ಆಸಕ್ತಿ ಇಲ್ಲದ್ದು ತಿಳಿದೋ ನನಗೂ ಕೂಡ ಅವರ ಯಾವ ಚಿತ್ರಗಳೂ ತೃಪ್ತಿ ತರುತ್ತಿರಲಿಲ್ಲ. ನನ್ನ ಕೈಗೆ ಸ್ವಲ್ಪ ಅಭ್ಯಾಸವಾಗುವುದೊಂದು ಲಾಭ ಬಿಟ್ಟರೆ ನನ್ನಲ್ಲಿ ಅಂತರಿಕವಾಗಿದ್ದ ಆಸೆ ಈಡೇರುತ್ತಿರಲಿಲ್ಲ. ಇಷ್ಟವಾದವರನ್ನು ಕೂರಿಸಿ ಅವರ ಅಂತರೀಕ ವ್ಯಕ್ತಿತ್ವದ ಸೌಂದರ್ಯವನ್ನು ಹೊರ ತರುವಂತೆ ಕೃತಿ ರಚಿಸುವ ನನ್ನ ನಿರೀಕ್ಷೆಯ ಪ್ರಯತ್ನಗಳು ಸೋಲುತ್ತಿದ್ದವು. ಪುಣ್ಯಕ್ಕೆ ನಾನು 'ರೆಪಿನ್'ನಂತಹ ಮಹಾನ್ ಕಲಾವಿದನ ಸ್ಫೂರ್ತಿ ಪಡೆದಿದ್ದನೇ ವಿನಾ ನಾನು 'ರೆಪಿನ್' ಎಂತಲೂ ನನ್ನ ಮುಂದೆ ಕುಳಿತವನನ್ನು ನಾನು ಟಾಲ್‌ಸ್ಟಾಯ್ ಎಂತಲೂ ಅಂದುಕೊಂಡಿರಲಿಲ್ಲ; ಅಕಸ್ಮಾತ್ ಮುಂದೆ ಕುಳಿತವರು ಟಾಲ್‌ಸ್ಟಾಯ್ ಅಂದುಕೊಂಡರೂ ನಾನು ಮಾತ್ರ ಕಿಂಚಿತ್ತೂ ರೆಪಿನ್‌ನ ಯೋಗ್ಯತೆ ಪಡೆದವನಲ್ಲ ಎನ್ನುವುದರ ಬಗ್ಗೆ ನನಗೆ ಸ್ಪಷ್ಟವಾಗಿ ಅರಿವಿತ್ತು. ಈ ಸಂದರ್ಭದಲ್ಲಿ ಒಂದು ದಿನ ಎಂದಿನಂತೆ ಚಾಮರಾಜಪೇಟೆಯ ವೀಸೀಯವರ ಮನೆಯ ಮುಂದೆ ಹೋಗುತ್ತಿದ್ದೆ. ಮಾಮೂಲು ಕುತೂಹಲದಿಂದ ಮನೆಯ ಕಡೆ ತಿರುಗಿನೋಡಿದೆ! ಬಿಳಿಯ ಪಂಚೆ, ಬನಿಯನ್ನು, ಹೆಗಲ ಮೇಲೆ ಬಿಳಿಯ ಟವಲ್ ಹಾಕಿಕೊಂಡಿದ್ದ ಬೋಳು ತಲೆಯ ವಯಸ್ಸಾದವರೊಬ್ಬರು ಅಂಗಳದಲ್ಲಿ ಕುಳಿತಿದ್ದುದು ಕಂಡಿತು. ನನಗೆ ಅವರೇ ವೀಸೀ ಆಗಿರಲಾರರೆಂದು ಅನಿಸಿ ಹಿಂದಕ್ಕೆ ಬಂದಂತೆ ಬಂದು ಪುನಃ ಅದೇ ಪಾರಿಯಲ್ಲಿ ಹಾದು ಹೋದೆ; ಮುಖ ಅವರದೇ! ಇಷ್ಟುವರೆಗೂ ವೀಸೀ ಅವರನ್ನು ಫೋಟೋದಲ್ಲಿ ಬಿಳಿಯ ದೂಪಾಲು, ಕರಿಯ ಕೋಟನಲ್ಲಿ ಕಂಡಿದ್ದ ನನಗೆ ಅವರ ಈ ಸರಳ ಉಡುಪಿನಿಂದ ಗುರುತು ಹತ್ತದಾಯಿತು. ಅಂತೂ ಮೊದಲ ಬಾರಿಗೆ ನಾನು ನಿರೀಕ್ಷಿಸಿದ್ದ ಮಹಾನ್ ವ್ಯಕ್ತಿಯನ್ನು ಕಂಡಂತಾಗಿತ್ತು. ಆ ದಿನ ನನಗೆ ಸಂತೋಷವಾಗಿತ್ತು. ಮನೆಗೆ ಹಿಂತಿರುಗಿ ಲೆಕ್ಕಾಚಾರ ಮಾಡಿದೆ. ಹೇಗಾದರೂ ಮಾಡಿ ಅವರನ್ನು ಭೇಟಿ ಮಾಡಬೇಕು, ಅವರದ್ದೊಂದು ಚಿತ್ರ ಮಾಡಬೇಕು. ಆನಂತರ ಒಂದೋ ಎರಡೋ ವರ್ಷ ಕಳೆದಿರಬೇಕು-ನನಗೆ ಸರಿಯಾಗಿ ನೆನಪಿಲ್ಲ. ವಿದ್ಯಾಭ್ಯಾಸದೊಂದಿಗೆ ಒಂದೆರಡು ಕಡೆ ಪಾರ್ಟ್ ಟೈಮ್ ಕಲಾವಿದನಾಗಿ ಕೆಲಸ ಮಾಡುತ್ತಿದ್ದೆ. ಮತ್ತೆ ಕಾಲೇಜು, ಕಲಾಮಂದಿರ, ಫೈನಲ್ ಪರೀಕ್ಷೆಗಳು ಇತ್ಯಾದಿಗಳೊಂದಿಗೆ ಹಣದ ಮುಗ್ಗಟ್ಟು ನನ್ನ ಇಂತಹ ಹಗಲು ಕನಸುಗಳನ್ನು ತಡೆಹಿಡಿದಿದ್ದವು. ಒಂದು ದಿನ ನನ್ನ ಕೆಲಸದ ನಿರಂತರತೆಯಿಂದಲೋ ಏನೋ ಉದಾಸೀನನಾಗಿ ಓದುತ್ತಾ ಕುಳಿತಿದ್ದೆ. ತಟ್ಟನೆ ನಾನು ಅಂದುಕೊಂಡಿದ್ದ ಎಲ್ಲವೂ ನೆನಪಾಗಿ ಇಷ್ಟು ದಿನ ಸುಮ್ಮನಾದುದಕ್ಕೆ ಬೇಸರವಾಗಿ ನಾಳೆಯೇ ವೀಸೀಯವರನ್ನು ಭೇಟಿಯಾಗಬೇಕೆಂದು ನಿರ್ಧರಿಸಿದೆ. ಮಾರನೆಯ ದಿನ ನನ್ನ ಕೆಲಸಗಳನ್ನು ಮುಗಿಸಿ ಮಧ್ಯಾಹ್ನವೋ, ಸಂಜೆಯೋ ದಿನವೂ ದೂರದಿಂದಲೇ ಕಂಡಿದ್ದ ಅವರ ಮನೆಯ ಕಬ್ಬಿಣದ ಪುಟ್ಟ ಗೇಟನ್ನು ತೆಗೆದು ಒಳಗೆ ನಡೆದೆ, ಗೇಟು ಶಬ್ದ ಮಾಡಿತು, ನಾನೂ ಶಬ್ದ ಮಾಡಿದೆ 'ಸಾರ್' ಎಂದು.

ನಿಧಾನವಾಗಿ ಅದೇ ಬೋಳು ತಲೆಯ, ಬಿಳಿಯ ಬನಿಯನ್, ಟವೆಲ್, ಪಂಚೆಯ ವೀ.ಸೀತಾರಾಮಯ್ಯನವರು ತಮ್ಮ ನಗುಮುಖ

ಸಂವೇದನೆ



ದೊಂದಿಗೆ ಬಾಗಿಲು ತೆರೆದರು. ಯಾವ ಅನುಮಾನವೂ ಇಲ್ಲದಂತೆ; ಮನೆಗೆ ತಮ್ಮ ಮೊಮ್ಮಗ ಬಂದರೆ ಬಾಗಿಲು ತೆಗೆಯುವಂತೆ. ನನಗೆ ಸಂಕೋಚವಾಯಿತು. ನನಗೆ ಮಾತಾಡಲು ಅವಕಾಶ ಕೊಡದೆ 'ಕುಳಿತುಕೊಳ್ಳಿ' ಎಂದು ಮೂಲೆಯಲ್ಲಿದ್ದ ಒಂದು ಛೇರ್ ತೋರಿಸಿದರು. ನಾನು ಕುಳಿತು 'ಸಾರ್ ನಾನು ಎಂ.ಎಸ್.ಮೂರ್ತಿ ಅಂತ, ಆರ್ಟಿಸ್ಟ್, ಕಲಾಮಂದಿರದಲ್ಲಿ ಡಿಪ್ಲೋಮಾ ಮಾಡ್ತಿದೀನಿ'' ಎಂದು ಮುಂದುವರಿಯುತ್ತಿದ್ದಂತೆ ''ಒಂದು ನಿಮಿಷ' ಎಂದು ಒಳಗೆ ಹೋದರು. ಐದಾರು ನಿಮಿಷದ ನಂತರ ಪುಟ್ಟ ತಟ್ಟೆಯಲ್ಲಿ ಬಿಸಿ ಬಿಸಿ ಚಕ್ಕುಲಿ ತಂದು ನನ್ನ ಮುಂದೆ ಹಿಡಿದು ''ತಿನ್ನಿ'' ಎಂದರು. ನನಗೆ ಏನೂ ತೋಚದೆ ಸಂಕೋಚದಿಂದ ''ಸಾರ್...'' ಎಂದು ಪ್ರಾರಂಭಿಸುವುದನ್ನು ತಡೆಯುತ್ತಾ 'ತಿನ್ನಿ, ನೀರು ತರುತ್ತೇನೆ' ಎಂದು ಒಳಗೆ ಹೋಗೇಬಿಟ್ಟರು. ಏನೂ ಮಾತಾಡದೆ ತಿಂದು ಮುಗಿಸಿದೆ. ನೀರು ಕೊಟ್ಟು, ''ನೀವು ಕಾಫಿ ಕುಡೀತೀರಾ ತಾನೆ' ಎಂದು ಉತ್ತರಕ್ಕೂ ಕಾಯದೇ ಸ್ವಲ್ಪ ಹೊತ್ತಿಗೆ ಒಳಗಿನಿಂದ ತಮ್ಮ ಟವಲಿನಿಂದ ಕಾಫಿ ಲೋಟವನ್ನು ಬಿಸಿ ತಾಗದಂತೆ ಹಿಡಿದು ತಂದು ನನ್ನ ಕೈಲಿರಿಸಿ ''ಬಿಸಿ ಇದೆ'' ಎಂದು ನನ್ನನ್ನು ನೋಡುತ್ತಾ ಎದುರಿಗೇ ಕುಳಿತರು. ಸಣ್ಣವನಾದ ನನಗೆ ಇಂಥಾ ಆತಿಥ್ಯ ನೀಡಿದ ಹಿರಿಯರ ಮುಂದೆ ಮುದುಡಿ ಹೋಗಿದ್ದೆ.

ನಾನು ಲೋಟ ಕೆಳಗಿರಿಸಿದ ನಂತರ ಕೇಳಿದರು.

''ಈಗ ಹೇಳಿ ಏನು ವಿಷಯ?''

ವಿಷಯ! ನನಗೆ ಮರೆತೇ ಹೋಗಿತ್ತು. ತಡವರಿಸಿ ಹೇಳಿದೆ.

''ನಿಮ್ಮದೊಂದು ಚಿತ್ರ ನಾನು ಮಾಡಬೇಕು, ಅದಕ್ಕಾಗಿ ನಿಮ್ಮ ಬಿಡುವಿನ ದಿನದ ಒಂದು ಅಪಾಯಂಟ್‌ಮೆಂಟ್ ಬೇಕು!'' ಎಂದೆ.

ಆಶ್ಚರ್ಯದಿಂದ ನಕ್ಕರು. ಇಂದಿಗೂ ಆ ನಗು ನನಗೆ ನೆನಪಿದೆ.

''ನನ್ನ ಚಿತ್ರ ಮಾಡುತ್ತಿರಾ!?'' ಎಂದು

ನಾನೂ ನಕ್ಕು, ''ನಿಮಗೆ ಯಾವಾಗ ಆಗುತ್ತೆ ಹೇಳಿ ಸಾರ್'' ಎಂದದ್ದಕ್ಕೆ

''ಮುಂದಿನ ಶುಕ್ರವಾರ ಆಗಬಹುದಾ?'' ಎಂದರು.

ಆಯ್ತು ಎಂದೆ ನಾನು, ಮುಗಿಯಿತು ಅಲ್ಲಿಗೆ.

ಅವರು ಹೇಳಿದ ಶುಕ್ರವಾರ ಬಂತು ಹೋಯಿತು. ಅವರು ಹೇಳದ ಶುಕ್ರವಾರಗಳೂ ಬಂದು ಹೋದವು; ನನಗೆ ಮಾತ್ರ ಅದೇನು ಮಂಕು ಕವಿದಿತ್ತೋ ನನ್ನ ಅಂದಿನ ಹೊಯ್ದಾಟದ ದಿನಗಳಲ್ಲಿ ನಾನು ಮಾತು ತಪ್ಪಿದೆ. ನಾನೇ ಆಸೆಪಟ್ಟು ಪಡೆದ ಅವಕಾಶವನ್ನು ಮರೆತೆ, ಮರೆತೇಬಿಟ್ಟೆ! ಎಲ್ಲಿಯವರೆಗೆ ಎಂದರೆ ವೀಸೀಯವರ ಸಾವಿನ ಸುದ್ದಿ ತಿಳಿಯುವವರೆಗೂ. ಆ ದಿನ ಪ್ರಜಾವಾಣಿಯಲ್ಲಿ ವೀಸೀಯವರ ಫೋಟೋದೊಂದಿಗೆ ಅವರ ಸಾವಿನ ಸುದ್ದಿ ಓದಿ ನಡುಗಿ ಹೋದೆ. ನನ್ನನ್ನು ಅಷ್ಟು ಆದರದಿಂದ ಕಂಡವರನ್ನು ಮರೆತೆನಲ್ಲ ಎಂದು ನನ್ನ ಅಸಹಾಯಕತೆಯ ಬಗ್ಗೆ, ನನ್ನ ಪರಿಸ್ಥಿತಿಯ ಬಗ್ಗೆ ಹಳಿದುಕೊಂಡೆ. ನನ್ನ ಬಗ್ಗೆಯೇ ಹೇಸಿಗೆ ಎನಿಸಿತು. ಏನೂ ಮಾಡಲು ತೋರದೆ ನೇರ ಅವರ ಮನೆಯ ಹತ್ತಿರಕ್ಕೆ ಬಂದೆ. ನನ್ನೆದೆ ಹೊಡೆದುಕೊಳ್ಳುತ್ತಿತ್ತು. ನಾನು ನಿರಂತರವಾಗಿ ಕಾಣುತ್ತಿದ್ದ ಗೇಟು ಈಗ ಕಾಣುತ್ತಿರಲಿಲ್ಲ; ತುಂಬಾ ಜನ ಸೇರಿದ್ದರು. ದೂರದಿಂದಲೇ ನಿಂತು ಮನಸ್ಸಿನಲ್ಲೇ ನಮಸ್ಕರಿಸಿದ್ದೆ. ಎಷ್ಟು ಹೊತ್ತು ನಿಂತಿದ್ದೆನೋ ಗೊತ್ತಿಲ್ಲ, ತಪ್ಪು ಮಾಡಿದ ಅಪರಾಧಿಯಂತೆ. ಇದ್ದಕ್ಕಿದ್ದಂತೆ ಜನ, ನೂಕುನುಗ್ಗಲು ಹೆಚ್ಚಾಯಿತು ನಟ ರಾಜಕುಮಾರ್ ಬಂದಿದ್ದರು. ಅವರನ್ನು ನೋಡಲು ಜನ ಬಂದಿದ್ದರು. ಇನ್ನು ಅಲ್ಲಿ ನಿಲ್ಲಲು ಸಾಧ್ಯವಾಗದೆ ಕಾಲೆಳೆಯುತ್ತಾ ಮನೆಗೆ ಬಂದೆ. ಅದು ನನ್ನ ಬದುಕಿನಲ್ಲಿ ನಾನು ತುಂಬಾ ನೊಂದುಕೊಂಡ ಧಿನವಾಗಿತ್ತು.

ಅದಾಗಿ ತಿಂಗಳುಗಳೊ ವರ್ಷವೋ ಕಳೆದಿರಬೇಕು: ನನ್ನ ಪರೀಕ್ಷೆಗಳೊಂದಿಗೆ ಕಾಲೇಜು ಮುಗಿದು, ಕಲಾ ಡಿಪ್ಲೋಮಾ ಆಗ ತಾನೇ ಪಡೆದಿದ್ದೆ. ಒಂದು ದಿನ ಗಾಂಧಿ ಬಜಾರ್‌ನ ಡಿ.ವಿ.ಜಿ. ರಸ್ತೆಯಲ್ಲಿ ನಡೆದು ಬರುತ್ತಿದ್ದೆ. ಎದುರಿಗೆ ಒಬ್ಬರು ಮಧ್ಯಮ ವಯಸ್ಸಿನ ಹೆಂಗಸು ಬರುತ್ತಿದ್ದರು. ನನಗೆ ಅವರ ಗುರುತು ಹತ್ತಲಿಲ್ಲ, ಅವರು ನನ್ನ ಗುರುತು ಹಿಡಿದು ನಿಂತರು. ನಾನೂ ನಿಂತೆ, ಅವರು ''ನೀವು ಮೂರ್ತಿ ಅಲ್ಲವಾ?'' ಎಂದರು. ನಾನು ಹೌದು, ಎನ್ನುವಷ್ಟರಲ್ಲಿ ನನಗೆ ಅವರ ನೆನಪಾಯಿತು; ಅವರು ವೀಸೀ ಅವರ ಸೊಸೆ! ನಾನು ಭೂಮಿಗಿಳಿದು ಹೊಗಿದ್ದೆ. ನನ್ನ ಅಕ್ಷಮ್ಯ ಅಪರಾಧ ನೆನಪಾಗಿ ತುಂಬಾ ಸಂಕೋಚದಿಂದ ನಾನು ಹೇಗೆ ನನ್ನ ಅಸಹಾಯಕ ಸ್ಥಿತಿಯನ್ನು ಈಕೆಗೆ ವಿವರಿಸುವುದು ಎಂದು ಸಂಕಟ ಪಡುತ್ತಿರುವಾಗಲೇ ಆಕೆ ಹೇಳಿದರು, ''ನೀವು ಹೀಗೆ ಮಾಡಬಾರದಿತ್ತು?'' ನಾನು ತಲೆ ತಗ್ಗಿಸಿ ''ಹೌದು, ಮೇಡಂ ತಪ್ಪಾಯಿತು'' ಎಂದೆ. ಆಕೆ ಹೇಳಿದ ಕೊನೆಯ ಮಾತು ನನ್ನ ಕರುಳು ಹಿಂಡಿತು. ''ನೋಡಿ, ಆವತ್ತು ಶುಕ್ರವಾರ ನೀವು ಬರುತ್ತೇನೆ, ಎಂದದ್ದಕ್ಕೆ ಅವರು ಬೇಗ ಎದ್ದು ಆರೋಗ್ಯ ಸರಿ ಇಲ್ಲದಿದ್ದರೂ ಸ್ನಾನ ಮಾಡಿ ನಿಮಗಾಗಿ ಕಾಯುತ್ತಿದ್ದರು. ಆ ಹುಡುಗ ಬರುತ್ತಾನೆ, ನಾನು ರೆಡಿ ಇರಬೇಕು'' ಎಂದು. ನಾನು ಏನನ್ನೂ ಹೇಳಲಿಲ್ಲ ದೀನನಾಗಿ ಅವರ ಮುಖ ನೋಡಿ ''ಬರುತ್ತೇನೆ!'' ಎಂದಷ್ಟೇ ಹೇಳಿ ಹೊರಟುಬಿಟ್ಟೆ. ದಾರಿಯಲ್ಲಿ ''ನನ್ನ ಚಿತ್ರ ಮಾಡುತ್ತಿರಾ!?'' ಎಂದಾಗಿನ ಅವರ ಮುಖ ನೆನಪಾಗಿ ನನ್ನ ಕಣ್ಣು ತೇವಗೊಂಡಿತು. ಇಂತಹ ತಪ್ಪನ್ನು ಇನ್ನೆಂದೂ ಮಾಡಬಾರದು ಎಂದುಕೊಂಡೆ.

ಅಂದಿನಿಂದ ಇಂದಿನವರೆಗೆ ನೀಡಿದ ಸಮಯವನ್ನು ಕಾಪಾಡಿಕೊಂಡು ಬಂದಿದ್ದೇನೆ. ಐದು ನಿಮಿಷ ತಡವಾದರೂ ನನಗೆ ಮಾನಸಿಕವಾಗಿ ಕಸಿವಿಸಿಯಾಗುತ್ತದೆ. ಆ ಕೆಲಸ ಪೂರ್ಣಗೊಳ್ಳುವವರೆಗೂ ಆತಂಕವಾಗುತ್ತಿರುತ್ತದೆ. ಕಲೆಯಿಂದ ಶಿಸ್ತನ್ನು ಕಲಿತಿದ್ದೇನೆ. ನಮ್ಮ ಬದುಕಿಗೆ ಶಿಸ್ತು ತುಂಬಾ ಮುಖ್ಯ ಎಂದು ಮನದಟ್ಟಾಗಿದೆ. ಆದರೂ ಎಲ್ಲೋ ಒಂದು ಕಡೆ ನನ್ನ ''ಅಪರಾಧೀ ಪ್ರಜ್ಞೆ'' ನನ್ನನ್ನು ಕಾಡುತ್ತಲೇ ಇದೆ - ಅವರನ್ನು ಕಾಯಿಸಬಾರದಿತ್ತೆಂದು.

ಇಷ್ಟೂ ನೆನಪನ್ನು ದಾಖಲಿಸುತ್ತಲೇ ಆ ದಿನ ನಾನು ಪ್ರತ್ಯಕ್ಷ ಕಂಡ ವೀಸೀ ಅವರ ನಿಷ್ಕಲ್ಮಶ 'ದೇಸೀ' ನಗುವನ್ನು ಈವತ್ತಿನ ನನ್ನ ಗೆರೆಗಳಲ್ಲಿ ನಮ್ರವಾಗಿ ರೂಪಿಸಿದ್ದೇನೆ. ಆದರೂ ಅಂದು ನನ್ನ ಮನಸ್ಸಿನಲ್ಲಿ ದಾಖಲಾದ ಆ 'ನಗು'ವಿಗೆ ನನ್ನ ಈ ಚಿತ್ರ ಖಂಡಿತಾ ಹೋಲಲಾರದೆಂಬುದಂತೂ ಸತ್ಯ.

ಅದೊಂದು ಅಳಿಸಲಾಗದ ಸುಂದರ ಚಿತ್ರ.

■



ವಯಸ್ಕರಿಗಾಗಿ

■ ಡಾ. ವಸುಂಧರಾ ಭೂಪತಿ

ನಿಜವೋ? ಸುಳ್ಳೋ?

ಗಂಡಸರು ವಿಟಮಿನ್ 'ಇ' ಇರುವ ಪದಾರ್ಥಗಳನ್ನು ಹೆಚ್ಚಾಗಿ ತಿಂದರೆ ಸಂತಾನೋತ್ಪತ್ತಿಗೆ ಬೇಕಾದ ಹಾರ್ಮೋನುಗಳು ವೃದ್ಧಿಸುತ್ತವೆ ಎಂಬ ಮಾತು ನಿಜವೋ? ಸುಳ್ಳೋ?

– ಹೆಸರುಬೇಡ, ಬಳ್ಳಾರಿ.

ಸಲಹೆ

ನಿಮ್ಮ ದೇಹದಲ್ಲಿ ವಿಟಮಿನ್ 'ಇ'ಯ ಕೊರತೆಯಿದ್ದಲ್ಲಿ ಹಾಗೂ ಅದರಿಂದಾಗಿ ವೀರ್ಯಾಣುಗಳ ಸಂಖ್ಯೆ ಕಡಿಮೆಯಾಗಿದ್ದಲ್ಲಿ ಮಾತ್ರ ವಿಟಮಿನ್ 'ಇ' ಸೇವನೆಯಿಂದ ಸ್ವಲ್ಪ ಮಟ್ಟಿಗೆ ಸಹಾಯವಾಗಬಹುದು. ಇದಲ್ಲದೆ ಬೇರೆ ಇನ್ನಿತರ ಕಾರಣಗಳಿಂದ ತೊಂದರೆಯಿದ್ದಲ್ಲಿ ವಿಟಮಿನ್ 'ಇ' ಸೇವನೆಯಿಂದ ಯಾವುದೇ ಪ್ರಯೋಜನ ಕಂಡುಬರುವುದಿಲ್ಲ.

ನನ್ನ ಧನ್ಯವಾದಗಳು

ಪ್ರಿಯ ಸಹೋದರಿ,

ಪತ್ರಿಕೆಯ ಸಂಪಾದಕರ ಉದ್ದೇಶವನ್ನು ಮನಸ್ಸಿನಲ್ಲಿರಿಸಿಕೊಂಡು ವಯಸ್ಕರ ಸಂದೇಹ-ಸಮಸ್ಯೆಗಳಿಗೆ ಗಂಭೀರ, ಶಾಸ್ತ್ರೀಯ, ಸಹಾನುಭೂತಿಪರ ಉತ್ತರಗಳಿಗಾಗಿ ನನ್ನ ಧನ್ಯವಾದಗಳನ್ನು ದಯವಿಟ್ಟು ಸ್ವೀಕರಿಸಿ.

ಲೈಂಗಿಕ ಬಯಕೆ ಮಾನವ ಸಹಜವಾದುದು. ಅದರ ನಿರಾಕರಣೆ, ಹತ್ತಿಕ್ಕುವಿಕೆ ಅನುಚಿತ. ಇದರಿಂದ ವ್ಯಕ್ತಿ-ಸಮಾಜಗಳೆರಡಕ್ಕೂ ವಿಧ ವಿಧದ ಹಾನಿಯಾಗಬಹುದು. ಆದರೆ ಹಲವು ಗಂಡು-ಹೆಣ್ಣುಗಳಿಗೆ ಸಮಾಜ ಒಪ್ಪಿದ ರೀತಿಯಲ್ಲಿ ಕಾಮತೃಪ್ತಿ ಸಾಧ್ಯವಾಗದೇ ಅವರು ಸ್ವ-ಸ್ವಾಸ್ಥ್ಯ ಮತ್ತು ಸಮಾಜ ಸ್ವಾಸ್ಥ್ಯ-ಎರಡನ್ನೂ ಕಲಕಬಹುದು. ಲೈಂಗಿಕ ಅಪರಾಧಗಳು, ವಿಕೃತ ಕಾಮ ತೃಪ್ತಿ, ಲೈಂಗಿಕ ಶೋಷಣೆ ಇವು ಅದರ ಕೆಲ ಮುಖಗಳು. ಇವುಗಳಿಗೆ ಬಲಿಬೀಳದೆ, ಅನಿವಾರ್ಯವಾದ ಕಾಮ ತೃಪ್ತಿಯನ್ನು ಪಡೆಯಲು Vibratorನ ಉಪಯೋಗವನ್ನು ಸೂಚಿಸಿರುವಿರಿ. ಒಂದು ವಿಶೇಷ ಲೇಖನದ ಮುಖಾಂತರ ಗಂಡು-ಹೆಣ್ಣು ಮುಕ್ತ ಮನಸ್ಸಿನಿಂದ ಉಪಯೋಗಿಸಬಹುದಾದ ಎಲ್ಲಾ- ಸಾಧನಗಳು, ಅವುಗಳನ್ನು ಉಪಯೋಗಿಸುವ ವಿಧಾನ, ದೊರೆಯುವ ಖಚಿತ ವಿಳಾಸ ಸಂಭಾವ್ಯ ಬೆಲೆ-ಇವೇ ಮುಂತಾದ ವಿವರಗಳನ್ನು ನೀಡಿ ಉಪಕರಿಸುವಿರಾ?

ವಿಷಯದ ಸಾಮಾಜಿಕ ಮತ್ತು ಭೌಗೋಲಿಕ ವ್ಯಾಪ್ತಿಯನ್ನು ದೃಷ್ಟಿಯಲ್ಲಿರಿಸಿಕೊಂಡು ನಾನು ಈ ಸಮಸ್ಯೆಯ ಪ್ರಸ್ತಾಪಕ್ಕೆ ದನಿ ಎತ್ತಿದ್ದೇನೆ.

– ಹೆಸರು-ಮಾನವ, ಸ್ಥಳ-ಜಗತ್ತು.

ಸಲಹೆ

ನಿಮ್ಮ ಸಲಹೆಯನ್ನು ಪರಿಗಣಿಸಲಾಗುವುದು ಹಾಗೂ ಈ ವಿಷಯವನ್ನು ಸಂಪಾದಕರ ಗಮನಕ್ಕೂ ತರುವೆ.

ವಯಸ್ಕರ
ಸಂದೇಹ ಸಲಹೆ



ನನ್ನ ಅನುಮಾನ ಪರಿಹರಿಸಿ

ನನ್ನ ವಯಸ್ಸೀಗ 20 ವರ್ಷ. ನಾನು ನನ್ನ 13ನೇ ವಯಸ್ಸಿನಲ್ಲಿ ಕೆಟ್ಟ ಹುಡುಗರ ಸಹವಾಸದಿಂದ ಹಸ್ತಮೈಥುನ ಚಟಕ್ಕೆ ಅಂಟಿಕೊಂಡಿದ್ದೇನೆ. ನನಗೆ ಮುಂದೆ ಲೈಂಗಿಕ ಕ್ರಿಯೆ ನಡೆಸಲು ಅಸಮರ್ಥನಾಗುವೆನೆಂಬ ಹೆದರಿಕೆ. ಇದನ್ನು ಬಿಡುವುದು ಹೇಗೆ? ನನ್ನ ದೇಹದ ತೂಕ 47 ಕೆ.ಜಿ., ಎತ್ತರ 167 ಸೆ.ಮೀ. ಇದು ನನ್ನ ವಯಸ್ಸಿಗನುಗುಣವಾಗಿ ಇದೆಯೇ ಅಥವಾ ದಪ್ಪವಾಗಲು ಏನು ಮಾಡಬೇಕು? ಏನೋ ಸದಾ ಮಂಕು ಬಡಿದಂತೆ ಇರುತ್ತದೆ. ಭಯ, ಕಳವಳ, ಚಂಚಲತೆ, ಮರೆವು, ನಿರಾಸಕ್ತಿ ವಿನಾಕಾರಣ ಬೇಸರ ತರ್ಕಬದ್ಧವಾಗಿ ಯೋಚಿಸಲು ಆಗದಿರುವುದು, ಸಿಡುಕುತನ, ವಿಪರೀತ ಕೀಳರಿಮೆ, ಒಟ್ಟಾರೆ ನಾನು ದಾಕ್ಷಿಣ್ಯ ಪ್ರವೃತ್ತಿಯಿಂದ ನರಳುತ್ತಿದ್ದು, ಇದರಿಂದ ಮುಕ್ತಿ ಹೊಂದಿ ಸಾಮಾನ್ಯರಂತಾಗಲು ಏನು ಮಾಡಬೇಕು.

ತಲೆಯಲ್ಲಿ ಹೊಟ್ಟಾಗಿದ್ದು, ಅದರಿಂದ ಕೂದಲು ಉದುರ ಹತ್ತಿದೆ. ಎಲ್ಲಾ ರೀತಿಯ ಶ್ಯಾಂಪೂ, ಕ್ರೀಂ, ಆಯುರ್ವೇದಿಕ ಔಷಧಿ ಬಳಸಿದರೂ ಪ್ರಯೋಜನವಿಲ್ಲ. ಹೊಟ್ಟು ಹೋಗಲು ಏನು ಮಾಡಬೇಕು? ಕೂದಲು ಉದುರದಂತೆ ತಡೆಯುವುದು ಹೇಗೆ?

ಇಲ್ಲಿಯತನಕ ಉದುರಿದ ಕೂದಲುಗಳು ಮತ್ತೆ ಬರುತ್ತವೆಯೇ? ದಾಕ್ಷಿಣ್ಯ ಪ್ರವೃತ್ತಿಯ ಬಗ್ಗೆ ಯಾವುದಾದರೂ ಪುಸ್ತಕಗಳಿದ್ದರೆ ದಯವಿಟ್ಟು ತಿಳಿಸಿರಿ?

– ವೀರೇಶ, ಹಿರೇಕೆರೂರ.

ಸಲಹೆ


ಹಸ್ತಮೈಥುನ ಖಂಡಿತ ಕೆಟ್ಟ ಚಟವಲ್ಲ. ನಿಮ್ಮ ವಯಸ್ಸಿನ ಹುಡುಗರಲ್ಲಿ ಸಹಜವಾಗಿ ಕಂಡುಬರುವಂತಹುದು. ಇದರಿಂದ ಮುಂದೆ ಯಾವುದೇ ರೀತಿಯ ಲೈಂಗಿಕ ಅಸಮರ್ಥತೆ ಉಂಟಾಗುವುದಿಲ್ಲ. ತೂಕದ ಬಗ್ಗೆ ಚಿಂತಿಸಬೇಡಿ. ನಿಮ್ಮ ವಯಸ್ಸಿಗೆ ಸರಿಯಾಗಿದೆ.

ಸದಾ ಚಟುವಟಿಕೆಯಿಂದಿರಿ. ಗೆಳೆಯರೊಂದಿಗೆ ಬೆರೆಯಿರಿ. ಚಿಂತಿಸಬೇಡಿ. ಉತ್ತಮವಾದ ಪುಸ್ತಕಗಳನ್ನು ಓದಿ. ಪ್ರತಿದಿನ ಸ್ವಲ್ಪ ಹೊತ್ತು ಯೋಗಾಭ್ಯಾಸ, ಧ್ಯಾನ ಮಾಡಿ. ಇದರಿಂದ ಮನಸ್ಸಿಗೆ ಶಾಂತಿ ದೊರಕುತ್ತದೆ. ಡಾ.ಸಿ.ಆರ್. ಚಂದ್ರಶೇಖರ್‌ರವರ 'ಮನಸ್ಸು 108 ಪ್ರಶ್ನೆಗಳು' ಹಾಗೂ 'ಹದಿಹರೆಯದ ಮಾನಸಿಕ ಸಮಸ್ಯೆಗಳು' ಪುಸ್ತಕ ಓದಿ.

ನಿಯಮಿತವಾಗಿ ತಲೆಗೆ ಎಣ್ಣೆ ಹಾಕಿಕೊಳ್ಳಿ, ವಾರಕ್ಕೆರಡು ಬಾರಿ ತಲೆಗೆ ಸ್ನಾನ ಮಾಡಿ. ವಾರಕ್ಕೊಮ್ಮೆ ದಾಸವಾಳದ ಎಲೆಯನ್ನು ರುಬ್ಬಿ ತಲೆಗೆ ಹಚ್ಚಿಕೊಂಡು ಸ್ನಾನ ಮಾಡಿ. ಬೇರೆಯವರು

ಉಪಯೋಗಿಸುವ ಬಾಚಣಿಗೆಯನ್ನು ನೀವು ಉಪಯೋಗಿಸಬೇಡಿ. ನಿಮ್ಮದನ್ನೇ ಬೇರೆ ಇಟ್ಟು ಕೊಳ್ಳಿ. ಏಕೆಂದರೆ ತಲೆಯ ಹೊಟ್ಟು ಒಬ್ಬರಿಂದೊಬ್ಬರಿಗೆ ಹರಡುತ್ತದೆ. ಕೂದಲು ಉದುರುವುದಕ್ಕೆ ದೇಹದಲ್ಲಿ ಪೋಷಕಾಂಶದ ನ್ಯೂನತೆಯೂ ಒಂದು ಕಾರಣ. ಆದ್ದರಿಂದ ಆಹಾರದಲ್ಲಿ ಹೆಚ್ಚು ಸೊಪ್ಪು, ತರಕಾರಿ, ಹಣ್ಣು ಮತ್ತು ಮೊಳಕೆ ಬರಿಸಿದ ಕಾಳುಗಳನ್ನು ಉಪಯೋಗಿಸಿ.

ಮುಟ್ಟಿನ ದಿನಗಳಲ್ಲಿ ಸಂಭೋಗ ಅನಾಹುತವೇ?



ವೈದ್ಯರೇ, ನನಗಿಬ್ಬರು ಹೆಂಡತಿಯರು. ನಾನು ಸುಮಾರು 50 ಬಾರಿ ಹೆಂಡತಿಯರು ಮುಟ್ಟಾದ ಸಂದರ್ಭದಲ್ಲಿ ದೈಹಿಕ ಸಂಪರ್ಕ ಹೊಂದಿದ್ದೇನೆ. ಇದರಿಂದ ಯಾವುದಾದರೂ ತೊಂದರೆ ಇದೆಯೇ? ಸ್ನೇಹಿತರ ಹೇಳಿಕೆಯ ಪ್ರಕಾರ, ಕಣ್ಣುಗಳಿಗೆ ತೊಂದರೆಯಾಗುತ್ತದೆ, ಅಶಕ್ತತೆಯಾಗುತ್ತದೆ ಎಂದೆಲ್ಲಾ ಇದೆ. ಆದರೆ ನನಗೇನೂ ಆಗಿಲ್ಲ. ಮುಟ್ಟಾದ ಎಷ್ಟು ದಿನ ಸಂಭೋಗ ಮಾಡಬಾರದು? ಹಾಗೆ ಸಂಭೋಗಿಸುವುದರಿಂದ ಉಂಟಾಗುವ ತೊಂದರೆ ಏನು?

-ಶಂಕರಾನಂದ, ಊರುಬೇಡ.

ಸಲಹೆ

ಗಂಡ ಹಾಗೂ ಹೆಂಡತಿ ಇಬ್ಬರೂ ಇಷ್ಟಪಟ್ಟಲ್ಲಿ ಮುಟ್ಟಾದಾಗ ಸಂಭೋಗ ಮಾಡಬಹುದು, ಅದರಿಂದ ಯಾವುದೇ ರೀತಿಯ ತೊಂದರೆ ಇಲ್ಲ.

ಬೆಳೆಯಬಹುದೇ?




ನನ್ನ ವಯಸ್ಸು 19. 2ನೇ ಪಿ.ಯು.ಸಿ. (ಕಲಾ) ಓದುತ್ತಿದ್ದೇನೆ. ನಾನು 5 ವರ್ಷಗಳಿಂದ ಹಸ್ತಮೈಥುನಕ್ಕೆ ಒಳಗಾಗಿದ್ದೇನೆ. ನನ್ನ ಲಿಂಗ ಉದ್ರೇಕಗೊಂಡಾಗ ಕೇವಲ 12 ಸೆಂ.ಮೀ ಕುಗ್ಗಿದಾಗ 1 1/2 ಇಂಚಿಗಿಂತ ಕಡಿಮೆ ಇರುತ್ತದೆ. ಸ್ನೇಹಿತರು ಷಂಡನೆಂದು ಹೀಯಾಳಿಸುತ್ತಾರೆ. ಇದು ಇನ್ನು ಮುಂದೆ ಬೆಳವಣಿಗೆಯಾಗುವುದಿಲ್ಲವೇ? ಪರೀಕ್ಷೆ ಹತ್ತಿರವಾಗುತ್ತಿದೆ. ಓದಲು ಆಗುತ್ತಿಲ್ಲ ದಯವಿಟ್ಟು ಪರಿಹಾರ ಸೂಚಿಸಿ.

- ಹೆಸರು ಬೇಡ, ಊರು ಬೇಡ.

ಸಲಹೆ

ಈಗಾಗಲೇ ತಿಳಿಸಿರುವಂತೆ ಹಸ್ತಮೈಥುನದಿಂದ ಯಾವುದೇ ತೊಂದರೆಯುಂಟಾಗುವುದಿಲ್ಲ. ನಿಮ್ಮ ಶಿಶ್ನದ ಉದ್ದದ ಬಗ್ಗೆ ಚಿಂತೆ ಬೇಡ. ಗೆಳೆಯರ ಮಾತಿಗೆ ಗಮನ ಕೊಡಬೇಡಿ. ಸಹಜ ಸ್ಥಿತಿಯಲ್ಲಿರುವಾಗ ಎಲ್ಲರ ಶಿಶ್ನವೂ ಚಿಕ್ಕದೇ ಆಗಿರುತ್ತದೆ. ಚಿಕ್ಕದಿದ್ದರೂ ಉದ್ರೇಕಗೊಂಡಾಗ ಸಂಭೋಗಕ್ಕೆ ಅಗತ್ಯವಾದ ಆಕಾರವನ್ನು ಹೊಂದುತ್ತದೆಯಾದ್ದರಿಂದ ಅದಕ್ಕಾಗಿ ಯೋಚನೆ ಮಾಡಬೇಡಿ. ಸದ್ಯಕ್ಕೆ ಪರೀಕ್ಷೆಗೆ ಓದಿ ಉತ್ತೀರ್ಣರಾಗುವತ್ತ ಗಮನಹರಿಸಿ.

ಇದಾವ ರೋಗದ ಲಕ್ಷಣ ?




ನಾನೊಬ್ಬ ಪ್ರಾಪ್ತ ವಯಸ್ಕ. ಒಮ್ಮೆ ಒಬ್ಬ ವಯಸ್ಕಳೊಂದಿಗೆ ಸಂಭೋಗ ನಡೆಸಿದ ತರುವಾಯ ನನ್ನ ಜನನಾಂಗದ ಮೇಲೆ ಆಗಾಗ ಗುಳ್ಳೆ ಬರುವುದು, ನವೆಯಾಗುವುದು, ಮೂತ್ರ ವಿಸರ್ಜನೆಯ ಸಮಯದಲ್ಲಿ ವಿಪರೀತ ನೋವುಂಟಾಗುವುದು, ಜನನಾಂಗದಲ್ಲಿ ಬಿಳುಪು ಕಾಣಿಸುವುದು ಮತ್ತು ಕೆಟ್ಟ ವಾಸನೆ ಬರುತ್ತದೆ. ಇದರಿಂದ ಜೀವನವೇ ಬೇಸರವಾಗಿದೆ. ನಿಮ್ಮ ಸಲಹೆಗಾಗಿ ಕಾಯುತ್ತಿರುವೆ.

-ರಾಜಶೇಖರ್ ಆರ್., ಬೆಂಗಳೂರು.

ಸಲಹೆ

ನೀವು ತಿಳಿಸಿರುವ ಲಕ್ಷಣಗಳಿಂದ ನಿಮಗೆ ಲೈಂಗಿಕ ರೋಗದ ಸೋಂಕು ಉಂಟಾಗಿದೆಯೆಂದು ನನ್ನ ಅನಿಸಿಕೆ. ನೀವು ತಡಮಾಡದೆ ವೈದ್ಯರ ಬಳಿ ತಪಾಸಣೆ ಮಾಡಿಸಿ ಚಿಕಿತ್ಸೆ ಪಡೆಯಿರಿ. ಅವರ ಸಲಹೆಯ ಮೇರೆಗೆ ಒಂದು ಬಾರಿ ವಿ.ಡಿ.ಆರ್.ಎಲ್. ರಕ್ತಪರೀಕ್ಷೆ ಮಾಡಿಸಿ.

ವಿವಾಹಕ್ಕೆ ಮುಂಚಿನ ಸಂದೇಹ



ನಾನೊಬ್ಬ 26 ವರ್ಷದ ಅವಿವಾಹಿತ. ನನಗೆ ಸದ್ಯದಲ್ಲೇ ಮದುವೆಯಾಗಲಿದ್ದು, ನನ್ನ ಖಾಸಗಿ ಉದ್ಯೋಗ ಇನ್ನು ಭದ್ರವಾಗಿಲ್ಲವಿರುವುದರಿಂದ ನಾನು ನಾಲ್ಕು ವರ್ಷಗಳ ಕಾಲ ಮಕ್ಕಳಾಗದಂತೆ ಸುರಕ್ಷಿತ ಲೈಂಗಿಕ ಚಟುವಟಿಕೆಯಿಂದ ಸುಖಿಸಲು ಬಯಸುತ್ತೇನೆ. ಇದಕ್ಕೆ ಕಾಂಡೋಮ್ಸ್ ಇವೆ. ಆದರೆ ಸ್ನೇಹಿತರು ಹೇಳುವ ಪ್ರಕಾರ ಲೈಂಗಿಕ ತೃಪ್ತಿ ಕಾಂಡೋಮ್ಸ್ ಬಳಕೆಯಿಂದ ಅಲಭ್ಯ. ಅದಕ್ಕಿರುವ ಇನ್ನಿತರ ಪರಿಹಾರ ಮಾರ್ಗಗಳಾವುವು? ಕಾಂಡೋಮ್ಸ್ ಬಳಸದೆ ಸುರಕ್ಷಿತ ಲೈಂಗಿಕ ಸಂಭೋಗ ಸಾಧ್ಯವಿಲ್ಲವೇ? ಇದ್ದರೆ ಪರಿಹಾರ ಸೂಚಿಸಿ.


ಮುಟ್ಟಿನ ಒಂದು ವಾರ ಮುಂಚೆ ಮತ್ತು ನಂತರ ಒಂದು ವಾರ ಸುರಕ್ಷಿತ ಸಂಭೋಗ ಸಾಧ್ಯವಂತೆ ಹೌದೆ? ಇದರ ಬಗ್ಗೆ ವಿವರವಾಗಿ ಪೂರ್ಣ ಮಾಹಿತಿ ನೀಡಿ. ಇದರ ಬಗೆಗೆ ಪುಸ್ತಕಗಳಿದ್ದರೆ ಅವಶ್ಯ ತಿಳಿಸಿ. ನನ್ನ ಭವಿಷ್ಯಕ್ಕೆ ದಾರಿ ತೋರಬೇಕೆಂದು ಕೋರುವೆ.

-ನಾಗರಾಜ್ ಕೆ., ಮೈಸೂರು.

ಸಲಹೆ

ಸಂತಾನ ನಿಯಂತ್ರಣಕ್ಕೆ ಅನುಸರಿಸಬೇಕಾದ ವಿಧಾನಗಳೆಂದರೆ ಸುರಕ್ಷಿತ ಸಮಯ. ಓರಲ್ ಪಿಲ್ಸ್ ಹಾಗೂ ವೆಜೈನಲ್ ಜೆಲ್ಲಿಯ ಉಪಯೋಗ. ಸುರಕ್ಷಿತ ಸಮಯವೆಂದರೆ ಮುಟ್ಟಾದ ಬಳಿಕ ಮೊದಲ 10 ದಿನಗಳು ಹಾಗೂ ಕೊನೆಯ 10 ದಿನಗಳು. ಇದು ನಿಯಮಿತವಾಗಿ ಮುಟ್ಟಾಗುವ ಸ್ತ್ರೀಯರಲ್ಲಿ ಮಾತ್ರ ಉಪಯುಕ್ತ. ಮಧ್ಯದ ದಿನಗಳಲ್ಲಿ ಅಂದರೆ 12 ನೇ ದಿನದಿಂದ 18ನೇ ದಿನದವರೆಗೆ ದೂರವಿರಬೇಕು. ಓರಲ್ ಪಿಲ್ಸ್‌ನ್ನು ಮುಟ್ಟಾದ 5ನೇ ದಿನದಿಂದ ಪ್ರಾರಂಭಿಸಿ 21 ದಿನಗಳವರೆಗೆ ತೆಗೆದುಕೊಳ್ಳಬೇಕು. ಒಂದು ದಿನವೂ ಮಾತ್ರೆ ತಪ್ಪಿಸಬಾರದು. ವೈದ್ಯರನ್ನು ಸಂಪರ್ಕಿಸಿ ಮಾತ್ರೆಯನ್ನು ಪ್ರಾರಂಭಿಸಿ. ಇನ್ನು ವೆಜೈನಲ್ ಜೆಲ್ಲಿ ದೊರೆಯುತ್ತದೆ. ಅದನ್ನು ಸಂಭೋಗಕ್ಕೆ ಮುನ್ನ ಉಪಯೋಗಿಸಬೇಕು. ನಿಮಗೆ ಕುಟುಂಬ ಯೋಜನೆ ಬಗ್ಗೆ ವಿವರವಾದ ಮಾಹಿತಿ ಬೇಕಿದ್ದಲ್ಲಿ 'ಬಿಸಿಲ ಬದುಕು' ಜೂನ್ 1998ರ ಪತ್ರಿಕೆ ಓದಿ.

ತೆಳ್ಳಗಿರುವವನು ಮದುವೆಯಾಗಬಾರದೆ ?



ನಾನು 25 ವರ್ಷದ ಯುವಕ. ನನ್ನ ದೇಹ ಸ್ಥಿತಿ ತುಂಬಾ ದುರ್ಬಲ. ನಾನು ತುಂಬಾ ತೆಳ್ಳಗಿದ್ದು ಸ್ನೇಹಿತರಿಂದ ಬಹಳವಾಗಿ ಅಪಹಾಸ್ಯಕ್ಕೆ ಗುರಿಯಾಗಿದ್ದೇನೆ. ಮದುವೆಯ ನಂತರ ಲೈಂಗಿಕ ಸಂಪರ್ಕ ಹೊಂದುವುದು ನಿನ್ನಿಂದ ಅಸಾಧ್ಯ ಎಂದೆಲ್ಲಾ ಸ್ನೇಹಿತರು ಹೀಯಾಳಿಸುತ್ತಾರೆ. ಹೌದೇ? ಇದು ನಿಜವೇ?

ಲೈಂಗಿಕ ಸಂಪರ್ಕ ಹೊಂದಲು ಅಪಾರವಾದ ಶಕ್ತಿಯ ಅವಶ್ಯಕವಿದೆಯೇ? ನಾನು ಅಸಹಾಯಕನೇ? ದಯವಿಟ್ಟು ಉತ್ತರಿಸಿ

-ಪ್ರಿಯ ಓದುಗ, ಶಿವಮೊಗ್ಗ.

ಸಲಹೆ

ತೆಳ್ಳಗಿರುವುದಾಗಲೀ, ದಪ್ಪಗಿರುವುದಾಗಲೀ ಲೈಂಗಿಕ ಕ್ರಿಯೆಗೆ ಯಾವುದೇ ರೀತಿಯ ಅಡ್ಡಿಯಾಗುವುದಿಲ್ಲ. ನಿಮ್ಮ ದೇಹಸ್ಥಿತಿ ದುರ್ಬಲವಾಗಿದೆ ಎಂದು ಬರೆದಿರುವಿರಿ. ಯಾವ ಕಾರಣದಿಂದ ದುರ್ಬಲವಾಗಿದೆಯೋ ತಿಳಿದುಕೊಂಡು ಅಂದರೆ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಂಡು ಯಾವುದಾದರೂ ಕಾಯಿಲೆ ಇದ್ದರೆ ಚಿಕಿತ್ಸೆ ಪಡೆಯಿರಿ. ಉತ್ತಮ ಪೌಷ್ಟಿಕಾಂಶದಿಂದ ಕೂಡಿದ ಆಹಾರ ಸೇವಿಸಿ. ಹಾಲು, ಹಣ್ಣು, ಮೊಟ್ಟೆ ಅಧಿಕವಾಗಿ ಉಪಯೋಗಿಸಿ ಶರೀರದ ಪುಷ್ಟಿ ಹೆಚ್ಚಿಸಿಕೊಳ್ಳಿ.

ಮೊಡವೆ ಕಾಟ



ನನ್ನ ವಯಸ್ಸು 23. ನನ್ನ ಮುಖದಲ್ಲಿ ಮೊಡವೆ ಎದ್ದು ಮುಖ ಒಟ್ಟೆ ಒಟ್ಟೆ ಆಗಿದೆ. ಮುಖದ ತುಂಬ ಸಣ್ಣ ತೂತು. ಈ ಸಣ್ಣ ತೂತುಗಳನ್ನು ಮುಚ್ಚಿಸುವಂತಹ ಯಾವುದಾದರೂ ಒಂದು ಆಯುರ್ವೇದ ಔಷಧಿ ಇದಯೇ? ಮುಖದಲ್ಲಿನ ಮೊಡವೆ ಕಲೆಯನ್ನು ತೆಗೆಯಲು Parviolep ಪುಡಿಯನ್ನು ಉಪಯೋಗಿಸಬಹುದೆ?

-ಹೆಸರು, ಊರು ಬೇಡ.

ನಾನು ಏನು ಮಾಡಲಿ?



ನನ್ನ ಸ್ನೇಹಿತರೊಬ್ಬರು ನನ್ನನ್ನು ಕನ್ಯೆ ನೋಡಲು ಕರೆದೊಯ್ದರು ನನ್ನ ಇಚ್ಛೆಯ ಮೇರೆಗೆ. ಆ ಕನ್ಯಾ ನನಗೆ ಹಿಡಿಸಿದೆ. ಹುಡುಗಿಗೂ ನಾನು ಹಿಡಿಸಿರುವೆ. ಆದರೆ ನಾವು ಹೋದ ಸಂದರ್ಭದಲ್ಲಿ ಹುಡುಗಿಯ ತಂದೆ ಇರಲಿಲ್ಲ. ಹಾಗಾಗಿ ಜಾತಕ ಎಲ್ಲಾ ಕೂಡಿ ಬಂದರೂ ತಂದೆ ಬಂದ ನಂತರ ನಿಮಗೆ ವಿಚಾರ ತಿಳಿಸ್ತೀವಿ ಎಂದಿದ್ದರು. ಈ ಹೊತ್ತಿಗೆ ತಂದೆ ಬಂದಿರಬಹುದು. ಬಹಳ ವಿಳಂಬವಾದರೂ ಅವರು ಒಪ್ಪಿದ ಹಾಗೆ ಕಾಣುತ್ತಿಲ್ಲ. ನನಗೆ ವರದಕ್ಷಿಣೆ ಬೇಡ. ಅವರು ವರದಕ್ಷಿಣೆ ಬೇಡ್ತೇನೆಂದು ನಿರಾಕರಿಸಿರಬಹುದೇ? ನಾನೀಗ ಏನು ಮಾಡಲಿ. ಆಕೆಗೆ ನಾನು ರಿಜಿಸ್ಟರ್ಡ್ ಪೋಸ್ಟ್‌ನಲ್ಲಿ ನನ್ನಿಚ್ಛೆಯ ಪತ್ರ ಬರೆದಿದ್ದೆ, ತೆಗೆದುಕೊಂಡಿದ್ದಾಳೆ. ಆದರೆ ಉತ್ತರಿಸಿಲ್ಲ. ದಯಮಾಡಿ ನನ್ನ ಸಮಸ್ಯೆಗೆ ಪರಿಹಾರ ಹುಡುಕಿ ಕೊಡಿ.

-ಹೆಸರು, ಊರು ಇಲ್ಲ.


ಸಲಹೆ

ನೀವು ನಿಮ್ಮ ಸ್ನೇಹಿತನೊಂದಿಗೆ ನಿಮ್ಮ ಹಿರಿಯರೊಬ್ಬರನ್ನು ಹುಡುಗಿಯ ತಂದೆಯ ಬಳಿಗೆ ಕಳಿಸಿಕೊಡಿ. ನೀವು ಅವರಿಗೆ ವರದಕ್ಷಿಣೆ ಕೇಳದಿರುವ ಬಗ್ಗೆ ಹಾಗೂ ಜಾತಕಗಳ ಬಗ್ಗೆ ಸ್ಪಷ್ಟವಾಗಿ ಮಾತಾಡಬೇಕೆಂದು ಮೊದಲೇ ತಿಳಿಸಿ. ಇದರಿಂದ ಹುಡುಗಿಯ ತಂದೆಗೆ ಇಷ್ಟವಿದೆಯೋ ಇಲ್ಲವೋ, ಯಾವ ಕಾರಣದಿಂದ ನಿಧಾನಿಸುತ್ತಿದ್ದಾರೆನ್ನುವುದು ತಿಳಿಯುತ್ತದೆ. ಸಂಪ್ರದಾಯದ ಮದುವೆಯಲ್ಲಿ ಹುಡುಗಿ ಹಾಗೂ ಹುಡುಗನ ಇಷ್ಟ ಮಾತ್ರ ಮುಖ್ಯವಾಗುವುದಿಲ್ಲ. ಆಸ್ತಿ, ಅಂತಸ್ತು, ನೌಕರಿ ಹಾಗೂ ಮನೆತನ ಎಲ್ಲವನ್ನೂ ನೋಡಿಯೇ ಮದುವೆ ಮಾಡುತ್ತಾರಲ್ಲವೇ? ತಮ್ಮ ಮಗಳು ಜೀವನಪೂರ್ತಿ ಬದುಕಿ ಬಾಳಬೇಕಾದಂತಹ ಮನೆಯ ಬಗ್ಗೆ ಹಾಗೂ ಗಂಡಿನ ಬಗ್ಗೆ ಎಲ್ಲವನ್ನೂ ತಿಳಿದುಕೊಂಡು ಮುಂದುವರೆಯುವುದು ಸಹಜವಲ್ಲವೇ? ಅದಕ್ಕಾಗಿ ಅವರು ತಮ್ಮ ಉತ್ತರ ತಿಳಿಸಲು ನಿಧಾನಿಸಿರಬಹುದು.

ಸಲಹೆ

ಮೊಡವೆಯಿಂದ ಉಂಟಾದ ತೂತುಗಳನ್ನು ಮುಚ್ಚುವುದಕ್ಕೆ ಯಾವುದೇ ಔಷಧಿಯಿಲ್ಲ. ಸುಮ್ಮನೆ ಅದಕ್ಕಾಗಿ ಹಣ ವ್ಯರ್ಥ ಮಾಡಿಕೊಳ್ಳಬೇಡಿ. ಮೊಡವೆಯ ಕಲೆ ಹೋಗಲಾಡಿಸುವುದಕ್ಕೆ parolep ಪುಡಿ ಉಪಯೋಗಿಸಿ.

ನಾವು ಮದುವೆಯಾಗಬಹುದೆ?



ನಾನು 23 ವರ್ಷದ ಯುವಕ. ಈಗಾಗಲೇ ಬಿ.ಕಾಂ. ಪದವಿಯನ್ನು ಮೊಟಕುಗೊಳಿಸಿದ್ದೇನೆ. ನಾಲ್ಕು ವರ್ಷದಿಂದ ಒಂದು ಲಿಂಗಾಯಿತ ಹುಡುಗಿಯನ್ನು ಪ್ರೀತಿಸುತ್ತಿದ್ದೇನೆ. ಆಕೆಯೂ ಸಹ ನನ್ನನ್ನು ಪ್ರೀತಿಸುತ್ತಿದ್ದಾಳೆ. ಆದರೆ ಜಾತಿಯಲ್ಲಿ ಆಕೆ ನನಗಿಂತ ಉನ್ನತದವಳು. ನಾನು ಕೆಳಜಾತಿಯವನು. ಈ ಅಂತರ್ಜಾತಿಯ ವಿವಾಹವನ್ನು ಮನೆಯಲ್ಲಿ, ಊರಲ್ಲಿ ಯಾರೂ ಒಪ್ಪುವುದಿಲ್ಲ. ಗೊತ್ತಾದರೆ ಸಾಕಷ್ಟು ಉಪಟಳ ಕೊಟ್ಟು ಸರಕಾರಕ್ಕೆ ಪತ್ರ ಬರೆದು ಅಡ್ಡಿ ಪಡಿಸುತ್ತಾರೆ. ಅಲ್ಲದೆ ಈಚೆಗೆ ಆಕೆಗೆ ಟೀಚರ್ ಆಗಿ ಅಪಾಯಿಂಟ್ ಆಗಿದೆ. ನಮ್ಮ ಮದುವೆಯಿಂದ ಆಕೆಯ ಉದ್ಯೋಗಕ್ಕೆ ತೊಂದರೆ ತೆರುತ್ತಾರೆಯೇ? ಅಂತ ಭಯವಿದೆ. ನಾನು ಆಕೆಯ ನೌಕರಿ ಮೇಲೆಯೇ ಮದುವೆಯಾಗಬೇಕೆಂದು ತೀರ್ಮಾನಿಸಿದ್ದೇನೆ. ನಾವು ಮದುವೆಯಾಗಬಹುದೆ. ದಯವಿಟ್ಟು ಕೂಲಂಕಷವಾಗಿ ತಿಳಿಸಿ.

-ಎಸ್.ಎಸ್., ಊರುಬೇಡ.


ಸಲಹೆ

ನೀವು ಅನವಶ್ಯಕವಾಗಿ ಚಿಂತೆಗೀಡಾಗಿದ್ದೀರಿ. ನೀವು ಪ್ರೀತಿಸಿದ ಹುಡುಗಿಯೊಂದಿಗೆ ಧೈರ್ಯವಾಗಿ ಮದುವೆಯಾಗಿ. ಅಂತರ್ಜಾತಿ ವಿವಾಹಕ್ಕೆ ಸಾಮಾನ್ಯವಾಗಿ ಎಲ್ಲರೂ ವಿರೋಧ ವ್ಯಕ್ತಪಡಿಸುವುದು ಸಹಜ. ಮದುವೆಯ ನಂತರ, ನೀವಿಬ್ಬರೂ ಬದುಕುವ ರೀತಿ ನೋಡಿ ವಿರೋಧಿಸಿದವರೆಲ್ಲ ಮೌನವಾಗುತ್ತಾರೆ. ಈ ಮದುವೆಯಿಂದ ನೌಕರಿಗೆ ಯಾವುದೇ ರೀತಿಯ ಧಕ್ಕೆ ಉಂಟಾಗುವುದಿಲ್ಲ. ಊರಿನ ಜನರು ಸರ್ಕಾರಕ್ಕೆ ಪತ್ರ ಬರೆಯಬಹುದೆಂಬ ಅನವಶ್ಯಕ ಹೆದರಿಕೆ ಬೇಡ. ಅಕಸ್ಮಾತ್ ಬರೆದರೂ ಅದರಿಂದ ಯಾವುದೇ ಪ್ರಯೋಜನವಿಲ್ಲ. ಅವರೊಬ್ಬರಿಗೆ ನೌಕರಿ ಇದ್ದರೆ ಸಾಲದು. ನೀವು ಯಾವುದಾದರೊಂದು ಕೆಲಸಕ್ಕೆ ಪ್ರಯತ್ನಿಸಿ. ಸರ್ಕಾರದ್ದೇ ಆಗಬೇಕೆಂದಿಲ್ಲ, ಖಾಸಗಿಯಾದರೂ ಸರಿ. ಮುಂದೆ ಇದೇ ಕಾರಣಕ್ಕೆ ನಿಮ್ಮಿಬ್ಬರ ಮಧ್ಯೆ ಮನಸ್ತಾಪ ಉಂಟಾಗಬಹುದಲ್ಲವೆ?

ಗೊಂದಲ ಸರಿಪಡಿಸಿ

ಆಪ್ತರೇ, ನಾನು 26 ವರ್ಷದ ಸರ್ಕಾರಿ ಉದ್ಯೋಗಿ. ನನ್ನ ಮದುವೆಯಾಗಿ

ಋತುಮತಿಯಾಗದ ಸಮಸ್ಯೆ



ಋತುಮತಿಯಾಗದಿರುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ನನ್ನ ವಯಸ್ಸು 20. ನಾನು ಋತುಮತಿಯಾಗದ ಕಾರಣ ನನ್ನ ಮಾವ ನನ್ನನ್ನು ನಿರಾಕರಿಸಿ ಬೇರೊಂದು ಮದುವೆಯಾಗಿ ಸುಖ ಜೀವನ ಸಾಗಿಸುತ್ತಿದ್ದಾರೆ. ನನಗೆ ಜೀವನ ಬೇಡವೆನಿಸಿದೆ. ವೈದ್ಯರಲ್ಲಿ ಹೋಗಿದ್ದೆವು. ಅವರು 'ಆಗುತ್ತೀರಿ' ಎಂದು ಹೇಳಿದ್ದಾರೆ. ಪ್ರಯೋಜನ ಕಂಡಿಲ್ಲ. ನನಗಿಂತ ನನ್ನ ತಂದೆ ತಾಯಿಯರು ತುಂಬ ದುಃಖಿತರಾಗಿದ್ದಾರೆ. ದಯವಿಟ್ಟು ಸಲಹೆಯನ್ನು ಕೊಡಿ.

-ಹೆಸರು ಬೇಡ, ಊರು ಬೇಡ.

ಸಲಹೆ

ಕೆಲವರಲ್ಲಿ ಹಾರ್ಮೋನಿನ ಕಾರಣದಿಂದ ಇಲ್ಲವೇ ಗರ್ಭಕೋಶದಲ್ಲಿನ ಸಣ್ಣಪುಟ್ಟ ತೊಂದರೆಯಿಂದಾಗಿ ತಡವಾಗಿ ಋತುಸ್ರಾವವಾಗುತ್ತದೆ. ನೀವು ಒಂದು ಬಾರಿ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞ ವೈದ್ಯರ (ಗೈನಕಾಲಜಿಸ್ಟ್) ಬಳಿ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಿರಿ. ಅದಕ್ಕಾಗಿ ನೀವಾಗಲೀ, ನಿಮ್ಮ ತಂದೆ ತಾಯಿಯರಾಗಲಿ ದುಃಖ ಪಡುವುದು ಖಂಡಿತ ಸರಿಯಲ್ಲ. ನಿಮ್ಮ ಮಾವ ನಿಮ್ಮನ್ನು ಮದುವೆಯಾಗದಿದ್ದರೆ ಏನಾಯಿತು? ನಿಮಗೆ ಅವರಿಗಿಂತ ಉತ್ತಮ ಗಂಡು ದೊರಕಬಹುದು. ಅವರೀಗ ಬೇರೆ ಮದುವೆಯಾಗಿದ್ದಾರೆಂದ ಮೇಲೆ ಅವರ ಬಗ್ಗೆ ನೀವೇಕೆ ಯೋಚಿಸುವಿರಿ?




8 ತಿಂಗಳಾಗಿದೆ. ಕೌಟುಂಬಿಕ ಜೀವನಕ್ಕೆ ತೊಂದರೆಯಿಲ್ಲ ಆದರೆ ಮಾನಸಿಕವಾಗಿ ತೊಳಲಾಡುತ್ತಿರುವೆ. 19 ವರ್ಷದ ನನ್ನ ಪತ್ನಿ ಮದುವೆಗೆ ಮುನ್ನ ದಿನಗಳಲ್ಲಿ ಪ್ರೀತಿ ಪ್ರೇಮ ಎಂದುಕೊಂಡು ಒಬ್ಬನೊಂದಿಗೆ ತಿರುಗಾಟ (ಹೋಟೆಲ್, ಸಿನಿಮಾ) ಅನ್ಯೋನ್ಯತೆಗಳು ಇದ್ದು ಮದುವೆಗೆ ಮುಂಚೆಯೇ ನನಗೆ ತಿಳಿದಿತ್ತು. ಆದರೆ ಅವರ ಕುಟುಂಬದ ಮಾನ ತೆಗೆಯಲಿಚ್ಛಿಸದೇ ಆಕೆಯನ್ನು ಮದುವೆಯಾಗಿ ನಂತರ ವಿಚಾರಿಸಿದೆ ಆಕೆ ಅದನ್ನು ಒಪ್ಪಿಕೊಂಡಳು. ನಾನು ಹಾಗೆ ಆಕೆಯೊಂದಿಗಿನ ಸಂಬಂಧವನ್ನು ಹಿರಿದು ಮಾಡದೆ ಸಹಕರಿಸಿಕೊಂಡು ಜೀವನ ನಡೆಸುತ್ತಿದ್ದೇನೆ. ಆದರೆ ಇತ್ತೀಚೆಗಾಗಿ ಕೌಟುಂಬಿಕ ಜೀವನವೆಂದರೆ ಜುಗುಪ್ಸೆ, ಬೇಜಾರು. ನೌಕರಿ, ಮನೆ ಬಿಟ್ಟು ಎಲ್ಲಿಯಾದರೂ ದೂರ ಓಡಿಬಿಡಬೇಕೆನಿಸುತ್ತದೆ. ಹಾಗಂತ ನನ್ನ ಪತ್ನಿಯನ್ನು ಎಂದೂ ಕೀಳಾಗಿ ಕಂಡಿಲ್ಲ. ಈ ಮಾನಸಿಕ ಗೊಂದಲಕ್ಕೆ ಕಾರಣವೇನಿರಬಹುದು? ಎಲ್ಲದರಲ್ಲೂ ತೀರಾ ನಿರಾಸಕ್ತಿ ತುಂಬಿದೆ. ಸಮಸ್ಯೆಯ ವಿವರ ತುಂಬಾ ಇದೆ. ಸೂಕ್ತವೆನಿಸಿದಂತೆ ಚಿಕ್ಕದಾಗಿಸಿ. ಆದರೆ ಉತ್ತರ ಸಮರ್ಪಕವಾಗಿ ನೀಡಿ.

-ಹೆಸರು ಬೇಡ, ಊರು ಬೇಡ.

ಸಲಹೆ

ನೀವು ಅನವಶ್ಯಕವಾಗಿ ಗೊಂದಲಕ್ಕೀಡಾಗಿದ್ದೀರಿ. ನಿಮಗೆ ಮದುವೆಗೆ ಮುಂಚೆ ವಿಷಯ ತಿಳಿದಿದ್ದಲ್ಲದೇ ನಂತರ ನಿಮ್ಮ ಪತ್ನಿಯ ಬಳಿ ಆ ಬಗ್ಗೆ ಚರ್ಚಿಸಿರುವುದಾಗಿಯೂ ತಿಳಿಸಿದ್ದೀರಿ. ಹಾಗಿದ್ದ ಮೇಲೆ ಅದನ್ನು ಅಲ್ಲಿಗೇ ಮರೆತು ಬಿಡಬೇಕು. ಆ ವಿಷಯವನ್ನು ನೀವು ಮರೆತಂತೆ ನಟಿಸಿ ಹಾಗೆಯೇ ಮನಸ್ಸಿನಲ್ಲಿಟ್ಟುಕೊಂಡಿದ್ದೀರಾದ್ದರಿಂದ ಪದೇ ಪದೇ ನೆನಪಿಗೆ ಬಂದು ನಿಮ್ಮ ಸುಂದರ ಜೀವನವನ್ನು ಹಾಳು ಮಾಡುತ್ತಿದೆ. ಒಂದೆಡೆ ನಿಮಗೆ ಆದರ್ಶ ವ್ಯಕ್ತಿ ಎನಿಸಿಕೊಳ್ಳುವ ಹಂಬಲ, ಇನ್ನೊಂದೆಡೆ ಪತ್ನಿಯ ಬಗ್ಗೆ ಸಂಶಯ ಕಾಡುತ್ತಿದೆ. ನಿಮ್ಮ ಮನದಲ್ಲಿನ ಸಂಶಯದ ಕೀಟವನ್ನು ಹೊಡೆದೋಡಿಸಿಬಿಡಿ. ನಿಮಗೆ ನೌಕರಿ, ಮನೆ ಹಾಗೂ ಸುಖ ದುಃಖ ಹಂಚಿಕೊಳ್ಳುವ ಪತ್ನಿ ಎಲ್ಲವೂ ಇದ್ದು ಅನವಶ್ಯಕವಾಗಿ ಚಿಂತಿಸುತ್ತ ಏನೇನೋ ಕಲ್ಪಿಸಿಕೊಂಡು ನೆಮ್ಮದಿ ಹಾಳು ಮಾಡಿಕೊಳ್ಳುತ್ತಿರುವಿರಿ. ಯಾವ ವ್ಯಕ್ತಿಗೇ ಆಗಲೀ ತಪ್ಪನ್ನು ಒಪ್ಪಿಕೊಂಡಾಗ ಶಿಕ್ಷಿಸುವ ಗುಣಕ್ಕಿಂತ ಕ್ಷಮಿಸುವ ಗುಣವಿರಬೇಕು. ಕ್ಷಮೆ ಬೇರೆಲ್ಲಾ ಗುಣಗಳಿಗಿಂತ ಮಿಗಿಲಾದುದು. ಅಂತಹ ಗುಣವಿರುವವನೇ ಆದರ್ಶ ವ್ಯಕ್ತಿಯಾಗಲು ಸಾಧ್ಯ. ಇಂದಿನಿಂದಲೇ ನಿಜಕ್ಕೂ ಆದರ್ಶ ವ್ಯಕ್ತಿಯಾಗಿ ಪತ್ನಿಯೊಂದಿಗೆ ಸುಖ ಸಂತೋಷದಿಂದ ಜೀವನ ನಡೆಸಿ.

> ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ **'ಆಪ್ತ ಸಮಾಲೋಚನೆ'** ಹಾಗೂ ವೈದ್ಯಕೀಯ ಸಮಸ್ಯೆಗಳನ್ನು ಪರಿಹರಿಸುವ **''ವಯಸ್ಕರ ಸಂದೇಹ ಸಲಹೆ''** ಅಂಕಣಗಳನ್ನು ಪ್ರತಿ ತಿಂಗಳು ನಿಗದಿತ ಮಧ್ಯ ಪುಟಗಳಲ್ಲೇ ಪ್ರಕಟಿಸಲಾಗುವುದು. ಓದುಗರು ಈ ಪುಟಗಳಲ್ಲಿನ ಮಾಹಿತಿಯನ್ನು ಸಮಯಾನುಸಾರ ಬಳಸಿಕೊಳ್ಳಲು ಅನುವಾಗುವಂತೆ ಬಿಡಿಸಿಟ್ಟುಕೊಳ್ಳಬಹುದು.
>
> **ನಿಮ್ಮ ಸಮಸ್ಯೆಗಳನ್ನು ಈ ವಿಳಾಸಕ್ಕೆ ಕಳಿಸಿ :**
> ಸಂಪಾದಕರು, ಬಿಸಿಲ ಬದುಕು,
> ಅಂಕುರ ಪ್ರಕಾಶನ ಅಂಚೆ ಪೆಟ್ಟಿಗೆ : 7951 ಬಸವೇಶ್ವರನಗರ,
> ಬೆಂಗಳೂರು - 560 079.



ಮುಂದಿರುವ ಪ್ರಶ್ನೆ



ನನ್ನ ವಯಸ್ಸು 25, ನನ್ನ ಗಂಡನದು 33. ನನ್ನನ್ನು ಮೆಚ್ಚಿ ನನ್ನ ಮನೆಯವರೆನ್ನೆಲ್ಲಾ ಒಪ್ಪಿಸಿ ಮದುವೆಯಾದ ನನ್ನ ಗಂಡ ಒಬ್ಬ ಎಕ್ಸ್ ಸರ್ವೀಸ್‌ಮ್ಯಾನ್. ಮದುವೆಯಾಗಿ ಅವರು ಊರೂರು ಓಡಾಡಿಕೊಂಡಿರುತ್ತಾರೆ. ನಮ್ಮ ಮಧ್ಯೆ ದೈಹಿಕ ಸಂಪರ್ಕ ಅಷ್ಟಕಷ್ಟೇ, ಹಾಗೆ ಬಂದರೂ ನನ್ನ ಕಷ್ಟಸುಖ ಕೇಳುವುದಿಲ್ಲ. ಹೊಡೆದು ಬಡಿಯುವ ದುಶ್ಚಟ ಬೇರೆ. ನಾನು ಶಿಕ್ಷಕಿಯಾಗಿ ಕೆಲಸ ಮಾಡಿಕೊಂಡಿರುತ್ತೇನೆ. ನನಗೆ ತಂದೆ ತಾಯಿ ಇಲ್ಲ. ಅಣ್ಣ ಮದುವೆಯಾದ ನಂತರ ಈ ಕಡೆ ಹಿಂತಿರುಗಿ ನೋಡಿಲ್ಲ. ನನ್ನ ತಂಗಿಯೊಂದಿಗೆ ಇದ್ದೇನೆ. ಅವಳು ದುಡಿಯುತ್ತಿದ್ದಾಳೆ. ತೀರಾ ಈಚೆಗೆ ಆತ ನನಗೆ ಕೆಲಸ ಸಿಕ್ಕಿದೆ ಬೆಂಗಳೂರಿನಲ್ಲೇ ಬೇರೊಂದು ಕಡೆ ಇರುತ್ತೇನೆ. ವಾರಕ್ಕೊಮ್ಮೆ ಬರುತ್ತೇನೆಂದು ಇದ್ದಬದ್ದ ಹಣ ತೆಗೆದುಕೊಂಡನು. ನನಗೆ ತಿಳಿಯದೆ ಇದ್ದಬದ್ದ ಒಡವೆ ದೋಚಿದನು. 'ಬೆಂಗಳೂರಿನಲ್ಲೇ ಬೇರೆ ವಾಸ ಯಾಕೆ ಮನೆಯಿಂದಲೇ ಹೊರಟು ಬರಬಹುದಲ್ಲ' ಎಂದದ್ದಕ್ಕೆ ಹೊಡೆತಗಳೇ ಬಹುಮಾನವಾಗಿ ಸಿಕ್ಕವು! ಆದರೆ ನಂತರ ತಿಳಿಯಿತು ಆತ ನಮ್ಮ ಮನೆಯ ಪಕ್ಕದ ಗಂಡನಿಲ್ಲದ 2 ವರ್ಷ ಮಗುವಿರುವ ಹೆಣ್ಣಿನೊಂದಿಗೆ ತನ್ನ ಹೆಂಡತಿ ತನಗಿಂತ ಹಿರಿಯಳು ಅವಳಿಂದ ಸುಖವಿಲ್ಲವೆಂದು ಹೇಳಿಕೊಂಡು ವಾಸಿಸುತ್ತಿದ್ದಾರೆ. ಆತ ಒಪ್ಪಿದರೆ ಈಗಲೂ ನಾನು ಆತನೊಂದಿಗೆ ಸಂಸಾರ ಮಾಡುವೆನು. ಆದರೆ ಆತನಿಗೆ ನಾನು ಬೇಡ. ಇದೆಂತಹ ಜೀವನ? ನನಗೆ ಬೇರೆ ದಾರಿ ಇಲ್ಲವೇ? ನಾನೇನು ಮಾಡಬಹುದೆಂದು ತಿಳಿಸುವಿರಾ?

-ಹೆಸರು ಬೇಡ, ಬೆಂಗಳೂರು.

ಸಲಹೆ

ನೀವು ಪತಿಯಿಂದ ಮೋಸ ಹೋಗಿದ್ದರೂ ಸಹ ಈಗಲೂ ಅವನು ಸ್ವೀಕರಿಸಿದರೆ ಹೋಗಲು ಸಿದ್ಧ ಎಂದಿದ್ದೀರಲ್ಲ! ನಿಮ್ಮಂತಹ ವಿಶಾಲ ಮನೋಭಾವದ ಹೆಂಡತಿಯನ್ನು ಬಿಟ್ಟು ಬೇರೊಬ್ಬಳೊಂದಿಗೆ ಸಂಬಂಧ ಬೆಳೆಸಲು ಆತನ ಮನಸಾಕ್ಷಿಯಾದರೂ ಹೇಗೆ ಒಪ್ಪಿರಬಹುದು? ಅವನಿಂದ ನಿಮಗೆ ಯಾವುದೇ ರೀತಿಯ ಸುಖ, ಸಂತೋಷ, ನೆಮ್ಮದಿ ಇಲ್ಲವೆಂದಾದರೆ ಜೊತೆಗಿರುವುದಾದರೂ ಏಕೆ? ಡೈವೋರ್ಸ್ ಪಡೆದು ಸಹೃದಯ ಗಂಡು ದೊರಕಿದರೆ ಇನ್ನೊಂದು ಮದುವೆಯಾಗಿ.

ದೂರು ಕೊಡ್ರಿ, ಹೊಡೆತ ತಿನ್ರಿ!

ಮಾಮೂಲಿ ನ್ಯಾಯಾಲಯಕ್ಕೆ ಬಂದರೆ ವಿಳಂಬಾಲಯಗಳಿಗೆ ಹೋದಂತೆ. ಲೋಕ ಅದಾಲತ್ತುಗಳಿಗೆ ಹೋದರೆ ಬಾಗೇಪಲ್ಲಿ ಶ್ರೀನಿವಾಸ ರೆಡ್ಡಿಯವರಿಗಾದ ಗತಿ!

■ ಕೋ. ಚೆನ್ನಬಸಪ್ಪ

ಇದು ಅದಾಲತ್‌ಗಳ ಯುಗ. ಅದಾಲತ್ತುಗಳನ್ನು ನಡೆಸುವುದು, ಅದಾಲತ್ತುಗಳಿಗೆ ಹೋಗುವುದು ಇಂದಿನ ಫ್ಯಾಷನ್. ಅನ್ಯಾಯಕ್ಕೆ ಗುರಿಯಾಗಿ ನ್ಯಾಯ ಪಡೆಯಲು ನ್ಯಾಯಾಲಯಕ್ಕೆ ಇಡೀ ಜೀವಮಾನ ಎಡತಾಕಿ, ಕೊನೇತನಕ ಪರಿಹಾರ ಕಾಣದೆ ಸಾಯುವುದಕ್ಕಿಂತ ಬದುಕಿದ್ದಾಗಲೇ ಅಷ್ಟೊ ಇಷ್ಟೊ ಸಿಕ್ಕದ್ದೇ ದಕ್ಕಿತೆಂದು ನ್ಯಾಯ ಪಡೆಯಲು ಈಗ ನ್ಯಾಯಾಲಯಕ್ಕೆ ಹೋಗದ ಈ ಅದಾಲತ್ತುಗಳೆಂಬ ಖರ್ಚಿಲ್ಲದ ಗುಡಿಗೆ ಹೋಗುತ್ತಿದ್ದಾರೆ. ಮೊದಮೊದಲು ಮೋಟಾರ್ ವಾಹನ ಅಪಘಾತಗಳ ಪರಿಹಾರ ಪಡೆಯುವ ಸುಲಭೋಪಾಯವೆಂದು ಅದಾಲತ್ತುಗಳಿಗೆ ಹೋಗತೊಡಗಿದರು. ಆದರೆ ಬರಬರುತ್ತ ಅದಾಲತ್ತುಗಳು ಸಕಲರ ಸರ್ವಸಂಕಟ ಪರಿಹಾರದ ಏಕಮಾತ್ರ ನ್ಯಾಯ ದೇಗುಲ ಎಂಬ ಹುಸಿ ಭರವಸೆಯನ್ನು ಹುಟ್ಟಿಸಿದ್ದಾರೆ ನ್ಯಾಯಮೂರ್ತಿಗಳು, ನ್ಯಾಯಾಧೀಶರು. ರಾಜಕೀಯ ಪುಡಾರಿಗಳಿಗಂತೂ ಇದು ಸುಗ್ಗಿ.

ಬೀದಿ ದೀಪವಿಲ್ಲ; ನಲ್ಲಿಯಲ್ಲಿ ನೀರಿಲ್ಲ, ರಸ್ತೆಗಳಲ್ಲಿ ಗುಂಡಿ ಬಿದ್ದಿವೆ, ಬಸ್ಸು ಹೊತ್ತಿಗೆ ಸರಿಯಾಗಿ ಬರುತ್ತಿಲ್ಲ, ಕಂಡಕ್ಟರ್ ಒರಟಾಗಿ ವರ್ತಿಸುತ್ತಾನೆ... ಇಂಥ ಏನೇ ಸಮಸ್ಯೆಯಿರಲಿ. ಆಯಾ ಇಲಾಖಾ ಅದಾಲತ್ತುಗಳ ಮುಂದೆ ಹಾಜರಾಗಿ ಪರಿಹಾರ ಪಡೆಯಬಹುದೆಂದು ಈಗ ಜನರ ಮೂಗಿಗೆ ತುಪ್ಪ ಹಚ್ಚಿದ್ದಾರೆ. ಕೆ.ಎಸ್.ಆರ್.ಟಿ.ಸಿ ಕೂಡ ಅದಾಲತ್ತು ನಡೆಸುತ್ತಿದೆ. ಆ ಅದಾಲತ್ತುಗಳಲ್ಲಿ ಪ್ರಯಾಣಿಕರು ತಮ್ಮ ದೂರುಗಳನ್ನು ಕೊಡಬಹುದು. ತತ್‌ಕ್ಷಣ, ನಿಂತಕಾಲಮೇಲೆ ಪರಿಹಾರ ಕೊಡುತ್ತಾರೆಂಬ ಪ್ರಚಾರ. ಅಂಥಾ ಒಂದು ಅದಾಲತ್ತು ಕಳೆದ ತಿಂಗಳು 2ನೇ ತಾರೀಖು ಭಾನುವಾರ ಬಾಗೇಪಲ್ಲಿಯಲ್ಲಿ ಜರುಗಿತು. ಆ ಅದಾಲತ್ತಿನ ಮುಂದೆ ಕೆ.ಶ್ರೀನಿವಾಸ ರೆಡ್ಡಿ ಎಂಬ ನಿತ್ಯ ಬಸ್ ಪ್ರಯಾಣಿಕರು ಬಾಗೇಪಲ್ಲಿ ಡಿಪೊ ಮ್ಯಾನೇಜರ್ ಹನುಮಂತ ರೆಡ್ಡಿಯವರ ವಿರುದ್ಧ ಬಹಿರಂಗ ಅದಾಲತ್ತು ಬೈಠಕ್ಕಿನಲ್ಲಿ ಫಿರ್ಯಾದಿ ಕೊಟ್ಟರು. ಆಗ ಆತ ಏನೋ ಸಮಜಾಯಿಷಿಕೊಟ್ಟು ಪಾರಾದ.

ಭಾನುವಾರ ಅದಾಲತ್ತು ನಡೆಯಿತು. ಅದರ ಮುಂದಿನ ಮಂಗಳವಾರ ಶ್ರೀನಿವಾಸ ರೆಡ್ಡಿ ಮತ್ತು ಹನುಮಂತರೆಡ್ಡಿ ಅದೇ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಭಾನುವಾರ ತಮ್ಮ ಮೇಲೆ ಫಿರ್ಯಾದಿ ಕೊಟ್ಟಿದ್ದನ್ನು ಮರೆಯದ ಡಿಪೋ ಮ್ಯಾನೇಜರ್ ತನ್ನ ಮೇಲೆ ಫಿರ್ಯಾದಿ ಕೊಟ್ಟವರ ಗತಿ ಏನಾಗುತ್ತದೆಯೋ ನೋಡಿಕೊಳ್ಳಿ ಎಂದು ಹೆದರಿಕೆ ಹಾಕಿದರು. ಈ ಬೆದರಿಕೆಯ ಬಗ್ಗೆ ಶ್ರೀನಿವಾಸ ರೆಡ್ಡಿ ಕೆಎಸ್‌ಆರ್‌ಟಿಸಿ ಮೇಲಧಿಕಾರಿಗಳಿಗೆ ದೂರು ಕೊಟ್ಟರು. ಆಗ ಆ ಮೇಲಧಿಕಾರಿಗಳು ಶ್ರೀನಿವಾಸ ರೆಡ್ಡಿಗೆ 'ಪೋಲಿಸರಿಗೆ ಫಿರ್ಯಾದಿ ಕೊಡಿ' ಎಂದು ಉಚಿತ ಸಲಹೆ ಕೊಟ್ಟರು!

ಈಗ ಶ್ರೀನಿವಾಸ ರೆಡ್ಡಿ ಯಾವಾಗ ಏನಾದೀತೋ ಎಂದು ಅಂಗೈಯಲ್ಲಿ ಪ್ರಾಣ ಹಿಡಿದುಕೊಂಡು ಬಸ್ ಹತ್ತುತ್ತಾರೆ!! ಅದಾಲತ್ತುಗಳಲ್ಲಿ ಫಿರ್ಯಾದಿ ಕೊಡುವುದು ಎಷ್ಟು ಅಪಾಯಕರ ಎಂಬುದು ಪ್ರಜೆಗಳಿಗೆ ಈಗ ಪೂರಾ ಮನದಟ್ಟಾಗಿದೆ.

ಪ್ರಜೆಗಳು ಫಿರ್ಯಾದಿ ಕೊಟ್ಟರೆ ಆರೋಪಿಗೆ ಏನೇನೂ ಆಗುವುದಿಲ್ಲ, ಅವನ ಒಂದು ರೋಮವನ್ನು ಕೂಡ ಕೀಳುವುದಾಗುವುದಿಲ್ಲ ಎಂದು ಬಹುಜನರಿಗೆ ಗೊತ್ತಾಗಿಹೋಗಿದೆ. ಪರಿಹಾರ ಸಿಗದಿದ್ದರೆ ಹೋಗಲಿ. ಫಿರ್ಯಾದಿ ಕೊಟ್ಟವರ ಮಾನ, ಪ್ರಾಣ, ಹಣ ಉಳಿದರೆ ಸಾಕು ಎಂಬ ಸ್ಥಿತಿ ಬಂದಿದೆ. ಫಿರ್ಯಾದಿ ಕೊಟ್ಟರೆ, ಕ್ರಮಕೈಕೊಳ್ಳಬೇಕಾದ ಅಧಿಕಾರಿಗೆ ಒಂದು ಒಳ್ಳೆಯ ಅವಕಾಶ ಕಲ್ಪಿಸಿಕೊಟ್ಟಂತೆ ಆಗಿದೆ. ನೀವು ಕೊಡುವ ಫಿರ್ಯಾದಿ ಹಿಡಿದು ಕೊಂಡು ಆ ಆರೋಪಿಯನ್ನು ಹೆದರಿಸಿ ತಾನು ಪ್ರತಿಫಲ ಹೊಡೆಯುವ ಅವಕಾಶವಾಯಿತು.

ಮೇಲಾಗಿ ಯಾವನ ವಿರುದ್ಧ ಫಿರ್ಯಾದಿ ಕೊಡುತ್ತೀರೋ ಅವನು ಫಿರ್ಯಾದಿ ಕೊಟ್ಟವರ ಮೇಲೆ ಕತ್ತಿ ಮಸೆಯುವುದು ಸಾಮಾನ್ಯವಾಗಿದೆ. ಅವಕಾಶ ಸಿಕ್ಕಾಗ ಫಿರ್ಯಾದಿ ಕೊಟ್ಟವರ ಪ್ರಾಣಕ್ಕೂ ಸಂಚಕಾರ. ಮಡದಿ ಮಕ್ಕಳ ಪ್ರಾಣಕ್ಕೂ ಅಪಾಯ!!

ಫಿರ್ಯಾದಿ ಕೊಡದೆಯೆ ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಮಾಡಲೇಬೇಕಾದ ಕರ್ತವ್ಯಗಳಿವೆ. ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಕಟ್ಟಬೇಕಾದ ಪ್ರತಿಯೊಂದು ಕಟ್ಟಡಕ್ಕೂ ಪರವಾನಿಗೆ (ಲೈಸನ್ಸ್) ಪಡೆಯಲೇಬೇಕು. ಕಟ್ಟುವ ಕಟ್ಟಡ ಮಂಜೂರಾದ ನಕ್ಷೆಯಂತೆಯೆ ಇರಬೇಕು. ಹಿಂದೆ-ಮುಂದೆ ಪಕ್ಕದಲ್ಲಿ ಇಂತಿಷ್ಟು ಖಾಲಿಜಾಗ ಬಿಡಬೇಕು ಎಂಬ ಕಟ್ಟಡ ನಿರ್ಮಾಣ ಉಪನಿಯಮಗಳಿವೆ. ಮಂಜೂರಾದ ನಕ್ಷೆಯನ್ನು ಬಿಟ್ಟು ನಿಯಮಗಳಿಗೆ ವಿರುದ್ಧವಾಗಿ ಮನೆಯನ್ನು ಕಟ್ಟಿದಾಗ ಸಂಬಂಧಪಟ್ಟ ಇಂಜಿನಿಯರ್ ನಿಯಮಾನುಸಾರ ಕ್ರಮಕೈಕೊಂಡು, ಅಕ್ರಮ ಕಟ್ಟಡಗಳನ್ನು ಕಟ್ಟದಂತೆ ತಡೆಯಬೇಕು. ಒಂದು ವೇಳೆ ಕಟ್ಟಡ ಮೇಲೆದ್ದು ಬಂದಿದ್ದರೆ, ಮುಗಿದಿದ್ದರೆ, ಅದನ್ನು ಕೆಡವಿಸುವ ಕರ್ತವ್ಯ ಮಹಾನಗರ ಪಾಲಿಕೆಯ ಅಧಿಕಾರಿಗಳದ್ದು. ಆದರೆ ಮಹಾನಗರ ಪಾಲಿಕೆಯ ಅಧಿಕಾರಿಗಳು ಅಕ್ರಮ ನಿರ್ಮಾಣಕ್ಕೆ ಲಂಚ ತಿಂದೋ, ರಾಜಕೀಯ ವಸೂಲಿಯಿಂದಲೋ ಅವಕಾಶ ಕೊಡುತ್ತಾರೆ. ಇದರಿಂದ ಸಾರ್ವಜನಿಕರಿಗೂ, ನೆರೆಹೊರೆಯವರಿಗೂ ಅನಾನುಕೂಲವಾದಾಗ ಅಧಿಕಾರಿಗಳು 'ನೀವು ಮೊದಲೇ ಯಾಕೆ ಫಿರ್ಯಾದಿ ಕೊಡಲಿಲ್ಲ? ಮನೆ ಕಟ್ಟುವಾಗ ಯಾಕೆ ಸುಮ್ಮನಿದ್ದಿರಿ? ಮುಗಿಯುವತನಕ ಯಾಕೆ ಸುಮ್ಮನಿದ್ದಿರಿ?' ಎಂದು ಮುಗಿಲು ತೋರಿಸುತ್ತಾರೆ!

ಅಕ್ರಮ ಕಟ್ಟಡಗಳು ಮೇಲೇಳದಂತೆ ನಿಯಮೋಲ್ಲಂಘನೆ ಮಾಡದಂತೆ ನೋಡಿಕೊಳ್ಳಲೆಂದೇ ನಗರ ಪಾಲಿಕೆ ಅಧಿಕಾರಿಗಳನ್ನು ನೇಮಿಸಿದೆ. ಅವರು ಭ್ರಷ್ಟರಾಗಿ ತಮ್ಮ ಕರ್ತವ್ಯವನ್ನು ತಾವು ಮಾಡದೆ, ಪ್ರಜೆಗಳು ನಿಯಮೋಲ್ಲಂಘನೆಯಾದಾಗ ಫಿರ್ಯಾದಿ ಯಾಕೆ ಕೊಡಲಿಲ್ಲ ಎಂದು ಕೇಳುವುದು ಅವಿವೇಕತನ! ನೆರೆಹೊರೆಯವರು ವೈರ ಕಟ್ಟಿಕೊಳ್ಳಬಾರದೆಂದೇ ನಗರ ಪಾಲಿಕೆ ನಿಯಮಗಳನ್ನು ರಚಿಸಿ ಅದರಂತೆಯೆ ಮನೆಕಟ್ಟಬೇಕೆಂದು ಕಾನೂನು ಮಾಡಿದೆ!

ಇತ್ತೀಚೆಗೆ ರಸ್ತೆ ಅಗಲ ಮಾಡುವ ಕೆಲಸ ನಡೆಯುತ್ತಿದೆ. ರಸ್ತೆಗಳನ್ನು ಅಗಲ ಮಾಡಬೇಕಾದ್ದು ಅಗತ್ಯ. ಈ ಕೆಲಸ ಮಾಡುವ ನೆವದಿಂದ ರಸ್ತೆ ಬದಿಯಲ್ಲಿ ಹೂವು, ಹಣ್ಣು, ತರಕಾರಿ, ಸೊಪ್ಪು ಮಾರುವ ಬಡಹೆಂಗಸರನ್ನು ನಿರ್ದಾಕ್ಷಿಣ್ಯವಾಗಿ ಎತ್ತಿ ಹಾಕುವ ಈ ಗಂಡಸರು ಫಾಸ್ಟ್ ಫುಡ್ (Fast Food) ಅಂಗಡಿಗಳನ್ನು ಮುಟ್ಟುವುದೇ ಇಲ್ಲ. ಪ್ರತಿಯೊಂದು ಫಾಸ್ಟ್‌ಫುಡ್ ಅಂಗಡಿಯ ಮುಂದ 'ಪಾದಚಾರಿಗಳ ದಾರಿ'ಯಲ್ಲಿ ಗಿರಾಕಿಗಳು ಗುಂಪುಗುಂಪಾಗಿ ನಿಂತು ಕವಳ ಕಬಳಿಸುತ್ತ ದಾರಿ ಅಡ್ಡಗಟ್ಟುತ್ತಾರೆ. ಅಂಥ ಅಂಗಡಿಗಳ ಮುಂದೆ ದ್ವಿಚಕ್ರ, ತ್ರಿಚಕ್ರ ವಾಹನಗಳು ರಸ್ತೆಯ ಅರ್ಧದವರೆಗೆ ಕಿಕ್ಕಿರಿದು ನಿಂತಿರುತ್ತವೆ. ಆ ಫುಟ್‌ಪಾತ್ ತೆರವು ಮಾಡಿಸಲು ಇವರೊಬ್ಬರೂ ಕಿರುಬೆರಳು ಎತ್ತುವುದಿಲ್ಲ!! ಯಾಕೆ? ಅಧಿಕಾರಿಗಳು ಫಾಸ್ಟ್‌ಫುಡ್ ಅಂಗಡಿ ಮಾಲೀಕರ ಎಂಜಲು ತಿಂದು ನಿಯಮೋಲ್ಲಂಘನೆ ಮಾಡಲು ಅವಕಾಶ ಕೊಡುತ್ತಾರೆ. ಯಾರಾದರೂ ಫಿರ್ಯಾದಿ ಕೊಟ್ಟರೆ ಅದರಿಂದಲೂ ಲಾಭ ಪಡೆಯುತ್ತಾರೆ. ಫಿರ್ಯಾದಿ ಕೊಟ್ಟವರು ಮಾತ್ರ ಕೋಡಂಗಿಯಾಗಿ ಹೊಡೆತ ತಿನ್ನಬೇಕಾಗುತ್ತದೆ.

ಇಲ್ಲಿ ನ್ಯಾಯ ಯಾರಿಗೆ ಸಿಕ್ಕೀತು? ಇತ್ತೀಚೆಗೆ

ಮಾರ್ಚ್ 11 ರಂದು ಬೆಂಗಳೂರಿನಲ್ಲಿ ಐದು ನ್ಯಾಯಾಲಯಗಳನ್ನು ಉದ್ಘಾಟಿಸುತ್ತಾ ಶ್ರೇಷ್ಠ ನ್ಯಾಯಮೂರ್ತಿಗಳು ಹೆಚ್ಚುತ್ತಿರುವ ಮೊಕದ್ದಮೆಗಳಿಗೆ ಅನುಗುಣವಾಗಿ ನ್ಯಾಯಾಲಯಗಳ ಸಂಖ್ಯೆ ಹೆಚ್ಚಾಗಬೇಕೆಂದರು. ಕೊನೆಗೂ ನ್ಯಾಯದಾನಕ್ಕಾಗಿ ಪ್ರಜೆಗಳು ಲೋಕ ಅದಾಲತ್ತುಗಳಿಂದ ಪ್ರಯೋಜನ ಪಡೆಯಬೇಕೆಂದರು. ಅದೇ ಸಂದರ್ಭದಲ್ಲಿ ಮಾತನಾಡಿದ ಇನ್ನೊಬ್ಬ ನ್ಯಾಯಮೂರ್ತಿಗಳು ಬೆಂಗಳೂರಿನಲ್ಲಿ ಬಾಕಿ ಇರುವ ಎರಡು ಲಕ್ಷ ನಲ್ವತ್ತು ಸಾವಿರ ಮೊಕದ್ದಮೆಗಳಲ್ಲಿ 25 ಸಾವಿರ ಚಿಕ್ಕಪುಟ್ಟ ಮೊಕದ್ದಮೆಗಳನ್ನು ಕೈಬಿಡಲು ನಿರ್ಧರಿಸಿರುವುದಾಗಿ ಅಪ್ಪಣೆ ಕೊಡಿಸಿದ್ದಾರೆ. ಅಂದರೆ ಇದರ ಮಥಿತಾರ್ಥ ಸ್ಥಾಪಿತ ನ್ಯಾಯಾಲಯಗಳಿಂದ ನ್ಯಾಯ ಪರಿಪಾಲನೆ ಸಾಧ್ಯವಾಗಿಲ್ಲ ಎಂದಾಯಿತು.

ಈಗ ಪ್ರಜೆಗಳು ಅತ್ತ ದರಿ ಇತ್ತ ಹುಲಿ ಎಂಬ ಸ್ಥಿತಿಯಲ್ಲಿದ್ದಾರೆ. ಮಾಮೂಲಿ ನ್ಯಾಯಾಲಯಕ್ಕೆ ಬಂದರೆ ವಿಳಂಬಾಲಯಗಳಿಗೆ ಹೋದಂತೆ. ಲೋಕ ಅದಾಲತ್ತುಗಳಿಗೆ ಹೋದರೆ ಬಾಗೇಪಲ್ಲಿ ಶ್ರೀನಿವಾಸ ರೆಡ್ಡಿಯವರಿಗಾದ ಗತಿ! ಅಂದರೆ ಪ್ರಜೆಗಳಿಗೆ ಪರಿಹಾರ ದೊರೆಯುವುದು ಹೇಗೆ? ಈ ನ್ಯಾಯ ಪರಿಪಾಲನಾ ಪದ್ಧತಿಯಲ್ಲೇ ಏನೋ ನಿವಾರಣೆ ಆಗದ ದೋಷವಿದೆ ಎಂದಂತಾಯಿತು. ಆ ಮೂಲ ದೋಷ ಯಾವುದೆಂಬುದನ್ನು ಗುರುತಿಸಲಾರದವರು ಸಮಸ್ಯೆಯನ್ನು ಬಗೆಹರಿಸುತ್ತಾರೆಯೇ? ಆ ದೋಷ: ಬ್ರಿಟಿಷರಿಂದ ಬಳುವಳಿಯಾಗಿ ಬಂದ ಆಂಗ್ಲೋ-ಸ್ಯಾಕ್ಸನ್ (Anglo-Saxon)ಮಾದರಿಯ ಕರಿಕೋಟು ವಜ್ರ ಕವಚದ ರಕ್ಷಣೆ ಪಡೆದ ನ್ಯಾಯಾಂಗ ಪದ್ಧತಿಗೆ ನಾವು ಎಲ್ಲಿಯವರೆಗೆ ದಾಸರಾಗಿರುತ್ತೇವೆಯೋ ಅಲ್ಲಿಯವರಿಗೆ ಪ್ರಜೆಗಳಿಗೆ ವಿಳಂಬ ಶಾಪ ವಿಮೋಚನೆಯಿಲ್ಲ!! ಈ ವಿದೇಶೀ ನ್ಯಾಯ ಪರಿಪಾಲನೆ ಪದ್ಧತಿಯನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡದೆ ವಿಳಂಬ ರೋಗ ತಪ್ಪಿದ್ದಲ್ಲ. ಅದರ ಬದಲು ಗ್ರಾಮದ ಮಟ್ಟದಲ್ಲಿ ಹೆಚ್ಚೆಂದರೆ ತಾಲ್ಲೂಕು ಮಟ್ಟದಲ್ಲೇ ವ್ಯಾಜ್ಯಗಳ ಇತ್ಯರ್ಥವಾಗುವ ವ್ಯವಸ್ಥೆ ಬರಬೇಕು. ಈಗ ಕೆಲಸ ಮಾಡುತ್ತಿರುವ ಲೋಕ ಅದಾಲತ್ತುಗಳಲ್ಲಿ ಆ ಬದಲಿ ವ್ಯವಸ್ಥೆಯಿಲ್ಲ. ಅಲ್ಲಿಯೂ ಅದೇ ಕರೀಕೋಟು, ಬೆಳ್ಳಿ ಬೆತ್ತದ ಅಧಿಪತ್ಯವೇ ವಿಜೃಂಭಿಸುತ್ತಿದೆ. ಬದಲಾವಣೆ ತರುವ ಅಧಿಕಾರ ಇರುವ ರಾಜಕಾರಣಿಗಳೆಂಬ ಜನ, ಅವಿವೇಕಿಗಳೂ, ಗೂಂಡಾಗಳೂ, ಬಂಡುಕೋರರೂ, ಆಗಿರುವಾಗ ಪ್ರಜೆಗಳಿಗೆ ಇನ್ನೆಲ್ಲಿಯ ಪರಿಹಾರ! ಅಂಥ ಸಂದರ್ಭದಲ್ಲೇ ಜಯಪ್ರಕಾಶರ ಸಮಗ್ರ ಕ್ರಾಂತಿ, ಅದರ ಉಗ್ರಸ್ವರೂಪ, ನಕ್ಸಲ್ ನ್ಯಾಯವು ದಾರಿತೋರಿಸಬೇಕು. ಅದಕ್ಕೆ ಜನ ಸಿದ್ಧರಾಗಲು ಇನ್ನೂ ಎಷ್ಟು ಕಷ್ಟ ಅನುಭವಿಸಬೇಕೋ? ■

ನ್ಯಾಯದಾನದಲ್ಲಿ ವಿಳಂಬ ಅನಿವಾರ್ಯವೇನಲ್ಲ

ಒಳ್ಳೆಯ ನ್ಯಾಯಾಧೀಶರು ನ್ಯಾಯವಾದಿಗೆ ತನ್ನ ವಾದವನ್ನು ಸಂಪೂರ್ಣವಾಗಿ ಮಂಡಿಸಲು ಅವಕಾಶವನ್ನು ಕೊಡಬೇಕು. ಅವನ ವಾದದ ಮೂಲ ತಿರುಳನ್ನು ತಿಳಿದುಕೊಂಡು ಪ್ರಸ್ತಾಪಿಸಲು ಉತ್ತೇಜನ ನೀಡಬೇಕು. ಆದರೆ ಎಂಥ ಸಂದರ್ಭದಲ್ಲಿಯೂ ಅನಾವಶ್ಯಕ ವಾದವನ್ನು ಚರ್ಚಿಸುತ್ತಾ ಕೋರ್ಟ್ ವೇಳೆಯನ್ನು ಹಾಳು ಮಾಡಲು ಅವಕಾಶ ಕೊಡಬಾರದು. ನ್ಯಾಯವಾದಿಯು ನ್ಯಾಯಾಧೀಶನು ತನ್ನ ಅಭಿಪ್ರಾಯಕ್ಕೆ ಸಮ್ಮತಿಸಬೇಕೆಂದು ಬಯಸಬಾರದು. ನ್ಯಾಯಾಧೀಶನು ತನ್ನ ವಾದವನ್ನು ಸರಿಯಾಗಿ ಅರ್ಥ ಮಾಡಿಕೊಂಡು ತಾನು ಹೇಳಬೇಕಾದುದನ್ನು ಸರಿಯಾಗಿ ಹೇಳಿದನು ಎಂದು ಭಾವಿಸಿದರೆ ಸಾಕು. ಅದೇ ರೀತಿ ನ್ಯಾಯಾಧೀಶನು ನ್ಯಾಯವಾದಿಯು ತಾನು ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ಸಮ್ಮತಿಸಬೇಕೆಂದು ಬಯಸಕೂಡದು. ಯಾಕೆಂದರೆ ನ್ಯಾಯವಾದಿಯು ತನ್ನ ಅಭಿಪ್ರಾಯಕ್ಕೆ ಹೊಂದಿಕೊಂಡು ಹೋಗಲು ಕಕ್ಷಿದಾರನಿಂದ ನಿಗದಿತ ಫೀ ಪಡೆದಿರುತ್ತಾನೆ. ನ್ಯಾಯಾಡಳಿತದ ವಿಷಯದಲ್ಲಿ ಈ ತಾತ್ಪರ್ಯವನ್ನು ಅರಿತುಕೊಂಡರೆ ಕೇಸಿನ ಶೀಘ್ರವಿಲೇವಾರಿಗೆ ಅನುಕೂಲವಾಗುತ್ತದೆ. ಪದೇ ಪದೇ ಹೇಳಿದ್ದನ್ನೇ ಹೇಳುವುದು ವಾದಕ್ಕೆ ಪುಷ್ಟಿ ನೀಡುತ್ತದೆ ಎಂದು ಭಾವಿಸುವುದು ತಪ್ಪು. ಅದೇ ರೀತಿ ಹೈಕೋರ್ಟ್ ಸುಪ್ರೀಂ ಕೋರ್ಟ್‌ನ 'ರೂಲಿಂಗ್ಸ್'ನಿಂದ ಮಾತ್ರ ಕೇಸು ಗೆಲ್ಲಬಹುದೆಂದು ತಿಳಿಯುವುದು ಭ್ರಮೆ. ಕಾನೂನಿನ ತತ್ವ ಹಾಗೂ ಸಿದ್ಧಾಂತ ನಿರ್ಣಾಯಕ ಹಂತವನ್ನು ಮುಟ್ಟಿಹೋಗಿದ್ದರೆ ಯಾವುದೇ ಚರ್ಚೆ ಅಥವಾ ವಾದವಿವಾದದ ಅವಶ್ಯಕತೆ ಬೀಳುವುದಿಲ್ಲ. ಅನೇಕ ವಕೀಲರು ಕಾನೂನಿನ ತತ್ವ ಸಿದ್ಧಾಂತಗಳನ್ನು ಬಿಟ್ಟು 'ರೂಲಿಂಗ್ಸ್'ನ್ನು ಅವಲಂಬಿಸುತ್ತಾರೆ. ಇದು ದುರ್ದೈವದ ಸಂಗತಿ. ಕೆಲವೊಂದು ನ್ಯಾಯಾಧೀಶರು ಇರುತ್ತಾರೆ, 'ರೂಲಿಂಗ್ಸ್' ಹಾಜರು ಪಡಿಸದಿದ್ದರೆ ವಕೀಲರ ವಾದದಲ್ಲಿ ಹುರುಳಿಲ್ಲ ಎಂದು ಭಾವಿಸುತ್ತಾರೆ. ಬಹುಶಃ ತಾವು ಬರೆಯುವ ನಿರ್ಣಯಕ್ಕೆ ಪುಷ್ಟಿ ತಂದುಕೊಡುವ ಸಲುವಾಗಿ ರೂಲಿಂಗ್ಸ್ ಬಯಸುತ್ತಾರೇನೋ! ಇದು ಸರಿಯಲ್ಲ.

ಯಾವುದೇ ಒಂದು ಕೇಸಿನಲ್ಲಿ ಅಡಕವಾಗಿರುವ ಮೂಲಭೂತ ಸಮಸ್ಯೆ ಯಾವುದು ಎಂದು ತಿಳಿಯುವುದು ಅಷ್ಟು ಸುಲಭವಲ್ಲ. ಹೊರೆಗಟ್ಟಲೆ ಕಾಗದ ಪತ್ರಗಳನ್ನು ಎರಡೂ ಬದಿಯವರು ಕೋರ್ಟಿನಲ್ಲಿ ದಾಖಲೆ ಮಾಡಿರುತ್ತಾರೆ. ಅವುಗಳಲ್ಲಿ ಕೆಲವು ಅನಾವಶ್ಯಕವಾಗಿರುತ್ತವೆ, ಅಸಂಬದ್ಧವೂ ಆಗಿರುತ್ತವೆ. ಘಟನೆಗಳ ವಿವರಗಳು ಎರಡೂ ಬದಿಯವರಿಂದ ಇದೇ ರೀತಿಯಲ್ಲಿ ಪ್ರಸ್ತಾಪಿಸಲ್ಪಡುತ್ತವೆ. ನ್ಯಾಯವಾದಿಯ ನಿಜವಾದ ಕರ್ತವ್ಯವೆಂದರೆ ತೌಡಿನಿಂದ ಕಾಳನ್ನು ಪ್ರತ್ಯೇಕಗೊಳಿಸುವ ಹಾಗೆ ಕಲಸುಮೇಲೋಗರದಲ್ಲಿ ಸಿಕ್ಕಿಹಾಕಿಕೊಂಡ ಸತ್ಯವನ್ನು ಹೊರಹಾಕಿ ತನ್ನ ಕೇಸಿಗೆ ಪರಿಹಾರ ದೊರಕಿಸಿ ಕೊಡುವಂಥ ನೇರ ಪ್ರಶ್ನೆಯನ್ನು ಕೋರ್ಟಿನ ಮುಂದಿಟ್ಟು ವಾದವನ್ನು ಮಂಡಿಸಿ ಯೋಗ್ಯ ನಿರ್ಣಯ ಪಡೆಯಲೆತ್ನಿಸುವುದು.

ವಾದ ಮಂಡನೆಯು ಸರಳ ಹಾಗೂ ನಿಸ್ಸಂಧಿಗ್ದವಾಗಿರಬೇಕು. ನ್ಯಾಯಾಧೀಶರಿಗೆ ಕೇಸಿನ ವಿಷಯ ಸಂಪೂರ್ಣವಾಗಿ ಮನವರಿಕೆಯಾಗುವ ರೀತಿಯಲ್ಲಿರಬೇಕು. ವಕೀಲಿ ವೃತ್ತಿಯು ಎಲ್ಲ ವೃತ್ತಿಗಳಲ್ಲಿ ಶ್ರೇಷ್ಠವಾದುದು. ನ್ಯಾಯವಾದಿಯು ಯಾರ ಸೇವಕನೂ ಅಲ್ಲ. ಪರಿಪೂರ್ಣ ಸ್ವಾತಂತ್ರ್ಯ ಹಾಗು ಪ್ರಾಮಾಣಿಕತೆ ಅವನ ಸೊತ್ತುಗಳಾಗಿರುತ್ತವೆ. ತನಗೆ ಬೇಡವಾದದ್ದನ್ನು ಮಾಡಲು ಯಾರೂ ಅವನಿಗೆ ಒತ್ತಾಯಿಸಬಾರದು. ತಾನು ಹಿಡಿದ ಕೇಸಿಗೆ ಕೇಡನ್ನುಂಟು ಮಾಡಬಹುದು ಎನಿಸಿದರೆ ಕೇವಲ ತನ್ನ ಕಕ್ಷಿದಾರರನ್ನು ಖುಷಿ ಪಡಿಸಲು ಅವನು ಹೇಳಿದಂತೆಯೇ ವಾದಮಾಡಬೇಕೆಂದೇನೂ ಇಲ್ಲ. ಕೋರ್ಟಿನೊಂದಿಗೆ ಗೌರವದಿಂದ ಹಾಗೂ ವಿನಯದಿಂದ ನಡೆದುಕೊಳ್ಳಬೇಕು. ಆದರೆ ಅದೇ ವೇಳೆಗೆ ತನ್ನ ಅಂತಸ್ತು ಹಾಗೂ ಗಾಂಭೀರ್ಯವನ್ನು ಕಾಯ್ದುಕೊಳ್ಳಬೇಕು. ಒಟ್ಟಿನ ಮೇಲೆ ನ್ಯಾಯವಾದಿಯಲ್ಲಿ ಬೌದ್ಧಿಕ ಪ್ರಾಮಾಣಿಕತೆಗೆ ಬಹಳ ಬೆಲೆ ಇದೆ. ನ್ಯಾಯವಾದಿಗಳು ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಬಹುದು ಎನ್ನುವುದನ್ನು ಮರೆಯಬಾರದು.

ತರುಣ ವಕೀಲನಿಗೆ ತನ್ನ ಭಾವೀ ಜೀವನದ ಸುಖ ಹಾಗೂ ಯಶಸ್ಸಿನ ಬಗ್ಗೆ ಯಾರೂ ಭರವಸೆ ನೀಡಲಾರರು. ಅದು ಅವನ ವೈಯಕ್ತಿಕ ಕಷ್ಟ ಸಹಿಷ್ಣುತೆ, ಕಾರ್ಯ ನಿರ್ವಹಣಾ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಆದ್ದರಿಂದ ನ್ಯಾಯದಾನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಒಟ್ಟಿನಲ್ಲಿ ಸಾರ್ವಜನಿಕರು ಹಾಗೂ ನ್ಯಾಯಾಲಯಗಳು ವಕೀಲರಿಂದ ಬಹಳಷ್ಟು ನಿರೀಕ್ಷಿಸುತ್ತಾರೆ. ಆ ನಿರೀಕ್ಷೆ ಸುಳ್ಳಾಗದಂತೆ ಅವರು ನಡೆದುಕೊಳ್ಳಬೇಕು. ಸಾರ್ವಜನಿಕ ನಿರೀಕ್ಷಣೆ ಎಂದರೆ ಅವರು ಸಾಮಾಜಿಕ ಕಾರ್ಯಕರ್ತರಂತೆ, ಸ್ನೇಹಿತರಂತೆ, ಮಾರ್ಗದರ್ಶಿಗಳಂತೆ ಹಾಗೂ ದಾರ್ಶನಿಕರಂತೆ ನಡೆದುಕೊಳ್ಳಬೇಕೆಂಬುದೇ ಆಗಿದೆ. ಕೋರ್ಟುಗಳ ನಿರೀಕ್ಷಣೆ ಕುರಿತು ಮೇಲೆ ಹೇಳಿದ್ದಾಗಿದೆ. ದೀನದಲಿತರು ಹಾಗೂ ಸ್ತ್ರೀಯರ ಮೇಲೆ ಹೆಚ್ಚಿನ ಅಂತಃಕರುಣೆ ಇರಬೇಕು. ಅಂದಾಗ ಮಾತ್ರ ಉದಾತ್ತ ಆದರ್ಶಗಳ ಉಗಮ ಸ್ಥಾನವಾಗುತ್ತದೆ.

■ಬಿ.ಎಸ್. ಪಾಟೀಲ, ನಿವೃತ್ತ ನ್ಯಾಯಾಧೀಶರು, ಧಾರವಾಡ.

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಿ

ಸಾಮಾನ್ಯ ಜ್ಞಾನ

1. 1999ನೇ ವರ್ಷವನ್ನು ಯಾವ ಅಂತರ್ ರಾಷ್ಟ್ರೀಯ ವರ್ಷವನ್ನಾಗಿ ಆಚರಿಸಲಾಗುತ್ತಿದೆ?
2. ವಿಶ್ವದ ಮೊಟ್ಟ ಮೊದಲ ಆಸ್ಪತ್ರೆ ರೈಲು ಯಾವುದು? ಯಾವ ದೇಶದ್ದು?
3. ಭಾರತದಲ್ಲಿ ಯಾವ ಒಂದು ಸ್ಥಳದಲ್ಲಿ ಮಾತ್ರ ಜ್ವಾಲಾಮುಖಿ ಕಂಡು ಬಂದಿದೆ?
4. ಭಾರತದ 'ಕ್ರಿಕೆಟ್ ಪಿತಾಮಹ' ಎಂದು ಯಾರನ್ನು ಕರೆಯಲಾಗುತ್ತದೆ?
5. ಆಫ್ರಿಕಾ ಖಂಡದ ಅತಿ ದೊಡ್ಡ ದೇಶ ಯಾವುದು?
6. ಭಾರತದ ಶೇಕ್ಸ್‌ಪಿಯರ್ ಎಂದು ಯಾರನ್ನು ಕರೆಯುತ್ತಾರೆ?
7. ಆಧುನಿಕ ಖಗೋಳ ವಿಜ್ಞಾನ ಆರಂಭ ವಾದದ್ದು ಯಾರಿಂದ?
8. ನಂಬರ್-10, ಡೌನಿಂಗ್ ಸ್ಟ್ರೀಟ್ ಇದು ಯಾವ ದೇಶದ ಪ್ರಧಾನ ಮಂತ್ರಿಯ ಅಧಿಕೃತ ನಿವಾಸ?
9. ಇತ್ತೀಚೆಗೆ ಮರಣೋತ್ತರವಾಗಿ ಭಾರತರತ್ನ ವನ್ನು ಯಾರಿಗೆ ನೀಡಲಾಯಿತು?
10. ಭಾರತದ ಪ್ರಥಮ ಸಂಶೋಧನಾ ಅಣು ರಿಯಾಕ್ಟರ್ ಹೆಸರೇನು?
11. ನಿಗ್ರೋ ಗಾಂಧಿಯೆಂದೇ ಹೆಸರಾಗಿದ್ದ ನೊಬೆಲ್ ಶಾಂತಿ ಪ್ರಶಸ್ತಿ (1964) ಪಡೆದ ವ್ಯಕ್ತಿ ಯಾರು?
12. ಲಾಲ್ ಬಹದ್ದೂರ್ ಶಾಸ್ತ್ರಿಯವರ ಸಮಾಧಿ ಹೆಸರೇನು?
13. 'ಪ್ಲಾಸ್ಟಿಕ್ ಸರ್ಜರಿಯ ಪಿತಾಮಹ' ಎಂದು ಯಾರನ್ನು ಕರೆಯಲಾಗುತ್ತಿದೆ?
14. ಕನ್ನಡದ ಪ್ರಪಥಮ ವೈದ್ಯಗ್ರಂಥ ಯಾವುದು?
15. ತ್ರಿವೇಣಿಯವರ ನಿಜನಾಮವೇನು?
16. ಅಂತಾರಾಷ್ಟ್ರೀಯ ಅಣುಶಕ್ತಿ ಆಯೋಗದ ಕೇಂದ್ರ ಕಛೇರಿ ಎಲ್ಲಿದೆ?
17. ಭಾರತದ ಈಗಿನ ನೂತನ ನೌಕಾಪಡೆಯ ಮುಖ್ಯಸ್ಥರು ಯಾರು?
18. ಭಾರತದ ಅರಮನೆ (ಮಹಲು)ಗಳ ನಗರ ಯಾವುದು?
19. ಜಪಾನಿನ ರಾಷ್ಟ್ರೀಯ ಪುಷ್ಪ ಯಾವುದು?
20. ಸೂರತ್ ನಗರ ಯಾವ ನದಿಯ ದಡದ ಮೇಲಿದೆ? ಆ ನದಿ ಯಾವ ಸಮುದ್ರ ಸೇರುವುದು?
21. 1998ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಪಾತ್ರವಾದ ಕನ್ನಡ ಕೃತಿ ಯಾವುದು?
22. ಸಚಿನ್ ತೆಂಡುಲ್ಕರ್ ತಮ್ಮ ಮೊದಲ ಟೆಸ್ಟ್‌ನ್ನು ಯಾವ ದೇಶದ ವಿರುದ್ಧ ಆಡಿದರು?
23. ನೊಬೆಲ್ ಸಾಹಿತ್ಯ ಪ್ರಶಸ್ತಿ ಪಡೆದ ಮೊದಲ ಬ್ರಿಟಿಷ್ ಲೇಖಕ ಯಾರು?
24. ತಮಿಳುನಾಡಿನ ಚಿದಂಬರಂನಲ್ಲಿರುವ ದೇವಾಲಯ ಯಾವುದು?
25. 67ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದವರು ಯಾರು?
26. ರಾಷ್ಟ್ರೀಯ ಗಣಿ ಸಂಶೋಧನಾ ಕೇಂದ್ರ ಎಲ್ಲಿದೆ?
27. 1998ನೇ ಸಾಲಿನ ಬೂಕರ್ ಪ್ರಶಸ್ತಿ ಪಡೆದ ಲೇಖಕ ಯಾರು?
28. ಭಾರತೀಯ ಶಾಂತಿಪಾಲನ ಸೇನಾಪಡೆ ಶ್ರೀಲಂಕಾಕ್ಕೆ ಹೋಗಿದ್ದು ಯಾವಾಗ?
29. ಮಾಂಟಾನೋ ದ್ವೀಪ ಯಾವ ದೇಶದಲ್ಲಿದೆ?
30. ಉಗುರಿನಿಂದ ಪುಡಿ ಮಾಡಬಹುದಾದ ಖನಿಜ ವಸ್ತು ಯಾವುದು?
31. ವಿಶ್ವದಲ್ಲಿ ಎಸ್.ಟಿ.ಡಿ. ಸಂಪರ್ಕ ವ್ಯವಸ್ಥೆ ಮೊದಲು ಪ್ರಾರಂಭವಾದದ್ದು ಎಲ್ಲಿ? ಮತ್ತು ಯಾವಾಗ?
32. ಫೆಬ್ರವರಿ 1987ರಲ್ಲಿ ಭಾರತದ ಒಕ್ಕೂಟದ 23ನೆಯ ರಾಜ್ಯವಾಗಿ ಸೇರ್ಪಡೆಯಾದದ್ದು ಯಾವುದು?
33. ವಿಶ್ವಸಂಸ್ಥೆಯ ಎರಡು ಪ್ರಮುಖ ವ್ಯವಹಾರಿಕ ಭಾಷೆಗಳಾವುವು?
34. ವ್ಲಾಡಿಮಿರ್ ಇಲ್ಯಿಚ್ ಉಲ್ಯಾನೋವ್ ಎಂಬುದು ಯಾರ ನಿಜನಾಮ?
35. ವಿಶ್ವದ ಅತಿ ದೊಡ್ಡ ದೇವಾಲಯ ಎಲ್ಲಿದೆ?
36. ರಣಜಿ ಟ್ರೋಫಿಯ ದಕ್ಷಿಣವಲಯ ಛಾಂಪಿಯನ್ ಷಿಪ್‌ನ ಹೆಸರೇನು?
37. ಇಂಗ್ಲಿಷ್‌ನ 'ಸಾನೆಟ್' ಎಂಬ ಕವನದಲ್ಲಿ ಎಷ್ಟು ಸಾಲುಗಳಿರುತ್ತವೆ?
38. ಬಿರ್ಜು ಮಹಾರಾಜ್ ಯಾವ ನೃತ್ಯಕಲೆಯಲ್ಲಿ ಹೆಸರಾಗಿದ್ದಾರೆ?
39. 'ಇರ್ನಾ' ಇದು ಯಾವ ದೇಶದ ಸುದ್ದಿ ಸಂಸ್ಥೆ?
40. 1995ರ ವಿಶ್ವ ಮಹಿಳಾ ಸಮ್ಮೇಳನ ಎಲ್ಲಿ ನಡೆಯಿತು?
41. ಭಾರತದ ಮೊತ್ತ ಮೊದಲ ಹವಾ ನಿಯಂತ್ರಿತ ಚಿತ್ರಮಂದಿರ ಯಾವುದು?
42. ಈ ವರ್ಷ ವಿಶ್ವಕಪ್ ಕ್ರಿಕೆಟ್ ಅನ್ನು ಎಲ್ಲಿ ಆಡಲಾಗುವುದು?
43. 'ಬಂಗಾಳ ಹುಲಿ' ಎಂದು ಹೆಸರಾದವರು ಯಾರು?
44. ಸ್ವತಂತ್ರ ಭಾರತದ ಮೊದಲ ಮಹಿಳಾ ಕೇಂದ್ರ ಮಂತ್ರಿ ಯಾರು?
45. ಭಾರತದಲ್ಲಿ ಅಧಿಕ ಕೋಳಿ ಮೊಟ್ಟೆ ಉತ್ಪಾದಿಸುವ ರಾಜ್ಯ ಯಾವುದು?
46. ಅವಿರೋಧವಾಗಿ ಆಯ್ಕೆಗೊಂಡ ಭಾರತದ ಏಕೈಕ ರಾಷ್ಟ್ರಪತಿ ಯಾರು?
47. ಭಾರತದ ಅಣುಶಕ್ತಿ ಆಯೋಗ ಸ್ಥಾಪನೆಯಾದದ್ದು ಯಾವಾಗ?
48. ಡೆನ್ನಿಸ್ ಲಿಲ್ಲಿ ಯಾರು?
49. ಬಾಂಗ್ಲಾದೇಶದ ಚಲಾವಣೆಯ ಹಣ ಯಾವುದು?
50. ರಾಯಚೂರಿನ ಶಕ್ತಿನಗರ ಏತಕ್ಕೆ ಹೆಸರಾಗಿದೆ?

ಉತ್ತರಗಳು

1.ವೃದ್ಧರ ವರ್ಷ, 2.ಲೈಫ್‌ಲೈನ್ ಎಕ್ಸ್‌ಪ್ರೆಸ್, ಭಾರತ, 3.ಅಂಡಮಾನ್ ಮತ್ತು ನಿಕೋಬಾರ್ 4. ಪ್ರೊ.ಜಿ.ಡಿ. ದೇವಧರ್ 5.ಸೂಡಾನ್ 6.ಕಾಳಿದಾಸ 7. ಗೆಲಿಲಿಯೋ 8.ಇಂಗ್ಲೆಂಡ್ 9.ಜಯಪ್ರಕಾಶ ನಾರಾಯಣ್ 10.ಅಪ್ಸರಾ 11. ಜೂ. ಮಾರ್ಟಿನ್ ಲೂಥರ್‌ಕಿಂಗ್ 12.ವಿಜಯ ಘಾಟ್ 13.ಶುಶ್ರುತ 14.ಗೋವೈದ್ಯ 15.ಅನುಸೂಯ ಶಂಕರ್ 16.ವಿಯೆನ್ನಾ 17. ಸುಶೀಲ್ ಕುಮಾರ್ 18.ಕಲ್ಕತ್ತಾ 19.ಸಕುರ ಚೆರ್ರಿ ಬ್ಲೋಸಮ್ 20.ತಪತಿ, ಅರೇಬಿಯನ್ ಸಮುದ್ರ 21.ಸಪ್ತಪದಿ (ಕವನ ಸಂಕಲನ) 22.ಪಾಕಿಸ್ತಾನ (1989) 23.ರುಡ್ಯಾರ್ಡ್ ಕಿಪ್ಲಿಂಗ್ 24.ನಟರಾಜ 25.ಎಸ್.ಎಲ್. ಭೈರಪ್ಪ 26. ಧನಬಾದ್‌ದಲ್ಲಿ 27.ಇವಾನ್ ಮ್ಯಾಕ್ ಇವಾನ್ 28. 1987 (ಜುಲೈ 3) 29. ಫಿಲಿಫೈನ್ಸ್ 30.ಟಾಲ್ಕ್ 31.ಬ್ರಿಟನ್, 1959 32.ಮಿಜೋರಾಂ 33.ಫ್ರೆಂಚ್ ಮತ್ತು ಇಂಗ್ಲೆಂಡ್ 34.ಲೆನಿನ್ 35.ಅಂಕೋರ್ ವಾಟ್ (ಕಾಂಬೋಡಿಯಾ) 36.ಸುಂದರ್ ರಾಜನ್ ಟ್ರೋಫಿ 37.ಹದಿನಾಲ್ಕು 38.ಕಥಕ್ 39.ಇರಾನ್ 40. ಬೀಜಿಂಗ್ 41.ರೀಗಲ್ (ಮುಂಬೈ) 42.ಇಂಗ್ಲೆಂಡ್ 43.ಅಶುತೋಷ್ ಮುಖರ್ಜಿ 44.ರಾಜಕುಮಾರಿ ಅಮೃತಾಕೌರ್ 45.ಆಂಧ್ರಪ್ರದೇಶ 46.ನೀಲಂ ಸಂಜೀವರೆಡ್ಡಿ 47. 1948 48.ಕ್ರಿಕೆಟ್ ಆಟಗಾರ 49.ಟಾಕಾ 50.ಥರ್ಮಲ್ ವಿದ್ಯುತ್ ಉತ್ಪಾದನೆಗೆ.

■ ಅಶೋಕ ಜಿ. ಸಜ್ಜನ್

ನೀವೂ ಇಂಗ್ಲಿಷ್ ಕಲಿಯಿರಿ

ಭಾಗ 16.

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

(ಹಿಂದಿನ ಸಂಚಿಕೆಯಿಂದ)

ಜಾನ್ : ಜಾನಕಿ, ಕಳೆದ ಪಾಠದಲ್ಲಿ ಏನೇನು ತಿಳಿದುಕೊಂಡಿರುವೆ!

ಜಾನಕಿ : ಮೂರು ನಮೂನೆಯ ವಾಕ್ಯ ಮತ್ತು ಇತರ ವಾಕ್ಯಾಂಗಗಳನ್ನು ತಿಳಿದುಕೊಂಡೆನು. ವಾಕ್ಯ ಎಂದರೇನು ಮತ್ತು Finite and Infinite Verb ಸ್ವಲ್ಪ ಸ್ವಲ್ಪ ತಿಳಿದುಕೊಂಡೆ.

ಜಾನ್ : ಸರಿ. ಮೂರು ನಮೂನೆಯ ವಾಕ್ಯಗಳನ್ನು ಹೇಳು.

ಜಾನಕಿ : i) **SIMPLE SENTENCE** - I learnt English.
ii) **COMPLEX SENTENCE** - John said to Janaki that she should attend regularly.
III) **COMPOUND SENTENCE** - John taught and Janaki learnt.

ಜಾನ್ : ಹಾಗಾದರೆ ಈಗ ಏನು ಕಲಿಯುವುದು ಇದೆ?

ಜಾನಕಿ : Complex Sentenceದಲ್ಲಿ ಇರುವ ಮೂರು ವಾಕ್ಯಾಂಗಗಳನ್ನು (Subordinate Clauses) ಕಲಿಯುವುದಿದೆ. ಅವು ಅಂದರೆ 1) Noun Clause 2) Adjective Clause 3) Adverb Clause. ಈಗ ಒಂದೊಂದನ್ನೆ ಉದಾಹರಣೆ ಸಹಿತ ಕಲಿಸು.

ಜಾನ್ : ಸರಿ. ಈಗ Noun Clause ಕಲಿಯೋಣ. ಉದಾ :
i) I expect to get a prize.
ii) I expect that I shall get a prize
What I expect? ಮೊದಲಿನ ವಾಕ್ಯದಲ್ಲಿಯ **to get a prize** ಇದರಲ್ಲಿ ಅದರದೇ ಆದ Subject ಮತ್ತು Predicate ಇರುವುದಿಲ್ಲವಾದ್ದರಿಂದ ಇದು **Phrase.** (ವಾಕ್ಯಾಂಗ ಅಲ್ಲ) ಮತ್ತೆ ಎರಡನೆ ವಾಕ್ಯದಲ್ಲಿ...that **I shall get a Prize** ಇಲ್ಲಿ ಅದರದೇ Subject (I) ಇದೆ ಮತ್ತು ...Predicate (Shall get a prize) ಇದೆ. ಆದರೆ ಇದು ಮೊದಲನೆ ವಾಕ್ಯ ಅಂದರೆ Main Clause (I expect)ದ ಮೇಲೆ ಅವಲಂಬಿಸಿದೆ.

ಜಾನಕಿ : Very Correct. ನಿನ್ನ ಗಾಡಿ slow ಮಾಡಿ, ವಾಕ್ಯಾಂಗಕ್ಕೆ ಏನೆನ್ನುತ್ತಾರೆ ಅದನ್ನ ಹೇಳು.

ಜಾನ್ : Sorry. ಮೊದಲನೆ ವಾಕ್ಯದಲ್ಲಿ Phrase ಇದ್ದು ಅದು ವಾಕ್ಯದಲ್ಲಿಯ ಕ್ರಿಯಾಪದ Expect ಇದರ Object. ಅದಕ್ಕೆ ಅದನ್ನ object of the Verb - **Noun Phrase** ಅನ್ನುತ್ತಾರೆ. (ಅದು Nounದ ಕೆಲಸ ಮಾಡುವುದು) ಮತ್ತು (2) ನೇ ವಾಕ್ಯದಲ್ಲಿ ವಾಕ್ಯಾಂಗ (Clause) ಇದು Object of the expect ಇರುವುದರಿಂದ ಅಂದರೆ ಈ Subordinate clause- does the work of Noun. ಆದುದರಿಂದ ಅದು Noun Clause

1) NOUN CLAUSE - Subject of a Verb

ಸಂಪೂರ್ಣ Noun Clause ಕರ್ತೃಸ್ಥಾನ (Subject) ದಲ್ಲಿರುವುದು. ಆಗ ಅದು Noun Clause Subject of the verb ಆಗುವುದು. ಉದಾ.

i) <u>That son denied his father's word</u> surprised his father.

ii) <u>What son</u> said was true.

ಮೇಲಿನ ಎರಡು ವಾಕ್ಯಗಳಲ್ಲಿ ತಳರೇಖೆ ಹಾಕಿದ ವಾಕ್ಯಾಂಗಗಳನ್ನು ಅಧ್ಯಯನ ಮಾಡಿರಿ. ಅವು ಕರ್ತೃ ಸ್ಥಾನದಲ್ಲಿವೆ.

ಜಾನಕಿ : ಹೌದು. ಮಹರಾಯ ಹೌದು. ನೀನು ಪಾಠ ಹೇಳುತ್ತೀಯೋ..

ಜಾನ್ : Sorry. ಜಾನಕಿ, ಇನ್ನು ಕೇವಲ ನಾಲ್ಕು ವಿಧಗಳನ್ನು Noun Clauseದಲ್ಲಿ ಕಾಣುತ್ತೇವೆ.

ಜಾನಕಿ : ನೀನು ಹೇಳುವಾಗ ತಿಳಿಯುತ್ತದೆ. ನೀನು ಇಲ್ಲದಿರುವಾಗ ಯಾವ Clause ಅನ್ನುವುದನ್ನು ಕಂಡು ಹಿಡಿಯಬೇಕಲ್ಲ! ಅದಕ್ಕೇನಾದರು ಕ್ಲೂ (Clue) ಇದೆಯೇನು?

ಜಾನ್ : ಮೇಲಿನ ಉದಾಹರಣೆಯಲ್ಲಿ ನೋಡು ವಾಕ್ಯಾಂಗ (ಸಂಪೂರ್ಣ) ಕರ್ತೃ ಸ್ಥಾನದಲ್ಲಿದೆ ಮತ್ತು ಎರಡನೆಯದು

2) NOUN CLAUSE- Object of Transitive Verb.

ಇದರ ಅರ್ಥ ನೆನಪಿದೆಯೋ? ಇಲ್ಲವೋ? ಒಂದು ಉದಾಹರಣೆ ಹೇಳು.

ಜಾನಕಿ : ನೀನು ಮತ್ತೆ ನನ್ನ ದಡ್ಡಿ ಮಾಡ್ತಿಯೇನು? Transitive Verb ಅಂದರೆ ಸಕರ್ಮಕ ಕ್ರಿಯಾಪದ. ಕ್ರಿಯಾಪದಕ್ಕೆ What ಎಂದು ಪ್ರಶ್ನಿಸಿದರೆ ಉತ್ತರ ಸಿಗಬೇಕು. ಉದಾ : **I eat, I see,** What do I **eat**? What do I **see**? ಇಲ್ಲಿ **eat, see** ಇವು ಸಕರ್ಮಕ ಕ್ರಿಯಾಪದ, ಅಂದರೆ I **eat** ಇಲ್ಲಿ ಕರ್ಮಪದ Fruit, Bread, Snacks etc. ಮತ್ತೆ I **see** ಇಲ್ಲಿ ಕರ್ಮಪದ, ಚಿತ್ರ, ಸಿನೇಮಾ, ಮಾರುಕಟ್ಟೆ ಇತ್ಯಾದಿ. Intransitive Verb ಉದಾ- Go, Walk, Run, etc.

ಜಾನ್ : ನೀನೂ ಭಾಷಣ ಶುರು ಮಾಡಿದೆ... ಇರಲಿ.
i) The teacher **says** that he shall come tomarrow.
ii) I **asked** the boy how old he was.
ಇಲ್ಲಿ (i)ನೇದರಲ್ಲಿ **says** ಇದು Transitive Verb ಇದರ Object ಏನೆಂದರೆ - that he shall come tomarrow.
ii) ನೇದರಲ್ಲಿ **asked** ಇದರ object ಏನೆಂದರೆ how old he was. ಆದುದರಿಂದ (i) ನೇದರಲ್ಲಿಯ ವಾಕ್ಯಾಂಗವು Noun Clause object of verb **'says'**, ಮತ್ತು (ii) ನೇದರಲ್ಲಿಯ

ವಾಕ್ಯಾಂಗವು Noun Clause object of verb **'asked'**.

ಜಾನಕಿ : ನಾನು ಹೇಳುತ್ತೇನೆ i) ಶಿಕ್ಷಕ ಹೇಳಿದ - ಏನನ್ನು?
ii) ನಾನು ಕೇಳಿದೆ-? ಏನನ್ನು? ಇವೆರಡರ ಉತ್ತರ.........

ಜಾನ್ : Very Good. ಲಕ್ಷಗೊಟ್ಟು ಕೇಳಿದರೆ ಹೀಗೆ ಬೇಗನೆ ತಿಳಿಯುವುದು.

ಜಾನಕಿ : ಈ ವರ್ಣನೆ ಬೇಡ. ಪಾಠ ಮುಂದುವರಿಸು.

ಜಾನ್ : ಈಗ

3) OBJECT OF PREPOSITION

ಉದಾ. i) There is no meaning **in** what you say.
ii) Pay careful attention **to** what I am going to teach

ಇವೆರಡು ವಾಕ್ಯಗಳಲ್ಲಿ ಉಪಸರ್ಗಾವ್ಯಗಳಿಗೆ (Prepositions) **-in** ಮತ್ತು **to** ಇವುಗಳ object ಮುಂದಿನ ವಾಕ್ಯಗಳಲ್ಲಿರುವುದರಿಂದ ಅವು Noun Clause, Object of Preposition ಎನ್ನುವರು.

ಜಾನ್ : ಜಾನಕಿ, ಈಗ ನಾವು ಏನು ಕಲಿತಾ ಇದ್ದೇವೆ?

ಜಾನಕಿ : ಈಗ ನಾವು ವಿವಿಧ ನಮೂನೆಯ ವಾಕ್ಯಗಳನ್ನು ಮತ್ತು ವಾಕ್ಯಗಳ ವಿಭಜನೆ ಕಲಿತಾ ಇದ್ದೇವೆ.

ಜಾನ್ : Right. ವಿಭಜನೆ ಅಂದರೆ Analysis. ಈಗ

4) NOUN CLAUSE - Complement of a verb.

ಇಲ್ಲಿ Predicate ಅಪೂರ್ಣವಾಗಿರುವುದನ್ನುವುದು ಲಕ್ಷ ವಿರಲಿ. ಉದಾ. i) My wish **is that you may agree.**
ii) My belief **is that he will not come.**

ಮೇಲಿನ ಎರಡು ವಾಕ್ಯದಲ್ಲಿ ಕ್ರಿಯಾಪದದ ನಂತರ Predicate ಸ್ಥಾನದಲ್ಲಿ phrase ಬದಲಾಗಿ Subordinate Noun Clause ಬಂದಿದೆ. ಇದನ್ನು Noun Clause Complement of the verb 'is' ಎನ್ನುವರು.

ಜಾನಕಿ : ಈಗ ನಾಲ್ಕು ವಿಧದ Noun Clause ನಾನು ಹೇಳಲೇನು?

ಜಾನ್ : Please Wait. I tell **what you have to do.**

ಜಾನಕಿ : 'What you have to do' 'ಇದು Noun Clause object of the verb 'tell'. Right?

ಕೊನೆಹನಿ

ಜಾನ್ : O.K. ಅವಸರ ಬೇಡ. ಈಗ ನಾಲ್ಕು ವಾಕ್ಯ ಹೇಳ್ತೇನಿ. ಅವುಗಳಿಗೆ ಉತ್ತರ ಹೇಳು. ವಾಕ್ಯಗಳ ಸಂಬಂಧ ಹೇಳು.
i) I asked the boy how old he was.
ii) Why he left is a mystery.
iii) The truth is that we have been deceived.
iv) All depends on how it is done.

ಜಾನಕಿ : i) ... how old he was - Noun Clause object of the verb 'asked'
ii) .... why he left - Noun Clause subject of the verb 'is'
iii) .....that we have been deceived - Noun Clause complement of the verb 'is'
iv) ....how it is done - Noun Clause object of Preposition 'on'

ನುಡಿಗಟ್ಟು

'ಕನ್ನಡಿಯಲ್ಲಿ ಕರಿಯನ್ನು ತೋರಿಸಿದಂತೆ.' ಕಡಿಮೆ ಶಬ್ದಗಳಲ್ಲಿ ವಿಶಾಲ, ವ್ಯಂಗ್ಯ ಇತ್ಯಾದಿ ಅರ್ಥಗಳನ್ನು ಒಳಗೊಂಡಿರುತ್ತವೆ. ಅವು ವಾಕ್ಯಗಳಿಗೆ ಅಲಂಕಾರವೂ ಹೌದು.

i) **Call up** - ಸ್ಮರಣೆಗೆ ತಂದುಕೊಳ್ಳು, ನೆನಪಿಸಿಕೊಳ್ಳು
While writing examination, Rama could not **call up** the necessary subject matter.

ii) **Come round** - ಒಪ್ಪಿಕೊಳ್ಳು
I hope you will **come round** to our views.

iii) **Fall back** - ಹಿಂದೆ ಸರಿ
Seeing the strength of the opposition he **fell back.**

iv) **Go into** - ಪರೀಕ್ಷಿಸು, ಪರಿಶೀಲಿಸು
The Inspector promised to **go into** the case thoroughly.

v) **Hold Over** - ಮುಂದೆ ಹಾಕು
Because of no quorum, the subject is **held over** till next meeting.

vi) **Look after** - ಕಾಳಜಿ ಮಾಡು
In the absence of father, maternal uncle **looks after.**

ಶಬ್ದ ಸಂಪತ್ತು

ಪ್ರತಿ ಶಬ್ದಕ್ಕೆ 4 ಅರ್ಥಕೊಟ್ಟಿದ್ದು, ಕೊಟ್ಟ ಶಬ್ದದ ಸಮಾನಾರ್ಥ ಪದ ಹುಡುಕಿರಿ, ನಂತರ ಉತ್ತರ ನೋಡಿ.

a. Bevy - ಅ.ಹಗುರವಾದ ಬ. ತೆರಿಗೆ ಕ. ಮಹಿಳೆ - ಹುಡುಗಿಯರ ಸಮೂಹ ಡ.ಜೇನು ರಾಣಿ.

b. Hag - ಅ. ನೇತು ಹಾಕು ಬ. ದಪ್ಪವಾದ ಹಂದಿ ಕ.ಕುರೂಪಿ ಮಹಿಳೆ ಡ.ಅಸಹ್ಯ ಚಲನೆಯುಳ್ಳ ವೃದ್ಧ

c. Enigma - ಅ.ನಿಗೂಢ ಬ.ಕ್ರೂರ ಕ. ಅಪಕಾರಿ ಡ.ಕರುಣೆ ಹುಟ್ಟಿಸುವ

d. Spate - ಅ.ಮಹಾಪೂರ ಬ. ರಬ್ಬರ್ ಪೈಪ್ ಕ. ಕೈತುಂಬ ಡ.ಗುದ್ದಲಿ ಆಹಾರ

e. Inundate - ಅ.ತುಂಬಿ ಹರಿಯುವುದು ಬ.ಪ್ರವೇಶ ಮಾಡು ಕ. ಭೂಗತವಾಗು ಡ.ಭಯಾನಕ ವಸ್ತು


f. Ramification - ಅ.ಪರಿಣಾಮ ಬ. ಪಾಠ ಕ.ಗಂಡಾಂತರ ಡ.ಮೂರು ಅಲ್ಲ

ಉತ್ತರಗಳು :

a. ಕ b. ಕ c. ಅ d. ಅ e. ಅ f. ಅ

■ ಡಾ. ಎಸ್.ಸಿ. ಶರ್ಮಾ

ಪ್ರಾಧ್ಯಾಪಕರು,
ಆರ್.ವಿ. ಇಂಜಿನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು - 59.



ಮಾರ್ಗದರ್ಶಿ

ಮಾರ್ಗದರ್ಶಿ ವಿಭಾಗದ ನಿಮ್ಮ ಪತ್ರಗಳನ್ನು ಈ ವಿಳಾಸಕ್ಕೆ ಕಳುಹಿಸಿರಿ.
ವಿಳಾಸ: **ಬಿಸಿಲ ಬದುಕು** ಮಾಸಪತ್ರಿಕೆ, **ಮಾರ್ಗದರ್ಶಿ** ವಿಭಾಗ,
ಅಂಚೆ ಪೆಟ್ಟಿಗೆ - 7951, ಬಸವೇಶ್ವರನಗರ, ಬೆಂಗಳೂರು - 560 079.

ಗುರುಫಡ್ನೀಸ್, ಬೇಲೂರು

BSWನ್ನು ಧಾರವಾಡ ವಿಶ್ವವಿದ್ಯಾಲಯ ಅಥವಾ ಬೇರೆ ಎಲ್ಲಾದರೂ External ಆಗಿ ಮಾಡಬಹುದೆ? ಮಾಡುವ ಹಾಗಿದ್ದರೆ ವಯಸ್ಸಿನ ಆಧಾರದ ಮೇಲೆ ಅಂತಿಮ ವರ್ಷದ ಪರೀಕ್ಷೆ ಬರೆಯಬಹುದೆ?

ಪದವಿ ಮುಗಿದ ಬಳಿಕ ಎಂ.ಎಸ್. ಡಬ್ಲ್ಯೂ. ಮಾಡಬಹುದು. ಇದು ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಲಭ್ಯ. ಅಂಚೆ ತೆರಪಿನ ಮೂಲಕ ಇದನ್ನು ಮಾಡಬಹುದಾಗಿದೆ.

ಪಂಡಿತಾರಾಧ್ಯ ವಿ.ಎಚ್., ಹರಿಹರ

ನಾನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಅಂತಿಮ ಬಿ.ಎಸ್ಸಿ ಓದುತ್ತಿದ್ದೇನೆ. ಮುಂದೆ ಎಂ.ಸಿ.ಎ ಮಾಡಬೇಕು. ನಮ್ಮ ವಿ.ವಿ.ಯಲ್ಲಿ ಎಂ.ಸಿ.ಎ. ಇಲ್ಲ. ಬೇರೆ ವಿಶ್ವವಿದ್ಯಾಲಯದಲ್ಲಿ ಹೊರಗಿನವರಿಗೆ 2 ಸೀಟು ಮಾತ್ರ ಇರುತ್ತದೆ. ನಾವು free MCA seatಗಾಗಿ ಎಲ್ಲಿಗೆ ಹೋಗಬೇಕು. ಸುರತ್ಕಲ್‌ನಲ್ಲಿ Karnataka Wise Seat Distribution ಇದೆಯಂತೆ ಅದು ನಿಜವೇ?

ಕುವೆಂಪು ವಿ.ವಿ.ಯಡಿಯಲ್ಲಿ ಅನೇಕ ಖಾಸಗಿ ಕಾಲೇಜುಗಳಲ್ಲಿ ಎಂ.ಸಿ.ಎ. ಲಭ್ಯವಿರುತ್ತದೆ. ಈ ಕೋರ್ಸ್ ದಾವಣಗೆರೆಯ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇದೆ. ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸದಿಂದ ಪಡೆಯಬಹುದು.

ಪ್ರಿನ್ಸಿಪಾಲ್, ಬಾಪೂಜಿ ಇಂಜಿನಿಯರಿಂಗ್ ಕಾಲೇಜ್, ಶಾಮನೂರು, ದಾವಣಗೆರೆ.

ಜಿ.ಎಂ.ಎಸ್., ಊರಿಲ್ಲ

ನನಗೆ ಬ್ಯಾಂಕ್ ಪರೀಕ್ಷೆ ಪಾಸಾಗಬೇಕೆಂಬ ಬಯಕೆ. ಆದರೆ ಎಸ್.ಎಸ್.ಎಲ್.ಸಿ., ಪಿ.ಯು.ಸಿ.ಯಲ್ಲಿ ಕಡಿಮೆ ಅಂಕಗಳು ಬಂದಿರುವುದರಿಂದ ಅರ್ಹತೆ ಇಲ್ಲ. ನಾನೀಗ ಡಿಪ್ಲೋಮಾ ಅಂತಿಮ ವರ್ಷ ಓದುತ್ತಿದ್ದೇನೆ.

1. ಡಿಪ್ಲೋಮಾ ಪಾಸಾದ ನಂತರ ಬ್ಯಾಂಕ್ ಪರೀಕ್ಷೆ ಬರೆಯಬಹುದೇ?
2. KES ಮಾಡಬೇಕಾದರೆ ಲಿಖಿತ ಪರೀಕ್ಷೆ ಪಾಸಾಗಬೇಕೆ?
3. KESನಲ್ಲಿ ಎಷ್ಟು ವಿಷಯಗಳಿರುವುವು?

ಬ್ಯಾಂಕ್ ಪರೀಕ್ಷೆ ಬರೆಯಬೇಕಾದಲ್ಲಿ ಎಸ್.ಎಸ್.ಎಲ್.ಸಿ. ಯಲ್ಲಿ ಪ್ರಥಮ ಶ್ರೇಣಿಯಲ್ಲಿ ಇಲ್ಲವೆ ಪಿ.ಯು.ಸಿ.ಯಲ್ಲಿ ದ್ವಿತೀಯ ಶ್ರೇಣಿ ಅಥವ ಪದವಿ ಪಡೆದಿರಬೇಕು. ಡಿಪ್ಲೊಮಾ ಆಧಾರದ ಮೇಲೆ ಬ್ಯಾಂಕ್ ಪರೀಕ್ಷೆ ಬರೆಯಲು ಆಗುವುದಿಲ್ಲ.

ತುಕಾರಾಮ ಕರದಿನ, ಸುರೇಬಾನ

ನಾನು ಕನ್ನಡ ಪಂಡಿತ ಪರೀಕ್ಷೆಗೆ ಕುಳಿತುಕೊಳ್ಳಲು ಇಚ್ಛಿಸಿದ್ದೇನೆ. ನನಗೆ ಅದರ ವಿಳಾಸ ಹಾಗೂ ಅರ್ಜಿ ಕರೆಯುವ ತಿಂಗಳು ಯಾವುದೆಂದು ತಿಳಿಸಿ.

ಕನ್ನಡ ಸಾಹಿತ್ಯ ಪರಿಷತ್‌ರವರು ಈ ಪರೀಕ್ಷೆಗಳನ್ನು ನಡೆಸುತ್ತಾರೆ. ಇದರ ಮಾಹಿತಿಗೆ ನಿಮ್ಮ ಜಿಲ್ಲಾ/ತಾಲ್ಲೂಕಿನ ಸಾಹಿತ್ಯ ಪರಿಷತ್‌ನ ಅಧ್ಯಕ್ಷರನ್ನು ಸಂಪರ್ಕಿಸಿ.

ರಾಘವೇಂದ್ರ

ನಾನು ಜಾತಿಯಿಂದ II(ಎ) ಪ್ರವರ್ಗಕ್ಕೆ ಸೇರಿದವನಾಗಿದ್ದು, ನಮ್ಮ ತಂದೆಯವರು ಸರ್ಕಾರಿ ಉದ್ಯೋಗಿಯಾಗಿರುತ್ತಾರೆ. ಕೇವಲ ಈ ಜಾತಿ ಪ್ರಮಾಣ ಪತ್ರದ ಆಧಾರದ ಮೇಲೆ ನನಗೆ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ದೊರಕುವುದೇ?

ನಿಮ್ಮ ತಂದೆ ಉದ್ಯೋಗದಲ್ಲಿ ಇದ್ದರೂ ಸಹ ನಿಮಗೆ ಜಾತಿ ಆಧಾರದ ಮೇಲೆ 11(ಎ) ವಿಭಾಗದಲ್ಲಿ ಸರಕಾರಿ ಉದ್ಯೋಗದಲ್ಲಿ ಮೀಸಲಾತಿ ದೊರಕುತ್ತದೆ.

ರಾಘವೇಂದ್ರ, ವಡ್ಡರಹಟ್ಟಿ

ಕರ್ನಾಟಕ ಸರ್ಕಾರದವರು ಹೊರಡಿಸುವ ಕರ್ನಾಟಕ ರಾಜ್ಯ ಪತ್ರ (ಗೆಜೆಟಿಯರ್)ವು ಕೊಂಡುಕೊಳ್ಳಲು ಸಿಗುವುದೆ? ಸಿಗುವುದೆಂದಾದಲ್ಲಿ ಯಾವ ಸ್ಥಳ, ಯಾವ ಕಛೇರಿಗಳಲ್ಲಿ ದೊರಕುವುದು? ಇಲ್ಲದಿದ್ದರೆ ಯಾವ ಸರ್ಕಾರಿ ಕಛೇರಿಗಳಲ್ಲಿ ಅದು ನೋಡಲು ಸಿಗುವುದು. ಅದನ್ನು ಸರ್ಕಾರಿ ಕಛೇರಿಗಳಲ್ಲಿ ಓದಲು ಅನುಮತಿ ಕೊಡುವರೆ?

ಕರ್ನಾಟಕ ಸರಕಾರದವರು ಹೊರಡಿಸುವ ಕರ್ನಾಟಕ ರಾಜ್ಯ ಪತ್ರ (ಗೆಜೆಟಿಯರ್) ನೀವು ಸಾರ್ವಜನಿಕ ಗ್ರಂಥಾಲಯಗಳಲ್ಲಿ, ಉಚಿತವಾಗಿ ನೋಡಬಹುದು. ಅಲ್ಲಿಯ ಗ್ರಂಥಪಾಲಕರನ್ನು ಕೇಳಿದರೆ ಅವರು ತೋರಿಸುತ್ತಾರೆ.

ಹೆಸರಿಲ್ಲ, ಭಟ್ಕಳ

ನಾನು M.A., B.Ed ಮಾಡಿರುವ ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕ. 13 ವರ್ಷ ಸೇವೆ ಮುಗಿಸಿ 14ನೇ ವರ್ಷದಲ್ಲಿ ಕಾಲಿಟ್ಟಿದ್ದೇನೆ. ನನಗೆ

ಹೆಸರಿಲ್ಲ, ಬಸಾಪಟ್ಟಣ

ನಾನು ಪಿ.ಯು.ಸಿ. (ವಿಜ್ಞಾನ)ಯಲ್ಲಿ ಶೇ.40 ಅಂಕಗಳನ್ನು ಪಡೆದಿರುತ್ತೇನೆ. ನನಗೆ DGNM (Diploma in General Nursing & Midwifery) ಕೋರ್ಸ್ ಮಾಡಬೇಕೆಂಬ ಆಸೆ. ಈ ಕೋರ್ಸ್ ಮಾನ್ಯತೆ ಪಡೆದಿದೆಯೇ? ಮಾನ್ಯತೆ ಪಡೆದ ಕಾಲೇಜುಗಳನ್ನು ತಿಳಿಸಿ. ಈ ಕೋರ್ಸ್‌ನ ಆಧಾರದ ಮೇಲೆ ಸರ್ಕಾರಿ ಅಥವಾ ಖಾಸಗಿ ಉದ್ಯೋಗ ದೊರಕುವುದೆ? ಈ ಕೋರ್ಸ್ ಆಧಾರದ ಮೇಲೆ ಮೆಡಿಕಲ್ ಪ್ರಾಕ್ಟೀಷನರ್ ಎಂದು ಖಾಸಗಿ ಕ್ಲಿನಿಕ್ ತೆರೆಯಲು ಲೈಸೆನ್ಸ್ ಸಿಗುತ್ತದೆಯೇ ತಿಳಿಸಿ.

ನೀವು ಡಿ.ಜಿ.ಎನ್.ಎಂ.ನ್ನು ಅಗತ್ಯವಾಗಿ ಮಾಡಬಹುದು. ಇದು ಮಾನ್ಯತೆ ಪಡೆದಿರುವ ಕೋರ್ಸ್. ಈ ಕೋರ್ಸ್ ಜಿಲ್ಲಾ ಆಸ್ಪತ್ರೆಗಳಲ್ಲಿಯೂ ದೊರೆಯುತ್ತದೆ. ಆದರೆ ಇಲ್ಲಿ ಮೆರಿಟ್ ಮೇಲೆ ಸೀಟ್ ಹಂಚುತ್ತಾರೆ. ಅನೇಕ ಖಾಸಗಿ ಕಾಲೇಜುಗಳಲ್ಲಿ ಈ ಕೋರ್ಸ್ ಲಭ್ಯವಿರುತ್ತದೆ. ಇದರಿಂದ ಸರಕಾರಿ/ಖಾಸಗಿ ಕಚೇರಿಗಳಲ್ಲಿ ಉದ್ಯೋಗ ದೊರೆಯುವ ಸಾಧ್ಯತೆ ಇದೆ. ಈ ಕೋರ್ಸ್‌ನ ಆಧಾರದ ಮೇಲೆ ಮೆಡಿಕಲ್ ಪ್ರಾಕ್ಟೀಷನರ್ ಎಂದು ಕ್ಲಿನಿಕ್ ತೆರೆಯಲು ಸಾಧ್ಯವಿಲ್ಲ ಮತ್ತು ಲೈಸೆನ್ಸ್ ಸಹ ದೊರಕುವುದಿಲ್ಲ. ಆಸ್ಪತ್ರೆಗಳಲ್ಲಿ ಕೆಲಸ ಮಾಡಬಹುದು. ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ.

ಗೌತಮ ಅಕಾಡೆಮಿ ಆಫ್ ಮೆಡಿಕಲ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್, ಮಂಜುನಾಥನಗರ, ರಾಜಾಜಿನಗರ, ಬೆಂಗಳೂರು - 560 010.

ಸೋಮನಾಥ, ಹರಪನಹಳ್ಳಿ

ನನಗೆ 19 ವರ್ಷ. ನಾನು ಎಸ್.ಎಸ್.ಎಲ್.ಸಿ. ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದು ಈಗ ITI ಮಾಡುತ್ತಿದ್ದೇನೆ. ನನಗೆ 'ಗ್ರಾಮ ಲೆಕ್ಕಾಧಿಕಾರಿ' ಆಗಬೇಕೆಂಬ ಆಸೆ. ಇದಕ್ಕೆ ಸಂಬಂಧಪಟ್ಟ ಯಾವುದಾದರೂ ಕೋರ್ಸ್ ಇದೆಯೇ? ಇದ್ದರೆ ಅದು ಎಲ್ಲಿದೆ ಹಾಗೂ ಎಷ್ಟು ವರ್ಷದ ಕೋರ್ಸ್ ಎಂಬುದನ್ನು ತಿಳಿಸಿ.

ಗ್ರಾಮ ಲೆಕ್ಕಾಧಿಕಾರಿಯಾಗಲು ಯಾವುದೇ ವಿಷಯದಲ್ಲಿ ಪದವಿ ಪಡೆದಿದ್ದರೆ ಸಾಕು. ಇದಕ್ಕೆ ಯಾವುದೇ ರೀತಿಯ ಕೋರ್ಸ್ ಇಲ್ಲ.

ಈಗ Article-32ರ ಪ್ರಕಾರ ಜೂನಿಯರ್ ಕಾಲೇಜಿನಲ್ಲಿ ಬೋಧನೆ ಮಾಡಲು ಅವಕಾಶ ಸಿಗಬಹುದೆ? ಹೈಸ್ಕೂಲಿಗೆ ಬಡ್ತಿ ಯಾವಾಗ ಸಿಗಬಹುದು ತಿಳಿಸಿ.

ನಿಮ್ಮ ಪ್ರಶ್ನೆಯನ್ನು ನೀವು ನಿಮ್ಮ ಇಲಾಖೆಯಲ್ಲಿ ಸಂಬಂಧ ಪಟ್ಟ ಹಿರಿಯ ಅಧಿಕಾರಿಯನ್ನು ಕೇಳಿ ತಿಳಿದುಕೊಳ್ಳಿ.

ಗೋವಿಂದ, ಗಂಗಾವತಿ

ನನ್ನದೊಂದು ಸಂದೇಹ. ಅಂಗವಿಕಲರು IAS ಸ್ಪರ್ಧಾತ್ಮಕ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರೆ? IAS ಪರೀಕ್ಷೆಗೆ ಹಾಜರಾಗಲು ಶಾರೀರಿಕ ದೃಢತೆ, ಎತ್ತರ, ಕಣ್ಣಿನದೃಷ್ಟಿ, ಎದೆಯ ಅಳತೆ ಇವುಗಳ ಅವಶ್ಯಕತೆ ಇದೆಯೇ? IAS ಪರೀಕ್ಷೆ ಬರೆಯಲು ಎಷ್ಟು ಅವಕಾಶಗಳನ್ನು ನೀಡುತ್ತಾರೆ?

ಅಂಗವಿಕಲರು ಐ.ಎ.ಎಸ್. ಪರೀಕ್ಷೆಗೆ ಕುಳಿತುಕೊಳ್ಳಬಹುದು. ಇದಕ್ಕೆ 4 ಅವಕಾಶಗಳನ್ನು ಕೊಡುತ್ತಾರೆ.

ರಾಮಹೆಗಡೆ, ಯಲ್ಲಾಪುರ

ನಾನು ಈಗ I BSc Electronics ಓದುತ್ತಿದ್ದೇನೆ. BSc ಮುಗಿಸಿ Indian Institute of Scienceನ ಪ್ರವೇಶ ಪರೀಕ್ಷೆಯಲ್ಲಿ ಪಾಸಾದರೆ ನೇರವಾಗಿ M. Tech ಡಿಗ್ರಿಗೆ ಪ್ರವೇಶ ಪಡೆಯಬಹುದೆಂದು ಕೇಳಿದ್ದೇನೆ. ಪಿ.ಯು.ಸಿ. ಯಿಂದ ITI ಪ್ರವೇಶ ಪರೀಕ್ಷೆ ಬರೆದರೆ B.Tech.ಗೆ ನೇರವಾಗಿ ಸೇರಬಹುದೆಂದು ಹೇಳುತ್ತಾರೆ. ಇದರ ಬಗ್ಗೆ ಮಾಹಿತಿ ನೀಡಿ.

ಬಿ.ಎಸ್ಸಿ. ಆದ ಮೇಲೆ ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಂ.ಟೆಕ್‌ಗೆ ಅವಕಾಶವಿಲ್ಲ.ಎಂ.ಟೆಕ್‌ಗೆ ಎಂ.ಎಸ್ಸಿ ಅವಶ್ಯಕ. ಪಿ.ಯು.ಸಿ. ಆಧಾರದ ಮೇಲೆ ಪ್ರವೇಶ ಪರೀಕ್ಷೆ ಬರೆದರೆ ಐ.ಟಿ.ಐ. ಮಾಡಬಹುದು. ಬಿ.ಟೆಕ್ ಮಾಡಲು ಸಾಧ್ಯವಿಲ್ಲ.

ಕೆ. ಸಮೀರ, ಹೊನ್ನಾವರ

ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಶಂಕಪುಷ್ಪಿ ಎಂಬ ಔಷಧಿ ತೆಗೆದುಕೊಳ್ಳುವುದರಿಂದ ಚೆನ್ನಾಗಿ ನೆನಪಿಟ್ಟುಕೊಂಡು ಪರೀಕ್ಷೆಯಲ್ಲಿ ಬರೆಯಬಹುದು ಎನ್ನುತ್ತಾರೆ. ಇದು ನಿಜವೇ? ಇದರಿಂದ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆ ಹೊಂದಬಹುದೇ?

ನೀವು ಇಂತಹ ಆಲೋಚನೆಗಳನ್ನೆಲ್ಲ ಮಾಡದೆ ಕಷ್ಟಪಟ್ಟು ಚೆನ್ನಾಗಿ ಓದಿದರೆ ಮೊದಲ ದರ್ಜೆಯಲ್ಲಿ ತೇರ್ಗಡೆಯಾಗಬಹುದು. ನೀವು ಚೆನ್ನಾಗಿ ಓದಿ ತೇರ್ಗಡೆಯಾಗಿ. ಇತರರ ಇಂತಹ ಮಾತಿಗೆ ಬೆಲೆ ಕೊಡಬೇಡಿ.

ನಾಗನಾಥ ಹೆಚ್.ಎ., ರಟ್ಟೀಹಳ್ಳಿ

ನಾನು ITI ಮಾಡಿದ್ದೇನೆ. BPL ಕಂಪನಿಯಲ್ಲಿ ಅಪ್ರೆಂಟಿಸ್ ಮಾಡಬೇಕೆಂದಿದ್ದೇನೆ. ಕಂಪನಿಯವರೇ ಅರ್ಜಿ ಕರೆಯುತ್ತಾರೋ ಅಥವಾ ಕಂಪನಿಗೆ ನಾವೇ ಅರ್ಜಿ ಸಲ್ಲಿಸಬೇಕೋ ತಿಳಿಸಿ. ITI Electronics Mechanic ನಂತರ ಯಾವ ಕೋರ್ಸಿಗೆ ಸೇರಿದರೆ ಒಳ್ಳೆಯದು ತಿಳಿಸಿ.

ಬಿ.ಪಿ.ಎಲ್. ಕಂಪನಿಯವರು ಸಾಮಾನ್ಯವಾಗಿ ಅಪ್ರೆಂಟಿಸ್‌ಗಾಗಿ ಅರ್ಜಿಗಳನ್ನು ಕರೆಯುತ್ತಾರೆ. ಇದಕ್ಕಾಗಿ ತಾವು ದಿನಪತ್ರಿಕೆಗಳನ್ನು ಗಮನಿಸಬೇಕು. ತಾವು ಒಂದು ಅರ್ಜಿಯನ್ನು ಬಿ.ಪಿ.ಎಲ್. ಕಂಪನಿಗೆ ಕಳಿಸುವುದು ಉತ್ತಮ.

ಸ್ನೇಹಲತಾ ಜೋಶಿ, ಗಂಗಾವತಿ

ಎಸ್.ಎಸ್.ಎಲ್.ಸಿ. ಅಂಕ ಪಟ್ಟಿಯಲ್ಲಿ ನನ್ನ ಹೆಸರು ಸ್ನೇಹಲತಾ ಎಂದಿರುತ್ತದೆ. ಪಿ.ಯು.ಸಿ. ಪದವಿ ಹಾಗೂ ಬಿ.ಎಡ್ ಅಂಕಪಟ್ಟಿಗಳಲ್ಲಿ ಸ್ನೇಹಲತಾ ಜೋಶಿ ಎಂದಿರುತ್ತದೆ. ಈ ವ್ಯತ್ಯಾಸದಿಂದ ಮುಂದೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅರ್ಜಿ ಹಾಕಲು, ಉದ್ಯೋಗ ಪಡೆಯುವಾಗ ತೊಂದರೆ ಆಗುತ್ತದೆಯೇ?

ನಿಮ್ಮ ಹೆಸರು ಎಲ್ಲಾ ಮಾರ್ಕ್ಸ್ ಕಾರ್ಡಿನಲ್ಲೂ ಒಂದೇ ಇರಬೇಕು. ಇಲ್ಲವಾದಲ್ಲಿ ಉದ್ಯೋಗ ಪಡೆಯುವಾಗ ಸಮಸ್ಯೆಯಾಗುತ್ತದೆ. ನಿಮ್ಮ ಹೆಸರನ್ನು ಎಸ್.ಎಸ್.ಎಲ್.ಸಿ. ಮಾರ್ಕ್ಸ್ ಕಾರ್ಡಿನಲ್ಲಿ ಇದ್ದಂತೆ ಪಿ.ಯು.ಸಿ. ಪದವಿ ಮತ್ತು ಬಿ.ಎಡ್. ಅಂಕ ಪಟ್ಟಿಗಳಲ್ಲಿ ಹೆಸರನ್ನು ಬದಲಾಯಿಸಿಕೊಳ್ಳಿ.

ಕೆ.ಎಂ. ಮುಲ್ಲಾ, ಗುಲ್ಬರ್ಗಾ

ನಾನು ಧಾರವಾಡದ ರಾಷ್ಟ್ರೀಯ ವಿದ್ಯಾಲಯದ ಮುಖಾಂತರ, ವಯಸ್ಸಿನ ಆಧಾರದ ಮೇಲೆ M.A. ಗೆ ಸೇರಿದ್ದೇನೆ. ನನ್ನ ವಯಸ್ಸು 23. ನನಗೆ ತಿಳಿದ ಪ್ರಕಾರ ಇದು Private Institute. ಇಲ್ಲಿ ಎಂ.ಎ. ಮಾಡಿದರೆ ಉಪಯೋಗವಿಲ್ಲ ಎನ್ನುತ್ತಾರೆ. ಆದ್ದರಿಂದ ನನ್ನಲ್ಲಿ ಆತಂಕ ಹುಟ್ಟಿಕೊಂಡಿದೆ. ಈ NATIONAL INSTITUTE ನಿಂದ ಎಂ.ಎ. ಮಾಡಿ ನಂತರ Ph.d ಮಾಡುವ ಗುರಿ ಇಟ್ಟುಕೊಂಡಿದ್ದೇನೆ. ಇದರ ಬಗ್ಗೆ ಸಲಹೆ ಕೊಡಿ.

ನೀವು ಎಂ.ಎ. ಯನ್ನು ಮಾಡುತ್ತಿರುವುದರಿಂದ ಇದನ್ನೇ ಮುಗಿಸಿ ನಂತರ ನಿಮ್ಮ ಇಚ್ಛೆಯಂತೆ ಪಿ.ಹೆಚ್.ಡಿ. ಮಾಡಬಹುದು.

ಹೆಸರಿಲ್ಲ

ನಾನು ದ್ವಿತೀಯ ಪಿ.ಯು.ಸಿ. (ಶಿಕ್ಷಣ ವಿಭಾಗ)ಯಲ್ಲಿ ಶೇ. 65ರಷ್ಟು ಅಂಕ ಗಳಿಸಿದ್ದೇನೆ. ನಾನು ಮುಂದೆ TCH ಮಾಡಬೇಕೆಂದಿದ್ದೇನೆ. ಇದು ಸಾಧ್ಯವೇ ತಿಳಿಸಿ.

ಟಿ.ಸಿ. ಎಚ್. ಮಾಡಲು ಇರಬೇಕಾದ ಕನಿಷ್ಠ ಅರ್ಹತೆಯೆಂದರೆ ಪಿ.ಯು.ಸಿ.ಯಲ್ಲಿ ಶೇ.50 ಅಂಕಗಳನ್ನು ಪಡೆದಿರಬೇಕು. ಇದರಿಂದ ನೀವು ಟಿ.ಸಿ.ಹೆಚ್. ಮಾಡಬಹುದಾಗಿದೆ.

ಜಗನಾಥ್, ಬಸಾಪಟ್ಟಣ

ನನ್ನ ಸಹೋದರಿಯು JODC ಕೋರ್ಸ್ ಆದ Clothing and Embroiding ಯನ್ನು ಶೇ. 70 ಅಂಕಗಳಿಂದ ಉತ್ತೀರ್ಣಳಾಗಿರುತ್ತಾಳೆ. ಅವಳು BSRB ಪರೀಕ್ಷೆಗೆ ಅರ್ಜಿ ಹಾಕಲು ಅರ್ಹಳೆ? JODC ಕೋರ್ಸ್ ಅರ್ಹತೆಯ ಆಧಾರದ ಮೇಲೆ TCHಗೆ ಅರ್ಜಿ ಹಾಕಬಹುದೇ?

ಜೆಓಡಿಸಿ ಕೋರ್ಸ್ ಆಧಾರದ ಮೇಲೆ ಟಿ.ಸಿ.ಹೆಚ್. ಮಾಡಲು ಸಾಧ್ಯವಿಲ್ಲ. ಹಾಗು ಬಿ.ಎಸ್.ಆರ್.ಬಿ. ಪರೀಕ್ಷೆಯನ್ನು ಜೆಓಡಿಸಿ ಕೋರ್ಸ್ ಆಧಾರದ ಮೇಲೆ ಬರೆಯಲು ಆಗುವುದಿಲ್ಲ. ಆದರೆ ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದರೆ ಬಿ.ಎಸ್.ಆರ್.ಬಿ. ಪರೀಕ್ಷೆ ಬರೆಯಬಹುದು.

ಏಷಿಯನ್ ಜರ್ನಲಿಸಂ ಕಾಲೇಜಿನಿಂದ
ಕನ್ನಡ ಪತ್ರಿಕೋದ್ಯಮ ಸ್ನಾತಕೋತ್ತರ ಡಿಪ್ಲೋಮಾ
ಪ್ರವೇಶಕ್ಕೆ ಅರ್ಜಿ ಆಹ್ವಾನ

ಬಿ.ಡಿ. ಗೋಯಂಕಾ ಪ್ರತಿಷ್ಠಾನ ಬೆಂಗಳೂರಿನಲ್ಲಿ ಸ್ಥಾಪಿಸಿರುವ ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ ಕಳೆದ ಐದು ವರ್ಷಗಳಿಂದ ದೇಶದಲ್ಲಿ ಪತ್ರಿಕೋದ್ಯಮ ಶಿಕ್ಷಣ ಮತ್ತು ತರಬೇತಿ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ನಿರತವಾಗಿದೆ.

ತರಬೇತಿ

ಕಾರ್ಯನಿರತ ಪತ್ರಕರ್ತರ ದೈನಂದಿನ ಪರಿಣತಿ ಮತ್ತು ವೃತ್ತಿ ಅಗತ್ಯಗಳನ್ನು ಪೂರೈಸಲು ಕಾಲೇಜಿನ ಪಠ್ಯಕ್ರಮ ಮತ್ತು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಬೋಧನೆಗಿಂತ ಪ್ರಾಯೋಗಿಕ ಕಲಿಕೆ ಮತ್ತು ಪರಿಣತಿಗೆ ಪ್ರಾಧಾನ್ಯ. ಕ್ಲಾಸ್‌ರೂಮ್ ಬೋಧನೆ ಜತೆಗೆ ವಿದ್ಯಾರ್ಥಿಗಳು ಪತ್ರಿಕೆ ಪರಿಸರದಲ್ಲಿ ನಾಲ್ಕು ಪುಟಗಳ ಪ್ರಾಯೋಗಿಕ ಪತ್ರಿಕೆಗಳನ್ನು ನಿಯಮಿತವಾಗಿ ಹೊರತರಬೇಕಾಗುವುದು.

ಕಾಲೇಜಿನಲ್ಲಿ ನೀಡಲಾಗುವ ತರಬೇತಿ ಇಂದಿನ ಪತ್ರಿಕೆಗಳ ಅಗತ್ಯಕ್ಕೆ ಪ್ರಸ್ತುತವಾಗಿರಬೇಕೆಂಬ ದೃಷ್ಟಿಯಿಂದ ವರದಿಗಾರಿಕೆ, ಸಂಪಾದನ ಕಲೆ (ಎಡಿಟಿಂಗ್) ಹಾಗೂ ಪುಟ ವಿನ್ಯಾಸವನ್ನು ಕಂಪ್ಯೂಟರ್ ಮೂಲಕ ಕಲಿಸಲಾಗುವುದು. ವಿದ್ಯಾರ್ಥಿಗಳಿಗೆ ವೃತ್ತಿ ಪತ್ರಿಕೋದ್ಯಮದ ಎಲ್ಲ ಆಯಾಮಗಳನ್ನು ಪರಿಚಯಿಸುವುದು ಕೋರ್ಸಿನ ಮುಖ್ಯ ಗುರಿ.

ಬೋಧಕ ವರ್ಗ

ಕಾಲೇಜಿನ ಪೂರ್ಣಾವಧಿ ಬೋಧಕವರ್ಗವು ಕ್ರಿಯಾಶೀಲ, ಕಾರ್ಯನಿರತ ಪತ್ರಕರ್ತರನ್ನು ಒಳಗೊಂಡಿದೆ. ಅನುಭವಿ ಪತ್ರಕರ್ತರು ಮತ್ತು ಸಂದರ್ಶಕ ಉಪನ್ಯಾಸಕರು ಕಾಲೇಜಿನ ಬೋಧಕ ವರ್ಗಕ್ಕೆ ನೆರವಾಗುತ್ತಾರೆ.

ಪಠ್ಯಕ್ರಮ

ವರದಿಗಾರಿಕೆ, ಸಂಪಾದನೆ ಕಲೆ, ಛಾಯಾಚಿತ್ರ ಪತ್ರಿಕೋದ್ಯಮ ಹಾಗೂ ಪುಟ ವಿನ್ಯಾಸ-ಅಧ್ಯಯನ ವಿಷಯಗಳು. ಇದರ ಜತೆಗೆ ಪತ್ರಿಕೋದ್ಯಮದ ವಿಶೇಷ ಕ್ಷೇತ್ರಗಳು, ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜಕೀಯಶಾಸ್ತ್ರ ಮತ್ತು ಪ್ರಚಲಿತ ವಿಷಯಗಳ ಬಗ್ಗೆ ಫೌಂಡೇಶನ್ ಕೋರ್ಸ್ ಉಪನ್ಯಾಸ ಮಾಲಿಕೆಗಳನ್ನು ಏರ್ಪಡಿಸಲಾಗುವುದು. ಪತ್ರಿಕಾಧರ್ಮ, ನೀತಿಸಂಹಿತೆ ಹಾಗೂ ಕಾನೂನಿನ ಬಗ್ಗೆ ಆಳವಾದ ತಿಳಿವಳಿಕೆ ನೀಡಲಾಗುವುದು.

ಅವಧಿ

ಕೋರ್ಸ್ 1999ರ ಆಗಸ್ಟ್ 5 ರಂದು ಆರಂಭವಾಗಿ 2000ನೇ ಇಸವಿ ಏಪ್ರಿಲ್‌ನಲ್ಲಿ ಮುಗಿಯುವುದು.

ಪ್ರವೇಶ ಶುಲ್ಕ

ಮೂರು ಕಂತುಗಳಲ್ಲಿ 25 ಸಾವಿರ ರೂ. ಅರ್ಹ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ದೊರಕಿಸಿ ಕೊಡಲು ಸಹಾಯ ಮಾಡಲಾಗುವುದು.

ಉದ್ಯೋಗ

ತರಬೇತಿ ಬಳಿಕ ವಿದ್ಯಾರ್ಥಿಗಳಿಗೆ ಪತ್ರಿಕೆಗಳಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳುವಲ್ಲಿ ನೆರವಾಗಲು ಕ್ಯಾಂಪಸ್ ಸಂದರ್ಶನ ಏರ್ಪಡಿಸಲಾಗುವುದು. ಆದರೆ ಕಾಲೇಜ್ ಉದ್ಯೋಗ ಭರವಸೆ ನೀಡುವುದಿಲ್ಲ. ಈ ತನಕ ಕಾಲೇಜಿನಲ್ಲಿ ಕಲಿತ ವಿದ್ಯಾರ್ಥಿಗಳು ಪ್ರಮುಖ ಪತ್ರಿಕೆ ಹಾಗೂ ಟಿವಿ ಸುದ್ದಿ ಚಾನೆಲ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಹಾಸ್ಟೆಲ್

ಪರಸ್ಥಳಗಳಿಂದ ಬರುವ ವಿದ್ಯಾರ್ಥಿಗಳಿಗೆ ಖರ್ಚು ಹಂಚಿಕೆ ಆಧಾರದ ಹಾಸ್ಟೆಲ್ ಸೌಲಭ್ಯ ಲಭ್ಯ.

ಅರ್ಹತೆ

ಕೋರ್ಸ್ ಸೇರಲು ಬೇಕಾದ ಕನಿಷ್ಠ ವಿದ್ಯಾರ್ಹತೆ ಯಾವುದೇ ವಿಷಯದಲ್ಲಿ ಪದವಿ. ಅಭ್ಯರ್ಥಿಗಳ ವಯೋಮಿತಿ 20ರಿಂದ 27 ವರ್ಷಗಳಿರಬೇಕು. 1999ರ ಜುಲೈ 31ಕ್ಕೆ 27 ವರ್ಷ ಮೀರಿರಬಾರದು.

ಪ್ರವೇಶ ಪರೀಕ್ಷೆ

ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಪ್ರವೇಶ ಪರೀಕ್ಷೆ. ಕನ್ನಡ ಮತ್ತು ಸಾಮಾನ್ಯ ಜ್ಞಾನ ಲಿಖಿತ ಪರೀಕ್ಷೆ ವಿಷಯಗಳು.

ಅರ್ಜಿ ಸಲ್ಲಿಕೆ ವಿಧಾನ

ಮೂರು ರೂ. ಸ್ಟಾಂಪ್ ಲಗತ್ತಿಸಿದ 12x8 ಇಂಚಿನ ಸ್ವವಿಳಾಸವುಳ್ಳ ಲಕೋಟೆಯೊಂದಿಗೆ ಈ ವಿಳಾಸಕ್ಕೆ ಬರೆದು ಅರ್ಜಿ ಪಡೆಯಬಹುದು.

ವಿಳಾಸ

ದಿ ಡೀನ್, ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ
ಎಕ್ಸ್‌ಪ್ರೆಸ್ ಬಿಲ್ಡಿಂಗ್,
1 ಕ್ವೀನ್ಸ್ ರಸ್ತೆ,
ಬೆಂಗಳೂರು - 560 001.

ಅರ್ಜಿ ಪಡೆಯಲು ಕೊನೆ ದಿನ ಮೇ 15 1999.

ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಕೊನೆ ದಿನ ಮೇ 31, 1999.

ವಿಶೇಷ ಶಿಕ್ಷಕರ ಹುದ್ದೆಗಾಗಿ ಅರ್ಜಿ ಆಹ್ವಾನ

ಅಧಿಸೂಚನಾ ಸಂಖ್ಯೆ/ಆ1/ಪ್ರಾಶಾವಿಶಿವು ನೇ/ 1/ 98-99 ದಿನಾಂಕ 26.3.99

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಶಿವಮೊಗ್ಗ, ತುಮಕೂರು ಈ ಜಿಲ್ಲೆಗಳಲ್ಲಿ ವಾಸಿಸುವ ಅರ್ಹ ಅಭ್ಯರ್ಥಿಗಳಿಂದ ಮಾತ್ರ ಸರ್ಕಾರಿ ಪ್ರೌಢಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ವಿಶೇಷ ಶಿಕ್ಷಕರುಗಳ (ಚಿತ್ರಕಲಾ, ಸಂಗೀತ, ಹೊಲಿಗೆ, ನೃತ್ಯ) ಹುದ್ದೆಗಳಿಗೆ ಅರ್ಜಿಗಳನ್ನು ಕರೆಯಲಾಗಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ **14.05.1999 ಸಂಜೆ 5.00 ಗಂಟೆ.** ಅರ್ಜಿಯೊಂದಿಗೆ ಸಾಮಾನ್ಯ ವರ್ಗದ ಹಾಗೂ ಇತರೆ ವರ್ಗದ ಅಭ್ಯರ್ಥಿಗಳಿಗೆ ರೂ. 25.00 ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ರೂ. 10.00ರ ಬ್ಯಾಂಕ್ ಹುಂಡಿಯನ್ನು **'ಸಹ ನಿರ್ದೇಶಕರು ಹಾಗೂ ನೇಮಕಾತಿ ಪ್ರಾಧಿಕಾರದ ಅಧ್ಯಕ್ಷರು, ಬೆಂಗಳೂರು ವಿಭಾಗ, ಬೆಂಗಳೂರು'** ಇವರ ಹೆಸರಿನಲ್ಲಿ ದಿನಾಂಕ 14.5.99ರೊಳಗೆ ಪಡೆದು ಅರ್ಜಿಯ ಜೊತೆಯಲ್ಲಿ **'ಸಹ ನಿರ್ದೇಶಕರು ಹಾಗೂ ನೇಮಕಾತಿ ಪ್ರಾಧಿಕಾರ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ, ಸೆಂಟ್ರಲ್ ಕಿರಿಯ ಕಾಲೇಜು ಆವರಣ, ಕೆಂಪೇಗೌಡ ರಸ್ತೆ, ಬೆಂಗಳೂರು-560 002'ಕ್ಕೆ,** ಕಳುಹಿಸಿಕೊಡತಕ್ಕದ್ದು. ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಅರ್ಜಿನಮೂನೆಯ ಪ್ರಕಾರವೇ ಸ್ಪಷ್ಟವಾಗಿ ಬೆರಳಚ್ಚು ಮಾಡಿಸಿ ಅರ್ಜಿಯನ್ನು ಸಲ್ಲಿಸುವುದು.

ವಯೋಮಿತಿ ಅರ್ಹತೆ

1. **ಕನಿಷ್ಠ ವಯೋಮಿತಿ :** ದಿನಾಂಕ 14.5.99 ಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯು 20 ವರ್ಷಗಳನ್ನು ಪೂರೈಸಿರಬೇಕು.
2. **ಗರಿಷ್ಠ ವಯೋಮಿತಿ:** ದಿನಾಂಕ 14.5.99ಕ್ಕೆ ಈ ಕೆಳಗಿನ ವರ್ಗಗಳಿಗೆ ಅನುಗುಣವಾಗಿ ವಯೋಮಿತಿ ಈ ಕೆಳಕಂಡತಿದೆ.

   ಅ)ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ : ಗರಿಷ್ಠ -40 ವರ್ಷಗಳು. ಆ)ಪ್ರವರ್ಗ- 2ಎ (ತುಲನಾತ್ಮಕವಾಗಿ ಹೆಚ್ಚು ಹಿಂದುಳಿದ ವರ್ಗದವರಿಗೆ)-43 ವರ್ಷಗಳು. ಇ)ಪ್ರವರ್ಗ -2ಬಿ (ಹೆಚ್ಚು ಹಿಂದುಳಿದ ವರ್ಗ)-43 ವರ್ಷಗಳು. ಈ)ಪ್ರವರ್ಗ-3ಎ (ಹೆಚ್ಚು ಹಿಂದುಳಿದ ವರ್ಗ)-43 ವರ್ಷಗಳು. ಉ)ಪ್ರವರ್ಗ-3ಬಿ (ತುಲನಾತ್ಮಕವಾಗಿ ಹೆಚ್ಚು ಹಿಂದುಳಿದ ವರ್ಗ)- 43 ವರ್ಷಗಳು. ಊ)ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 (ಅತ್ಯಂತ ಹಿಂದುಳಿದ ವರ್ಗ) ಈ ವರ್ಗದ ಅಭ್ಯರ್ಥಿಗಳಿಗೆ ಗರಿಷ್ಠ- 45 ವರ್ಷಗಳು. ಋ)ಅರೆಕಾಲಿಕ ಹಾಗೂ ಗೌರವ ಶಿಕ್ಷಕರಿಗೆ ಗರಿಷ್ಠ ವಯೋಮಿತಿ ಅನ್ವಯಿಸುವುದಿಲ್ಲ.

ಒಟ್ಟು ಹುದ್ದೆಗಳು ಮತ್ತು ವಿದ್ಯಾರ್ಹತೆ

1.ಚಿತ್ರಕಲಾ ಶಿಕ್ಷಕರು

ಒಟ್ಟು 147 ಹುದ್ದೆಗಳು. ಅ)ಕರ್ನಾಟಕ ಸರ್ಕಾರದಿಂದ ನಡೆಸಲ್ಪಡುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಕರ್ನಾಟಕ ಸರ್ಕಾರದ ಮಾನ್ಯತೆ ಮಾಡಿರುವ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಆ)ಡ್ರಾಯಿಂಗ್ ಪರೀಕ್ಷೆಯಲ್ಲಿ ಡಿಪ್ಲೋಮಾ ಹಾಗೂ ಪೇಯಿಂಟಂಗ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಸರಕಾರದಿಂದ ನಡೆಸಲ್ಪಡುವ ಆರ್ಟ್ಸ್ ಮಾಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಅಥವಾ ಸರ್ಕಾರದಿಂದ ಅಂಗೀಕೃತವಾದ ತತ್ಸಮಾನ ಪರೀಕ್ಷೆಯಲ್ಲಿ ಪಾಸಾಗಿರಬೇಕು.

2.ಸಂಗೀತ ಶಿಕ್ಷಕರು, ಗ್ರೇಡ್ - 2

ಒಟ್ಟು 52 ಹುದ್ದೆಗಳು. ಅ)ಕರ್ನಾಟಕ ಸರ್ಕಾರದಿಂದ ನಡೆಸಲ್ಪಡುವ ಸಂಗೀತ ಪರೀಕ್ಷೆಗಳಾದ ಪ್ರೊಫಿಷಿಯನ್ಸಿ ಅಥವಾ ಪ್ರವೀಣ್ ಅಥವಾ ವಿದ್ವತ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು. ಅಥವಾ ಕರ್ನಾಟಕ ಸರ್ಕಾರ ಮಾನ್ಯತೆ ಮಾಡಿರುವ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಸೂಚನೆ : ಎಲ್ಲರಂತೆ ಸಮಾನ ಅರ್ಹತೆ ಪಡೆದ ಹಾಗೂ ಸಂಗೀತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಧರಿಗೆ ಆದ್ಯತೆಯನ್ನು ನೇಮಕಾತಿಯಲ್ಲಿ ನೀಡಲಾಗುವುದು.

3.ಹೊಲಿಗೆ ಶಿಕ್ಷಕರು, ಗ್ರೇಡ್ - 2

ಒಟ್ಟು 167 ಹುದ್ದೆಗಳು. ಅ)ಕರ್ನಾಟಕ ಸರ್ಕಾರದಿಂದ ನಡೆಸಲ್ಪಡುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಅಥವಾ ಕರ್ನಾಟಕ ಸರ್ಕಾರ ಮಾನ್ಯ ಮಾಡಿರುವ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ಆ)ಕರ್ನಾಟಕ ಸರ್ಕಾರದಿಂದ ಟೈಲರಿಂಗ್ ಪರೀಕ್ಷೆಯಲ್ಲಿ ಉತ್ತೀಣರಾಗಿರುವ ಬಗ್ಗೆ ಪ್ರಮಾಣ ಪತ್ರ ಪಡೆದಿರಬೇಕು ಅಥವಾ ಕರ್ನಾಟಕ ಸರ್ಕಾರ ಮಾನ್ಯ ಮಾಡಿರುವ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

4.ನೃತ್ಯ ಶಿಕ್ಷಕರು, ಗ್ರೇಡ್ - 2

ಒಟ್ಟು 1 ಹುದ್ದೆ. ಅ)ಕರ್ನಾಟಕ ಸರ್ಕಾರದಿಂದ ನಡೆಸಲ್ಪಡುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಅಥವಾ ಕರ್ನಾಟಕ ಸರ್ಕಾರ ಮಾನ್ಯತೆ ಮಾಡಿರುವ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ಆ)ಕರ್ನಾಟಕ ಸರ್ಕಾರದಿಂದ ನಡೆಸಲ್ಪಡುವ ನೃತ್ಯ ಪರೀಕ್ಷೆಗೆ ಸಂಬಂಧಿಸಿದ ಪ್ರೊಫೆಷಿಯನ್ಸಿ ಪರೀಕ್ಷೆ ಅಥವಾ ವಿದ್ವತ್ ಗ್ರೇಡ್ ಭರತನಾಟ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಅಥವಾ ಕರ್ನಾಟಕ ಸರ್ಕಾರ ಮಾನ್ಯ ಮಾಡಿರುವ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

ಅರ್ಜಿಗಳನ್ನು ಸಲ್ಲಿಸುವಾಗ ಲಕೋಟೆಯ ಮೇಲೆ ದೊಡ್ಡ ಅಕ್ಷರದಲ್ಲಿ ಹುದ್ದೆಯ ಹೆಸರು ಮತ್ತು ವಿಭಾಗವನ್ನು ಸ್ಪಷ್ಟವಾಗಿ ನಮೂದಿಸುವುದು.

ಮೀಸಲಾತಿ

ಸರ್ಕಾರಿ ಆದೇಶ ದಿನಾಂಕ : 31.1.95 ಹಾಗೂ 20.6.95ರಲ್ಲಿ ಸೂಚಿಸಿರುವಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ

ವರ್ಗಗಳಿಗೆ ಮೀಸಲಾತಿ ಅವಕಾಶವನ್ನು ಕಲ್ಪಿಸಲಾಗಿದೆ. ಅಂಗವಿಕಲರಿಗೆ ಮತ್ತು ಮಾಜಿ ಸೈನಿಕರಿಗೆ ಸರ್ಕಾರದ ಆದೇಶದಂತೆ ಉಲ್ಲೇಖದಲ್ಲಿ ಸೂಚಿಸಿರುವಂತೆ ಮೀಸಲಾತಿ ಅವಕಾಶವನ್ನು ಕಲ್ಪಿಸಲಾಗಿದೆ.

ಮಹಿಳೆಯರಿಗೆ ಮೀಸಲಾತಿ

ಸರ್ಕಾರಿ ನಿಯಮಗಳನ್ವಯ ಉಲ್ಲೇಖ - 5 ರಂತೆ ಮಹಿಳೆಯರಿಗೆ ಒಟ್ಟು ಪ್ರಕಟಿತ ಹುದ್ದೆಗಳಲ್ಲಿ ಶೇ. 30 ರಷ್ಟು ಹುದ್ದೆಗಳನ್ನು ಕಾದಿರಿಸಲಾಗಿದೆ. ಹಾಗೂ ಉಲ್ಲೇಖದಲ್ಲಿನ ನಿಯಮದಂತೆ ಭರ್ತಿ ಮಾಡಲಾಗುವುದು. 1991ನೇ ಸಾಲಿನ ಜನಗಣತಿಯಂತೆ 50 ಸಾವಿರ ಜನ ಸಂಖ್ಯೆಗಿಂತ ಕಡಿಮೆ ಜನಸಂಖ್ಯೆ ಇರುವ ಪಟ್ಟಣ ಅಥವಾ ಜಿಲ್ಲಾ ಕೇಂದ್ರವಲ್ಲದ ಯಾವುದಾದರೂ ಪ್ರದೇಶದ ಶಾಲೆಯಲ್ಲಿ 1 ರಿಂದ 10ನೇ ತರಗತಿಯವರೆಗಿನ ತರಗತಿಗಳಲ್ಲಿ ಅಧ್ಯಯನ ಮಾಡಿರುವ ಅಭ್ಯರ್ಥಿಗಳಿಗೆ ರಾಜ್ಯ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪನ್ನು ಕಾಯ್ದಿರಿಸಿ ಶೇಕಡಾ 10 ರಷ್ಟು ಗ್ರಾಮೀಣ ಕೃಪಾಂಕವನ್ನು ಅಭ್ಯರ್ಥಿಗಳಿಸಿದ ಸರಾಸರಿ ಶೇಕಡಾ ಅಂಕಗಳಿಗೆ ಸೇರಿಸಲಾಗುವುದು. ನ್ಯಾಯಾಲಯದ ತೀರ್ಪು ಅಭ್ಯರ್ಥಿಗಳ ವಿರುದ್ಧ ಬಂದಲ್ಲಿ ಅಂತಹ ಅಭ್ಯರ್ಥಿಗಳು ಗ್ರಾಮೀಣ ಕೃಪಾಂಕಕ್ಕೆ ಅರ್ಹರಲ್ಲ. ಭಾರತ ಸರ್ಕಾರದ ಜನಗಣತಿ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಿದ ಅಭ್ಯರ್ಥಿಗಳಿಗೆ, ಸರ್ಕಾರಿ ಪ್ರೌಢಶಾಲೆಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳಿಗೆ ಹಾಗೂ ಸರ್ಕಾರಿ ಪ್ರೌಢಶಾಲೆಗಳಲ್ಲಿ ಗೌರವ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ, ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳಿಗೆ ಅವರು ಕಾರ್ಯ ನಿರ್ವಹಿಸಿದ ಪ್ರತಿಯೊಂದು ಪೂರ್ಣ ವರ್ಷದ ಸೇವೆಗೆ ಶೇಕಡಾ 2ರಷ್ಟು ಕೃಪಾಂಕವನ್ನು ಅಭ್ಯರ್ಥಿಗಳಿಸಿದ ಸರಾಸರಿ ಶೇಕಡಾ ಅಂಕಗಳಿಗೆ ಸೇರಿಸಲಾಗುವುದು.

ಅರ್ಜಿ ನಮೂನೆ

1998-99ನೇ ಸಾಲಿನ ಬೆಂಗಳೂರು ವಿಭಾಗದ ಸರ್ಕಾರಿ ಪ್ರೌಢಶಾಲೆಯ ಪದವಿ ಪೂರ್ವಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ವಿಶೇಷ ಶಿಕ್ಷಕರ ನೇಮಕಾತಿಯ ಅರ್ಜಿ ನಮೂನೆ.

- ಚಿತ್ರಕಲಾ ಶಿಕ್ಷಕರ ವೃಂದ (ಡ್ರಾಯಿಂಗ್ ಟೀಚರ್ಸ್)
- ಸಂಗೀತ ಶಿಕ್ಷಕರು ಗ್ರೇಡ್-2 (ಮ್ಯೂಸಿಕ್ ಟೀಚರ್ಸ್)
- ಹೊಲಿಗೆ ಶಿಕ್ಷಕರು ಗ್ರೇಡ್ -2 (ಟೈಲರಿಂಗ್)
- ನೃತ್ಯ ಶಿಕ್ಷಕರು ಗ್ರೇಡ್- 2 (ಡ್ಯಾನ್ಸ್) ಈ ಹುದ್ದೆಗಳಿಗೆ ಸಂಬಂಧಿಸಿದ ಅರ್ಜಿ ನಮೂನೆ.

....

1998-99ನೇ ಸಾಲಿನ ಬೆಂಗಳೂರು ವಿಭಾಗದಲ್ಲಿ ವಿಶೇಷ ಶಿಕ್ಷಕರ ನೇಮಕಾತಿಗೆ ಇರುವ ನೇಮಕಾತಿ ನಿಯಮಗಳ ಪ್ರಕಾರ..........

....

ಶಿಕ್ಷಕರ ಹುದ್ದೆಗೆ ನನ್ನ ಅರ್ಜಿಯನ್ನು ಈ ಕೆಳಕಂಡ ವಿವರಗಳೊಂದಿಗೆ ಸಲ್ಲಿಸುತ್ತಿದ್ದೇನೆ.

ಅಭ್ಯರ್ಥಿಯ ಸಹಿ

ಇವರಿಗೆ
ಸಹ ನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು ವಿಭಾಗ
ಸೆಂಟ್ರಲ್ ಕಿರಿಯ ಕಾಲೇಜು ಆವರಣ,
ಕೆಂಪೇಗೌಡ ರಸ್ತೆ, ಬೆಂಗಳೂರು -2.

1) ಅಭ್ಯರ್ಥಿಯ ಹೆಸರು
(ಪೂರ್ಣ ಅಕ್ಷರಗಳಲ್ಲಿ, ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆ)
2) ತಂದೆಯ ಹೆಸರು
3) ಹುಟ್ಟಿದ ದಿನಾಂಕ
(ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಜನ್ಮ ದಿನಾಂಕದ ಬಗ್ಗೆ ದಾಖಲೆ ಲಗತ್ತಿಸುವುದು.)
4) ವಿದ್ಯಾರ್ಹತೆ
ಅ) ಉದ್ಯೋಗ ವಿನಿಮಯ ಕಚೇರಿಯ ನೊಂದಣಿ ಸಂಖ್ಯೆ, ಜಿಲ್ಲೆಯ ಹೆಸರು. (ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು)
5) ಪೂರ್ಣ ವಿಳಾಸ (ಅಂಚೆ ವಿಳಾಸ)
6) ವಿಶೇಷ ಶಿಕ್ಷಕರು:(ವೃತ್ತಿ ಶಿಕ್ಷಕರು)
1. ಎಸ್.ಎಸ್.ಎಲ್.ಸಿ. ಯಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಗರಿಷ್ಠ ಅಂಕಗಳು.
2. ವೃತ್ತಿ ತರಬೇತಿಯಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳು (ಚಿತ್ರಕಲೆ,

ರುಡ್‌ಸೆಟ್‌ನಲ್ಲಿ ಉಚಿತ ತರಬೇತಿ

ನೆಲಮಂಗಲದ ಬಳಿ ಅರಿಶಿನಕುಂಟೆಯಲ್ಲಿರುವ ರುಡ್‌ಸೆಟ್ ಸಂಸ್ಥೆಯಲ್ಲಿ ಬರುವ ಜುಲೈ ತಿಂಗಳ ಒಳಗಾಗಿ ಕೆಳಕಂಡ ಉಚಿತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಗಳ, 18 ರಿಂದ 35 ವಯಸ್ಸಿನ ಮಿತಿಯಲ್ಲಿನ ಆಸಕ್ತ ಕನ್ನಡ ಓದು ಬರಹ ಬಲ್ಲ ಯುವಕ ಯುವತಿಯರು ತರಬೇತಿಗಾಗಿ ಅರ್ಜಿ ಸಲ್ಲಿಸಬಹುದು.

ಸ್ಕ್ರೀನ್ ಪ್ರಿಂಟಿಂಗ್ (13 ದಿನ) ಮೇ 99 ಗಂಡಸರಿಗಾಗಿ ಸಿದ್ಧ ಉಡುಪು ತಯಾರಿಕೆ (15 ದಿನ) ಮೇ 99 ಮಹಿಳೆಯರಿಗಾಗಿ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ (13 ದಿನ) ಮೇ 99.

ಫೋಟೋಗ್ರಫಿ ಹಾಗೂ ವಿಡಿಯೋಗ್ರಫಿ ತರಬೇತಿ ಜೂನ್ 99 (16 ದಿನ) ಹಾಗೂ ಬಹುಪಯೋಗಿ ಮೆಕ್ಯಾನಿಕಲ್ (ಮಲ್ಟಿಪರ್ಪಸ್ ಮೆಕ್ಯಾನಿಕ್ಸ್) (8 ದಿನ) ಜೂನ್ 99, ಗೃಹೋಪಯೋಗಿ ವಿದ್ಯುತ್ ಉಪಕರಣಗಳ ರಿಪೇರಿ ತರಬೇತಿ (13 ದಿನ) ಜೂನ್ 99.

ತರಬೇತಿಯು ಉಚಿತವಾಗಿದ್ದು ತರಬೇತಿಯ ಅವಧಿಯಲ್ಲಿ ಉಚಿತ ಊಟ ಹಾಗೂ ವಸತಿ ವ್ಯವಸ್ಥೆಯಿರುತ್ತದೆ. ಈ ತರಬೇತಿಗಳಿಗೆ ಹಾಜರಾಗ ಬಯಸುವವರಿಗೆ ಆಯಾ ವಿಷಯಗಳಲ್ಲಿ ಪ್ರಾಥಮಿಕ ಜ್ಞಾನ ಹಾಗೂ ಅನುಭವ ಅಗತ್ಯವಾಗಿರುತ್ತದೆ. ಸಂದರ್ಶನದ ಮುಖಾಂತರ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಅಭ್ಯರ್ಥಿಯ ಬಗ್ಗೆ ಪೂರ್ಣ ವಿವರಗಳನ್ನೊಳಗೊಂಡ ಆಯ್ಕೆ ಮಾಡಿಕೊಂಡ ತರಬೇತಿಗಾಗಿ ಅರ್ಜಿಗಳನ್ನು ಕೂಡಲೇ ಕಳಿಸಬೇಕಾದ ವಿಳಾಸ :

ನಿರ್ದೇಶಕರು, ರುಡ್‌ಸೆಟ್ ಸಂಸ್ಥೆ,
ಚಕ್ ಪೋಸ್ಟ್ ಹಿಂಭಾಗ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ - 562123
ದೂರವಾಣಿ - 08118-23166.

ಡಿಪ್ಲೊಮಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ರಾಜ್ಯದ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿರುದ್ಯೋಗಿ ಡಿಪ್ಲೊಮಾದಾರರಿಗೆ ಡಿಪ್ಲೊಮಾ ನಂತರದ 'ಪ್ರೊಡಕ್ಷನ್ ಮತ್ತು ಇಂಡಸ್ಟ್ರಿಯಲ್ ಎಂಜಿನಿಯರಿಂಗ್'ನಲ್ಲಿ ಒಂದು ವರ್ಷದ ತರಬೇತಿಯನ್ನು ಬೆಂಗಳೂರಿನ ಫೋರ್‌ಮೆನ್ ತರಬೇತಿ ಸಂಸ್ಥೆಯಲ್ಲಿ ನೀಡುತ್ತಿದೆ.

ಮೆಕ್ಯಾನಿಕಲ್ ಡಿಪ್ಲೊಮಾ ಮಾಡಿರುವ ಶೇಕಡಾ 50ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ, ವಾರ್ಷಿಕ ರೂ. 22,000 ಆದಾಯ ಮೀರದ ಕುಟುಂಬಕ್ಕೆ ಸೇರಿದ, ಹಿಂದುಳಿದ ವರ್ಗಗಳ, 1, 2ಎ, 3ಎ ಮತ್ತು 3ಬಿ ಪ್ರವರ್ಗಗಳಿಗೆ ಸೇರಿದ 18ರಿಂದ 25 ವರ್ಷ ವಯಸ್ಸಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹತೆ ಪಡೆದಿದ್ದಾರೆ. ಮಾಸಿಕ 500 ರೂಪಾಯಿ ವಿದ್ಯಾರ್ಥಿವೇತನ ನೀಡಲಾಗುತ್ತದೆ. ಆಸಕ್ತರು ಸ್ವವಿವರಗಳೊಂದಿಗೆ ಮೇ 10ರೊಳಗೆ ಮ್ಯಾನೇಜಿಂಗ್ ಡೈರೆಕ್ಟರ್, 144, ಸೆಂಟ್ ಜಾನ್ ಚರ್ಚ್ ರಸ್ತೆ, ಮೊದಲ ಮಹಡಿ, ಶ್ರೀಕೃಷ್ಣ ರಾಜ ಒಡೆಯರ್ ನಗರ, ಬೆಂಗಳೂರು, ಇವರಿಗೆ ಕಳಿಸಿಕೊಡಲು ಕೋರಲಾಗಿದೆ.

ಸಂಗೀತ, ಹೊಲಿಗೆ, ನೃತ್ಯ) ಗರಿಷ್ಠ ಅಂಕಗಳು - ಗಳಿಸಿದ ಅಂಕಗಳು (1) (2) (3) (4).

7) ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಮತ್ತು ವೃತ್ತಿ ಪರೀಕ್ಷೆಯಲ್ಲಿ ಗಳಿಸಿದ ಸರಾಸರಿ ಅರ್ಹತಾ ಅಂಕಗಳು

8) ಮೀಸಲಾತಿ ಪ್ರವರ್ಗ (ದಿನಾಂಕ 14.5.99 ರೊಳಗೆ ಸಂಬಂಧಿಸಿದ ತಹಸೀಲ್ದಾರ್ ರವರಿಂದ ಮೀಸಲಾತಿ ಪ್ರವರ್ಗದ ಪ್ರಮಾಣ ಪತ್ರಗಳನ್ನು ಪಡೆದು ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು.)

9) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು.

10) ಅಂಗವಿಕಲ ಅಭ್ಯರ್ಥಿಯಾಗಿದ್ದಲ್ಲಿ ತತ್ತ ಮಾನ ಅಧಿಕಾರಿಗಳಿಂದ ನಿಗದಿತ ನಮೂನೆ ಯಲ್ಲಿ ಪಡೆದ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸುವುದು. (ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ ಪಡೆಯುವುದು)

11) ಅರೆಕಾಲಿಕ, ಗೌರವ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಬಗ್ಗೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸೇವಾ ದೃಢೀಕರಣ ಪ್ರಮಾಣ ಪತ್ರ ಪಡೆದು ಲಗತ್ತಿಸಬೇಕು.

12) ಗ್ರಾಮೀಣ ಅಭ್ಯರ್ಥಿಯಾಗಿದ್ದಲ್ಲಿ (1 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡಿದ ಸ್ಥಳದ ಹೆಸರು, ಗ್ರಾಮೀಣ ಕೃಪಾಂಕದ ಪ್ರಮಾಣಪತ್ರವನ್ನು ವ್ಯಾಸಂಗ ಮಾಡಿದ ಸಂಸ್ಥೆಯ ಮುಖ್ಯಸ್ಥರಿಂದ ಪಡೆದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಲಗತ್ತಿಸುವುದು.)

13) ಮಾಜಿ ಸೈನಿಕರಾಗಿದ್ದಲ್ಲಿ ದೃಢೀಕರಣ ಪತ್ರಗಳನ್ನು ಸಲ್ಲಿಸುವುದು.

14) ಭಾರತ ಸರ್ಕಾರದ ಜನಗಣತಿ ಕಾರ್ಯ ದಲ್ಲಿ ಕೆಲಸ ಮಾಡಿದ್ದಲ್ಲಿ ಸೇವಾ ವಿವರ ಗಳನ್ನೊಳಗೊಂಡ ದೃಢೀಕರಣ ಪ್ರಮಾಣ ಪತ್ರವನ್ನು ಲಗತ್ತಿಸುವುದು.

15) ಕನ್ನಡ ಭಾಷೆಯನ್ನು ಅಧ್ಯಯನ ಮಾಡಿದ ವಿವರ.

16) ಸಾಮಾನ್ಯವರ್ಗದ ಅಭ್ಯರ್ಥಿಗಳು ಹಾಗೂ ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳು ರೂ. 25.00ನ್ನು ಹಾಗೂ ಪರಿಶಿಷ್ಟ ವರ್ಗ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಾಗಿದ್ದಲ್ಲಿ ರೂ. 10.00ನ್ನು **ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು** ಇವರ ಹೆಸರಿನಲ್ಲಿ ಬ್ಯಾಂಕ್‌ನ ಡಿ.ಡಿ.ಯನ್ನು ಪಡೆದು ಅರ್ಜಿಯೊಂದಿಗೆ ಲಗತ್ತಿಸುವುದು. ಡಿ.ಡಿ ಸಂಖ್ಯೆ, ದಿನಾಂಕ, ರೂ, ಬ್ಯಾಂಕಿನ ಹೆಸರು.

17) ಅಭ್ಯರ್ಥಿಗಳು ಇತರೆ ವಿದ್ಯಾರ್ಹತೆ ಅಥವಾ ತರಬೇತಿ ಪಡೆದಿದ್ದಲ್ಲಿ ಅದರ ವಿವರಗಳು ಮತ್ತು ದಾಖಲೆಗಳೊಂದಿಗೆ ಸಲ್ಲಿಸುವುದು

18) ಸ್ಥಳೀಯ ನಿವಾಸಿಯ ಪ್ರಮಾಣ ಪತ್ರ (ಗ್ರಾಮಲೆಕ್ಕಿಗರಿಂದ ಪಡೆದು ಸಂಬಂಧಿಸಿದ ದೃಢೀಕರಣ ಮಾಡಿಸುವುದು. ಪಟ್ಟಣ ಪ್ರದೇಶವಾದರೆ ನಗರ ಸಭೆಯ ಅಧಿಕಾರಿ ಗಳಿಂದ ಪ್ರಮಾಣ ಪತ್ರ ಪಡೆದು ಲಗತ್ತಿಸುವುದು.)


19) ಅಭ್ಯರ್ಥಿಯ ಘೋಷಣೆ : ಈ ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ನಾನು ಸ್ವತಃ ಖುದ್ದಾಗಿ ಪರಿಶೀಲಿಸಿ ಎಲ್ಲಾ ದಾಖಲೆಗಳು ಸತ್ಯವಾಗಿರುತ್ತದೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ. ಅರ್ಜಿಯಲ್ಲಿ ನಮೂದಿಸಿದ ಯಾವುದೇ ದಾಖಲೆಗಳು ಅಥವಾ ಅಂಕಪಟ್ಟಿಗಳಲ್ಲಿ ಸುಳ್ಳು ನೀಡಿ ರುವುದು ಸಾಬೀತಾದಲ್ಲಿ ಕಾನೂನಿನ ಕ್ರಮಕ್ಕೆ ಒಳಗಾಗುತ್ತೇನೆಂದು ಪ್ರಮಾಣೀ ಕರಿಸಿ ಹೇಳುತ್ತೇನೆ. ಹಾಗೂ ಯಾವುದೇ ಕಾರಣ ನೀಡದೆ ನನ್ನ ಅರ್ಜಿಯನ್ನು ತಿರಸ್ಕರಿಸಬಹುದೆಂದು ಒಪ್ಪಿ ನೇಮಕಾತಿಗೆ ನನ್ನ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ.

ಅಭ್ಯರ್ಥಿಯ ಸಹಿ

ಸ್ಥಳ :
ದಿನಾಂಕ :

ವಿಶೇಷ ಸೂಚನೆ

ಅಭ್ಯರ್ಥಿಗಳು ಎಲ್ಲಾ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಸಲ್ಲಿಸುವಾಗ ಎಲ್ಲಾ ಅಡಕಗಳಿಗೂ ಸ್ವಯಂ ದೃಢೀಕರಿಸಿ ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು. ■



ದಿ ಶಿಪ್ಪಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್

ಟ್ರೈನಿ ಮರೈನ್ ಇಂಜಿನಿಯರ್ ಹುದ್ದೆಗೆ ಅರ್ಜಿ ಕರೆದಿದೆ

Shipping House, 245, Madame Cama Road, Mumbai - 400 021. Tel:022-2026666 Fax : 0091-2026

ಟ್ರೈನಿ ಮರೈನ್ ಇಂಜಿನಿಯರ್ ಹುದ್ದೆಗೆ ಚುರುಕು ಬುದ್ಧಿಯಳ್ಳ ಸ್ಪರ್ಧಾತ್ಮಕ ಮನೋಭಾವದ ಯುವಪುರುಷ ಅಭ್ಯರ್ಥಿಗಳಿಂದ (ಮೆಕಾನಿಕಲ್ ಇಂಜಿನಿಯರ್ ಪದವಿ ಪಡೆದ) ಭಾರತೀಯ ಹಡಗು ನಿಗಮ ನಿಯಮಿತದವರು ಅರ್ಜಿ ಕರೆದಿರುತ್ತಾರೆ.

ವಯಸ್ಸು ಮತ್ತು ವಿದ್ಯಾರ್ಹತೆ

ಸಾಮಾನ್ಯ -25 ವರ್ಷಗಳಿಗೆ ಮೇಲ್ಪಡದ, ಒಬಿಸಿಗೆ 3 ವರ್ಷಗಳು ಮತ್ತು SC/STಗೆ 5 ವರ್ಷಗಳು ವಯೋಮಿತಿ ಸಡಿಲಿಕೆ ಇದೆ.

ಮೆಕಾನಿಕಲ್ ಇಂಜಿನಿಯರಿಂಗ್ ಪದವಿಯನ್ನು AICTE ಅನುಮೋದಿಸಿದ ಇಂಜಿನಿಯರ್ ಕಾಲೇಜಿನಲ್ಲಿ ಮುಗಿಸಿರಬೇಕು.

ಪ್ರಾರಂಭದ ತರಬೇತು ಯೋಜನೆ

ಆಯ್ಕೆಯಾದ ಅಭ್ಯರ್ಥಿಗಳಿಗೆ ಒಂದು ವರ್ಷ ತರಬೇತಿ ನೀಡಲಾಗುವುದು. ಅಲ್ಲದೆ Residential per sea ಆರು ತಿಂಗಳ ತರಬೇತಿಯನ್ನು ಮುಂಬೈ ಅಥವಾ ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್, ಕೊಚ್ಚಿನ್ ಅಥವಾ ಸರಕಾರ ಅನುಮೋದಿತ ಯಾವುದೇ ತರಬೇತಿ ಶಾಲೆಯಲ್ಲಿ ನೀಡಲಾಗುವುದು. ಈ ತರಬೇತಿ 01.10.99 ಮತ್ತು 01.04.2000ದಲ್ಲಿ ನಡೆಯುವಂತೆ ಯೋಜಿಸಲಾಗಿದೆ. ತರಬೇತುಗೊಂಡ ನಂತರ ಅಭ್ಯರ್ಥಿಗಳನ್ನು 6 ತಿಂಗಳು ಬೋರ್ಡ್ ಟ್ರೈನಿಂಗ್‌ಗೆ ಕಳಿಸಲಾಗುವುದು.

ಶುಲ್ಕದ ವಿವರ

ಆರು ತಿಂಗಳ ತರಬೇತಿ, ಬೋಧನೆ, ಪುಸ್ತಕ, ಸಮವಸ್ತ್ರ, ಊಟ ಮತ್ತು ವಸತಿಗಳು ಸೇರಿ 72,000 ರೂಪಾಯಿಗಳನ್ನು ಅಭ್ಯರ್ಥಿಯು ಭರಿಸಬೇಕಾಗುವುದು. ಜೊತೆಗೆ ಅಲ್ಲಿನ ಒಳ ಖರ್ಚುಗಳನ್ನು ಅಭ್ಯರ್ಥಿ ಸ್ವತಃ ನಿರ್ವಹಿಸಬೇಕು. 6 ತಿಂಗಳ ಬೋರ್ಡ್ ಟ್ರೈನಿಂಗ್‌ನಲ್ಲಿ ಮಾತ್ರ ಸ್ಟೈಪಂಡ್ ನೀಡಲಾಗುವುದು, ವಸತಿ ಮತ್ತು ಊಟ ಉಚಿತವಾಗಿ ಒದಗಿಸಲಾಗುವುದು.

ಭವಿಷ್ಯದ ಒಳಿತಿಗಾಗಿ

ತೃಪ್ತಿಕರವಾಗಿ ತರಬೇತು ಮುಗಿಸಿದವರನ್ನು 'ಫಿಫ್ತ್ ಇಂಜಿನಿಯರ್ ಆಫೀಸರ್' ಆಗಿ ನೇಮಕಗೊಳಿಸಲಾಗುವುದು. 5th Engineer ಹುದ್ದೆಗೆ ಅಲ್ಲಿನ ಗೊತ್ತುವಳಿಗಳ ಪ್ರಕಾರ ತಿಂಗಳಿಗೆ 27.000/- ಸಂಬಳ ನೀಡಲಾಗುತ್ತದೆ.

ನಂತರದ ದಿನಗಳಲ್ಲಿ ಹುದ್ದೆಯಲ್ಲಿ ಬಡ್ತಿಗಳಿದ್ದು ಚೀಫ್ ಇಂಜಿನಿಯರ್ ಆಫೀಸರ್ ತನಕ ಮೇಲೇರಬಹುದು.

ಪ್ರವೇಶ ಪರೀಕ್ಷೆ/ಸಂದರ್ಶನ

● ಪ್ರವೇಶ ಪರೀಕ್ಷೆಗಳು ತಾಂತ್ರಿಕ ಜ್ಞಾನ ಮತ್ತು ಆಂಗ್ಲಭಾಷಾ ಪರಿಣಿತಿಯನ್ನು ಪರೀಕ್ಷಿಸಲು ಇದ್ದು ಅವುಗಳು 20ನೇ ಜೂನ್ 1999ರ ಭಾನುವಾರ ಮುಂಬೈ, ಕಲ್ಕತ್ತ, ದೆಹಲಿ, ಚೆನ್ನೈ ಮತ್ತು ಗುವಾಹತಿಗಳಲ್ಲಿ ನಡೆಯಲಿವೆ. ಪ್ರಶ್ನೆಪತ್ರಿಕೆಗಳು ಆಂಗ್ಲ ಹಾಗೂ ಹಿಂದಿ ಭಾಷೆಯಲ್ಲಿರುವುದು.

● ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಮುಂಬೈನಲ್ಲಿ ಸಂದರ್ಶನ ನಡೆಸಲಾಗುವುದು. ಮೆಡಿಕಲ್ ಟೆಸ್ಟ್ ಜೊತೆಗೆ ಅಂತಿಮ ಆಯ್ಕೆಯನ್ನು ಮಾಡಲಾಗುವುದು.

● ಸಂದರ್ಶನಗಳಿಗೆ ಬರಲು SC/ST ಅಭ್ಯರ್ಥಿಗಳಿಗೆ ಮಾತ್ರ 2ನೇ ದರ್ಜೆ ರೈಲ್ವೆ ಖರ್ಚು ನೀಡಲಾಗುತ್ತದೆ.

● ಪ್ರವೇಶ ಪರೀಕ್ಷೆ ಮತ್ತು ಸಂದರ್ಶನಗಳಿಗೆ ಬರುವವರಿಗೆ ಹಡಗು ನಿಗಮದ ವತಿಯಿಂದ ವಸತಿ ಸೌಕರ್ಯ ಇರುವುದಿಲ್ಲ.

● ದೈಹಿಕ ಅರ್ಹತೆಯು ಕಡ್ಡಾಯವಾಗಿದ್ದು, ಕಣ್ಣಿನ ದೋಷವಿರುವವರಿಗೆ ಇಲ್ಲಿ ಅವಕಾಶವಿರುವುದಿಲ್ಲ.

● ನಾಲ್ಕು ವರ್ಷಗಳಿಗೆ ಆಯ್ಕೆಯಾದ ಅಭ್ಯರ್ಥಿ ಸರ್ವೀಸ್ ಅಗ್ರಿಮೆಂಟ್‌ನ್ನು ಬರೆದುಕೊಟ್ಟು ಹಡಗು ನಿಗಮದಲ್ಲಿ ರೂ. 50,000/- Default money ಇಡಬೇಕಾಗುತ್ತದೆ.

● ಸಾಮಾನ್ಯವಾಗಿ ಇರಬೇಕಾದ ಎಲ್ಲ ಅರ್ಹತೆಗಳು ಅಗತ್ಯವಿದ್ದು, SC/ST ಮುಂತಾದವರಿಗೆ ಮಾತ್ರ ವಿನಾಯಿತಿ ಇದೆ.

ಅರ್ಜಿ ಸಲ್ಲಿಸುವುದು ಹೇಗೆ?

ಅರ್ಹರು ಆಂಗ್ಲ ಭಾಷೆಯಲ್ಲಿ ಅರ್ಜಿ ತುಂಬಿ ರೂ. 500/-ರ ಕ್ರಾಸ್ ಮಾಡಿದ ಡಿ.ಡಿ.ಯನ್ನು ಮುಂಬೈ ಬ್ರಾಂಚಿನ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ **'The Shipping Corporation of India Ltd.'** ಇವರ ಹೆಸರಿನಲ್ಲಿ ತೆಗೆದು ಕಳಿಸಬೇಕು. (OBC, SC/ST ಅಭ್ಯರ್ಥಿಗಳಿಗೆ 250/- ರೂ. ಮಾತ್ರ)

ಇಲ್ಲಿ ನೀಡಿರುವ ಅರ್ಜಿ ನಮೂನೆಯನ್ನು ತುಂಬಿ, ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಲಗತ್ತಿಸಿ. ತುಂಬಿದ ಅರ್ಜಿಯನ್ನು ಡಿಡಿ. ಒಳಗೊಂಡಂತೆ ಕೇಂದ್ರಗಳ ಹೆಸರು ಸೂಚಿಸಿ, ಈ ಕೆಳಗಿನ ವಿಳಾಸಕ್ಕೆ ಕಳಿಸಿರಿ.

"Application for Trainee Marine Engineers, for__________ Centre" to Post Box No. 9482 MIDC, Andheri (E), Mumbai.

ನಿಮ್ಮ ಅರ್ಜಿ ತಲುಪಲು ಅಂತಿಮ ದಿನಾಂಕ 7ನೇ ಮೇ 1999.

ಪ್ರವೇಶಾವಕಾಶ

ಕರ್ನಾಟಕ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘವು ಬೆಂಗಳೂರು ಮತ್ತು ಹಾಸನಗಳಲ್ಲಿ ನಡೆಸುತ್ತಿರುವ ಶಾಲೆಗಳಲ್ಲಿ ಒಂದರಿಂದ ಹತ್ತನೇ ತರಗತಿಯವರೆಗೆ ವಾಕ್ ಮತ್ತು ಶ್ರವಣ ದೋಷ (ಕಿವುಡು ಮತ್ತು ಮೂಕ) ಇರುವ ಮಕ್ಕಳಿಗೆ ಪ್ರವೇಶಾವಕಾಶವಿದೆ. ಮೇ 15ರೊಳಗೆ ನಿಗದಿತ ಅರ್ಜಿ ನಮೂನೆಗಳನ್ನು ಪಡೆದು ಭರ್ತಿ ಮಾಡಿ ಸಲ್ಲಿಸಬೇಕು.

ಅರ್ಜಿ ಹಾಗೂ ವಿವರಗಳಿಗೆ ರಾಷ್ಟ್ರೀಯ ವಸತಿಸಹಿತ ಕಿವುಡು ಮಕ್ಕಳ ಶಾಲೆ, ಜೀವನ ಭೀಮಾನಗರ, ಬೆಂಗಳೂರು-75. (ದೂರವಾಣಿ: 080-526783) ಹಾಗೂ ಜೀವನಜ್ಯೋತಿ ವಸತಿಸಹಿತ ಕಿವುಡು ಮಕ್ಕಳ ಶಾಲೆ, ವಿದ್ಯಾನಗರ, ಹಾಸನ (ದೂರವಾಣಿ : 65442) ಈ ಶಾಲೆಗಳ ಮುಖ್ಯಸ್ಥರನ್ನು ಸಂಪರ್ಕಿಸಬಹುದು.

APPLICATION FOR THE POST OF TRAINEE MARINE ENGINEER

PASTE PASSPORT SIZE PHOTOGRAPH

1. Name in Full : ____________________
   (In CAPITAL LETTERS as per School leaving Certificate)
2. Mailing Address : ____________________
   ____
   (In CAPITAL LETTERS)
   Pin Code :
   Contact Ph.No : ______________ Fax No : ______________
3. Test Centre Desired (put ✓mark)
   Mumbai Calcutta Delhi Chennai Guwahati
4. Date of Birth : ____________________
   Date Month Year
5. Category (put ✓ mark) ____________________
   SC ST OBC General
6. Name & Address of ____________________
   Engg. College ____________________
   (Graduated From) ____________________
   DISCIPLINE: MECHANICAL ENGINEERING
7. Particulars of Demand Draft : (Write your name in CAPITALS on the reverse of the Demand Draft)

Name & Address of the Bank	D.D.No.	Date of Issue	Amount (Rs.)

Declaration : I hereby declare that all statements made in this application are true, complete and correct to the best of my knowledge and belief. I understand that in the event of any information being found false or incorrect, my candidature/ appointment is liable to be rejected/terminated.

Place : ____________________

Date : ____________________

Signature of Applicant

ರಸಪ್ರಶ್ನೆ

1. ಇದುವರೆಗೆ ನೊಬೆಲ್ ಪ್ರಶಸ್ತಿ ಪಡೆದ ಭಾರತೀಯರು ಯಾರ್ಯಾರು?
2. 'ಆಜಾದ್ ಹಿಂದ್ ಸೇನೆ'ಯನ್ನು ರೂಪಿಸಿದವರು ಯಾರು?
3. ಸಿಖ್ ಸಮುದಾಯದ ಧಾರ್ಮಿಕ ಗ್ರಂಥದ ಹೆಸರೇನು?
4. ಈಗಿನ ರಾಷ್ಟ್ರೀಯ ಗ್ರಂಥಾಲಯಕ್ಕೆ ಹಿಂದೆ ಇದ್ದ ಹೆಸರೇನು?
5. 'ಶಿಕ್ಷಕರ ದಿನ'ವನ್ನು ಎಂದು ಆಚರಿಸಲಾಗುತ್ತದೆ?
6. 'ರಾಷ್ಟ್ರೀಯ ಭಾವೈಕ್ಯ'ದ ದಿನವನ್ನು ಯಾವಾಗ ಆಚರಿಸಲಾಗುತ್ತದೆ?
7. 'ಮಕ್ಕಳ ದಿನಾಚರಣೆ' ಯಾವಾಗ ಜರುಗುತ್ತದೆ?
8. ಸಾಲಾರ್‌ಜಂಗ್ ಮ್ಯೂಜಿಯಂ ಎಲ್ಲಿದೆ?
9. ರವೀಂದ್ರನಾಥ ಠಾಕೂರ್ ಸ್ಥಾಪಿಸಿದ ವಿಶ್ವಭಾರತಿ ವಿಶ್ವವಿದ್ಯಾಲಯ ಎಲ್ಲಿದೆ?
10. ಇಂಡಿಯನ್ ಮ್ಯೂಜಿಯಂ ಎಲ್ಲಿದೆ?

ಉತ್ತರಗಳು

1. ಅ) ರವೀಂದ್ರನಾಥ ಠಾಗೋರ್; ಸರ್. ಸಿ.ವಿ.ರಾಮನ್; ಹರಗೋವಿಂದ ಖೊರಾನಾ (ಈಗ ಅಮೆರಿಕದ ಪೌರರು); ಸುಬ್ರಹ್ಮಣ್ಯನ್ ಚಂದ್ರಶೇಖರ್ (ಅಮೆರಿಕದ ಪೌರರು); ಯುಗೋಸ್ಲಾವಿಯಾ ಸಂಜಾತೆ -ನಂತರ ಭಾರತೀಯ ಪೌರಳಾದ- ಇತ್ತೀಚೆಗೆ ನಿಧನರಾದ ಮದರ್ ಥೆರೇಸಾ.
2. ಸುಭಾಷಚಂದ್ರ ಬೋಸ್
3. ಗ್ರಂಥ ಸಾಹಿಬ್
4. ಇಂಪೀರಿಯಲ್ ಲೈಬ್ರರಿ
5. ಸೆಪ್ಟೆಂಬರ್ 5 ರಂದು (ದಿ.ಸರ್.ಎಸ್. ರಾಧಾಕೃಷ್ಣನ್ ಅವರ ಜನ್ಮ ದಿನದಂದು)
6. ನವೆಂಬರ್ 19ರಂದು (ದಿ. ಇಂದಿರಾ ಗಾಂಧಿ ಜನ್ಮದಿನದಂದು)
7. ನವೆಂಬರ್ 14ರಂದು (ದಿ. ಜವಾಹರ ಲಾಲ್ ನೆಹ್ರೂ ಜನ್ಮದಿನದಂದು)
8. ಹೈದರಾಬಾದ್
9. ಶಾಂತಿನಿಕೇತನ (ಪ.ಬಂಗಾಳ)
10. ಕಲ್ಕತ್ತಾ

-ಟಿ.ವಿ.ವಿ.

ಉಚಿತ ವರ್ಗೀಕೃತ ಜಾಹೀರಾತು

ಶುಭಾಶಯ

ಮೇ 29 ರಂದು 3ನೇ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿರುವ ಅಕ್ಕ-ಭಾವ ಸವಿತಾ-ಸುಬ್ರಹ್ಮಣ್ಯ ದಂಪತಿಗೆ ಶುಭಾಶಯಗಳು.

- ಶಾಂತಲಾ, ಸಾಗರ.

ಹಾರೈಕೆ

ಪವಿತ್ರ ಸ್ಥಳಗಳಾದ ಅಬು ಪರ್ವತದಿಂದ ಹಿಂತಿರುಗಿದ ಬ್ರಹ್ಮ ಕುಮಾರಿ ಸ್ನೇಹಕ್ಕ ಇವರಿಗೆ ಸ್ವಾಗತ ಕೋರಿ, ಬಾಬಾರವರು ಹೆಚ್ಚಿನ ಆಶೀರ್ವಾದ ನೀಡಲೆಂದು ಪ್ರಾರ್ಥಿಸುತ್ತೇವೆ.

- ಕೃಷ್ಣಪ್ಪಣ್ಣ, ವಸಂತಕ್ಕ, ಕಾರ್ತಿಕ, ಶ್ರೀಲಕ್ಷ್ಮಿ, ಶಿಕಾರಿಪುರ.

ವಿವಾಹ ವಾರ್ಷಿಕೋತ್ಸವ

ಸಂಗೀತಾ ಹಾಗೂ ಶಿವಶರಣಪ್ಪಾ ನಾವದಗೇರಿ (ಕ್ಕೋಳಾರ) 'ಆದರ್ಶ ಶರಣ ದಂಪತಿಗಳಿಗೆ ಇವರುಗಳ ಪ್ರಥಮ ವಿವಾಹ ವಾರ್ಷಿಕೋತ್ಸವ ಸಂದರ್ಭದಲ್ಲಿ ಶುಭ ಹಾರೈಕೆಗಳು ಹಾಗೂ ಸೃಷ್ಟಿ ಕರ್ತ ಲಿಂಗದೇವ ಅವರನ್ನು ಶರಣ ಪಥಿಕರನ್ನಾಗಿಸಿ ಮುನ್ನಡೆಸಲೆಂದು ಹಾರೈಸುತ್ತೇನೆ.

- ಉದಯ ಕುಮಾರ ಜಿ. ಸಾಲಿ, ಪ್ರಧಾನ ಕಾರ್ಯದರ್ಶಿಗಳು, ಯುವ ರಾಷ್ಟ್ರೀಯ ಬಸವದಳ, ಗುಲ್ಬರ್ಗಾ.

ಹುಟ್ಟುಹಬ್ಬ

Dear friends, C. Ranjit Abhuthair, A.P. Ramamurthy, Asha R. Suni.S. (May 20th 15th, 14th, 23rd and 15th) Happy Birthday to all of you. I.wish you all Golden life.

- S.E.Shivappa Huralihal, Hoovinahadagali.

ಹಾರೈಕೆ

ಶ್ರೀಶೈಲ ಮಠಪತಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ರೋಣ, ಇವರ ಸಂಪಾದಕತ್ವದಲ್ಲಿ ಬರುತ್ತಿರುವ ಜ್ಞಾನಸೌರಭ ಸಂಸ್ಮರಣ ಸಂಚಿಕೆ ಶಿಕ್ಷಣ ರಂಗಕ್ಕೆ ಹೊಸ ಆಯಾಮ ನೀಡಲಿ ಶಿಕ್ಷಕರ ಶೈಕ್ಷಣಿಕ ಸಮ್ಮೇಳನ ಯಶಸ್ಸಿನ ಮೈಲುಗಲ್ಲಾಗಲಿ ಎಂದು ಹಾರೈಸುವ

-ಶ್ರೀಮತಿ ಎಚ್.ಡಿ. ಡಂಬಳ, ಪ್ರಾ.ಶಾ. ಶಿಕ್ಷಕಿ, ರೋಣ,

ಹಾರೈಕೆ

1999 ಮೇ 7ಕ್ಕೆ ನಡೆಯಲಿರುವ ಚಿ. ಸೌ. ರಮಣಿ ಹಾಗೂ ಚಿ.ಸತೀಶ್ ಇವರ ವಿವಾಹ ಸಮಾರಂಭಕ್ಕೆ ಹಾರ್ದಿಕ ಶುಭ ಹಾರೈಸುವ

- ಸಂತೋಷ್, ಶ್ರುತಿ, ಸಂಧ್ಯಾ, ಶಿಲ್ಪ, ಶ್ವೇತ, ರಜತ್, ರಕ್ಷಾ, ಕಾಸರಗೋಡು.

ಅಭಿನಂದನೆ

ಹೊಸದಾಗಿ ರೇವುಗೋಳ ವಸ್ತಿ ಕನ್ನಡ ಶಾಲೆಯನ್ನು ಮಂಜೂರು ಮಾಡಿಸಿ ಅತ್ಯುತ್ತಮ ವಿದ್ಯಾರ್ಥಿಗಳನ್ನು ನಿರ್ಮಿಸಿ 'ಮಹಾರಾಷ್ಟ್ರ ಅಭ್ಯಾಸಕ್ರಮ ಸಂಶೋಧನೆ ಮಂಡಳಿ' ಯವರಿಂದ ಅಭಿನಂದನೆ ಪಡೆದ ರೇವಣಸಿದ್ಧ ದೊಡಮನಿಗೆ ಮನಃಪೂರ್ವಕ ಧನ್ಯವಾದಗಳು.

-ಶ್ರೀ ಶಿವಪುತ್ರ ಸಿ. ಕಲಶೆಟ್ಟಿ, ಕೇಂದ್ರಪ್ರಮುಖರು, ಕನ್ನಡ ಶಾಲೆ, ಮಹಾರಾಷ್ಟ್ರ.

ಹಾರೈಕೆ

ಬೆಳಗಾವಿಯಲ್ಲಿ ಬಿ.ಇಡಿ ಓದುತ್ತಿರುವ ಸ್ನೇಹಿತ ಅಮರೇಶಗೌಡ ಹಾಗು ಲಿಂಗಸೂಗೂರಿನಲ್ಲಿ ಬಿ.ಎ. ಓದುತ್ತಿರುವ ಸ್ನೇಹಿತರಾದ ದೇವು, ವೆಂಕಿ, ಇವರು ಪರೀಕ್ಷೆಯಲ್ಲಿ ಫಲಪ್ರದ ಯಶಸ್ಸನ್ನು ಗಳಿಸಲೆಂದು ಹಾರೈಸುವೆ.

-ಹುಸೇನಪ್ಪ ಮುಂಡರಗಿ, ಲಿಂಗಸೂಗೂರು.

ಹುಟ್ಟುಹಬ್ಬ

ಆತ್ಮೀಯ ಗೆಳೆಯನಾದ ಹಣಮಂತರಿಗೆ (1.5.1999)ಕ್ಕೆ 20ನೇ ಹುಟ್ಟುಹಬ್ಬದ ಶುಭಾಶಯಗಳು. ಆರೋಗ್ಯ ಮತ್ತು ಒಳ್ಳೆಯ ಅಂಕಗಳನ್ನು ಗಳಿಸಲಿ ಎಂದು ಹಾರೈಸುವೆ.

-ಉದಯ ಮಲಕಪ್ಪಾ, ಜಮಖಂಡಿ.

ಸ್ವಾಗತಾಭಿನಂದನೆ

ವಿಧಾನ ಪರಿಷತ್ತಿನ ಉಪಸಭಾಪತಿಗಳಾಗಿ ಆಯ್ಕೆಗೊಂಡ ದೇವಿಡಸಿಮೋಯನ್‌ರವರಿಗೆ ತುಂಬು ಹೃದಯದ ಸ್ವಾಗತ. ಹಾಗೆ ಆಯ್ಕೆ ಸಮಿತಿಯಲ್ಲಿ ಪ್ರಸ್ತಾಪಿಸಿದ ಎಚ್.ಕೆ. ಪಾಟೀಲರಿಗೂ, ಡಿ.ಬಿ. ಕಲ್ಮಣಕರರವರಿಗೂ, ಎಂ.ಸಿ. ನಾಣಯ್ಯನವರಿಗೂ ಹಾಗೂ ಸಹಕರಿಸಿದ ಸರ್ವರಿಗೂ ಹರ್ಷೊಲ್ಲಾಸದ ಅಭಿನಂದನೆಗಳು.

-ಪಂಡಿತ ಎ. ನಿಂಬೂರು, ಜಿಲ್ಲಾ ಯುವ ಪ್ರಶಸ್ತಿ ವಿಜೇತರು ಹಾಗೂ ಪತ್ರಕರ್ತರು, ಹುಮನಾಬಾದ

ಅಭಿನಂದನೆ

ತಾಲೂಕು ರೆಡ್ಡಿ ಜನಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಎಸ್. ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಎ. ಬಾಬುರೆಡ್ಡಿ, ಕಾರ್ಯದರ್ಶಿ ರವಿಕುಮಾರ್, ಖಜಾಂಚಿಯಾದ ದೇವರಾಜರೆಡ್ಡಿ, ಸ.ಕಾರ್ಯದರ್ಶಿ ಶ್ರೀನಾಥ್ ರೆಡ್ಡಿ ಹಾಗೂ ಎಲ್ಲಾ ಪದಾಧಿಕಾರಿಗಳಿಗೂ ಮತ್ತು ಸಂಘಟನೆಗೆ ದುಡಿದ ಎಲ್ಲಾ ಸ್ನೇಹಿತರಿಗೂ, ಕುಲಬಾಂಧವರಿಗೂ ಅಭಿನಂದನೆಗಳು.

-ಎಸ್. ಎಂ. ಮುನಿರೆಡ್ಡಿ, ಕೋಲಾರ.

ಹಾರೈಕೆ

'ಪೂರ್ಣಿ ನಾ ನಿನ್ನ ಪ್ರೀತಿಸಿ ಮೇ 24ಕ್ಕೆ 3 ವರ್ಷ ಕಳೆಯುತ್ತದೆ. ನಮ್ಮ ಪ್ರೀತಿ, ಜನುಮದ ಜೋಡಿ ಹಾಗೇ ಮುಂದುವರೆಯಲಿ' ಎನ್ನುವ ನಿನ್ನ ಪ್ರಿಯ,

-ರವಿ, ಉಡುಪಿ.

ಹುಟ್ಟುಹಬ್ಬ

ಪ್ರೀತಿಯ ಸಹೋದರನಾದ ಯತೀಶನಿಗೆ 8.5.99ಕ್ಕೆ 6ನೇ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು. ಶುಭ ಕೋರುವವರು -ಮಲ್ಲಿಕಾರ್ಜುನಪ್ಪ, ಮಂಜುಳ, ರೇಣುಕ, ರಾಜು, ಸುರೇಶ, ದಯಾನಂದ, ಅಜ್ಜ, ಅಜ್ಜಿ, ಸಂದೀಪ್.

-ಕೆ.ಆರ್. ಮಲ್ಲಪ್ಪ, ಚಿಕ್ಕಮಗಳೂರು.

ಆಚರಿಸಿ

ಧೂಮಪಾನ ಸೇವನೆ ತುಂಬಾ ಅಪಾಯಕಾರಿ ಮತ್ತು ಮೃತ್ಯುಕಾರಕ ಎಂದು ತಿಳಿದಿದ್ದರೂ ಅದನ್ನು ಉಪಯೋಗಿಸುವ ಜನರ ಸಂಖ್ಯೆ ಅಪಾರ. ಆದ್ದರಿಂದ ಧೂಮಪಾನ ಸಂಪೂರ್ಣ ನಿಷೇಧಿಸಿ, ಮೇ 31 ವಿಶ್ವ ಧೂಮಪಾನ ನಿಷೇದ ದಿನವನ್ನು ಆಚರಿಸಿ ಸಾರ್ಥಕಗೊಳಿಸಿರಿ.

-ಸಂತೋಷಕುಮಾರ ಬಂಡೆ, ಮಲ್ಲಿಕಾರ್ಜುನ, ಮಾದನಶೆಟ್ಟಿ, ಬಿಜಾಪುರ.

ಹುಟ್ಟುಹಬ್ಬ

ನನ್ನ ಪ್ರೀತಿಯ ಗೆಳೆಯನಾದ ಮಲ್ಲಪ್ಪನಿಗೆ ಮೇ 5 ರಂದು ಬರುವ ಹುಟ್ಟು ಹಬ್ಬಕ್ಕೆ ಹಾರ್ದಿಕ ಶುಭಾಶಯಗಳೊಂದಿಗೆ ಆಯುರಾರೋಗ್ಯವಿರಲೆಂದು ಹಾರೈಸುವೆ.

-ಮಮತಾ, ಮನೋಹರ ಜೋಶಿ, ಮುಧೋಳ.

ಕೋರಿಕೆ

ನಮ್ಮ ತಂದೆ ತಾಯಿಯರ ವಿವಾಹದ 20ನೇ ವಾರ್ಷಿಕೋತ್ಸವಕ್ಕೆ ಶುಭಾಶಯಗಳನ್ನು ಕೋರುತ್ತೇವೆ. ತಂದೆ-ತಾಯಿ ಡಿ. ವಿನ್ಸೆಂಟ್ ಮತ್ತು ಪ್ರೇಮಕುಮಾರಿ ಇವರಿಗೆ ದೇವರು ಆಶೀರ್ವಾದ ನೀಡಲಿ ಎಂದು ಕೋರುವ,

-ಶಿಲ್ಪ, ಶ್ವೇತ ಮತ್ತು ನಿಯಲ್ ವಿನ್ಸೆಂಟ್, ಕೊಳ್ಳೇಗಾಲ.

ಅಭಿನಂದನೆ

ಧಾರವಾಡದ ಖ್ಯಾತ ಚಿತ್ರ ಸಾಹಿತಿ ಶ್ರೀ ಸುರೇಶ ಕುಲಕರ್ಣಿ ಅವರಿಗೆ ಅವರ ಅಪ್ರತಿಮ ಚಿತ್ರ ಸಾಹಿತ್ಯಕ್ಕಾಗಿ 1999ರ ಸಾಲಿನ ವಿಶ್ವೇಶ್ವರಯ್ಯ ಸ್ಮಾರಕ ಪ್ರಶಸ್ತಿ ಪಡೆದ ಈ ಶುಭ ಸಂದರ್ಭದಲ್ಲಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವೆವು.

-ಶ್ರೀಪಾದ ವಿ.ಜೋಶಿ., ಅನವಾಲ.

ಉಚಿತ ವರ್ಗೀಕೃತ ಜಾಹೀರಾತು

ವಿವಾಹ ವಾರ್ಷಿಕೋತ್ಸವ

12.05. 1999ಕ್ಕೆ 26ನೇ ವಿವಾಹ ವಾರ್ಷಿಕೋತ್ಸವ ಸಂದರ್ಭದಲ್ಲಿ ಶ್ರೀ ಬಾಬುರಾವ ಕರಜಗಾರ ಮತ್ತು ಶ್ರೀಮತಿ ಪ್ರಭಾವತಿ ಕರಜಗಾರ ದಂಪತಿಗಳಿಗೆ ಶುಭ ಕೋರುವ ಮೊಮ್ಮಕ್ಕಳು, ಮಕ್ಕಳು ಮತ್ತು ಅಳಿಯಂದಿರು.

-ಶ್ರೀ ಅಂಬಣ್ಣ ರಾ. ಗೌಳಿ, ಸಾಗರ.

ಹುಟ್ಟುಹಬ್ಬ

ನಮ್ಮ ಪ್ರೀತಿಯ ತಮ್ಮನಾದ ಎಸ್.ಶಾಂತಿನಾಥ್‌ಗೆ ಅವನ ಹುಟ್ಟುಹಬ್ಬಕ್ಕೆ ಶುಭಾಶಯಗಳೊಂದಿಗೆ ಹಾರೈಸುವ ಪ್ರೀತಿಯ ಅಣ್ಣಂದಿರು,

-ಎಸ್.ಪ್ರಕಾಶ, ಎಸ್. ಕೊಟ್ರೇಶ್,
ಹಗರಿಬೊಮ್ಮನಹಳ್ಳಿ,

ವಿವಾಹ

ಮೇ 7 ರಂದು ವಿವಾಹವಾಗುತ್ತಿರುವ ಬಿ.ವಿ. ಹರಿ ಶ್ಯಾಮರ ಬದುಕು ಸುಮಧುರವಾಗಲಿ ಹಾಗೂ ನಗು ನಗುತ ಸಾಗಲಿ ಎಂದು ಹಾರೈಸುತ್ತೇವೆ.

-ಸುಜಾತ ವಿ., ಕೊಪ್ಪ.

ಪ್ರಕಟಣೆ

ನಮ್ಮಲ್ಲಿ ಎಲ್ಲಾ ತರಹದ ಅರ್ಜಿಗಳು ಸಿಗುತ್ತವೆ ಹಾಗೂ ಅಂದವಾಗಿ ಕನ್ನಡದಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಬೆರಳಚ್ಚು ಮಾಡಲಾಗುವುದು. ಸಂಪರ್ಕಿಸಿ : ಶ್ರೀ ರಾಘವೇಂದ್ರ ಆಟೋ ಜೆರಾಕ್ಸ್, ಸೆಂಟರ್, ಸಿಂಧನೂರು.

-ಅರುಣ್‌ಕುಮಾರ, ಸಿಂಧನೂರು.

ಹಾರೈಕೆ

2.5.99 ರಂದು ವಿವಾಹ ಬಂಧನದಲ್ಲಿ ಸಿಲುಕಲಿರುವ ಅಣ್ಣನಾದ ಚಿ. ಕಳ್ಳಕೇಶ ಸುಖ ಸಂತೋಷದ ಜೀವನವನ್ನು ತನ್ನದಾಗಿಸಿಕೊಳ್ಳಲಿ ಎಂದು ಹಾರೈಸುವ ತಮ್ಮ ಹಾಗೂ ಸೊಸೆ.

-ಡಾ. ಈಶ್ವರ, ಕಲ್ಯಾಣಶಟ್ಟರ, ಧಾರವಾಡ.

ಹಾರೈಕೆ

ನನ್ನ ಪ್ರೀತಿಯ ಸಲ್ಮಾ ಪರ್ವಿನ ಬೇಗನೆ ನಡೆದು ಓಡಾಡಲಿ ಹಾಗೂ ಕು.ರೂಪಾಗೆ ಎಸ್. ಎಸ್. ಎಲ್.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳು ಬರಲೆಂದು ಹಾರೈಸುವ

-ಕುಮಾರ ಎಸ್.ಪಿ. ತಳವಾರ,ಸಿಂಧನೂರು.

ಹುಟ್ಟುಹಬ್ಬ

I wish you happy birthday to my Elder Son MD. JUBAIR on 28th may and my Elder Daughter RUSHNA FARHEEN on 13th may. **- Zaheeruddin,** Bijapur.

ಕೃತಜ್ಞತೆ

ಶ್ರೀ ಮಹಾಈಶ್ವರ ಹವ್ಯಾಸಿ ಯಕ್ಷಗಾನ ಕಲಾ ಬಳಗ ಮಡಿಕಲ್ ಉಪ್ಪುಂದ ಇವರಿಂದ ತಾ. 22.4. 1999 ರಂದು ಪ್ರದರ್ಶಿಸಲ್ಪಟ್ಟ 'ಕಾಡ ಕನ್ನಿಕೆ' ಎಂಬ ಪ್ರಸಂಗದ ಪ್ರದರ್ಶನಕ್ಕೆ ನೆರವಿತ್ತ ಸಕಲ ಕಲಾಭಿಮಾನಿಗಳಿಗೂ ತುಂಬು ಹೃದಯದ ಕೃತಜ್ಞತೆಗಳು

-ರಾಮಚಂದ್ರ ಪೂಜಾರಿ ಕಂಠದ ಮನೆ,
ಸ್ಥಾಪಕ ಅಧ್ಯಕ್ಷರು,
ಕುಂದಾಪುರ.

ವಿವಾಹ

ಬರುವ ಮೇ 9ಕ್ಕೆ ಮದುವೆಯಾಗಲಿರುವ ಪರಮ್ಮ ಎನ್.ಗಾಳಿ ಮತ್ತು ಬಸವರಾಜ ಗುಳೇದಗುಡ್ಡ ಇವರ ವೈವಾಹಿಕ ಜೀವನವು ಸುಖ, ಶಾಂತಿ ಮತ್ತು ನೆಮ್ಮದಿಯಿಂದ ಕೂಡಿರಲಿ ಎಂದು ಹಾರೈಸುವ ಸ್ನೇಹಿತ

-ಬಸವರಾಜ ಎನ್. ರ‍್ಯಾವಳದ, ಗಂಗಾವತಿ.

ಅಭಿನಂದನೆ

ಶ್ರೀ ಪರಮಾರುತೇಶ್ವರ ಯುವಕ ಮಂಡಳದ ನೂತನ ಅಧ್ಯಕ್ಷರಾದ ಕೆ.ಎಸ್. ಗಡೇದ, ಉಪಾಧ್ಯಕ್ಷರಾದ ಬಿ.ಎಸ್.ಯಲಗೋಡ, ಕಾರ್ಯದರ್ಶಿಯವರಾದ ಕೆ.ಎಂ. ನಾಯ್ಕೋಡಿ, ಸದಸ್ಯ ಬಿ.ಕೆ. ಚಪ್ಪರಬಂದ ಇವರಿಗೆ ಹಾರ್ದಿಕ ಶುಭಾಶಯಗಳು.

-ಯಲಗೋಡ, ಮಂಜುಸುತ.

ಹುಟ್ಟುಹಬ್ಬ

ನನ್ನ ಮುದ್ದಿನ ಮಗಳಾದ ಅಕ್ಷತಾ ಇವಳ ಎರಡನೆ ವರ್ಷದ ಹುಟ್ಟುಹಬ್ಬದ ಶುಭಾಶಯಗಳು. ದೇವರು ಅವಳಿಗೆ ಆಯಸ್ಸು, ಆರೋಗ್ಯ ಕೊಟ್ಟು ಸದಾ ಕಾಪಾಡಲೆಂದು ಹಾರೈಸುವೆ

-ಸದಾನಂದ ಗೆಲಿ.ಚಲವಾದಿ, ರಾಹುಲ,
ಬಿಜಾಪುರ.

ಪ್ರಕಟಣೆ

ರಾಷ್ಟ್ರಮಟ್ಟದ ಛಾಯಾಗ್ರಹಣ ಸ್ಪರ್ಧೆ-99 ನಡೆಯಲಿದೆ. 108 ವಿಶೇಷ ಬಹುಮಾನಗಳಿವೆ. ಹವ್ಯಾಸಿ ಛಾಯಾಗ್ರಾಹಕರಿಗೆ ಮಾತ್ರ ಈ ಸ್ಪರ್ಧೆ ತೆರೆದಿದೆ. ಭಾಗವಹಿಸಲು ಅಂತಿಮ ದಿನಾಂಕ-ಜೂನ್ 20. ವಿವರಗಳಿಗೆ : ಸಿ.ಎಸ್. ಗೋಪಾಲಕೃಷ್ಣ, ತ್ರಿಶೂಲ್ ವಿದ್ಯಾಸಂಸ್ಥೆ, ಕೆ.ಬಿ. ಆರ್. ರೈಸ್ ಮಿಲ್ಸ್, ದಾವಣಗೆರೆ.

ಹುಟ್ಟುಹಬ್ಬ

ದಿನಾಂಕ 30.5.99ರಂದು ಜನ್ಮದಿನ ಆಚರಿಸುವ ನರಸಮ್ಮ ಇವರಿಗೆ ದೇವರು ವಿದ್ಯೆ ಬುದ್ಧಿ ಕೊಟ್ಟು ಕಾಪಾಡಲಿ ಎಂದು ಹಾರೈಸುವ.

- ಕು.ರೇಣುಕಾ, ಮಸ್ಕಿ.

ವಿವಾಹ ವಾರ್ಷಿಕೋತ್ಸವ

ಮೇ 15ರಂದು ರಾಜಶ್ರೀ-ಅರುಣ್ ಭೋಂಕಾಕ್ ದಂಪತಿಯ 5ನೇ ವಿವಾಹ ವಾರ್ಷಿಕೋತ್ಸವ. ಅವರಿಗೆ ಈ ಸಂದರ್ಭದ ಆತ್ಮೀಯ ಅಭಿನಂದನೆಗಳು.

-ಲತಾ, ಸವಿತಾ, ಶಾಂತಾ, ಬೆಂಗಳೂರು.

ಕೃತಜ್ಞತೆ

ನನ್ನನ್ನು ತುಂಬಾ ಸಾಲಗಾರನೆಂದು ತಿಳಿದು ಯಾರೂ ಹತ್ತಿರ ಸೇರಿಸದಿದ್ದಾಗ, 'ಹೆದರಬೇಡ! ಕೃಷ್ಣ ನಾನಿದ್ದೇನೆ' ಎಂದು ಧೈರ್ಯ ಹೇಳಿ ಪಾತಾಳದಿಂದ ಮೇಲಕ್ಕೆತ್ತಿದ ಹೃದಯವಂತ ಶ್ರೀಕಂಠಿಗೆ ನನ್ನ ಅನಂತ ಅನಂತ ವಂದನೆಗಳು.

-ಕೆ.ಟಿ. ಕೃಷ್ಣಯ್ಯ ಬಿನ್ ತಗಡಪ್ಪ, ಬೆಂಗಳೂರು.

ವಿವಾಹ ವಾರ್ಷಿಕೋತ್ಸವ

ಪ್ರೀತಿಯ ಅಣ್ಣ ಶ್ರೀ ಮುರಿಗೇಶ್ ಹಾಗೂ ಅತ್ತಿಗೆ ಶ್ರೀಮತಿ ಮಂಜುಳಾ ಶಿದ್ದಿಭಾವಿ ದಂಪತಿಗಳ 9ನೇ ಮದುವೆಯ ವಾರ್ಷಿಕೋತ್ಸವ ಶುಭ ಸಂದರ್ಭದಲ್ಲಿ 'ನಿಮ್ಮಿಬ್ಬರ ದಾಂಪತ್ಯಜೀವನ ಸುಖ-ಶಾಂತಿ ನೆಮ್ಮದಿಯೊಂದಿಗೆ ಸದಾ ಸಂತೋಷದಿಂದ ಇರುವಂತೆ ಆ ಭಗವಂತ ಕೃಪೆ ತೋರಿ ಕಾಪಾಡಲಿ' ಎಂದು ಹಾರೈಸುವೆವು.

-ಮಹಾಂತೇಶ ಬ. ಶಿದ್ದಿಭಾವಿ ಹಾಗೂ
ಶ್ರೀಮತಿ ಸಂಗಮ್ಮಾ ಬ. ಶಿದ್ದಿಭಾವಿ, ಬೆಳಗಾವಿ.

ಹಾರೈಕೆ

ಟಿ. ಅಶೋಕ ಹಾಗೂ ಸುಮ ದಂಪತಿಗಳಿಗೆ 3ನೇ ವರ್ಷದ ವಿವಾಹ ವಾರ್ಷಿಕೋತ್ಸವ ಸಂದರ್ಭದಲ್ಲಿ ಶುಭ ಹಾರೈಕೆಗಳು.

-ಎಚ್.ಸುರೇಶ್, ಹೂವಿನ ಹಡಗಲಿ.

ಬೀಳ್ಕೊಡುಗೆ

ವಯೋಮಿತಿ ಮೇಲೆ ನಿವೃತ್ತರಾದ ನಮ್ಮ ಹಿರಿಯ ಮುಖ್ಯ ಗುರುಗಳಾದ ಶ್ರೀ ಮಲ್ಲಪ್ಪ ಸ.ಹಿ. ಪ್ರಾ. ಶಾಲೆ, ಚಿತ್ತಾಪೂರ ಇವರಿಗೆ ಸ.ಹಿ. ಪ್ರಾ.ಶಾಲೆ ಹನುಮನಗುಡ್ಡದ ಶಿಕ್ಷಕರ ವತಿಯಿಂದ ಬೀಳ್ಕೊಡುಗೆ.

-ಶ್ರೀ ರಾಜನಗೌಡ,
ಸಹ ಶಿಕ್ಷಕರು, ಹನುಮನಗುಡ್ಡ.

ಹಾರೈಕೆ

ಮೇ 14 ರಂದು ಪ್ರಾರಂಭವಾಗಲಿರುವ ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತಕ್ಕೆ ಜಯ ದೊರಕಲೆಂದು ಹಾರೈಸುವ

-ಪ್ರಭಾಕರ ಶಾರದಾ ಮತ್ತು ಬಂಧು ಮಿತ್ರರು,
ಇಲಕಲ್ಲ.

ಉ ಚಿತ ಜಾಹೀರಾತು ಕೂಪನ್!

ಜಾಹೀರಾತು ನೀಡಲು ಹಣ ಕೊಡಬೇಕು ಎಂಬುದು ನಿಮಗೆಲ್ಲಾ ಗೊತ್ತಿರುವ ಸತ್ಯ. ಆದರೆ ಈಗ ನಿಮ್ಮ ಈ ನಂಬಿಕೆಯನ್ನೇ ಸುಳ್ಳು ಮಾಡುತ್ತಿದ್ದೇವೆ! ನೀವು ಒಂದು ಪೈಸೆಯನ್ನೂ ಖರ್ಚು ಮಾಡದೆ 'ಬದುಕು' ಮಾಸ ಪತ್ರಿಕೆಗೆ ವರ್ಗೀಕೃತ ಜಾಹೀರಾತು ನೀಡಬಹುದು.

ಜಾಹೀರಾತಿನ ವಿಷಯ

ಮದುವೆ, ಹುಟ್ಟುಹಬ್ಬ, ವಿದೇಶ ಪ್ರಯಾಣ, ಹಬ್ಬ, ಹೊಸವರ್ಷ, ವಿವಾಹ ವಾರ್ಷಿಕೋತ್ಸವ, ಪರೀಕ್ಷೆಯ ಯಶಸ್ಸು, ವ್ಯಾಪಾರದಲ್ಲಿ ಯಶಸ್ಸು, ಪ್ರಶಸ್ತಿ-ಪುರಸ್ಕಾರ.... ಹೀಗೆ ಯಾವುದೇ ಸಂದರ್ಭದಲ್ಲಿ ನೀವು ನಿಮ್ಮ ಆಪ್ತರಿಗೆ, ಗೆಳೆಯರಿಗೆ, ಸಂಬಂಧಿಕರಿಗೆ, ಪರಿಚಿತರಿಗೆ ಶುಭಾಶಯ ಕೋರಲು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಉಚಿತ ಜಾಹೀರಾತು ಕೂಪನ್‌ನ್ನು .ವೈಯಕ್ತಿಕ ಜಾಹೀರಾತುಗಳಿಗೆ ಮಾತ್ರ ಉಪಯೋಗಿಸಿ. ವ್ಯಾಪಾರ, ವೈವಾಹಿಕ ವಿಷಯಗಳಿಗೆ ಈ ಉಚಿತ ಸೌಲಭ್ಯ ಲಭ್ಯವಿಲ್ಲ.

ಹೇಗೆ ಕಳಿಸುವುದು?

ಈ ಕೆಳಗಿನ ಕೂಪನ್‌ನಲ್ಲಿ ಜಾಹೀರಾತು ವಿಷಯವನ್ನು 20 ಶಬ್ದಗಳಿಗೆ ಮೀರದಂತೆ ಬರೆದು 'ಬದುಕು' ವಿಳಾಸಕ್ಕೆ ಕಳಿಸಿದರೆ ನಿಮ್ಮ ಕೆಲಸ ಮುಗಿಯಿತು.

ಮುಂದಿನ ತಿಂಗಳ ಸಂಚಿಕೆಯಲ್ಲಿ ನೀವು ನಿಮ್ಮ ಜಾಹೀರಾತನ್ನು ನೋಡಿ ಆನಂದಿಸಬಹುದು. ಜಾಹೀರಾತಿನ ವಿಷಯ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿರಬಹುದು. ಹಾಂ! ನೆನಪಿಡಿ! ನಮ್ಮ ಕಚೇರಿಯನ್ನು ತಲುಪುವ ಮೊದಲ 50 ಜಾಹೀರಾತುಗಳಿಗೆ ಮಾತ್ರ ಈ ಅವಕಾಶ ಸಿಗುತ್ತದೆ. ಆದ್ದರಿಂದ ತಡ ಮಾಡದೆ ತಕ್ಷಣ ಕೂಪನ್ ಭರ್ತಿ ಮಾಡಿ ಇಂದೇ ಕಳಿಸಿಕೊಡಿ.

ಕೂಪನ್ ಕಳಿಸಬೇಕಾದ ವಿಳಾಸ

'ಬಿಸಿಲ ಬದುಕು' ಮಾಸಪತ್ರಿಕೆ, ಅಂಚೆಪೆಟ್ಟಿಗೆ: 7951, ಬಸವೇಶ್ವರನಗರ, ಬೆಂಗಳೂರು - 560 079.

✂ -

ಉಚಿತ ಜಾಹೀರಾತು ಕೂಪನ್

ದಯವಿಟ್ಟು ಈ ಕೆಳಗಿನ ವರ್ಗೀಕೃತ ಜಾಹೀರಾತನ್ನು ಜೂನ್ 99ರ 'ಬಿಸಿಲ ಬದುಕು' ಮಾಸಪತ್ರಿಕೆಯಲ್ಲಿ ಪ್ರಕಟಿಸಲು ಕೋರಿಕೆ.

1	2	3	4
5	6	7	8
9	10	11	12
13	14	15	16
17	18	19	20


ಜಾಹೀರಾತು ನೀಡುವವರ ಪೂರ್ಣ ವಿಳಾಸ..

....

....

ಪಿನ್‌ಕೋಡ್.................................... ದೂರವಾಣಿ ಸಂಖ್ಯೆ..

ಜಾಹೀರಾತುದಾರರ ಸಹಿ



ಪ್ರೊ. ಟಿ. ಎಸ್. ಮೃತ್ಯುಂಜಯ

ಕನ್ನಡ ಮಾಧ್ಯಮದಲ್ಲಿ ಹತ್ತನೆಯ ತರಗತಿಯವರೆಗೆ ಓದಿ, ನಂತರ ಪಿ.ಯು.ಸಿ.ಗೆ ಸೇರಿದ ತಕ್ಷಣ ವಿದ್ಯಾರ್ಥಿಗಳಿಗೆ ಒಂದು ಭಯಂಕರ 'ಭೂತ' ಕಾಟ ಕೊಡಲು ಶುರು ಮಾಡಿ ಬಿಡುತ್ತದೆ. ಅದೇ ಇಂಗ್ಲೀಷ್ ಭಾಷೆ. ಇಂತಹ ಪರಿಸ್ಥಿತಿಯನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವನ್ನು ಕೊಡುವ ಸಲುವಾಗಿ ಹಲವಾರು ಗಣ್ಯರೊಡನೆ ಮಾತಾಡಿ, ಹಿಂದೊಮ್ಮೆ ಅವರು ಇದೇ ತರಹದ ಸಮಸ್ಯೆಗಳನ್ನು ಎದುರಿಸಿದ ರೀತಿ ಮತ್ತು ಅವರು ನಿಮ್ಮ ಈ ಸಮಸ್ಯೆಗೆ ನೀಡಿರುವ ಸಲಹೆಗಳನ್ನು ನಿಮಗಾಗಿ ನೀಡುತ್ತಿದ್ದೇವೆ.

■ ವಸುಧೇಂದ್ರ

ಹೆಸರು : ಪ್ರೊ.ಟಿ.ಎಸ್.ಮೃತ್ಯುಂಜಯ.
ವೃತ್ತಿ : ಪ್ರಾಧ್ಯಾಪಕರು, ಭಾರತೀಯ ವಿಜ್ಞಾನ ಸಂಸ್ಥೆ.
ಜನನ : 1941
ಸ್ಥಳ : ಗೌರಿಬಿದನೂರು

ವಿದ್ಯಾಭ್ಯಾಸ

ಪ್ರಾಥಮಿಕ ಶಿಕ್ಷಣ	: ಕನ್ನಡ ಮಾಧ್ಯಮ - ಗೌರಿಬಿದನೂರು.
ಮಾಧ್ಯಮಿಕ ಶಿಕ್ಷಣ	: ಇಂಗ್ಲೀಷ್ ಮಾಧ್ಯಮ - ಬೆಂಗಳೂರು.
ಪ್ರೌಢಶಿಕ್ಷಣ	: ಇಂಗ್ಲೀಷ್ ಮಾಧ್ಯಮ - ಬೆಂಗಳೂರು.
ಬಿ.ಇ.,	: ಇಂಗ್ಲೀಷ್ ಮಾಧ್ಯಮ - ಯು.ವಿ.ಸಿ.ಇ.ಬೆಂಗಳೂರು.
ಎಂ.ಇ. ಮತ್ತು ಪಿ.ಎಚ್.ಡಿ.	: ಇಂಗ್ಲೀಷ್ ಮಾಧ್ಯಮ, ಭಾರತೀಯ ವಿಜ್ಞಾನ ಮಂದಿರ, ಬೆಂಗಳೂರು.

ವಿಶೇಷಗಳು

ಸುಮಾರು ಮೂವತ್ತು ವರ್ಷಗಳಿಂದ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಮೃತ್ಯುಂಜಯ ಅವರದ್ದು "ಕೈನಮೆಟಿಕ್ಸ್ ಆಫ್ ಲಿಂಕೇಜಸ್" ವಿಷಯದಲ್ಲಿ ದೊಡ್ಡ ಹೆಸರು. ವಿಶ್ವದ ಪ್ರಖ್ಯಾತ ವೈಜ್ಞಾನಿಕ ಪತ್ರಿಕೆಗಳಲ್ಲಿ ಈ ವಿಷಯವಾಗಿ ಪ್ರಬಂಧಗಳನ್ನು ಮಂಡಿಸಿರುವ ಇವರು, ಬೆಂಗಳೂರಿನಲ್ಲಿ ಇದೇ ವಿಷಯದ ಮೇಲೆ ವಿಶ್ವದ ಪ್ರಮುಖ ವಿಜ್ಞಾನಿಗಳು ಭಾಗವಹಿಸಿದ ಸಮ್ಮೇಳನವನ್ನು ನಿರ್ವಹಿಸಿದ್ದಾರೆ.

1 ಇಂಗ್ಲೀಷ್ ಮಾಧ್ಯಮಕ್ಕೆ ಸೇರಿದ ಹೊಸತರಲ್ಲಿ ನಿಮ್ಮ ಅನುಭವಗಳೇನು?

ಇಂಗ್ಲೀಷ್ ನನಗೆ ಆಗ ಅಂತಹ ದೊಡ್ಡ ಸಮಸ್ಯೆ ಅನಿಸಿರಲಿಲ್ಲ. ಸಾಮಾನ್ಯವಾಗಿ ಆಗ ಕನ್ನಡ ಮಾಧ್ಯಮದ ಶಾಲೆಗಳೇ ಎಲ್ಲಾ ಕಡೆ ಇದ್ದಿದ್ದರಿಂದ, ಎಲ್ಲಾ ವಿದ್ಯಾರ್ಥಿಗಳಿಗೂ ಇದೇ ಸಮಸ್ಯೆ ಇದ್ದಿದ್ದರಿಂದ ಸಮಸ್ಯೆ ದೊಡ್ಡದಾಗಿ ಕಾಣುತ್ತಿರಲಿಲ್ಲ ಅನ್ನಿಸುತ್ತೆ. ಅಷ್ಟಕ್ಕೂ ಆಗ ನಾವು ನಮಗೆ ಗೊತ್ತಿರುವ ಕನ್ನಡ ಮಿಶ್ರಿತ ಇಂಗ್ಲೀಷಿನಲ್ಲೇ ಉತ್ತರ ಬರೆದರೂ ಅದು ಸ್ವೀಕೃತವಾಗುತ್ತಿತ್ತು. ಜೊತೆಗೆ ನಮ್ಮ ಇಂಗ್ಲೀಷ್ ಭಾಷೆಯನ್ನು ತಿದ್ದಲು ಉಪಾಧ್ಯಾಯರೂ ತುಂಬಾ ಶ್ರಮಿಸುತ್ತಿದ್ದರು.

2 ಅಂದು ಎದುರಾದ ಸಮಸ್ಯೆಗಳನ್ನು ಹೇಗೆ ನಿವಾರಿಸಿಕೊಂಡಿರಿ?

ನಮ್ಮ ಪ್ರಯತ್ನಕ್ಕಿಂತ ಹೆಚ್ಚಾಗಿ ಉಪಾಧ್ಯಾಯರು ಹೆಚ್ಚು ಶ್ರಮ ವಹಿಸುತ್ತಿದ್ದರೆಂಬ ನೆನಪು. ಪಾಠವನ್ನು ಹೇಳುವಾಗ ವೈಜ್ಞಾನಿಕ ಪದಗಳನ್ನು ಇಂಗ್ಲೀಷ್‌ನಲ್ಲಿಯೇ ಉಪಯೋಗಿಸಿ, ಕನ್ನಡದ ಕ್ರಿಯಾ ಪದಗಳನ್ನು ಬಳಸುತ್ತಿದ್ದರು. ಒಂದು ವಾಕ್ಯವನ್ನು ಒಮ್ಮೆ ಇಂಗ್ಲೀಷಿನಲ್ಲಿ ಹೇಳಿದರೆ ಮತ್ತೊಮ್ಮೆ ಕನ್ನಡದಲ್ಲಿ ಹೇಳುತ್ತಿದ್ದರು. ಆದ್ದರಿಂದ ವಿಷಯವನ್ನು ಅರ್ಥ ಮಾಡಿಕೊಳ್ಳುವುದು ಅಷ್ಟೊಂದು ಕಷ್ಟವಾಗಿರಲಿಲ್ಲ. ಜೊತೆಗೆ ನಾವು ನಿಘಂಟನ್ನು ಸಾಕಷ್ಟು ಉಪಯೋಗಿಸಿಕೊಳ್ಳುವ ಅಭ್ಯಾಸ ಬೆಳೆಸಿಕೊಂಡೆವು. ಉಪಾಧ್ಯಾಯರು ಸ್ನೇಹಿತರಂತಿದ್ದು ನಮ್ಮ ಸಮಸ್ಯೆಗಳನ್ನು ಅರ್ಥ

ಮಾಡಿಕೊಂಡು, ನಮಗೆ ವಿಷಯ ಮನದಟ್ಟು ಮಾಡಿಕೊಡಲು ಸಹಾಯ ಮಾಡುತ್ತಿದ್ದರು.

3 **ಈಗ, ನಿಮ್ಮ ಆ ದಿನಗಳ ಸಮಸ್ಯೆಗಳನ್ನು ನೆನಪಿಸಿಕೊಂಡರೆ ಏನನ್ನಿಸುತ್ತದೆ?**

ಈ ಸಮಸ್ಯೆ ತುಂಬಾ ತಾತ್ಕಾಲಿಕವಾದದ್ದು. ಒಂದೆರಡು ಮೂರು ತಿಂಗಳಿನಲ್ಲಿ ಅದು ತಾನೇ ತಾನಾಗಿ ನಿವಾರಣೆಯಾಗುವುದರಿಂದ ಎದೆಗುಂದ ಬೇಕಾಗಿರಲಿಲ್ಲ.

4 **ಇಂದು ಇದೇ ಸಮಸ್ಯೆಗಳನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ನಿಮ್ಮ ಸಲಹೆ ಏನು?**

ಇಂಗ್ಲೀಷ್ ಮಾಧ್ಯಮಕ್ಕೆ ಸೇರುವುದಕ್ಕಿಂತ ಮುಂಚೆ ಎಲ್ಲರೂ ಇಂಗ್ಲೀಷನ್ನು ಭಾಷೆಯಾಗಿ ಕಲಿಯುತ್ತೇವೆ. ಆಗ ಅದನ್ನು ಸರಿಯಾಗಿ ಕಲಿಯುವಂತೆ ವಿದ್ಯಾರ್ಥಿಗಳೂ ಮತ್ತು ಅಧ್ಯಾಪಕರೂ ಶ್ರಮಿಸಬೇಕು. ಒಮ್ಮೆ ನಮಗೆ ಇಂಗ್ಲೀಷ್ ಭಾಷೆಯ ಮೇಲೆ ಹತೋಟಿ ಬಂದ ಮೇಲೆ, ಅದನ್ನು ಮಾಧ್ಯಮವಾಗಿ ಉಪಯೋಗಿಸಿಕೊಳ್ಳುವುದು ಕಷ್ಟವಾಗುವುದಿಲ್ಲ. ಇಂಗ್ಲೀಷ್‌ನಲ್ಲಿ ವಾಕ್ಯ ರಚನೆ ಮಾಡಲು ಬಂದ ಮೇಲೆ, ವೈಜ್ಞಾನಿಕ ಪದಗಳನ್ನು ಬಳಸಿಕೊಂಡು ವಿಷಯವನ್ನು ಮಂಡಿಸುವುದಕ್ಕಾಗಲಿ ಅಥವಾ ಅರ್ಥ ಮಾಡಿಕೊಳ್ಳುವುದಾಗಲಿ ಕಠಿಣವಲ್ಲ.

5 **ಪ್ರಾಥಮಿಕ ಶಿಕ್ಷಣ ಯಾವ ಭಾಷೆಯಲ್ಲಿದ್ದರೆ ಒಳ್ಳೆಯದೆಂದು ನೀವು ಭಾವಿಸುತ್ತೀರಿ?**

ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿಯೇ ಇರಬೇಕೆಂಬುದಕ್ಕೆ ನಾನು ಸಂಪೂರ್ಣವಾಗಿ ಸಮ್ಮತಿಸುತ್ತೇನೆ. ಆದರೆ ಇಂದು ಬೇರೆ ಬೇರೆ ಭಾಷೆಯ ಜನರು ರಾಜ್ಯದಲ್ಲಿ ಬಂದು ನೆಲೆಸುವುದರಿಂದ, ಎಲ್ಲರಿಗೂ ಅವರವರ ಮಾತೃಭಾಷೆಯಲ್ಲಿಯೇ ಶಿಕ್ಷಣವನ್ನು ಒದಗಿಸುವುದು ಕಷ್ಟಸಾಧ್ಯ. ಆದರೆ ಕಡೆಯ ಪಕ್ಷ ಆ ಪ್ರಾಂತೀಯ ಭಾಷೆಯಲ್ಲಾದರೂ ಶಿಕ್ಷಣ ಒದಗಿಸಬೇಕು. ಮಗು ತಾನು ಹುಟ್ಟಿ ಬೆಳೆದ ಪರಿಸರದ ಭಾಷೆಯನ್ನೇ ಮಾತೃಭಾಷೆಯ ಆಳದಲ್ಲಿ ಕಲಿತಿರುತ್ತದೆ. ಹತ್ತನೆಯ ತರಗತಿಯ ವರೆಗಾದರೂ ಶಿಕ್ಷಣ ಪ್ರಾಂತೀಯ ಭಾಷೆಯಲ್ಲಿ ನಡೆಯಬೇಕು. ಅನಂತರ ಮುಂದಿನ ಶಿಕ್ಷಣವನ್ನು ಇಂಗ್ಲೀಷ್‌ನಲ್ಲಿ ನಡೆಸಬಹುದು. ಸಾಧ್ಯವಾದರೆ ತನ್ನ ಮಾತೃಭಾಷೆಯಲ್ಲಿಯೇ ಮುಂದಿನ ಶಿಕ್ಷಣವನ್ನು ಮುಂದುವರೆಸುವ ಅವಕಾಶವನ್ನು ನಾವು ಮಾಡಿಕೊಡಬೇಕು. ■

ಮಾನವೀಯ ಧರ್ಮ ಸಂರಕ್ಷಿಸಿ!

ಕ್ರೈಸ್ತ ಸಾಹಿತ್ಯ ಓದಿದಾಕ್ಷಣ ಹಿಂದೂ ಧರ್ಮ ತೊರೆಯುವುದು ಮೂರ್ಖರ ಲಕ್ಷಣವಾಯಿತು. ಯಾವುದೇ ಧರ್ಮದ ಸಾಹಿತ್ಯವನ್ನು ಓದಿ ಅದರಲ್ಲಿರುವ ಒಳ್ಳೆಯ ವಿಷಯವನ್ನು ತಿಳಿದುಕೊಳ್ಳುವುದರಿಂದ ತಪ್ಪೇನೂ ಆಗಲಾರದು. ತನ್ನ ಧರ್ಮವೇ ಶ್ರೇಷ್ಠ ಎನ್ನುವ ಹಕ್ಕು ಎಲ್ಲರಿಗೂ ಇದೆ.


■ ಕುಮಾರಿ ವೀಣಾ

ಕಳೆದ ಮಾರ್ಚ್ ತಿಂಗಳಲ್ಲಿ ಮತಾಂತರ ಒಂದು ಸಮಸ್ಯೆಯೇ? ಎಂಬ ನನ್ನ ಲೇಖನವು ಪ್ರಕಟವಾಗಿತ್ತು. ಈ ಲೇಖನಕ್ಕೆ ಏಪ್ರಿಲ್ ತಿಂಗಳ ಬಿಸಿಲ ಬದುಕು ಪತ್ರಿಕೆಯಲ್ಲಿ ಓದುಗರಿಂದ ಬಂದ ಪ್ರತಿಕ್ರಿಯೆಯನ್ನು ನೋಡಿದಾಗ ನನ್ನ ಲೇಖನವನ್ನು ಓದುಗರು ಅಪಾರ್ಥ ಮಾಡಿದಂತೆ ಕಂಡು ಬರುತ್ತದೆ. ಹಾಳಿನ ಹುಡಿಗಾಗಿ ಮತ ಕೆಡಬೇಕು ಎಂದಾಗಲಿ, ಮತಾಂತರವನ್ನು ಸಮರ್ಥಿಸುವುದಾಗಲಿ ನನ್ನ ಲೇಖನದ ಅರ್ಥವಲ್ಲ. ಮತಾಂತರ ಮಾಡುತ್ತಾರೆಂದು ಚರ್ಚುಗಳ ಮೇಲೆ ದಾಳಿ ಮಾಡುವುದು ಅಥವಾ ಪಾದ್ರಿಗಳ ಮೇಲೆ ದಾಳಿ ಮಾಡುವುದು ಮತಾಂತರ ಸಮಸ್ಯೆಗೆ ಪರಿಹಾರವಲ್ಲವೆಂದು ನನ್ನ ಅಭಿಪ್ರಾಯ. ಹಿಂದೂ ಧರ್ಮದಲ್ಲಿ ಮೇಲುಜಾತಿ ಕೀಳುಜಾತಿ ಎಂಬ ಭೇದವನ್ನು ಕಡಿಮೆಗೊಳಿಸಿ ಹಿಂದೂ ಧರ್ಮದ ಸರ್ವರೂ ಒಂದೇ ತಾಯಿಯ ಮಕ್ಕಳು ಎಂದು ನೋಡಬೇಕು. ನಮ್ಮ ದೇವಾಲಯ ಹಾಗೂ ಹಿಂದೂ ಸಂಘ ಸಂಸ್ಥೆಗಳ ವತಿಯಿಂದ ಬಡವರ ಮಕ್ಕಳಿಗೆ ಉಚಿತ ಶಿಕ್ಷಣ ಹಾಗೂ ಕಷ್ಟದಲ್ಲಿರುವವರಿಗೆ ಸಕಾಲಿಕ ಸಹಾಯ ದೊರೆಯುವಂತಾಗಬೇಕು. ಇದರಿಂದ ಮತಾಂತರ ಸಮಸ್ಯೆಗೆ ಸ್ವಲ್ಪ ಮಟ್ಟಿನ ಪರಿಹಾರ ದೊರೆಯಬಹುದು ಎಂದು ನನ್ನ ಅಭಿಪ್ರಾಯ. ಹಿಂದೂ ಧರ್ಮದಿಂದ ಒಬ್ಬ ವ್ಯಕ್ತಿ ಮತಾಂತರ ಹೊಂದುತ್ತಾನೆಂದಾದರೆ ಅದಕ್ಕೆ ಕಾರಣವೇನೆಂದು ನಾವು ಮೊದಲು ತಿಳಿದುಕೊಳ್ಳಬೇಕು. ಹಣದ ಆಮಿಷವೇ ಮತಾಂತರಕ್ಕೆ ಮೂಲ ಕಾರಣವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ನನ್ನ ದೃಷ್ಟಿಯಲ್ಲಿ ಹಿಂದೂ ಧರ್ಮದಲ್ಲಿರುವ ದಲಿತರಿಗೆ, ಬುಡಕಟ್ಟು ಜನಾಂಗಕ್ಕೆ ಸೇರಿದವರಿಗೆ ಸರಿಯಾದ ಪ್ರಾಧಾನ್ಯ ದೊರೆಯದಿರುವುದೇ ಮತಾಂತರಕ್ಕೆ ಮೂಲ ಕಾರಣವಾಗಿದೆ. ಹಿಂದೂ ಧರ್ಮದಲ್ಲಿ ಇರುವ ವಿದ್ಯಾವಂತರು ಹಾಗೂ ಹಿಂದೂ ಧರ್ಮದ ಬಗ್ಗೆ ಪೂರ್ಣ ತಿಳಿವಳಿಕೆ ಇರುವವರು ಯಾವುದೇ ಆಮಿಷಕ್ಕೆ ಒಳಗಾಗಿ ತಮ್ಮ ಧರ್ಮವನ್ನು ತೊರೆಯುವುದಿಲ್ಲ. ಏಕೆಂದರೆ ಅವರು ತಮ್ಮ ಧರ್ಮದಲ್ಲಿರುವ ಶ್ರೇಷ್ಠತೆಯನ್ನು ಅರಿತಿರುತ್ತಾರೆ. ಮತಾಂತರ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ಹಿಂದೂ ಧರ್ಮೀಯರು ಹಾಗೂ ಹಿಂದೂ ಧರ್ಮದ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿರುವವರು ಹಿಂದೂ ಧರ್ಮದಲ್ಲಿದ್ದು ಸಮಾಜದ ತುಳಿತಕ್ಕೆ ಒಳಗಾಗಿದ್ದವರನ್ನು ರಕ್ಷಣೆ ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಬೇಕು. ಹಿಂದೂ ಧರ್ಮದಲ್ಲಿರುವ ದಲಿತರು, ಬುಡಕಟ್ಟು ಜನಾಂಗಕ್ಕೆ ಸೇರಿದವರನ್ನು, ಕಡು ಬಡತನದಲ್ಲಿರುವವರನ್ನು ಒಂದೆಡೆ ಸೇರಿಸಿ ಹಿಂದೂ ಧರ್ಮದ ಬಗ್ಗೆ ಅವರಲ್ಲಿ ಸರಿಯಾದ ತಿಳಿವಳಿಕೆಯನ್ನು ಮೂಡಿಸಬೇಕು. ನಮ್ಮ ಹಳ್ಳಿಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ವತಿಯಿಂದ 'ಯೋಜನೆ' ಎಂಬ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಅದರಲ್ಲಿ ಹಳ್ಳಿಯ ಬಡವರು, ಸಣ್ಣ ರೈತರು ಕೂಲಿ ಕಾರ್ಮಿಕರು ಸೇರಿ 5 ರಿಂದ 10 ಜನರ ಗುಂಪು ಮಾಡುತ್ತಾರೆ. ಇವರು ವಾರದಲ್ಲಿ ಒಂದು ದಿನ ತಮ್ಮ ತಮ್ಮ ಮನೆಯ ಕೆಲಸಗಳನ್ನು ಉಚಿತವಾಗಿ ಮಾಡುತ್ತಾರೆ. ಹೀಗೆ ಮಾಡುವುದರಿಂದ 10 ಜನರನ್ನು ದುಡಿಸುವ ಸಾಮರ್ಥ್ಯವಿಲ್ಲದ ಬಡಜನರು ಸಹ ತಮ್ಮ ಮನೆಯಲ್ಲೇ 'ಯೋಜನೆ' ಕಾರ್ಯಕ್ರಮದಿಂದ ಸ್ವಂತ ಮನೆ ನಿರ್ಮಿಸುವರು, ಬಾವಿಯನ್ನು ನಿರ್ಮಿಸುವರು, ತಮಗಿರುವ ಸ್ವಲ್ಪ ಭೂಮಿಯಲ್ಲಿ ಕೃಷಿ ಮಾಡುವರು! ಅದರಿಂದ ತುಂಬಾ ಸಹಾಯವಾಗಿದೆ. ಇದು ಮಾತ್ರವಲ್ಲದೆ ಬಡಜನರಿಗೆ ಬಡ್ಡಿ ರಹಿತ ಸಾಲ ಮತ್ತು ಸಣ್ಣ ಉಳಿತಾಯ ಮಾಡುವಂತೆ ಪ್ರೋತ್ಸಾಹವನ್ನು ನೀಡುತ್ತಾರೆ. ಹೀಗೆ ಜನಹಿತ ಕಾರ್ಯಕ್ರಮಗಳನ್ನು ನಡೆಸುತ್ತಾ ಹಳ್ಳಿಯ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ. ನಮ್ಮ ಹಳ್ಳಿಯಲ್ಲಿ ಶ್ರೀಕ್ಷೇತ್ರ

ಧರ್ಮಸ್ಥಳದ ಕಾರ್ಯಕ್ರಮಕ್ಕೆ ಮನ ಸೋತು ಹಿಂದೂ ಧರ್ಮದಿಂದ ಮತಾಂತರ ಹೊಂದಿದ ಕೆಲ ಹರಿಜನರು ಪುನಃ ಹಿಂದೂ ಧರ್ಮಕ್ಕೆ ಸೇರುತ್ತಿದ್ದಾರೆ. ನಮ್ಮ ದೇವಾಲಯಗಳು ಹಾಗೂ ಹಿಂದೂ ಸಂಘ ಸಂಸ್ಥೆಗಳು ಇಂತಹ ಜನಹಿತ ಕಾರ್ಯಕ್ರಮಗಳನ್ನು ಪ್ರತಿ ಹಳ್ಳಿಯಲ್ಲಿ ಕೈಗೊಂಡರೆ ಮತಾಂತರ ಸಮಸ್ಯೆಯು ತಾನಾಗಿ ಕಡಿಮೆ ಆಗುತ್ತದೆ. 'ಮುಗ್ಧರ ಮನೆ ಮನೆಗೆ ಹೋಗಿ ಅವರ ಮುಗ್ಧ ಮನಸ್ಸಿನಲ್ಲಿ ಹಿಂದೂ ದೇವ-ದೇವತೆಗಳ ಬಗ್ಗೆ ಕೀಳರಿಮೆ ಉಂಟು ಮಾಡುವುದು ಯಾಕಾಗಿ? ಕ್ರಿಸ್ತನ ರೀತಿಗಳ ಬಗ್ಗೆ ಸಾಹಿತ್ಯಗಳನ್ನು ಉಚಿತವಾಗಿ ಹಂಚುವ ಉದ್ದೇಶವೇನು? ಇದಕ್ಕೆಲ್ಲಾ ಸ್ಪಷ್ಟ ಉತ್ತರವೊಂದೇ ಅದೇ ಮತಾಂತರ' ಎನ್ನುವ 'ಸತೀಶ್ ಶೀರ್ಲಾಲ್' ಅವರ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ನಾವು ಹಿಂದೂಗಳು ಆದರೆ ನಮ್ಮ ಮನೆಗೆ ನಮ್ಮ ಕ್ರೈಸ್ತ ಮಿತ್ರರು ಕ್ರೈಸ್ತನ ರೀತಿಗಳನ್ನು ಕೊಂಡಾಡುವ ಹಲವಾರು ಸಾಹಿತ್ಯಗಳನ್ನು ಉಚಿತವಾಗಿ ನೀಡಿದ್ದಾರೆ. ಆದರೆ ಅದನ್ನು ಓದಿದಾಕ್ಷಣ ಹಿಂದೂ ಧರ್ಮ ತೊರೆಯುವುದು ಮೂರ್ಖರ ಲಕ್ಷಣವಾಯಿತು. ಯಾವುದೇ ಧರ್ಮದ ಸಾಹಿತ್ಯವನ್ನು ಓದಿ ಅದರಲ್ಲಿರುವ ಒಳ್ಳೆಯ ವಿಷಯವನ್ನು ತಿಳಿದುಕೊಳ್ಳುವುದರಿಂದ ತಪ್ಪೇನೂ ಆಗಲಾರದು. ತನ್ನ ಧರ್ಮವೇ ಶ್ರೇಷ್ಠ ಎನ್ನುವ ಹಕ್ಕು ಎಲ್ಲರಿಗೂ ಇದೆ. ಆದರೆ ಅನ್ಯ ಧರ್ಮ ಕೀಳೆಂದು ಹೇಳುವ ಹಕ್ಕು ಯಾರಿಗೂ ಇರುವುದಿಲ್ಲ. ನಾವೆಲ್ಲರೂ ಧರ್ಮ ಧರ್ಮ ಎಂದು ಕಚ್ಚಾಡುವ ಬದಲು ಭಾರತ ಮಾತೆಯ ಮಕ್ಕಳಾಗಿ ಮಾನವೀಯ ಧರ್ಮವನ್ನು ಸಂರಕ್ಷಿಸಿ ಒಗ್ಗಟ್ಟಿನಿಂದ ಬಾಳುವಂತಾಗಲಿ ಎಂದು ಶ್ರೀ ದೇವರಲ್ಲಿ ಪ್ರಾರ್ಥಿಸುತ್ತೇನೆ. ■

ಕೂಡ್ಲಿಗಿಯ ಗುಳೆಲಕ್ಕವ್ವನ ಜಾತ್ರೆ

■ಕೆ. ಉಮೇಶ



ಚಿತ್ರ: ಅಜ್ಜು ಕೂಡ್ಲಿಗಿ

ಗುಳೇ ಹೊರಡುವ ಮುನ್ನ ಊರಿನಲ್ಲಿ ಲಕ್ಕವ್ವನಿಗೆ ವಿಶೇಷ ಪೂಜೆಯಲ್ಲಿ ನಿರತರಾದ ಯುವಕರು

ನಮ್ಮ ಹಳ್ಳಿಗಳು ಧಾರ್ಮಿಕ ಪರಂಪರೆ ಮತ್ತು ಜಾನಪದ ವೈಶಿಷ್ಟ್ಯಗಳಿಂದ ಕೂಡಿವೆ. ಸುಗ್ಗಿಯ ಹಬ್ಬದಂತೆಯೇ ದೇವರ ಹೆಸರಿನಲ್ಲಿ ಊರಿನವರೆಲ್ಲಾ ಕಲೆತು ಹೊಲ ತೋಟಗಳಲ್ಲಿ ಕೆರೆ-ಕೊಳ್ಳಗಳ ಬಳಿ ವಸತಿ ಹೂಡಿ ದೈವಗಳ ಆರಾಧಿಸುವರು. ಜಾತ್ರೆ, ದ್ಯಾವರು, ಹಬ್ಬಗಳ ವೈಶಿಷ್ಟ್ಯಗಳಲ್ಲಿ ಹೀಗೆ ಇದೊಂದು ಹೊಸ ಬಗೆ.

ಇಂತಹ ಹತ್ತಾರು ಜಾತ್ರೆಗಳಲ್ಲಿ ಕೂಡ್ಲಿಗಿಯಲ್ಲಿ ನಡೆಯುವ ಗುಳೆಲಕ್ಕವ್ವನ ಜಾತ್ರೆಯ ವೈಶಿಷ್ಟ್ಯವೇ ಬೇರೆ - ಎಲ್ಲ ಜಾತ್ರೆಗಳಂತೆ ದೇವರ ರಥ, ಬಳೆ ಪಳಾರದ ಅಂಗಡಿ ಮುಂತಾದವುಗಳಿಂದ ಈ ಜಾತ್ರೆ ದೂರವೇ ಸರಿ.

ಗುಳೆಲಕ್ಕವ್ವನ ಜಾತ್ರೆ ಹೆಸರಿಗೆ ತಕ್ಕಂತೆ ಊರಿಂದ ಜನ ಗುಳೆ ಹೊರಡುವುದು. ಲಕ್ಕವ್ವನ ಮೆರವಣಿಗೆ, ಆರಾಧನೆಯಲ್ಲಿ ಊರಿಂದ ಹೊರಗೆ ಸಂಪೂರ್ಣ ಒಂದು ದಿನ ಊರು ಮರೆತೇ ಜೀವಿಸುವುದು. ವೈಶಾಖ ಮಾಸದಲ್ಲಿ ನಡೆಯುವ ಲಕ್ಕವ್ವನ ಜಾತ್ರೆಗೆ ಮಂದಿ ಪಶುಪಕ್ಷಿ, ಪಗಡಿ ಪಾತ್ರೆ ಕಟಗೊಂಡು ಹೋಗ್ತಾರೆ.

ಆ ದಿನ ಸುಮಾರು ಬೆಳಗಿನ ಜಾವ 3-4 ಗಂಟೆಗೆ ಎದ್ದು ಒಂದು ದಿನಕ್ಕೆ ಬೇಕಾದ ತಿಂಡಿ ತಿನಿಸುಗಳ ಕಟ್ಟಿಕೊಂಡು ಊರಿಗೆ ಊರೇ ಹೊರಡುತ್ತಾರೆ. ಇಂತಹ ಜಾತ್ರೆಯ ವೈಶಿಷ್ಟ್ಯ ಸುತ್ತಮುತ್ತೆಲ್ಲೂ ಕಂಡು ಬರುವುದಿಲ್ಲ.

ಗುಳೆ ಹೊರಡುವ ಮುನ್ನ ರಾತ್ರಿ ಲಕ್ಕವ್ವನ ಪೂಜಿಸಿ ಒಂದು ಕಟ್ಟೆಯ ಮೇಲೆ ಸ್ಥಾಪಿಸುವರು. ಆಕೆಯು ಪೂಜೆಗೆ ಬೇಕಾದ ಹಣ್ಣುಕಾಯಿ ಕರ್ಪೂರಗಳನ್ನು ಒಂದು ಮರದಲ್ಲಿ ಶುಚಿ ಹಾಗೂ ಶ್ರದ್ಧೆಯಿಂದ ಕೊಂಡೊಯ್ಯುವರು. ಗುಳೇ ಹೊರಡುವ ದಿನ ಲಕ್ಕವ್ವನನ್ನು ಹೊರಡಿಸಿಕೊಂಡು ಊರಿನ ಎಲ್ಲಾ ಮನೆಗಳಿಂದ ಎಲ್ಲರನ್ನೂ ಕರೆದುಕೊಂಡು, ಕುಂಟ-ಕುರುಡ ರೋಗಿಗಳೆಂಬ ಭೇದ ತೋರದೆ ಮನೆಗಳಿಗೆ ಬೀಗ ಜಡಿದದ್ದೇ ಬಂದಿತು.

ಊರಿಂದ ಹೊರಟ ಜನ ಉತ್ತರದ ಗೋವಿಂದಗಿರಿ ತಲುಪುತ್ತಾರೆ. ಹಳ್ಳದ ದಂಡೆಯ ಮೇಲಿರುವ ಗುಡಿಯಲ್ಲಿ ಲಕ್ಕವ್ವನ ಕೂಡಿಸುವರು. ಈಕೆಗೆ ವಿಶೇಷವಾಗಿ ಪೂಜೆ ಸಲ್ಲಿಸಲು ಗೋವಿಂದಗಿರಿಯ ಗೊಲ್ಲ ಜನಾಂಗದವರು ಮಾತ್ರವೇ ಅರ್ಹರು.

ಇಂತಹ ವಿಶಿಷ್ಟ ರೀತಿಯ ಜಾತ್ರೆಯ ಆಚರಣೆಗೆ ಹಲವಾರು ಅವೈಜ್ಞಾನಿಕ ಕಾರಣಗಳಿವೆ. ಆದರೆ ಊರಜನರ ಶ್ರದ್ಧೆ ನಂಬಿಕೆಗಳ ಮುಂದೆ ಯಾವುದೂ ಬಲಾಬಲ ಪ್ರದರ್ಶಿಸುವ ಗೋಜಿಗೆ ಹೋಗದೆ ಒಮ್ಮೊಮ್ಮೆ ಪ್ರಕೃತಿ ಮಣಿಯುವ ಉದಾಹರಣೆಗಳೂ ಲಭ್ಯವಿದೆ.

ಹಿಂತಿರುಗಿ ಬರುವಾಗ ಅಲ್ಲಿ ದೇವರಿಗೆ ಹಾಕಿದ ಅಗ್ನಿಕುಂಡದಿಂದ ಮನೆಗಳಿಗೆ ಬೆಂಕಿ ತಂದು ಒಲೆ ಹಚ್ಚಿ ವರುಷದ ಶುಭಾರಂಭವನ್ನು ಕೂಡ್ಲಿಗಿಯ ಜನ ಮಾಡುತ್ತಾರೆ.

ಹಿಂದೆ ಹೀಗೆ ಊರು ತೊರೆದಾಗ ತಳವಾರ ಊರು ಕಾಯುತ್ತಿದ್ದನು. ಈಗ ಓಣಿಗಿಬ್ಬರಂತೆ ಪೋಲಿಸರು ಊರನ್ನು ಕಾಯುವರು. ಕರ್ನಾಟಕದಲ್ಲಿ ಕಣ್ಣರಳಿಸಿದಷ್ಟೂ ವೈಶಿಷ್ಟ್ಯಗಳು ಕಂಡಾವು. ಇವಕ್ಕೆ ಕಾಣುವ ಕಂಗಳೇ ಮುಖ್ಯ ಎನ್ನುತ್ತವೆ ಈ ಆಚರಣೆಗಳು. ■

ಜಲಪಾತಗಳ ಮಡಿಲು ಬಿಸಗೋಡ ಹೊಸಗಟ್ಟು

ಹುಬ್ಬಳ್ಳಿ ಕಾರವಾರ ಹೆದ್ದಾರಿಯ ನಡುವೆ ವನಸಿರಿಯ ಮಡಿಲಿನಲಿ ಯಲ್ಲಾಪುರ ಕಂಗೊಳಿಸಿದೆ. ಮುಗಿಲೆತ್ತರದ ಬೆಟ್ಟ ಸಾಲು, ನಿತ್ಯ ಹಸಿರು ಹೊನ್ನು, ಪ್ರವಾಸಿಗರ ಕೈ ಬೀಸಿ ಕರೆದಿದೆ. ಪ್ರಾಣಿ, ಕೀಟ, ಪಕ್ಷಿ ಸಂಕುಲಗಳಿಗೆ ಆಶ್ರಯವಾಗಿ ಕಿಕ್ಕಿರಿದ ಜಲಪಾತಗಳ ರಮ್ಯ ತಾಣವಾಗಿ, ಪ್ರಕೃತಿಯ ವೈಶಿಷ್ಟ್ಯಗಳ ಸೊಬಗಿಗೆ ಪ್ರಸಿದ್ಧಿಯಾಗಿದೆ. ಇಂತ ತಾಣದಲ್ಲಿ ಎಲೆಮರೆಯ ಕಾಯಂತೆ ಸಾಹಸಿಗಳ ಅರಸುವಿಕೆಗೆ ಮೈ ದೋರಿ ಧುಮುಕಿದೆ 'ಬಿಸಗೋಡ ಹೊಸಗಟ್ಟು ಜಲಪಾತ'.

ಈ ಮಂತ್ರಮುಗ್ಧತೆಯ ಸೆಳವಿನ ಜಲಪಾತ ದಿನದಲ್ಲಿ ನಾಲ್ಕು ಗಂಟೆ ಮಾತ್ರ ಸೂರ್ಯನಿಗೆ ಕಾಣಿಸುತ್ತದೆ. ಉಳಿದಂತೆ ಕೊರೆವ ಛಳಿ, ನೊರೆ ಹಾಲ ಮೆರಗು, ಕಲ್ಲುಬಂಡೆಗಳಿಗೆ ಸಿಡಿದು ಅಪ್ಪಳಿಸುವ ನೀರ ಝರಿ, ಸಾಲದ್ದಕ್ಕೆ ವೃಕ್ಷ ಸಂಕುಲಗಳ ಮಧ್ಯೆ ಮೈಮನಗಳು ಉಲ್ಲಸಿತಗೊಂಡು ಕುಣಿದು ಕೇಕೆ ಹಾಕುತ್ತದೆ. ಅದರ ದನಿ ಮುಗಿಲು ತಾಕುತ್ತದೆ.

ಯಲ್ಲಾಪುರದಿಂದ ಹುಬ್ಬಳ್ಳಿ ಕಡೆಯ ಹೆದ್ದಾರಿಯಲ್ಲಿ ಬಿಸಗೋಡ ಮಾರ್ಗಕ್ಕೆ ತಿರುಗಿ ಏಳು ಕಿ.ಮೀ ಪಯಣಿಸಿದರೆ ಬಿಸಗೋಡ ಮತ್ತು ದೇಹಳ್ಳಿಕ್ರಾಸ್ ತಲುಪುವಿರಿ. ಇಲ್ಲಿಂದ ಎರಡು ಮಾರ್ಗಗಳಿವೆ - ಒಂದು ದೇಹಳ್ಳಿಯಿಂದ ಅರೇಗುಳಿ ಮಾರ್ಗ, ಇನ್ನೊಂದು ಬಹು ಸುಲಭದ ಹೊಸಗಟ್ಟು ಮಾರ್ಗ. ಇಲ್ಲಿ ಅರ್ಧ ಕಚ್ಚಾ ದಾರಿ, ನಿಧಾನವಾಗಿ ವಾಹನ ಚಲಿಸಬಹುದು. ಚಾರಣ ಪ್ರಿಯರಿಗಂತೂ ಹಬ್ಬದೂಟ. ಇಲ್ಲಿ ಸಹೃದಯರ್ಯಾರಾದರೂ ಪ್ರವಾಸಿಗರಿಗೆ ಮಾರ್ಗದರ್ಶಕರಾಗಿಯಾರು!

ಜಲಪಾತಗಳ ವೀಕ್ಷಕರಿಗೆ ಇದು ಅಂತಾ ಸವಾಲಲ್ಲವಾದರೂ ವೀಕ್ಷಿಸಲೇ ಬೇಕಾದ ರಮ್ಯ ಜಲಪಾತ ಎಂಬುದು ಮಾತ್ರ ಸುಳ್ಳಲ್ಲ. ನಡಿಗೆಯೊಂದಿಗೆ ಜಲಪಾತದ ಕಾಲುವೆಯೂ ಅಲ್ಲಲ್ಲಿ ನಿಮ್ಮೊಂದಿಗೆ ಜೊತೆಗೂಡಿ ದಣಿದೀತು. ಉಲ್ಲಾಸ ಆಹ್ಲಾದಗಳು ಕುಣಿತ, ರಂಜನೆಗೆ ನಿಮ್ಮ ಮೈಮನಗಳು ವಶವಾದೀತು.

ಸುಮಾರು 10 ಕಿ.ಮೀ. ಹರಿದು, ಒಂದಿಷ್ಟೂ ಇಳಿಜಾರು ಕಾಣದೆ ಒಮ್ಮಿಂದೊಮ್ಮೆಲೆ ಎಂಟು ಜಲಪಾತಗಳಿಗೆ ಜನ್ಮವಿತ್ತಿದೆ ಈ ಜಲರೂಪಿ ಹಳ್ಳ.



''ಯಾರಿಗೆ ಕೇಳಿ ಬರುವುದಿಲ್ಲ ಈ 'ಝುಳು ಝುಳು' ಇಂಚರ'' ಕಡೆಯ ಜಲಪಾತದ ರಮಣೀಯ ದೃಶ್ಯ



ಇಲ್ಲಿ ನಿಮ್ಮನ್ನು ಕಾಡುವ ಯಾವ ಚಿಂತೆಯೂ ಇರುವುದಿಲ್ಲ. ಉಲ್ಲಾಸ ಆಹ್ಲಾದಗಳ ಕುಣಿತ ಮಾತ್ರ ನಿಮ್ಮದಾಗುವುದು. ಹೊಸಗಟ್ಟು ಜಲಪಾತವೊಂದರ ವಿಹಂಗಮ ನೋಟ.

ಮುಂದೆ ಕೊಡಸಳ್ಳಿ ಅಣೆಕಟ್ಟಿನ ನೀರಿನಲ್ಲಿ ಮೈ ಮರೆತು ಬೆರೆಯುತ್ತದೆ.

ಈ ಜಲಪಾತಕ್ಕೆ ಒಂದು ಹಳೆಯ ಪುರಾಣ ಪ್ರಸಿದ್ಧಿಯ ಕಥೆಯೂ ಇದೆ. ಬಿಸಗೋಡ ಗ್ರಾಮದ ಆನೆಗೊಂಡ ಎಂಬ ಅರಣ್ಯದಲ್ಲಿನ ಝರಿಗಳು ಜಲಪಾತದ ಹಳ್ಳವಾಗಿ ಉಗಮಿಸಿದೆ. ಇಲ್ಲಿ ಭಾರತ ಕಥೆಯ ಪಾಂಡವರು ಆನೆಗಳನ್ನು ಬಳಸಿ ಬೇಸಾಯ ಮಾಡಿದರೆಂಬ ಊಹೆ, ಹಾಗಾಗಿ ಇದಕ್ಕೆ ಆನೆಗೊಂಡ ಹೆಸರು ಬಂದಿದೆ. ಈಗ ಇಲ್ಲಿ ಆನೆಗಳು ಅಪರೂಪ.

ಸಣ್ಣ ಸಣ್ಣ ನೀರಿನ ಝರಿಗಳು ಹರಿದು ಬೋಳಗುಡ್ಡೆಯಲ್ಲಿ ಉಗಮದ ಸ್ವರೂಪ ಹೊಂದಿ ಮುಂದೆ ಬಿಸಗೋಡ ಹಳ್ಳವಾಗಿ ಹೊಸಗಟ್ಟು ಸಮೀಪ ರುದ್ರ ರಮಣೀಯ ಜಲಪಾತವಾಗಿ ಮೈ ತಳೆದಿವೆ.

8 ಜಲಪಾತಗಳಲ್ಲಿ 5 ರಲ್ಲಿ ಅಂತ ಹುರುಪಿರದಿದ್ದರೂ ಕಡೆಯ ಮೂರು ಜಲಪಾತಗಳು ರಮಣೀಯವಿದ್ದು ಪ್ರೇಕ್ಷಕರ ಮನ ತಣಿಸುತ್ತದೆ.

8ನೆಯ ಜಲಪಾತದ ಕೆಳಗೆ ಪ್ರಕೃತಿ ನಿರ್ಮಿತ ಈಜುಕೊಳವಿದೆ. ಅಲ್ಲಿ ಕೊಳಕ್ಕಿಳಿಯದಿದ್ದರೇನು ದೂರದವರೆಗೂ ಬಂಡೆಗಪ್ಪಳಿಸಿದ ಚೆಲ್ಲು ನೀರು ಎರಚಲಾಗಿ ಬಿದ್ದು ಮೈನವಿರೇಳಿಸುತ್ತದೆ. ಇಲ್ಲಿರುವ ಮತ್ತೊಂದು ಅದ್ಭುತ ಜೇನುಮರ. ಮಾರ್ಚ್‌ನಿಂದ ಮೇ ತಿಂಗಳಲ್ಲಿ ಇಲ್ಲಿನ ವೃಕ್ಷಗಳಲ್ಲಿ ಜೇನುಗೂಡುಗಳು ಹಲಸಿನ ಮರಕ್ಕೆ ಎಲ್ಲೆಂದರಲ್ಲಿ ತೂಗು ಬಿಟ್ಟ ಫಲಗಳಂತೆ ತೊಟ್ಟಿಲೋಪಾದಿಯಲ್ಲಿ ತೂಗಿ ತೊನೆದಾಡುತ್ತವೆ.

ಸುತ್ತಲ ಪ್ರದೇಶ ಪ್ರಕೃತಿಯ ಪ್ರಫುಲ್ಲ ತಾಜಾತನದಿಂದ ವಿಕಸಿಸಿ ಪ್ರೇಕ್ಷಕರಿಗೆ ಹೊಸ ಪ್ರಪಂಚವನ್ನು ತೆರೆದಿಡುತ್ತದೆ. ಕವಿ 'ರವೀಂದ್ರ'ರ ಒಂದು ಮಾತು ಇಲ್ಲಿ ನೆನಪಾಗುತ್ತೆ. 'ಇಲ್ಲಿನ ನಿಸರ್ಗ ಸೌಂದರ್ಯವು ಕಲ್ಪನಾ ವಿಲಾಸದ ಮೃಗಜಲವಲ್ಲ'..... ಈ ಮಡಿಲಲ್ಲಿ ನೀವೊಮ್ಮೆ ಮಗುವಾದಿರೆಂದುಕೊಳ್ಳಿ, ನಿಮಗೆ ವೇಳೆಯ ಪರಿವಿರದು, ಹಸಿವಿನ ಅರಿವಿರದು, ಮನೆದಾರಿ ಹಿಡಿಯಲು ಮನಸು ಬಾರದು!

ನಿಮ್ಮನ್ನು ಕೈಬೀಸಿ ಕರೆದಿದೆ 'ನೋಡಲು ಬಾ, ಬಿಸಗೋಡ ಹೊಸಗಟ್ಟು ಜಲಪಾತವ' ಎಂದು ಇಲ್ಲಿನ ವೃಕ್ಷಗಳ ಆಶ್ರಯಿಸಿ ದುಡಿಯುತ್ತಿರುವ ಜೇನು ದುಂಬಿಗಳು! ಇವುಗಳ ಕರೆಗೆ ನೀವೂ ಓಗೊಡುವಿರಲ್ಲವೆ!

ಚಿತ್ರಲೇಖನ :ದತ್ತಾತ್ರೇಯ ಎಸ್. ಬೋಳಗುಡ್ಡೆ
ಸಹಾಯ : ಪ್ರಶಾಂತ ಗಾಂವ್ಕರ ಆನಗೋಡ

ಬಸ್ಸುಗಳಲ್ಲಿ ಕಾಣಿಸುವ 'ಟಚಿಂಗ್' ಶೂರರು!


ಅದು ರಾತ್ರಿ ಪ್ರಯಾಣದ ಸಮಯ. ಬಸ್ಸು ತನ್ನಷ್ಟಕ್ಕೆ ತಾನು ಭರ್ರ್ ಎಂದು ಓಡುತ್ತಿತ್ತು. ರಾತ್ರಿ ಪ್ರಯಾಣದ ಕಾರಣ ಬಸ್ಸಿನಲ್ಲಿ ಲೈಟುಗಳೆಲ್ಲ ಆಫ್ ಮಾಡಿದ್ದರು. ನನ್ನ ಪಕ್ಕದ ಸೀಟಿನಲ್ಲಿ ತಾಯಿ, ಮಗಳು ಕುಳಿತಿದ್ದರು. ನಾನು ಆ ಕಡೆ, ಈ ಕಡೆ ನೋಡಿ ನಿಧಾನಕ್ಕೆ ನಿದ್ರಾದೇವಿಯ ಮಡಿಲಿಗೆ ಜಾರಿದ್ದೆ. ಸುಮಾರು ಹತ್ತು ನಿಮಿಷವಾಗಿರಬಹುದು. ಏನೋ ಗಲಾಟೆಯಾಗುತ್ತಿತ್ತು ಬಸ್ಸಿನಲ್ಲಿ. ದಡಕ್ಕನೆದ್ದು ಕೂತೆ. ಸುತ್ತ ತಿರುಗಿ ನೋಡಿದರೆ ಪಕ್ಕದ ಸೀಟನಲ್ಲಿ ಕುಳಿತಿದ್ದ ತಾಯಿ, ಮಗಳು ಮತ್ತು ಅವರ ಹಿಂದಿನ ಸೀಟನಲ್ಲಿ ಕುಳಿತಿದ್ದ ಒಬ್ಬ ಯುವಕ ಇವರ ನಡುವೆ ನಡೆದಿದ್ದ ಗಲಾಟೆ ಅದು. ನಂತರ ತಿಳಿದ ವಿಷಯ, ಆ ತಾಯಿ ಮಗಳ ಸೀಟಿನ ಹಿಂದೆ ಕುಳಿತಿದ್ದ ಹುಡುಗ ಆ ಹುಡುಗಿಗೆ ಏನೋ ಕಿರಿಕ್ ಮಾಡತೊಡಗಿದಾಗ ಪಿಡಿಮಿಡಿಗೊಂಡ ಹುಡುಗಿ ತನ್ನ ತಾಯಿಗೆ ಹೇಳಿದ್ದಳು. ಸರಿ, ತಾಯಿ ಕಡೆ ಮಗಳು ಕುಳಿತಿದ್ದೂ ಆಯಿತು. ಆದರೂ ಹುಡುಗ ತಾಯಿಗೂ ಅದೇ ಕಿರಿಕ್ ಶುರು ಮಾಡಿದಾಗ ದಡಕ್ಕನೆದ್ದ ಆಕೆ ಆ ಪೋರನ ಕೆನ್ನೆ ಬಿಸಿ ಮಾಡಿದ್ದಳು. ಎಷ್ಟೋ ಜನ ಇಂಥ ಸನ್ನಿವೇಶಗಳನ್ನು ದಿನಾ ಎದುರಿಸುತ್ತಿರುತ್ತಾರೆ. ಉದ್ಯೋಗಸ್ಥ ಮಹಿಳೆಯರಿಗೆ ಮತ್ತು ಕಾಲೇಜ್ ಹುಡುಗಿಯರಿಗಂತೂ ಇದು ನಿತ್ಯದ ಗೋಳಾಗಿರುತ್ತದೆ. ಏಕೆ ಈ ರೀತಿಯ ಒಂದು ಕಪಿಚೇಷ್ಟೆ ನಮ್ಮ ನಾಗರಿಕ ಜನಾಂಗದಲ್ಲಿ ಮೂಡಿದೆಯೋ ಕಾಣೆ.

ಆದರೆ ಆ ಕಪಿಚೇಷ್ಟೆ ಬರೀ ಯುವ ಜನಾಂಗದವರಲ್ಲೇ ಅಲ್ಲ. ನಮ್ಮ ಮುದಿ ಜನಾಂಗದವರಲ್ಲಿ ಇನ್ನೂ ಜಾಸ್ತಿ. ಬಸ್ಸಿನಲ್ಲಿ ಯಾರಾದ್ರೂ ಒಬ್ಬ ವಯಸ್ಸಿನ ಹುಡುಗಿ ಹತ್ತಿದರೂ ಸಾಕು, 'ಇಲ್ಲಿ ಬಾಮ್ಮ ನೋಡೋಕೆ ಎಲ್ಲಾ ನನ್ನ ಮೊಮ್ಮಗಳ ತರಹವೇ ಇದೀಯ. ಇಲ್ಲಿ ಕೂತ್ಕೋ ಬಾ, ನನ್ನ ತೊಡೆ ಮೇಲೆ' ಮುಂತಾಗಿ ಮಾತಾಡುತ್ತ ಅಡಿಯಿಂದ ಮುಡಿಯವರೆಗೂ ಹೆಚ್ಚು ಕಮ್ಮಿ ತಪಾಸಣೆ ನಡೆಸಿಯೇ ಬಿಡುತ್ತಾರೆ. ಪಾಪ ಆ ಹುಡುಗಿಯರಿಗೋ ಉಭಯ ಸಂಕಟ. ಕೂತರೆ ಮುದುಕನ ಕಾಟ. ನಿಂತರೆ 'ಏನಮ್ಮ ಪಾಪ ಕೂತ್ಕೋಬಾರ್ದ ನನ್ನ ಮೊಮ್ಮಗಳ ತರಹಾ ಇದೀಯ ಅಂತ ಬೇರೆ ಅನ್ತಿದಾರೆ ವಯಸ್ಸಾದೋರು ಕೂತ್ಕೋಮ್ಮ' ಇನ್ನೂ ಮುಂತಾದ ಮಾತುಗಳು. ಅಕ್ಕಪಕ್ಕದಲ್ಲಿ ಕುಳಿತವರಿಂದ ಹಿತೋಪದೇಶ ಬೇರೆ. ಛೆ.... ಏಕೆ ಹೀಗೆ ಎನಿಸುವುದಿಲ್ಲವೆ? ತಮ್ಮ ಅಕ್ಕ ತಂಗಿಯರಿಗೆ ಅಥವಾ ಮಗಳಿಗೆ ಬೇರೆ ಯಾರಾದ್ರೂ ಹೀಗೆ ಮಾಡಿದರೆ ಸುಮ್ಮನಿರುವರೇ? ಇನ್ನು ಕೆಲವರಂತೂ ಬಸ್ಸಿನಲ್ಲಿ ರಶ್ ಇದ್ದು ಹುಡುಗಿಯರು ಹತ್ತಿದರೆ ಸಾಕು ಪಾರ್ಟಿಗಳ ಮುಖ ಪತ್ತೆ ಇರುವುದಿಲ್ಲ. ಆದರೆ ಕೈಗಳು, ಕಾಲ್ಗಳು ರೆಡಿಯಾಗಿರುತ್ತವೆ ಆ ಹುಡುಗಿಯರನ್ನ ಹಿಂಸೆ ಮಾಡುವುದಕ್ಕೆ. ಇನ್ನೂ ಕೆಲವರಂತೂ ಬ್ರೇಕು ಹಾಕುವುದಕ್ಕೆ ಕಾದಿರುತ್ತಾರೆ. ಬ್ರೇಕು ಹಾಕಿದ ಕೂಡಲೇ ಬೇಕಂತಲೇ ಮೇಲೆ ಬಿದ್ದು ಸಾರಿ ಹೇಳುತ್ತಾರೆ.

ಇದು ನಮ್ಮ ಸಂಸ್ಕೃತಿಯ ಲಕ್ಷಣವಲ್ಲ. ಹೆತ್ತ ತಾಯಿ ಹೆಣ್ಣು, ಮಡದಿ, ಅಕ್ಕ, ತಂಗಿ, ಪ್ರೇಯಸಿ ಎಲ್ಲರೂ ಹೆಣ್ಣುಗಳೇ ತಾನೆ. ಇನ್ನೊಬ್ಬ ಹೆಣ್ಣಿಗೆ ಹಿಂಸೆ ಕೊಡುವಾಗ ಇವರ್ಯಾರೂ ನಿಮ್ಮ ಮನದಲ್ಲಿ ಸುಳಿಯುವುದಿಲ್ಲವೇ? ಕೆಲವರು ಹುಡ್ಗೀರೂ ನಮ್ಮ ಮೇಲೆ ಬೀಳ್ತಾರೆ. ಈಗಿನ ಕಾಲದ ಹುಡ್ಗೀರು ಎಲ್ಲದಕ್ಕೂ ರೆಡಿ ಎಂದು ಹೇಳುವವರನ್ನೂ ಕೇಳಿದ್ದೇನೆ. ಆದರೆ ಅದು ಎಲ್ಲೋ ಸ್ವಲ್ಪ ಜನ ಅಷ್ಟೆ. ಹಾಗೆ ನೋಡಿದರೆ ಇದೂ ಒಂದು ರೀತಿಯಲ್ಲಿ ಹೆಣ್ಣಿನ ಶೋಷಣೆಯೆ ಸರಿ. ಇಂಥಹ ಕಪಿ ಚೇಷ್ಟೆಗಳನ್ನು ಸಾಮೂಹಿಕವಾಗಿ ಎದುರಿಸಿದರೆ ಮಾತ್ರ ಸುಮಾರಾಗಿ ದಾರಿಗೆ ಬರಬಹುದು. ಇಂಥದ್ದನ್ನೆಲ್ಲ ನೋಡಿದರೆ ಹಳೆಯ ಇಂಪಾದ ಕನ್ನಡದ ಹಾಡು ಜ್ಞಾಪಕ ಬರುತ್ತದೆ. ಆ ಹಾಡು ಯಾವುದು ಗೊತ್ತೆ?

'ನಾಗರಿಕ ಮಾನವ, ಗಗನದಲ್ಲಿ ಮೇಲೆ ಮೇಲೆ
ಹಾರುವುದನು ಕಲಿತೆ
ನೀರಿನಲ್ಲಿ ಮೀನಿನಂತೆ ಈಜುವುದನು ಕಲಿತೆ
ಭೂಮಿಯಲ್ಲಿ ಬಾಳುವುದನು ಕಲಿಯಲಿಲ್ಲವೇಕೆ? ಕಲಿಯಲಿಲ್ಲವೇಕೆ?'

■ ಸಿ. ಎಸ್. ಭಾರತಿ



■ಕೋ.ಚೆನ್ನಬಸಪ್ಪ
ನಿವೃತ್ತ ನ್ಯಾಯಾಧೀಶರು
127, ಪಶ್ಚಿಮ ಕಾರ್ಡ್ ರಸ್ತೆ,
ಮಹಾಲಕ್ಷ್ಮೀಪುರ, ಬೆಂಗಳೂರು - 86

ನ್ಯಾಯಮೂರ್ತಿಗಳ ನೇಮಕ ಕೇವಲ ಐದು ಜನ ನ್ಯಾಯಮೂರ್ತಿಗಳ ಗೊಡವೆ ಆಗಬಾರದು. ಅವರನ್ನು ನೇಮಕ ಮಾಡುವ ಮುಂಚೆಯೇ ಅವರ ಗುಣ ಎಂಥದ್ದೆಂಬುದನ್ನು ಒರೆಹಚ್ಚಿ ನೋಡಬೇಕು.

ಬಡತನದಿಂದ ಬಳಲುತ್ತಿರುವ ನ್ಯಾಯಮೂರ್ತಿಗಳು!

ನ್ಯಾಯಮೂರ್ತಿಗಳು ಮತ್ತು ನ್ಯಾಯಾಧೀಶರು ನಿವೃತ್ತರಾಗುವ ದಿನ ಎಷ್ಟು ಸಂಬಳ ತಿನ್ನುತ್ತಿದ್ದರೆ, ಅಷ್ಟೇ ಪಿಂಚಣಿಯನ್ನೂ ಅವರಿಗೆ ಕೊಡಬೇಕೆಂದು ಸರ್ವೋಚ್ಚ ನ್ಯಾಯಾಲಯದ ನ್ಯಾ.ಮೂ. ಎಸ್.ಪಿ. ಬರೂಚ ಎಂಬ ಪುಣ್ಯಾತ್ಮರು ಪ್ರತಿಪಾದಿಸಿದ್ದಾರೆಂದು ವರದಿ. ಈಗ ನ್ಯಾ. ಮೂರ್ತಿಗಳಿಗೆ ಸಿಗುವ ಸಂಬಳದಿಂದ ಅವರ ಹೊಟ್ಟೆ ತುಂಬುತ್ತಿಲ್ಲವಂತೆ! ಆದ್ದರಿಂದ ಸಂಬಳವನ್ನು ಹೆಚ್ಚಿಸಬೇಕೆಂದೂ ಅಭಿಪ್ರಾಯ ಪಟ್ಟಿದ್ದಾರಂತೆ!

ಈ ವಿಚಾರ ಮಹಾರಾಷ್ಟ್ರ ರಾಜ್ಯ ಬಾರ್ ಕೌನ್ಸಿಲ್ ಔರಂಗಾಬಾದಿನಲ್ಲಿ ಏರ್ಪಡಿಸಿದ್ದ ನ್ಯಾಯವಾದಿಗಳ ರಾಜ್ಯಮಟ್ಟದ ಸಮ್ಮೇಳನದಲ್ಲಿ ಚರ್ಚೆಗೆ ಬಂದಿತ್ತು. ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ವಿ.ಆರ್.ಕೃಷ್ಣ ಐಯ್ಯರ್ ಸಮಾರೋಪ ಭಾಷಣ ಮಾಡಿದರು. ಹಿಂದೆ ಕೇಂದ್ರದಲ್ಲಿ ಕಾನೂನು ಮಂತ್ರಿಯಾಗಿದ್ದ ರಾಮರಾವ್ ಅಧಿಕ್ ಆ ಸಮ್ಮೇಳನದಲ್ಲಿ ಮಾತನಾಡುತ್ತಾ;

'ಈಗ ನ್ಯಾಯಮೂರ್ತಿಗಳ ಸಂಬಳ ತಿಂಗಳಿಗೆ, ಇತರ ಸೌಲಭ್ಯಗಳು (perks) ಸೇರಿ ರೂ. 50,000 ದಿಂದ ರೂ. 60,000 ಗಳವರೆಗೆ ಇದೆ. ನಾವು ಯಾರ ಕಥೆ ಮೊದಲು ಗಮನಕೊಡಬೇಕು? ತಿಂಗಳಿಗೆ ರೂ. 3500/- ದುಡಿಯುವ ಬಡ ಕೃಷಿ ಕಾರ್ಮಿಕನ ಕಡೆಗೊ? ಅಥವಾ ತಿಂಗಳಿಗೆ 50-60 ಸಾವಿರ ಸಂಬಳದ ನ್ಯಾಯಮೂರ್ತಿಗಳ ಕಡೆಗೊ?'

ರಾಮರಾವ್ ಅಧಿಕ್ ನ್ಯಾಯಮೂರ್ತಿಗಳಿಗೆ ಖಜಾನೆಯಿಂದ ಹರಿದುಹೋಗುವ ಚೆಕ್ ಮೊತ್ತವನ್ನು ಮಾತ್ರ ಹೇಳಿದ್ದಾರೆ. ಸರ್ವೋಚ್ಚ ನ್ಯಾಯಮೂರ್ತಿಗಳಾಗಿದ್ದ ವಿ. ರಾಮಸ್ವಾಮಿ ಎಂಬ ಮಹನೀಯರು ನ್ಯಾಯಾಲಯಕ್ಕೆ ಬೇಕಾಗುವ ಪೀಠೋಪಕರಣಗಳನ್ನು, ಅಲಂಕಾರ ಸಾಮಾಗ್ರಿಗಳನ್ನು, ಬೆಳ್ಳಿ ಬೆತ್ತಗಳನ್ನು..... ಇತ್ಯಾದಿ... ಕೊಳ್ಳುವ ನೆವದಲ್ಲಿ ಚಪ್ಪರಿಸಿ ಹೊಡೆದ ಕಮಿಷನ್ನುಗಳನ್ನು ನ್ಯಾಯಮೂರ್ತಿಗಳ ವರಮಾನ (ದರೋಡೆ) ದಲ್ಲಿ ಸೇರಿಸಿಲ್ಲ. ಅವರು ಪ್ರತಿಸಾರಿ ಮದ್ರಾಸಿಗೆ ಬಂದಾಗ ಖಜಾನೆಯಿಂದ ಕಬಳಿಸಿದ ಅಪಾರ ಪ್ರವಾಸವೆಚ್ಚವನ್ನು ರಾಮರಾವ್ ಅಧಿಕ್ ಮರೆತು ಬಿಟ್ಟಿದ್ದಾರೆ!

ಇಂಥ ಒಳಹೊಡೆತ, ಹೊರ ಹೊಡೆತಗಳನ್ನು ಮಾಡಿದವರು ಆ ರಾಮಸ್ವಾಮಿ ಒಬ್ಬರೇ ಅಲ್ಲ. ರಾಮದೇವರ ಭಕ್ತರಾದ ಹನುಮಂತರೂ ನ್ಯಾಯಾಲಯದಲ್ಲಿ ಇದ್ದಾರೆಂಬುದು ವಿಚಾರಣೆ ಮಾಡಿದರೆ ಬಯಲಿಗೆ ಬಂದೀತು. ಆದರೆ ಈ ನ್ಯಾಯಮೂರ್ತಿಗಳನ್ನು ಮುಟ್ಟುವ ಧೈರ್ಯ ಯಾರಿಗಿದೆ? ಯಾಕೆಂದರೆ ಅವರು ಗೌರವಾನ್ವಿತ ಬಹು ಮುಖ್ಯ ವ್ಯಕ್ತಿಗಳು!!

ನ್ಯಾಯಾಂಗದ ನ್ಯಾಯಮೂರ್ತಿಗಳಿಗೆ ಸಲ್ಲುತ್ತಿರುವ ಸಂಬಳ ಗಿಂಬಳದ ವಿವರಗಳನ್ನು ನ್ಯಾ. ಮೂ.ಕೃಷ್ಣ ಐಯ್ಯರ್ ಬಯಲಿಗಿಟ್ಟಿದ್ದಾರೆ. ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಈಗ ಸುಮಾರು ತಿಂಗಳಿಗೆ 32,000 ಸಂಬಳ ಹೊಡೆಯುತ್ತಾರೆ. ಜೊತೆಗೆ ತಿಂಗಳಿಗೆ ರೂ. 25,000 ಗಳ ತನಕ ಬಾಡಿಗೆ ಕೊಡಬಹುದಾದ ಉಚಿತ ವಸತಿಗೃಹ!! ಒಂದು ಪುಕ್ಕಟೆ ಕಾರು, ಕಾರು ನಡೆಸುವ ಡ್ರೈವರ್, ಅದಕ್ಕೆ ತಿಂಗಳಿಗೆ 200 ಲೀಟರ್ (ರೂ. 6000ಗಳ ಬೆಲೆಯ) ಪೆಟ್ರೋಲ್, ಅವರ ವಸತಿಯಲ್ಲಿ ಕೆಲಸ ಮಾಡಲು ಸರ್ಕಾರದ ವೆಚ್ಚದಲ್ಲಿ ಆಳು! ತಿಂಗಳಿಗೆ 200 ಲೀಟರ್ ಪೆಟ್ರೋಲ್ ಬೆಲೆಯನ್ನು ಪಡೆದುಕೊಳ್ಳುವ ವಿಚಾರವಾಗಿ ಕೃಷ್ಣ ಐಯ್ಯರ್ ಪ್ರಸ್ತಾಪಿಸಿ;

'ಅವರು 200 ಲೀಟರ್ ಪೆಟ್ರೋಲ್ ಖರ್ಚು ತೆಗೆದುಕೊಂಡರೂ ತಿಂಗಳಿಗೆ 20 ಲೀಟರ್ ಕೂಡ ಖರ್ಚು ಮಾಡುವುದಿಲ್ಲವೆಂದು ನನಗೆ ಗೊತ್ತು' ಎಂದಿದ್ದಾರೆ. ಎಂದರೆ ಅಂಥ ನ್ಯಾಯಮೂರ್ತಿಗಳು ಸುಳ್ಳು ಪ್ರವಾಸ ಭತ್ಯೆ ಪಡೆಯುತ್ತಿದ್ದಾರೆ ಎಂದಂತಾಯ್ತು. ಒಂದು ಹೆಜ್ಜೆ ಮುಂದೆ ಹೋಗಬಹುದು! ಸುಳ್ಳು ಪ್ರವಾಸ ಭತ್ಯೆ ಬಿಲ್‌ಗೆ ಸಹಿ ಮಾಡುವ ಮನಸ್ಸು ಇನ್ನು ಯಾವುದಕ್ಕೆ ಹೇಸುತ್ತದೆ?!

ನ್ಯಾ.ಮೂರ್ತಿ ಐಯ್ಯರ್ ತಮ್ಮ ಸಮಾರೋಪ ಭಾಷಣದಲ್ಲಿ ಇನ್ನೊಂದು ಮುಖ್ಯವಾದ ಮಾತನ್ನು ಹೇಳಿದರು. ನ್ಯಾಯಾಧೀಶರನ್ನು ಪುಸಲಾಯಿಸಿ ಉಬ್ಬಿಸುವ (Pamper) ಪ್ರವೃತ್ತಿ ಕೆಟ್ಟದ್ದು; ಸಲ್ಲದು. ನ್ಯಾಯಾಧೀಶರಿಗೆ ಸಾಮಾಜಿಕ ಜವಾಬ್ದಾರಿಯಿರಬೇಕು. ಸಂವಿಧಾನದಲ್ಲಿ ಉನ್ನತ ನ್ಯಾಯಾಂಗದ ಸಂಬಳದ ಬಗ್ಗೆ ಕೆಲವು ಮಾರ್ಗಸೂಚಿ ಸೂತ್ರಗಳನ್ನು ಅಳವಡಿಸಲಾಗಿದೆ. ಆದರೆ ಸಂವಿಧಾನವನ್ನು ಉರುಳಿಟ್ಟು ಉಸಿರುಕಟ್ಟಿಸಿ ಕೊಲ್ಲಲಾಗಿದೆ.ನೂರು ಕೋಟಿ ಪ್ರಜೆಗಳಲ್ಲಿ ಶೇ. 50 ರಷ್ಟು ಜನ ಬಡತನದ ರೇಖೆಯ ಕೆಳಗೆ ಬದುಕುತ್ತಿದ್ದಾರೆ. ಜೀವ ಹಿಡಿದುಕೊಂಡಿರಲೂ ಅವರಿಗೆ ಸಾಧ್ಯವಾಗುತ್ತಿಲ್ಲ. ಅಂಥಾದ್ದರಲ್ಲಿ ನ್ಯಾಯಮೂರ್ತಿಗಳು ಇನ್ನೂ ಹೆಚ್ಚು ಸಂಬಳ ಬೇಕೆಂದು ಕೊರಗುತ್ತಿದ್ದಾರೆ. ನಾನು ತಿಂಗಳಿಗೆ ರೂ. 3500/-ಗಳ ಸಂಬಳ ತೆಗೆದುಕೊಂಡು ನ್ಯಾಯಮೂರ್ತಿ ಹುದ್ದೆಗೆ ಬಂದೆ. ನಾನು ವಕೀಲನಾಗಿದ್ದಾಗ ಅದರ ಹತ್ತರಷ್ಟು ದುಡಿಯುತ್ತಿದ್ದೆ. ನಮ್ಮ ಸಂವಿಧಾನ ಭಾರತವನ್ನು ಸೌಮ್ಯವಾದೀ ಪ್ರಜಾಸತ್ತಾತ್ಮಕ ದೇಶವನ್ನಾಗಿ ಮಾಡಲು ಬದ್ಧವಾಗಿದೆ ಎಂಬುದನ್ನು ನೀವು (ನ್ಯಾಯಮೂರ್ತಿಗಳು) ಮರೆತು ಬಿಟ್ಟಿದ್ದೀರಾ? ಎಂದು ಕೇಳುತ್ತಾರೆ ಐಯ್ಯರ್.

ಭಾರತದ ನಿವೃತ್ತ ಶ್ರೇಷ್ಠ ನ್ಯಾಯಮೂರ್ತಿ ಜೆ.ಎಸ್.ವರ್ಮಾ ಹೇಳಿದ್ದ ಒಂದು ಮಾತನ್ನು ಐಯ್ಯರ್ ನೆನಪು ಮಾಡಿದರು. ನ್ಯಾಯಮೂರ್ತಿಗಳು ತಮ್ಮ ಆಸ್ತಿ ಎಷ್ಟೆಂಬುದನ್ನು ಘೋಷಿಸಿ ಇತರರಿಗೆ ಮಾದರಿಯಾಗಬೇಕು. ವರ್ಮ ತಮ್ಮ ಆಸ್ತಿಯನ್ನು ಘೋಷಿಸಿದರು. ಆದರೆ ಈ ಮೇಲ್ಪಂಕ್ತಿಯನ್ನು ಎಷ್ಟು ಜನ ಅನುಕರಿಸಿದ್ದಾರೆ? ಎಲ್ಲರನ್ನೂ ನಾನು ಟೀಕಿಸುತ್ತಿದ್ದೇನೆಂದು ಭಾವಿಸಬೇಡಿ. ನ್ಯಾಯಾಧೀಶರ ಬಗ್ಗೆ ಮಾತನಾಡುವಾಗ ಹಿಡಿತ, ಸಂಯಮ ಬೇಕೆಂದು

ಕಿವಿ ಮಾತು

■ ಅರಿಶಿನ ಕಾಮಾಲೆಯಿಂದ ಪೀಡಿತರಾಗಿರುವವರು ಹತ್ತು ದಿನಗಳ ಕಾಲ ದೊಡ್ಡ ಪತ್ರೆಯ ಸೊಪ್ಪನ್ನು ತಿಂದರೆ ಪೂರ್ತಿ ಗುಣ ಕಂಡು ಬರುವುದು.

■ ಅನಾನಸ್ ಹಣ್ಣಿನ ಹೋಳನ್ನು ಶುದ್ಧ ಜೇನುತುಪ್ಪದಲ್ಲಿ ಒಂದು ವಾರ ನೆನೆಸಿ, ಏಳನೇ ದಿನದಿಂದ ದಿನಕ್ಕೆ ಎರಡು ಸಾರಿ ತಿನ್ನುತ್ತಿದ್ದರೆ ಅರಿಶಿನ ಕಾಮಾಲೆ ಹತ್ತು ದಿನಗಳಲ್ಲಿ ಗುಣ ಕಂಡು ಬರುವುದು.

■ ಮೂಲಂಗಿ ಸೊಪ್ಪನ್ನು ಜಜ್ಜಿ ರಸ ಹಿಂಡಿ, ಆ ರಸಕ್ಕೆ ರುಚಿಗೆ ತಕ್ಕಷ್ಟು ಸಕ್ಕರೆ ಸೇರಿಸಿ, ಪ್ರತಿ ದಿನ ಸುಮಾರು ಅರ್ಧ ಲೀಟರ್ ರಸದಂತೆ ಒಂದು ವಾರದವರೆಗೆ ಸೇವಿಸುತ್ತಿದ್ದರೆ ರೋಗ ಗುಣವಾಗುವುದು.

■ ಒಂದು ಬಟ್ಟಲು ಕಾದು ಆರಿದ ಹಾಲಿನಲ್ಲಿ ಒಂದು ಟೀ ಚಮಚ ಒಣ ಶುಂಠಿ ಚೂರ್ಣವನ್ನು ಕದಡಿ ಸೇವಿಸುವುದರಿಂದ ಗುಣವುಂಟು, ಈ ಚಿಕಿತ್ಸೆಯನ್ನು ಏಳೆಂಟು ದಿನಗಳವರೆಗೆ ಮಾಡುವುದು ಅಗತ್ಯ.

■ ಪ್ರತಿದಿನ ಬೆಳಿಗ್ಗೆ ಒಂದು ಬಟ್ಟಲು ಗಟ್ಟಿ ಮೊಸರಿನಲ್ಲಿ ಹತ್ತು ಗ್ರಾಂ. ಅರಿಶಿನದ ಪುಡಿಯನ್ನು ಬೆರೆಸಿ ಕೊಡುತ್ತಾ ಬಂದರೆ ಕಾಮಾಲೆ ರೋಗಿ ಬಹು ಬೇಗ ಗುಣಮುಖನಾಗುತ್ತಾನೆ.

ಹೇಳುತ್ತೇನೆ' ಎಂದರು.

ನ್ಯಾಯಮೂರ್ತಿಗಳ ನಡತೆಯನ್ನು ಕುರಿತು ಮಾತನಾಡುವಾಗ ಸಂಯಮ ಬೇಕೆಂಬ ಅವರ ಮಾತು ನ್ಯಾಯವಾದದ್ದೆ. ಯಾಕೆಂದರೆ, ಎಲ್ಲ ನ್ಯಾಯಮೂರ್ತಿಗಳೂ ಸುಳ್ಳು ಪ್ರವಾಸ ಭತ್ಯೆ ಪಡೆಯುವುದಿಲ್ಲ. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಿ. ಜಗನ್ನಾಥ ಹೆಗಡೆ ಎಂಬ ಒಬ್ಬ ನ್ಯಾಯಮೂರ್ತಿಗಳಿದ್ದರು. ಅವರ ಉಪಯೋಗಾರ್ಥ ಒಂದು ಸರ್ಕಾರಿ ಕಾರು ಅವರ ವಶದಲ್ಲಿತ್ತು. ಅದನ್ನು ಒಂದು ದಿನ ಅವರು ಮಗಳನ್ನು ಆಸ್ಪತ್ರೆಗೆ ಬಿಟ್ಟು ಬರಲು ಕಳಿಸಿದ್ದರು. ಕಾರು ನಾಲ್ಕೊ ಐದೋ ಕಿಲೋ ಮೀಟರ್ ಓಡಿತ್ತು. ಮರುದಿನ ಸರ್ಕಾರ ನಿಗದಿ ಪಡಿಸಿದ ಬಾಡಿಗೆ ಹಣವನ್ನು ಹೆಗಡೆ ಖಜಾನೆಗೆ ತುಂಬಿದರು. ಇಂಥ ಪ್ರಾಮಾಣಿಕ ನ್ಯಾಯಮೂರ್ತಿಗಳು ಕ್ವಚಿತ್ ಸಾವಿರಕ್ಕೊಬ್ಬರು ಸಿಕ್ಕಾರು!

ಅಂದರೆ, ನ್ಯಾಯಮೂರ್ತಿಗಳಲ್ಲೂ ಪ್ರಾಮಾಣಿಕತೆ ಎಂಬುದು ಅಪರೂಪದ ಸರಕು ಎಂಬುದು ಈಗ ಎಲ್ಲೆಲ್ಲಿಯೂ ಕೇಳಿ ಬರುತ್ತಿದೆ. ಅದಕ್ಕೆ ಸರ್ವೋಚ್ಚ ನ್ಯಾಯಾಲಯದ ವಿ. ರಾಮಮೂರ್ತಿ ಎದ್ದು ಕಾಣುವ ಲೋಕ ವಿಖ್ಯಾತ ನಿದರ್ಶನ. ಅವರನ್ನು ಇಂಪೀಚ್ ಮಾಡಲು ಲೋಕಸಭೆಯಲ್ಲಿಯೇ ಸುದೀರ್ಘ ಚರ್ಚೆ ನಡೆಯಿತು. ಅವರನ್ನು ಪಾರು ಮಾಡಲು ಅಂದಿನ ಪ್ರಧಾನಿಯು ಬಹು ಪ್ರಯತ್ನಿಸಿದರು! 'ಹೇಲು ತಿನ್ನುವ ದೇವರಿಗೆ ಹೆಂಡ ಕುಡಿಯುವ ಪೂಜಾರಿ' ಎಂಬುದು ದಿಟವಾಯಿತು.

ನ್ಯಾಯಮೂರ್ತಿಗಳೆಂದರೆ ಪ್ರತ್ಯಕ್ಷ ದೇವರೆಂಬ ಭಾವನೆ ಹಿಂದೆ ಒಂದು ಕಾಲದಲ್ಲಿತ್ತು. ಆದರೆ ಈಗ ನ್ಯಾಯಮೂರ್ತಿಗಳ ಪ್ರಾಮಾಣಿಕತೆ ಬೀದಿಯ ಮಾತಾಗಿದೆ. ಇದನ್ನು ಮುಚ್ಚಿಟ್ಟು ಮಾತನಾಡುವುದು ಆತ್ಮ ದ್ರೋಹವಾದೀತು! ಅವರೆಷ್ಟು ಪ್ರಾಮಾಣಿಕರೆಂಬುದನ್ನು ನ್ಯಾಯಾಲಯಗಳಿಗೆ ಬರುವ ಕಕ್ಷಿಗಾರರಿಗೆ ಮಾತ್ರ ಗೊತ್ತೆಂದು ತಿಳಿಯಬೇಡಿ. ಬೀದಿಯಲ್ಲಿ ಹೋಗುವ ಎಲ್ಲರ ಬಾಯಲ್ಲೂ ಜನಜನಿತ. ಕೃಷ್ಣ ಐಯ್ಯರ್ ಹೇಳುತ್ತಾರೆ: 'ನ್ಯಾಯಾಧೀಶರು ದೇವತೆಗಳೇನಲ್ಲ ಅವರು ನಾವೂ ನೀವೂ ಇದ್ದಂತೆಯೇ?'

ನ್ಯಾಯಮೂರ್ತಿಗಳ ನೇಮಕ ಕೇವಲ ಐದು ಜನ ನ್ಯಾಯಮೂರ್ತಿಗಳ ಗೊಡವೆ ಆಗಬಾರದು. ಅವರನ್ನು ನೇಮಕ ಮಾಡುವ ಮುಂಚೆಯೇ ಅವರ ಗುಣ ಎಂಥಾದ್ದೆಂಬುದನ್ನು ಒರೆಹಚ್ಚಿ ನೋಡಬೇಕು. ಒಮ್ಮೆ ನೇಮಕ ಮಾಡಿದ ಮೇಲೆ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳನ್ನು ವಜಾ ಮಾಡುವುದು ಸಾಧ್ಯವೇ ಇಲ್ಲ. ಕೆಳದರ್ಜೆಯ ನ್ಯಾಯಮೂರ್ತಿಗಳನ್ನು ಕೆಲಸದಿಂದ ವಜಾ ಮಾಡುವುದು ಸುಲಭವಲ್ಲ. ಸಾವಿರಕ್ಕೊಬ್ಬರೂ ಕೈಗೆ ಸಿಕ್ಕುವುದಿಲ್ಲ. ಕೈಗೆ ಸಿಕ್ಕ ಆ ಒಬ್ಬರನ್ನೂ ಭ್ರಷ್ಟಾಚಾರಕ್ಕಾಗಿ ವಜಾ ಮಾಡುವುದು ಬಹುಕಷ್ಟ. ಆದ್ದರಿಂದ ಅವರನ್ನು ನ್ಯಾಯಪೀಠದ ಮೇಲೆ ಕೂಡಿಸುವ ಮೊದಲೆ ಅವರ ಲಕ್ಷಣ, ಗುಣಗಳನ್ನು ಚೆನ್ನಾಗಿ ಪರೀಕ್ಷೆ ಮಾಡಬೇಕು. ಈ ಪರೀಕ್ಷೆ ಮಾಡಲು ರಾಷ್ಟ್ರೀಯ ನ್ಯಾಯಾಂಗ ಆಯೋಗ (National law Commission) ಎಂಬ ಸಂಸ್ಥೆಯನ್ನು ರಚಿಸಬೇಕೆಂಬ ಒಂದು ಒಳ್ಳೆಯ ಸಲಹೆ ಮಾಡಲಾಗಿದೆ. ಆದರೆ, ನ್ಯಾಯಮೂರ್ತಿಗಳನ್ನು ಹಂಗಿನಲ್ಲಿಟ್ಟುಕೊಳ್ಳಬೇಕೆಂಬ, ತಮ್ಮ ಮೂಗಿನ ನೇರಕ್ಕೆ ಕೆಲಸ ಮಾಡುವ ಜನರನ್ನೇ ನೇಮಿಸಬೇಕೆಂಬ ಕಾರ್ಯಾಂಗ, ಅವರ ತಾಳಕ್ಕೆ ಕುಣಿಯುವ ನ್ಯಾಯಾಂಗ, ನ್ಯಾಯಾಮೂರ್ತಿಗಳ ನೇಮಕವನ್ನು ತಾವೇ ಮಾಡಬೇಕೆಂದು ಹಠ ಹಿಡಿದಿದ್ದಾರೆ! ಅಂದ ಮೇಲೆ, ಪ್ರಾಮಾಣಿಕತೆಯನ್ನು ಪರೀಕ್ಷಿಸುವ ದಾರಿ ಯಾವುದು? ಪರೀಕ್ಷಿಸುವವರು ಯಾರು?

ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆ ಏಕೆ ಗುಟ್ಟಾಗಿ ನಡೆಯಬೇಕು? ಈಗ ಹೀಗೆ ಗುಟ್ಟಾಗಿ ನಡೆಯುವುದರಿಂದ ರಾಜಕಾರಣಿಗಳ, ಮಠಾಧೀಶ್ವರರ, ಅಗರ್ಭ ಶ್ರೀಮಂತರ, ಜಾತಿವಾದಿಗಳ ಕೈವಾಡ ನಡೆಯಲು ಸಾಧ್ಯವಾಗಿದೆ. ಜಾತೀಯತೆಯ ಪಾತ್ರ ತಾಂಡವ ಆಡುತ್ತಿದೆ! ಈ ಮಾತು ಗುಟ್ಟೇನಲ್ಲ. ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ನೇಮಕ ಆದ ಸಂದರ್ಭದಲ್ಲಿ ರಾಷ್ಟ್ರಪತಿಗಳು ಕಡತದಲ್ಲಿಯೇ ಹಿಂದುಳಿದ ವರ್ಗಗಳ ಅರ್ಹತೆಯುಳ್ಳವರನ್ನು ನೇಮಕ ಮಾಡಿಕೊಳ್ಳುವುದು ನ್ಯಾಯೋಚಿತ ಎಂದು ದಾಖಲು ಮಾಡಿದ್ದು ದೊಡ್ಡ ರಾದ್ಧಾಂತಕ್ಕೆ ಕಾರಣವಾಯಿತು. ಈಗಿನ ನೇಮಕ ಮಾಡುವ ರಹಸ್ಯ ಪ್ರಕ್ರಿಯೆಯಲ್ಲಿ ಅರ್ಹತೆ ಇಲ್ಲದವರು, ಅಪ್ರಾಮಾಣಿಕರು ನ್ಯಾಯಪೀಠದ ಮೇಲೆ ಕುಳಿತುಕೊಳ್ಳುವ ಅವಕಾಶ ಪುಂಟು. ನ್ಯಾಯಾಂಗದಲ್ಲೂ ವಂಶಪಾರಂಪರ್ಯ ಪದ್ಧತಿ ತಲೆ ಹಾಕಿರುವುದು ಎಲ್ಲರಿಗೂ ಎದ್ದು ಕಾಣುತ್ತಿದೆ. ನ್ಯಾಯಮೂರ್ತಿಗಳ ಮಕ್ಕಳೇ ನ್ಯಾಯಮೂರ್ತಿಗಳಾಗಿ ನೇಮಕ ಆದ ನೂರು ಉದಾಹರಣೆ ಸಿಕ್ಕುತ್ತವೆ. ಅರ್ಹತೆಯೂ ಈಗ ವಂಶವಾಹಿನಿಯಾಗಿದೆ!! ಇದನ್ನು ತಡೆಗಟ್ಟದಿದ್ದರೆ ನ್ಯಾಯಾಂಗವೂ ಸಂಪೂರ್ಣ ರಾಜಕೀಯ ಕ್ಷೇತ್ರವಾಗಿ ಹೋದೀತು! ಆಗ ಇನ್ನೇನು ಉಳಿಯುತ್ತದೆ?

ಆ ಪ್ರವೃತ್ತಿ ಈಗಾಗಲೇ ತಲೆ ಎತ್ತಿದೆ ಎಂಬುದಕ್ಕೆ ಕಳೆದ ವಿಧಾನ ಸಭಾ ಚುನಾವಣೆಯ



ನೋಡಿ, ನಾನು ತವರಿಗೆ ಹೋದಾಗ ನೀವೇನೂ ಕಾಗದ ಬರೆಯೋದು ಬೇಡ. ಆ ಕಾಗದ ಓದಿಸೋಕೆ ಔಷಧಿ ಅಂಗಡಿಗೆ ಹೋಗಲಿಕ್ಕೆ ನಾನು ತಯಾರಿಲ್ಲ.

ಕಾಲಕ್ಕೆ ಒಬ್ಬ ನ್ಯಾಯಮೂರ್ತಿ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದರೆಂದು ಜಿಲ್ಲಾ ನಿರ್ವಾಚನಾಧಿಕಾರಿಗೆ, ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ಕೊಟ್ಟಿದ್ದು, ಜಿಲ್ಲಾ ನಿರ್ವಾಚನಾಧಿಕಾರಿ ಆ ನ್ಯಾಯಮೂರ್ತಿಗಳನ್ನು ಹಿಡಿಯಲು ಬೆನ್ನು ಹತ್ತಿದ್ದು ಪತ್ರಿಕೆಗಳಲ್ಲಿ ದೊಡ್ಡ ಸುದ್ದಿ ಆಗಿತ್ತು. ಆ ಫಿರ್ಯಾದಿಯ ಕಡತ ಜೀವಂತ ವಾಗಿದೆಯೋ? ಮುಚ್ಚಿಹೋಗಿದೆಯೋ? ನ್ಯಾಯಾಂಗ ಎಲ್ಲಿಗೆ ಬಂತು, ಇಂಥ ರಾಜಕೀಯ ಪ್ರವೃತ್ತಿಯವರು ನ್ಯಾಯಾಂಗದಲ್ಲಿ ನುಸುಳಿಕೊಂಡರೆ ಏನಾಗಬಹುದು? ಇದನ್ನು ಕೈಗೆತ್ತಿಕೊಂಬ ಧೀರರು ಮುಂದೆ ಬರಬೇಕು.

ಸಂಬಳ, ಸೌಲಭ್ಯ, ಪ್ರವಾಸಭತ್ಯೆಯ ವಿಚಾರದಲ್ಲಿ ಮಾತ್ರ ಈ ನ್ಯಾಯಮೂರ್ತಿಗಳ ಉಜ್ವಲ ಪ್ರಾಮಾಣಿಕತೆ ಪ್ರಜ್ವಲಿಸುವುದಿಲ್ಲ. ಅವರ ಜನ್ಮ ದಿನಾಂಕದ ವಿಚಾರದಲ್ಲೂ ಅವರು ಕೈ (ಚಳಕ) ತೋರಿಸಬಲ್ಲರೆಂಬುದನ್ನು ನಮ್ಮ ರಾಷ್ಟ್ರಪತಿಗಳು ಜಗತ್ತಿಗೇ ಸಾರಿದ್ದಾರೆ. ಮದ್ರಾಸ್ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿದ್ದ ನಮ್ಮ ರಾಜ್ಯದವರಾದ (ನನ್ನ ಅಭಿಮಾನಿಗಳೂ, ಆಪ್ತರು) ಶಿವಪ್ಪನವರು ತಮ್ಮ ಜನ್ಮ ದಿನಾಂಕವನ್ನು ತಪ್ಪಾಗಿ ನಮೂದಿಸಿದ್ದಾರೆಂದು ತೀರ್ಮಾನಿಸಿ ನಿವೃತ್ತಿಗೊಳಿಸಿದರು. ಶಿವಪ್ಪನವರು ರಾಷ್ಟ್ರಪತಿಗಳ ತೀರ್ಮಾನ ತಪ್ಪು ಎಂದು ಪ್ರಬಲವಾಗಿ ಪ್ರತಿಭಟಿಸಿದ್ದಾರೆ. ನ್ಯಾಯಮೂರ್ತಿಗಳು ನ್ಯಾಯಪೀಠದಿಂದ ಕೊಡುವ ಎಲ್ಲ ತೀರ್ಪುಗಳನ್ನು ತಪ್ಪೆಂದು ಸೋತ ಪಕ್ಷಗಾರರು ನಿಶ್ಚಯವಾಗಿ ಹೇಳುತ್ತಾರೆ. ಸೋತ ಯಾವ ಪಕ್ಷಗಾರನೂ ತಮ್ಮ ವಿರುದ್ಧ ಕೊಟ್ಟ ತೀರ್ಪು ಸರಿ ಎಂದು ಒಪ್ಪಿಕೊಳ್ಳುವುದಿಲ್ಲ! ಒಂದು ವೇಳೆ ಲಂಚ ತಿಂದು ಕೊಟ್ಟ ತೀರ್ಪಾದರೂ ಅದನ್ನು ಒಪ್ಪಿಕೊಳ್ಳದೆ ಬೇರೆ ದಾರಿಯಿಲ್ಲ. ಅಂದ ಮೇಲೆ ರಾಷ್ಟ್ರಪತಿಗಳು, ಸರ್ವೋಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾ. ಮೂರ್ತಿಗಳೊಡನೆ ಸಮಾಲೋಚನೆ ಮಾಡಿ, ಶಿವಪ್ಪನವರೆ ಒದಗಿಸಿದ ದಾಖಲೆಗಳನ್ನು ಪರಿಶೀಲಿಸಿ ಅವರ ನಿಜವಾದ ಜನ್ಮ ದಿನಾಂಕ ಡಿಸೆಂಬರ್ 1938 ಅಲ್ಲ ಡಿಸೆಂಬರ್ 36 ಎಂದು ನಿರ್ಧರಿಸಿದ್ದಾರೆ! 1936 ಎಂದು ದಾಖಲೆಗಳಲ್ಲಿ ಮುಖ್ಯವಾಗಿ ಎಸ್.ಎಸ್.ಎಲ್.ಸಿ. ಸರ್ಟಿಫಿಕೇಟಿನಲ್ಲಿ ನಮೂದಾಗಿದೆ ಎಂದು ಅವರೆ ಒಪ್ಪುತ್ತಾರೆ. 1938 ಎಂದು ಯಾವಾಗ ಬದಲಾಯಿತು? ಹೇಗೆ ಬದಲಾಯಿತು? ಆ ಬದಲಾವಣೆ ಜನನ ಮರಣ ನೋಂದಣಿ ಕಾಯಿದೆಯ ಪ್ರಕಾರ ಆಯಿತೆ? ರಾಷ್ಟ್ರಪತಿ ಇದನ್ನೆಲ್ಲ ಪರಿಶೀಲಿಸಿಯೇ ತೀರ್ಪು ಕೊಟ್ಟಿದ್ದಾರೆ. ಅಂದರೆ ನ್ಯಾಯಮೂರ್ತಿಗಳ ಪ್ರಾಮಾಣಿಕತೆ ಎಲ್ಲಿಗೆ ಬಂತು?

ಅಮೇರಿಕದಲ್ಲಿ ನ್ಯಾ. ಮೂರ್ತಿಗಳ ನೇಮಕವನ್ನು ಅಮೇರಿಕದ ರಾಷ್ಟ್ರಪತಿಯೇ ಮಾಡಿದರೂ ಆ ನೇಮಕಾತಿಯನ್ನು ಸೆನೆಟ್‌ನಲ್ಲಿ ಅನುಮೋದಿಸುತ್ತಾರೆ. 1991ರಲ್ಲಿ ನೇಮಕಗೊಂಡ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯನ್ನು ಸೆನೆಟ್ ಸದಸ್ಯರು ಪರೀಕ್ಷಿಸಿ ಕಣ್ಣೀರು ಇಳಿಸಿದ್ದರು. ಆ ಅಗ್ನಿ ಪರೀಕ್ಷೆಯಲ್ಲಿ ಪಾರಾದ ಮೇಲೆಯೇ ಅವರ ನೇಮಕಾತಿಯನ್ನು ದೃಢಪಡಿಸಿದರು. ಅಂಥ ಪದ್ಧತಿ ಇಲ್ಲಿ ಇದ್ದಿದ್ದರೆ ಈಗ ನ್ಯಾ. ಮೂರ್ತಿಗಳೆಂದು ಪೀಠವನ್ನು ಅಲಂಕರಿಸಿದವರಲ್ಲಿ ಎಷ್ಟು ಜನ ಅಗ್ನಿಪರೀಕ್ಷೆಯಲ್ಲಿ ತೇರ್ಗಡೆ ಆಗುತ್ತಿದ್ದರು?

ಇಷ್ಟೆಲ್ಲ ಹೇಳಿದ ಮೇಲೂ ನ್ಯಾಯಮೂರ್ತಿಗಳಲ್ಲಿ ಇನ್ನೂ ಪ್ರಾಮಾಣಿಕತೆ ಉಳಿದಿದೆ ಎಂಬುದನ್ನು ಒಪ್ಪಬೇಕು. ಎಂಥ ಕೆಟ್ಟ ನ್ಯಾಯಾಧೀಶ, ನ್ಯಾಯಮೂರ್ತಿ ಅತ್ಯಂತ ಒಳ್ಳೆಯವನೆಂಬ ಅಧಿಕಾರಿಗಿಂತ ಭ್ರಷ್ಟ ರಾಜಕಾರಣಿಗಿಂತ ಸಹಿಸಿಕೊಳ್ಳಬಹುದಾದಂಥ ಮನುಷ್ಯನೇ ಸರಿ! ■

ಹಳ್ಳಿಯ 'ಆ' ದೃಶ್ಯಗಳು!

ಶೀರ್ಷಿಕೆಯನ್ನು ನೋಡಿ, ನೀವು ಅಂದ್ಕೋತಿರಬಹುದು. ಮರ-ಗಿಡಗಳ ಬಗ್ಗೆಯೋ, ಹಬ್ಬ-ಹುಣ್ಣಿಮೆಗಳಲ್ಲಿ ಹಿಂದೆ ಇದ್ದ ವೈವಿಧ್ಯಮಯ ಪದ್ಧತಿಯೊ ಮತ್ತಾವುದರ ಬಗ್ಗೆಯೊ ಹಳೆಯ ಸರಕನ್ನೆ ತೆಗೆದುಕೊಂಡು, ನಮ್ಮ ತಲೆ ಕೊರೆಯಲು ಹೊರಟಿದ್ದಾಳೆ ಎಂದು. ಆದರೆ ಖಂಡಿತ ನಾನು ನಿಮಗೆ ಹೇಳಲಿರುವುದು ಮೇಲಿನ ಯಾವ ಹಳಸಲು ವಿಚಾರಗಳೂ ಅಲ್ಲ.

ಕುತೂಹಲವೆ? ಸ್ವಲ್ಪ ತಾಳ್ಮೆ. ಅದಕ್ಕೆಂದೆ ನಾನು ಸುತ್ತಿಬಳಸಿ ಹೇಳಿ ನಿಮ್ಮ ತಾಳ್ಮೆ ಪರೀಕ್ಷಿಸದೆ, ನೇರ ವಿಚಾರಕ್ಕೆ ಬರುತ್ತಿರುವೆ.

ಹಳ್ಳಿಗಳಲ್ಲಿ ನಾವು ಮಕ್ಕಳಾಗಿದ್ದಾಗ, ಮುಂಜಾವಿನ ಮನೋಹರ ನೋಟವೇ ಚೆಂದವಿತ್ತು. ಅದರ ಜೊತೆಗೆ ಚಿಕ್ಕಮಕ್ಕಳು ಮನೆಯ ಮುಂದೆ ರಸ್ತೆಯ ಉದ್ದಗಲಕ್ಕೂ ಕಕ್ಕಸಿಗೆಂದು ಕುಳಿತ ಭಂಗಿ, ಮಕ್ಕಳ ಹಿಂದೆ ನಾಯಿಗಳ ಹಿಂಡು ನೋಡಲು ಸೊಗಸಾಗಿತ್ತು. ಹುಡುಗರು ಕೋಲನ್ನೋ, ಕಲ್ಲನ್ನೋ ಹಿಡಿದು ನಾಯಿಗಳನ್ನು ಚೆದರಿಸಿ ಓಡಿಸುತ್ತಿದ್ದರೂ ಅವು ಮತ್ತೆ ಮತ್ತೆ ಬರುತ್ತಿದ್ದ ಪರಿಯೂ ಅನನ್ಯ.

ಚಿಕ್ಕ ಮಕ್ಕಳ ಕತೆ ಇದಾದರೆ ದೊಡ್ಡವರ ಕತೆ ಇನ್ನೂ ವರ್ಣನಾತೀತ. ಚೆಂಬುಗಳನ್ನಿಡಿದು, ಬೀಡಿಕಟ್ಟು ಹಿಡಿದು ಯಾವುದಾದರೂ ಗಿಡ ಮರದ ಹಿಂದೆ ಕುಳಿತರೆಂದರೆ ಮತ್ತೆ ಮನೆಗೆ ಮರಳಿ ಬರುತ್ತಿದ್ದುದು ಬೀಡಿಕಟ್ಟು ಮುಗಿದ ಮೇಲೆಯೇ! ಇವರು ಚೆಂಬುಗಳನ್ನು ಪಕ್ಕದಲ್ಲಿಟ್ಟು ಎತ್ತಲೋ ನೋಡುತ್ತ ಕುಳಿತಿದ್ದಾಗ, ನಾಯಿಗಳೇನಾದರೂ ಬಂದು ಚೆಂಬುಗಳನ್ನು ಉರುಳಿಸಿ, ನೀರು ಚೆಲ್ಲಿ ಹೋದರೆ ಇವರ ಪರದಾಟವಂತೂ ಬೊಂಬಾಟ್!

ಪಟ್ಟಣದವರು ಹಳ್ಳಿಗೇನಾದರೂ ಬಂದರೆ, ರಸ್ತೆಯ ಇಕ್ಕೆಡೆಯೂ ಕಕ್ಕಸ್ಸಿನ ಗುಡ್ಡೆಗಳು (ಕೋಳಿ ಕೆದಕಿದ, ನಾಯಿಗಳು ಅರೆಬರೆ ತಿಂದು ಬಿಟ್ಟ) ಸ್ವಾಗತ ಕೋರುತ್ತಿದ್ದವು. ಕೆಲವರು ಮೂಗು ಮುಚ್ಚಿ, ಎಷ್ಟೋ ಮಂದಿ ಕಣ್ಣು ಮುಚ್ಚಿ ನಡೆಯುತ್ತಿದ್ದದ್ದೂ ಉಂಟು.

ಹೆಣ್ಣು ಮಕ್ಕಳೂ ಪಕ್ಕದ ಮನೆಯ ಗೆಳತಿಯನ್ನೋ ತಂಗಿಯಿದ್ದರೆ ತಂಗಿ, ಅಕ್ಕ ಇದ್ದರೆ ಅಕ್ಕಳನ್ನೋ ಕರೆದುಕೊಂಡು ಗುಡ್ಡದ ಕಡೆಗೋ, ಹೊಲ-ಗದ್ದೆಗಳ ಕಡೆಗೋ ಹೋದರೆ ಅವರ ವಿಚಾರವನ್ನು ಬಿಟ್ಟು ಉಳಿದ ಊರಿನ ಹೆಣ್ಣು ಮಕ್ಕಳ ವಿಚಾರವನ್ನೆಲ್ಲ ಮಾತನಾಡಿ, ಮುಗಿದ ಮೇಲೆಯೇ ಇವರ ಕಕ್ಕಸ್ಸಾಯಣ ಮುಗಿದು ಮನೆ ಸೇರುತ್ತಿದ್ದುದು.

ಪಟ್ಟಣದ ಗಾಳಿ, ಪ್ರಭಾವ ಹಳ್ಳಿಗರ ಮೇಲೂ ಬೀಸತೊಡಗಿದಾಗ, ಕೇವಲ ಶ್ರೀಮಂತರ ಮನೆಗಳಲ್ಲಿ ಮಾತ್ರ ಕಕ್ಕಸ್ಸು ರೂಂಗಳನ್ನು ಕಟ್ಟಿಸಿಕೊಳ್ಳ ತೊಡಗಿದರು.


ಗ್ರಾಮ ಪಂಚಾಯಿತಿಯ ವಕ್ರದೃಷ್ಟಿ ಹಳ್ಳಿಯ ಉದ್ಧಾರದೆಡೆ ಹರಿದಾಗ, ಉಚಿತ ಕಕ್ಕಸ್ಸು ಕೊಠಡಿಗಳನ್ನು ಪ್ರತಿ ಮನೆಗೂ ಕಟ್ಟಿಸಿಕೊಡ ತೊಡಗಿತು. ಇದರಿಂದ ಇಂದು ಹಣ ಇದ್ದವರು; ಇಲ್ಲದವರು ಎಲ್ಲರ ಮನೆಗಳಲ್ಲಿ ಕಕ್ಕಸ್ಸು ಗುಂಡಿಗಳ ಸಡಗರವೋ ಸಡಗರ.

ಹಿರಿಯ ತಲೆಮಾರಿನವರು 'ಛೀ.... ಅಸಹ್ಯ ಆ ಒಂದೇ ರೂಂನಲ್ಲೇ ಎಲ್ಲಾ ಹೋಗೋದಾ? ನಾನಂತು ಹೋಗಲ್ಲಪ್ಪ...' ಎನ್ನುತ್ತಲೇ ಪ್ರಯೋಗಿಸುವ ಆಸೆಯಿಂದ ಕಕ್ಕಸ್ಸು ರೂಂಗಳನ್ನು ಬಳಸತೊಡಗಿದರು.

ಇದರಿಂದಾಗಿ ನಾಯಿಗಳು ಆಹಾರವಿಲ್ಲದೆ, ಗ್ರಾಮಪಂಚಾಯ್ತಿಯವರಿಗೆ ಶಾಪ ಹಾಕತೊಡಗಿದವು. ಅದೇನೇ ಆಗಲಿ ನಾಯಿಗಳ ಸಂಖ್ಯೆಯೂ ಇಂದು ಹಳ್ಳಿಗಳಲ್ಲಿ ಕ್ಷೀಣಿಸಿದೆ. ಹೆಣ್ಣುಮಕ್ಕಳು ಊರಿನ ಸುದ್ದಿಯನ್ನೆಲ್ಲ ಮಾತನಾಡುವ ಒಳ್ಳೆಯ ಅವಕಾಶದಿಂದ ವಂಚಿತರಾಗಿದ್ದಾರೆ.

ಹಳ್ಳಿಗಳ ಮುಂಜಾವಿನ ಆ ಸುಮನೋಹರ ದೃಶ್ಯವಿಂದು ಕಣ್ಮರೆಯಾಗುತ್ತಿದೆ. ಬಾಲ್ಯದ ಆ ದೃಶ್ಯಗಳು ನಮ್ಮ ಮುಂದಿನ ಪೀಳಿಗೆಗೆ ಸಿಗುವುದಿಲ್ಲವೆಂಬ ಕೊರಗು ನನ್ನದು.

■ ಸುಜಲಾದೇವಿ ಡಿ. ಕುಂದೂರು.



ವ್ಯಕ್ತಿತ್ವ ವಿಕಾಸ - 22

■ ಕೃಶಾಂಗ

ನೈತಿಕ ಸ್ವಭಾವ

ದೇಹದ ಮೇಲೆ ಕಂಡುಬರುವ 'ಕಳಂಕಗಳು' ವ್ಯಕ್ತಿತ್ವವನ್ನು ಅಶಕ್ತವಾಗಿಸುವುದು ಖಚಿತ. ಕಾಲಾನಂತರ ಎರಡನೇ ವರ್ಗದ ಇಂಥ ವ್ಯಕ್ತಿಗಳು ದೈಹಿಕವಾಗಿ ಸುಧಾರಿಸಿದರೂ ಸಹ ಅವರ ಬಗೆಗಿನ ಹಿಂದಿನ ಅಭಿಪ್ರಾಯಗಳೇ ಅವರ ವ್ಯಕ್ತಿತ್ವವನ್ನು ಭೂತದಂತೆ ಬೆಂಬತ್ತುವುದು ವಿಷಾದನೀಯ ಸತ್ಯ.

ವ್ಯಕ್ತಿಯ ನೈತಿಕ ಸ್ವಭಾವ ಮತ್ತು ಆತನ ವ್ಯಕ್ತಿತ್ವದ ಅಭ್ಯಾಸ ಕಳೆದ ಅನೇಕ ವರ್ಷಗಳಿಂದ ಸಾರ್ವಜನಿಕ ಲಕ್ಷ್ಯವನ್ನು ತಮ್ಮತ್ತ ಸೆಳೆದುಕೊಂಡಿದೆ. ನೈತಿಕ ಸ್ವಭಾವ ವ್ಯಕ್ತಿತ್ವದ ಭಾಗವೇ ಅಥವಾ ಅವೆರಡೂ ಸ್ವತಂತ್ರವೂ, ಸಂಬಂಧವಿಲ್ಲದವೂ ಆಗಿವೆಯೇ ಎಂಬುದನ್ನೀಗ ತಿಳಿಯೋಣ. ನೀವು ನಿಜವಾಗಿ ಏನಾಗಿರುವಿರೋ ಅದನ್ನು ನಿಮ್ಮ ನೈತಿಕ ಸ್ವಭಾವ ಹೊರಗೆಡವಿದರೆ, 'ನೀವು ಇತರರಿಗೆ ಹೇಗೆ ಕಾಣುವಿರೋ ಅದು ನಿಮ್ಮ ವ್ಯಕ್ತಿತ್ವ' ಎಂಬುದು ಒಂದು ಅಭಿಪ್ರಾಯ. ಆದುದರಿಂದ ಅವೆರಡೂ ಭಿನ್ನ ಮತ್ತು ಸ್ವತಂತ್ರ ಎಂಬುದು ಈ ಅಭಿಪ್ರಾಯದ ತಿರುಳು. ಇನ್ನು ಕೆಲವರ ಅಭಿಪ್ರಾಯದಲ್ಲಿ ನೈತಿಕ ಸ್ವಭಾವ ವ್ಯಕ್ತಿತ್ವದ ಮೂಲಭೂತ ಘಟಕ. ವ್ಯಕ್ತಿತ್ವವೆಂದರೆ ವ್ಯಕ್ತಿ ಬೀರುವ ಸಾಮಾಜಿಕ ಪ್ರಭಾವ ಮತ್ತು ಆ ಪ್ರಭಾವದ ಗುಣ ಮತ್ತು ಸಂಬಂಧಿಸಿದ ವ್ಯಕ್ತಿಯ ನೈತಿಕ ಮಟ್ಟ ಮತ್ತು ಜೀವನ ಮೌಲ್ಯಗಳ ಬಗೆಗಿನ ಆತ ಆಕೆಯ ನಿರ್ಣಯಗಳಿಗೆ ಅನ್ವಯಿಸುತ್ತದೆ. ತನ್ನ ವೈಶಿಷ್ಟ್ಯಪೂರ್ಣ ವರ್ತನೆ ಮತ್ತು ಯೋಚನೆಗಳತ್ತ ಬೆರಳುದೋರುವ ದೈಹಿಕ ಮಾನಸಿಕ ವ್ಯವಸ್ಥೆಗಳನ್ನು ಸಂಘಟಿಸುತ್ತ ಅವುಗಳನ್ನು ಚಲನಶೀಲವಾಗಿಸಿರುವುದೇ ವ್ಯಕ್ತಿತ್ವ. ಆದುದರಿಂದ ನೈತಿಕ ಸ್ವಭಾವ ಮತ್ತು ವ್ಯಕ್ತಿತ್ವ ಇವೆರಡೂ ಒಂದೇ ಎಂಬ ಗೊಂದಲ ಬೇಡ.

ನೈತಿಕ ಸ್ವಭಾವದ ಬಗೆಗಿನ ಸರ್ವಮಾನ್ಯವಾದ ವ್ಯಾಖ್ಯೆ ಅಸಂಭವವಾದರೂ, 'ಸಾಮಾಜಿಕವಾಗಿ ಗ್ರಾಹ್ಯವಾದ ವರ್ತನೆಗಳ ಬಗೆಗಿನ ವ್ಯಕ್ತಿಯ ಸಮಗ್ರ ದೃಷ್ಟಿಕೋನ ಇದು ಎಂದು ಸ್ಥೂಲವಾಗಿ ತಿಳಿದುಕೊಳ್ಳಬಹುದು. ಆದರೆ ಸಾಮಾಜಿಕವಾಗಿ ಅಗ್ರಾಹ್ಯವಾದ ವರ್ತನೆಗಳ ಬಗೆಗಿನ ನಮ್ಮ ದೃಷ್ಟಿಕೋನದ ಪರಿಗಣನೆಯನ್ನು ಇಲ್ಲಿ ಕಡೆಗಣಿಸಿರುವುದು ಸ್ಪಷ್ಟ. ಕೆಲವು ವರ್ತನೆಗಳು ಸಾಮಾಜಿಕವಾಗಿ ಗ್ರಾಹ್ಯವಲ್ಲ, ನಿಜ. ಉದಾ: 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ' ಇತ್ಯಾದಿ, ಇಂಥ ಗುಣಗಳನ್ನು ಹೊಂದದಿರುವವನನ್ನು 'ಅನೈತಿಕ ಸ್ವಭಾವಿಯಲ್ಲ' ಎಂದು ಗಣಿಸುವುದು ಹೆಚ್ಚು ಸೂಕ್ತ. ಇಂಥವರು ಸಮಾಜದಲ್ಲಿ ಹೆಚ್ಚು ಮತ್ತು ಒಳ್ಳೆಯ ಅವಕಾಶಗಳನ್ನು ಪಡೆಯುತ್ತಾರೆಂಬುದೂ ಸತ್ಯ. ಆದರೆ ವ್ಯಕ್ತಿಯಲ್ಲಿ 'ಯಾವ ಗುಣಗಳು ಇರಬಾರದು' ಎಂಬ ಋಣಾತ್ಮಕ ದೃಷ್ಟಿಕೋನಕ್ಕಿಂತ 'ಏನು ಇರಬೇಕು' ಎಂಬ ಧನಾತ್ಮಕ ದೃಷ್ಟಿಕೋನದಿಂದ ನೈತಿಕ ಸ್ವಭಾವದ ನಿಜವಾದ ಅರ್ಥ ನಮಗೆ ಸಿಕ್ಕುತ್ತದೆ. ಉದಾಹರಣೆಗೆ: ಉತ್ಸಾಹ, ಸಹಕಾರ, ಸೌಜನ್ಯ, ಸಹಾನುಭೂತಿ, ಸ್ನೇಹಪರತೆ ಮುಂತಾದವು ವ್ಯಕ್ತಿಯನ್ನು ಸಾಮಾಜಿಕವಾಗಿ ದಕ್ಷನನ್ನಾಗಿ ಮಾರ್ಪಡಿಸುತ್ತವೆ. ಇದು ಅಪೇಕ್ಷಣೀಯ ನೈತಿಕ ಸ್ವಭಾವ. ಈ ಗುಣಗಳಿಗನುಸರಿಸಿ ವ್ಯಕ್ತಿ ಸಮಾಜದಲ್ಲಿ ಗೈಯುವ ಕೃತಿಗಳೇ ಅವನ ನೈತಿಕ ಸ್ವಭಾವದ ರಾಯಭಾರಿಗಳು; ಅವು ಆ ವ್ಯಕ್ತಿಯ ನೈತಿಕ ಪಾತಳಿಯ ಅಳತೆಗೋಲುಗಳು.

ವ್ಯಕ್ತಿತ್ವದ ಗುಣಾವಗುಣಗಳು ಇತರರ ಪ್ರತಿಕ್ರಿಯೆಗಳಿಂದ ಬಯಲಿಗೆ ಬರುತ್ತವೆ. ನಮ್ಮ ಪ್ರತಿಕ್ರಿಯೆ ಸಂಬಂಧಿತ ವ್ಯಕ್ತಿಯ ಬಗೆಗೆ ನಮಗೆ ಏನು ಮತ್ತು ಎಷ್ಟು ತಿಳಿದಿದೆಯೆಂಬುದನ್ನವಲಂಬಿಸಿರುತ್ತದೆ. ವ್ಯಕ್ತಿಯೊಬ್ಬನ ನಿಜವಾದ ನೈತಿಕ ಸ್ವಭಾವ ಇರುವುದೇ ಬೇರೆ, ಆದರೆ ಆತನ ಬಗೆಗಿನ ಜನರ ತಿಳಿವಳಿಕೆ (ಖ್ಯಾತಿ)ಯೇ ಬೇರೆ ಆಗಿದ್ದರೆ ಸತ್ಯ ಬಯಲಾದಾಗ ವ್ಯಕ್ತಿತ್ವಕ್ಕೆ ಹಾನಿ/ಲಾಭ ಆಗಬಹುದು; ವ್ಯಕ್ತಿತ್ವ ಕುಗ್ಗಬಹುದು/ಉತ್ತಮಗೊಳ್ಳಬಹುದು. ನೈಜ ನೈತಿಕ ಸ್ವಭಾವ ಮತ್ತು ಖ್ಯಾತಿಗಳ ನಡುವಿನ 'ಈ ಕಂದಕ' ವ್ಯಕ್ತಿತ್ವ ನಿರ್ಣಯಕ್ಕಿರುವ ದೊಡ್ಡ ಆತಂಕ.

ಅದೇ ರೀತಿ, ನೈತಿಕತೆಯೆಂಬುದು ಚಲನಶೀಲ ತತ್ವ, ಕಾಲ ಕಾಲಕ್ಕೆ ಅದರ ಸ್ವರೂಪ ಬದಲಾಗುತ್ತದೆ. ಆದುದರಿಂದ ಇಂದಿನ ನೈತಿಕ ಅಳತೆಗೋಲುಗಳಿಂದ ಬಹು ಹಿಂದಿನ ವ್ಯಕ್ತಿಯೊಬ್ಬನ ವ್ಯಕ್ತಿತ್ವವನ್ನಳೆಯುವುದು ನಾವು ಆತನಿಗೆ ಎಸಗುವ ಅನ್ಯಾಯ; ಅಂತೆಯೇ ನಮ್ಮ ನಿರ್ಣಯ ಬುದ್ಧಿಗೆ ಮಾಡಿಕೊಂಡ ಮೋಸ. ಆದುದರಿಂದ ಯಾವ ವ್ಯಕ್ತಿಯ ವ್ಯಕ್ತಿತ್ವವನ್ನು ಪರೀಕ್ಷಿಸುತ್ತಿರುವೆವೋ ಆತನ ಕಾಲದ ನೈತಿಕ ಬೇಕು-ಬೇಡಗಳ ಅರಿವಿರುವುದು ಅತ್ಯಂತ ಅವಶ್ಯಕ.

ನೈತಿಕ ಸ್ವಭಾವ ವ್ಯಕ್ತಿತ್ವದ ಮೇಲೆ ಮೂರು ಬಗೆಯಾಗಿ ಪರಿಣಾಮ ಬೀರುತ್ತದೆ: ವ್ಯಕ್ತಿಯ ದೈಹಿಕ-ಮಾನಸಿಕ ಆರೋಗ್ಯದ ಮೇಲೆ; ಜೀವನ ಸಾರ್ಥಕ್ಯ ಅಥವಾ ನಿರರ್ಥಕತೆಯ ಭಾವನೆಗಳ ಮೇಲೆ; ವ್ಯಕ್ತಿಯ ಖ್ಯಾತಿಯ ಮೇಲೆ.

ತನ್ನರಿವಿನಿಂದಲೇ ಯಾವ ಉತ್ತಮ ನೀ... ವಂತನೂ ತನ್ನ ದೇಹ ಮನಸ್ಸುಗಳನ್ನು ಗಂಡಾಂ... ರಕಾರಿ ಪ್ರಸಂಗಗಳಿಗೊಡ್ಡಿಕೊಳ್ಳುವುದಿಲ್ಲ. 'ಅ... ಸರ್ವತ್ರ ವರ್ಜಯೇತ್' ಎಂಬ ತತ್ವವನ್ನು ತನ... ದೈಹಿಕ ಮಾನಸಿಕ ಚಟುವಟಿಕೆಗಳಲ್ಲಿ ಕಟ್ಟುನಿಟ್ಟಾ... ಆತ ಪಾಲಿಸುತ್ತಾನೆ. ಆದರೆ ಕೇವಲ ಉತ್ತಮ ದೈಹಿಕ ಲಕ್ಷಣ ಹೊಂದಿರುವುದು ಮಾತ್ರ ನೈತಿ... ಸ್ವಭಾವದ ಶ್ರೇಷ್ಠತೆಗೆ ಹಿಡಿದ ಕನ್ನಡಿಯೆಂದಾಗಲಿ ಅದರ ಲೋಪವು ನೈತಿಕ ಸ್ವಭಾವದ ಒಳ್ಳೆಯ ಮಟ್ಟದ ಅಭಾವಸೂಚಕವೆಂದಾಗಲೀ ತೀರ್ಮಾ... ಸುವುದು ಅಶಾಸ್ತ್ರೀಯ.

ಹಲವು ವ್ಯಕ್ತಿಯ ಮೈಮೇಲಿನ ದೈಹಿಕ ಕಲೆಗಳು ಪರರ ಸಹಾನುಭೂತಿಗಳಿಸಬಹುದು; ಆದರೆ ನೈತಿಕ ಕಾರಣಗಳಿಂದಾದ ಕಳಂಕಗಳನ್ನು ಜನ ಸಹಿಸುವುದಿಲ್ಲ. ಕಮಲೆಯ ಮುಖ ಮೈಗಳು ಕಲೆಗಳಿಂದ ವಿಕಾರವಾಗಿರ ಬಹುದು; ಆದರೆ ಕಮಲೇಶನ ಮುಖ ಗುಹ್ಯರೋಗಗಳಿಂದಾಗಿ ವಿಕಾರವಾಗಿ ಕಂಡಾಗ, ತುಲನಾತ್ಮಕವಾಗಿ ಮೊದಲನೆಯ ಮುಖ ಸಹ್ಯವಾಗುತ್ತದೆ. ದುಶ್ಚಟ, ದುರ್ನಡತೆಗಳಿಂದ ದೇಹದ ಮೇಲೆ ಕಂಡುಬರುವ 'ಕಳಂಕಗಳು' ವ್ಯಕ್ತಿತ್ವವನ್ನು ಅಶಕ್ತವಾಗಿಸುವುದು ಖಚಿತ. ಕಾಲಾನಂತರ ಎರಡನೇ ವರ್ಗದ ಇಂಥ ವ್ಯಕ್ತಿಗಳು ದೈಹಿಕವಾಗಿ ಸುಧಾರಿಸಿದರೂ ಸಹ ಅವರ ಬಗೆಗಿನ ಹಿಂದಿನ ಅಭಿಪ್ರಾಯಗಳೇ ಅವರ ವ್ಯಕ್ತಿತ್ವವನ್ನು ಭೂತದಂತೆ ಬೆಂಬತ್ತುವುದು ವಿಷಾದನೀಯ ಸತ್ಯ.

ತಮ್ಮ ಜೀವನಾರಂಭದಲ್ಲಿ 'ಸೈತಾನ'ರಾಗಿದ್ದು ನಂತರ 'ಸಂತ'ರಾಗಿ ಪರಿವರ್ತಿತರಾದ ಕೆಲವರು ನಮ್ಮ ದೃಷ್ಟಿಗೆ ಬೀಳಬಹುದು. ಇದು ಉಲ್ಲೇಖನೀಯ ಪರಿವರ್ತನೆಯೆಂಬುದನ್ನು ಜಾಹೀರು ಪಡಿಸಲು 'ಆ ಕೆಲವರು' ಪದೇ ಪದೇ ತಮ್ಮ ಗತ ಕಾಲದ ಸ್ಥಿತಿಯನ್ನು ಜನತೆಯ ಎದುರು ತೆರೆದಿಡಬಹುದು. ಅದೇ ರೀತಿ ಬಾಲ್ಯದಲ್ಲಿ ತೀವ್ರ ಬಡತನ, ನಿರಾಶೆಗಳಿಂದ ಬಳಲಿರುವ ಸ್ಮಿತಾ ಆಗಿಂದಾಗ್ಯೆ ಬೇರೆಯವರೆದುರು ಇದರ ತುತ್ತೂರಿಯನ್ನೂದುತ್ತಿದ್ದರೆ ಆಗುವ ಪರಿಣಾಮ? 'ಇಂಥ ವ್ಯಕ್ತಿಗಳನ್ನು ನಮ್ಮಿಂದ ದೂರವಿಟ್ಟು ಉಪಕರಿಸಪ್ಪ' ಎಂದು ದೇವರನ್ನು ಪ್ರಾರ್ಥಿಸಬಹುದು; ಅವರಿಂದ ಸಾಧ್ಯವಿದ್ದಷ್ಟೂ ತಪ್ಪಿಸಿಕೊಂಡು ಓಡಾಡಲು ಪ್ರಯತ್ನ ಪಡಬಹುದು.



ನನ್ನ ಭಾವನೆಗಳನ್ನು ನಾನು ಕಣ್ಣಲ್ಲಿ ತೋರಿಸಿದೆ..
...ಆದರೆ ಅವಳು ಅದನ್ನು ಕೈಯಲ್ಲಿ ತೋರ್ಸಿದ್ಳು!

ಅಂದರೆ, ಅವರ ಬಗೆಗಿನ ಈ ವಿಷಯಗಳು ತಿಳಿಯದಿದ್ದರೆ ಜನ ಅವರ ವ್ಯಕ್ತಿತ್ವಕ್ಕೆ ಯಾವ ಬೆಲೆ ಕಟ್ಟುತ್ತಿದ್ದರೋ, ಈ ತಿಳುವಳಿಕೆಯ ಮೂಲಕ ಆ ಬೆಲೆ ಅಪಮೌಲ್ಯಗೊಳ್ಳುವುದು ಖಂಡಿತ. ಇದಕ್ಕೂ ಒಂದು 'ಬೆಳ್ಳಿಯ ಗೆರೆ' ಇದೆ. ನೀವು ಬಾಲ್ಯದಲ್ಲಿ, ಗತಕಾಲದಲ್ಲಿ ಅನುಭವಿಸಿದ ಸ್ಥಿತಿಯಲ್ಲಿ ಇಂದು ದಿನಗಳನ್ನು ದೂಡುತ್ತಿರುವವರಿಗೆ ಆ ಸ್ಥಿತಿಯಿಂದ ಮೇಲೆದ್ದು ಇಂದು ಉನ್ನತಸ್ಥಾನಕ್ಕೇರಿರುವ ನಿಮ್ಮ ಬಗೆಗೆ ಗೌರವವೂ, ಸ್ವಂತದ ಬಗೆಗೆ ಆಶಾ ಭಾವನೆಯೂ ಮೂಡಿ ಅವರೂ ನಿಮ್ಮಂತೆ ಪ್ರಗತಿ ಗೊಳ್ಳಲು ಸಹಾಯವಾಗಬಹುದು. ಎಲ್ಲೋ ಒಂದು ಕಡೆ, ಸಾಂದರ್ಭಿಕವಾಗಿ ನಿಮ್ಮ ಗತ ಜೀವನದ ಕುಂದು-ಕೊರತೆ-ಕಷ್ಟಗಳನ್ನು ಮೆಲುಕು ಹಾಕುವದಕ್ಕೂ, ಯಾವಾಗಲೂ 'ಹಾಡಿದ್ದೇ ಹಾಡುವ ದಾಸ'ನನ್ನು ಅನುಕರಿಸುವದಕ್ಕೂ, ಅವು ವ್ಯಕ್ತಿತ್ವದ ಮೇಲೆ ಮಾಡುವ ಪರಿಣಾಮಗಳ ದೃಷ್ಟಿಯಿಂದ, ವ್ಯತ್ಯಾಸವಿದೆಯೆಂಬುದು ಅರ್ಥವಾಯಿತಲ್ಲವೇ? ಆದುದರಿಂದಲೇ ಸಾಮಾನ್ಯರೂ ತಮ್ಮ ಕುಂದು ಕೊರತೆಗಳನ್ನು ಬಚ್ಚಿಡುತ್ತಾರೆ. ಇತರರಿಗೆ ಅವು ತಿಳಿಯುವ ತನಕವಾದರೂ ಅವರ ವ್ಯಕ್ತಿತ್ವ ಹಾನಿಯಿಂದ ಬಚಾವಾಯಿತಲ್ಲವೇ?

ನೈತಿಕವಾಗಿ ಅಶಕ್ತ ಸ್ವಭಾವ ಹೊಂದಿದ ವ್ಯಕ್ತಿಗೆ ತನ್ನ ಕುಕೃತ್ಯಗಳ ಅರಿವಿರುವುದೇ ಆ ವ್ಯಕ್ತಿಯ ಜೀವನ ಸಾರ್ಥಕ್ಯಕ್ಕೊಂದು ದೊಡ್ಡ ತಡೆಗೋಡೆ. ತನ್ನ 'ಹಿಂಬದಿ' ವ್ಯಕ್ತಿಗೆ ಕಾಣುವುದು ಇಂಥ ಸಂದರ್ಭಗಳಲ್ಲಿ ಮಾತ್ರ. ತನ್ನ ನಿಜವಾದ ಸ್ಥಾನದ ಪರಿಚಯ ಆ ವ್ಯಕ್ತಿಗೆ ಮಾತ್ರ ಇರುತ್ತದೆ. ಜೀವನದಲ್ಲಿ ಈಸಬೇಕು, ಆದರೆ ಈಸಿ ಜಯಿಸುವುದು ಎಲ್ಲರಿಗೂ ಸಾಧ್ಯವೇ? ಇಲ್ಲವೆನಿಸುತ್ತದೆ. ಏಕೆಂದರೆ ತಾನೇನಾಗಿದ್ದೇನೆಂಬ ತಿಳಿವು ಆ ವ್ಯಕ್ತಿಯ ಜೀವನದಲ್ಲಿ ಎತ್ತರದ ಧ್ಯೇಯಗಳನ್ನಿರಿಸಿಕೊಳ್ಳುವಲ್ಲಿ ತೊಡಕಾಗುತ್ತದೆ. ಆತನ ಸದಸದ್ವಿವೇಕ ಆತನೊಡನೆ ಸಹಕರಿಸುವುದಿಲ್ಲ. ಇಂಥ ವ್ಯಕ್ತಿ ತನ್ನಂಥ ಹಿನ್ನೆಲೆಯಿರುವವರ ಸಂಗ, ಸ್ನೇಹಗಳನ್ನೇ ಬಯಸುವುದೂ, ಅಂಥ ಸ್ತ್ರೀ-ಪುರುಷರ ಒಡನಾಟದಲ್ಲಿಯೇ ಮುಂದುವರೆಯಬಯಸುವದೂ ಸ್ವಾಭಾವಿಕ. ಹಾಗಾಗಿ ಜೀವನ ಸಾರ್ಥಕ್ಯದಲ್ಲಿ ಹಿಂದುಳಿಯುವುದೂ ಸಹಜ.

ವ್ಯಕ್ತಿಯೊಬ್ಬನ ನೈತಿಕ ಮಟ್ಟ ಸಮಾಜ ಅಪೇಕ್ಷಿಸುವ ಪಾತಳಿಯನ್ನು ನಿಲುಕದಿರುವುದೂ, ಸುತ್ತಮುತ್ತಲಿನವರದಕ್ಕಿಂತ ಕಡಿಮೆಯದೂ ಆಗಿದ್ದರೆ, ಆ ವ್ಯಕ್ತಿಗೆ 'ಅಪರಾಧೀ ಮನೋಭಾವ' ಕಾಡುತ್ತಿರುತ್ತದೆ. ಸ್ವಂತದ ಬಿಂಬಕ್ಕೂ ಇದು ಧಕ್ಕೆ ತಗುಲಿಸುತ್ತದೆ. ಬಾಲ್ಯದಲ್ಲಿ ಅಪರಾಧೀ ಮನೋಭಾವವಿರುವುದಿಲ್ಲ. ಐದಾರು ವರ್ಷಗಳವರೆಗೆ, ತಪ್ಪುಮಾಡಿದಾಗ ಹೆದರಿಕೆಯುಂಟಾಗುತ್ತದೆ. ತನ್ನ ತಪ್ಪುಗಳ ಹೊಣೆಯನ್ನು ಬೇರೆಯವರಿಗೆ ವರ್ಗಾಯಿಸುವ ಪ್ರಯತ್ನವೂ ನಡೆಯಬಹುದು. ತನ್ನನ್ನು ಸುಧಾರಿಸಿಕೊಳ್ಳಲೂಬಹುದು. ಇದಕ್ಕಿಂತ ದೊಡ್ಡ ವಯಸ್ಸಿನಲ್ಲಿ ತಪ್ಪು ಮಾಡಿದಾಗ ಅವಮಾನ, ನಾಚಿಕೆಯುಂಟಾಗಬಹುದು. ವಯಸ್ಸು ಇನ್ನೂ ಬೆಳೆದಂತೆ, 'ನನ್ನ ನಡತೆಯನ್ನು ನಿಯಂತ್ರಿಸುವ ಹೊಣೆ ವೈಯಕ್ತಿಕವಾಗಿ ನನ್ನದೇ' ಎಂಬ ಅರಿವು ಮೂಡುತ್ತದೆ. ಇದರಲ್ಲಿ ಜಾರಿದಾಗಲೆಲ್ಲ, 'ಅಪರಾಧೀ ಮನೋಭಾವ' ಉತ್ಪನ್ನವಾಗುತ್ತದೆ. ಈ ಹೊಣೆಗಾರಿಕೆಯ ಅರಿವು ಮೂಡುವಲ್ಲಿ ಬಾಹ್ಯ ಒತ್ತಡ, ಸಾಮಾಜಿಕ ತಿರಸ್ಕಾರ, ಶಿಕ್ಷೆ ಇತ್ಯಾದಿಗಳ ಪಾತ್ರ ಇರುವುದಿಲ್ಲ. ಪುನರಾವರ್ತಿತವಾಗುವ ಅಪರಾಧೀ ಮನೋಭಾವ ವ್ಯಕ್ತಿಯ ಆತ್ಮವಿಶ್ವಾಸಕ್ಕೆ ಕೊಡಲಿಯೇಟಾಗಬಹುದು. ಆದರೂ ಇದು ಇತರರಿಗೆ ತಿಳಿಯದೇ ಹೋಗಬಹುದು!

ಅಪರಾಧೀ ಮನೋಭಾವದ ಕಾದಾಟಕ್ಕೊಳಗಾದ ವ್ಯಕ್ತಿ ಸಾರ್ವಜನಿಕವಾಗಿ ಅದನ್ನು ತೋರ್ಪಡಿಸಲಿಚ್ಛಿಸುವುದಿಲ್ಲ. ತಾವು ಮಾಡಿದ ಅಪರಾಧವನ್ನೇ ಮಾಡಿದ ಇನ್ನೊಬ್ಬರ ವಿಷಯದಲ್ಲಿ ಚರ್ಚೆ ನಡೆದರೆ ಆಗ ಅವರು ತೀವ್ರ ಸಂವೇದನಾಶೀಲರಾಗಿರುತ್ತಾರೆ. ಚರ್ಚೆಯ ಸಮಯದಲ್ಲಿ ಇಂಥ ವ್ಯಕ್ತಿಗಳು ಮೂರು ವಿಧವಾಗಿ ಪ್ರತಿಕ್ರಿಯಿಸಬಹುದು; ಚರ್ಚೆಯಲ್ಲಿ ತಮ್ಮ ಅನಾಸಕ್ತಿಯನ್ನು ನಟಿಸಬಹುದು; ಚರ್ಚೆಗಿಂತ ದುರ್ಗುಣವನ್ನು ತೀವ್ರವಾಗಿ ಖಂಡಿಸಬಹುದು; ಸಾಮಾನ್ಯ ಪ್ರತಿಕ್ರಿಯೆ ವ್ಯಕ್ತಪಡಿಸಬಹುದು. ಆದರೆ ಇಂಥವರು ಅಂತರಂಗದಲ್ಲಿ ತಮ್ಮ ಗುಟ್ಟು ಎಲ್ಲಿ ರಟ್ಟಾಗುವುದೋ ಎಂದು ಕುದಿಯುತ್ತಿವುದಂತೂ ನಿಃಸಂಶಯ.

ತನ್ನ ಅನಪೇಕ್ಷಣೀಯ ಹಿನ್ನೆಲೆಯ ಅರಿವಿರುವ ವ್ಯಕ್ತಿಯ ಸ್ವಭಾವದ ಪ್ರಮುಖ ಘಟಕ ಈ 'ಅರಿವೇ' ಆಗಿರುತ್ತದೆ; ಕೆಳತರಗತಿಯ ನೈತಿಕ ಸ್ವಭಾವದ ಅನೇಕರಲ್ಲಿ ಇದು ಕಾಣಲು ಕಾರಣ ಈ 'ಅರಿವು' ಅವರ ವ್ಯಕ್ತಿತ್ವವನ್ನು ಪ್ರಭಾವಿತಗೊಳಿಸಿರುತ್ತದೆ. ಇಂಥ ವ್ಯಕ್ತಿಗಳು ಗುಂಪಿನಿಂದ ದೂರವಿರಲು, ಮಿತಭಾಷಿಯಾಗಿರಲು, ಹಿಂದುಳಿಯ ಬಯಸುವವರೂ ಆಗಿರುತ್ತಾರೆ. ಅವರ ಸುತ್ತಲೂ ಅಪರಿಚಿತರ ಸಂಖ್ಯೆ ಹೆಚ್ಚುತ್ತ ಹೋದಂತೆ ಅವರು ಧೈರ್ಯಹೀನರೂ, ಅಶಾಂತರೂ ಆಗತೊಡಗುತ್ತಾರೆ. ಇಂಥವರಿಗೆ ಏಕಾಂತ ಅತಿ ಪಥ್ಯ. ಈ ಎಲ್ಲ ವರ್ತನೆ ಅವರ ವ್ಯಕ್ತಿತ್ವವನ್ನು ಕಳಾಹೀನಗೊಳಿಸುತ್ತದೆ.


ಇಂದಿನ ಪಯಣದಲ್ಲಿ ಇಷ್ಟು ಸಾಕು. ■

ಹೊಸ ಪುಸ್ತಕ



ಅಜ್ಜಿ ಹೇಳಿದ ಕಥೆಗಳು

ಲೇ: ಪಾರ್ವತಮ್ಮ ಮಹಲಿಂಗ ಶೆಟ್ಟಿ
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001.
ಪುಟ: 56, ಬೆಲೆ: 12/-



ಕಡಲ ತೀರದ ಒಂದು ಗ್ರಾಮದ ಕಥೆ

ಲೇ: ತಮಿಳು : ತೋಪ್ಪಿಲ್ ಮುಹಮ್ಮದ್ ಮೀರಾನ್
ಕನ್ನಡಕ್ಕೆ : ಶೇಷನಾರಾಯಣ
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001.
ಪುಟ: 224, ಬೆಲೆ: 80/-




ಬಸವೇಶ್ವರ - ಜ್ಞಾನೇಶ್ವರ
(ಒಂದು ಚಿಂತನೆ)

ಲೇ: ಮರಾಠಿ : ಕೃಷ್ಣ ಮೆಣಸೆ
ಕನ್ನಡಕ್ಕೆ : ಚಂದ್ರಕಾಂತ ಪೋಕಳೆ
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001.
ಪುಟ: 56, ಬೆಲೆ: 15/-




ಮರಾಠಿ ದಲಿತ ಕಾವ್ಯ

ಲೇ: ಡಾ.ಸರಜೂ ಕಾಟ್ಕರ್
ಪ್ರ: ಲೋಹಿಯಾ ಪ್ರಕಾಶನ
'ಕ್ಷಿತಿಜ', ಕಪ್ಪಗಲ್ಲು ರಸ್ತೆ, ಗಾಂಧಿನಗರ,
ಬಳ್ಳಾರಿ - 583 103.
ಪುಟ: 163, ಬೆಲೆ: 75/-



ದುಂಬಿ
(ಚುಟುಕುಗಳು)

ಲೇ: ಬೀರಪ್ಪ ಶಂಭೋಜಿ
ಪ್ರ: ಸುದ್ದಿಬಿಂಬ ಪ್ರಕಾಶನ
ಸಿಂಧನೂರು, ರಾಯಚೂರು ಜಿಲ್ಲೆ.
ಪುಟ: 59, ಬೆಲೆ: 30/-




ತಿರುಗಿ ನರಜನ್ಮ
(ಕಾದಂಬರಿ)

ಲೇ: ಮುದ್ದೂರು ಗೋಪಾಲಕೃಷ್ಣ ನಾಯಕ್
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001.
ಪುಟ: 184, ಬೆಲೆ: 70/-



ಗಾಂಧಿಯೊಂದಿಗೆ


ಲೇ: ಪ್ರಮೋದ್ ತುರ್ವಿಹಾಳ್
ಪ್ರ: ಲೋಹಿಯಾ ಪ್ರಕಾಶನ
'ಕ್ಷಿತಿಜ', ಕಪ್ಪಗಲ್ಲು ರಸ್ತೆ, ಗಾಂಧಿನಗರ,
ಬಳ್ಳಾರಿ - 583 103.
ಪುಟ: 66, ಬೆಲೆ: 30/-



ಸ್ಮೃತಿ ಯಾತ್ರೆ

ಲೇ: ಶ್ರೀ ತೋಟೇಂದ್ರ ಶಿವಾಚಾರ್ಯರು
ಪ್ರ: ಶ್ರೀ ಕೋರಿಸಿದ್ದೇಶ್ವರ ಸಂಸ್ಥಾನ ಮಠ
ನಾಲವಾರ - ಚಿತ್ತಾಪುರ (ತಾ)
ಕಲಬುರ್ಗಿ ಜಿಲ್ಲೆ
ಪುಟ: 126, ಬೆಲೆ: 35/-

ಪ ದ ಬ ಂ ಧ 16



ಪದಬಂಧ 15ರ ಸರಿಯುತ್ತರ

ಎಡದಿಂದ ಬಲಕ್ಕೆ

1. ದೇವಸ್ಥಾನ 4. ದಾನವಂತ 6. ರಿಕ 8. ನಾರಿ 9. ಭ್ರಶು 10. ಕಾಗದ 12. ಹಿತ 15. ರಕ್ತತಿಲಕ 18. ವಿಘ್ನ 19. ಹುಡುಗ 21. ರಾಮ 22. ಉಗಿ 23. ಪರ 25. ಕಾರಭಾರಿ 26. ಕರಗಸ.

ಮೇಲಿನಿಂದ ಕೆಳಕ್ಕೆ

2. ವಚನಭ್ರಷ್ಠ 3. ನರಿ 4. ದಾರಿ 5. ವಂದೇ ಮಾತರಂ 7. ಕರ್ಮಿಕಾ 8. ನಾರದ 11. ಗರತಿ ಹಾಡು 13. ಕರಡಿ 14. ಮಕರ 16. ಭವಿಷ್ಯಗಾರ 17. ಕಾಮಣಿ ರೋಗ 19. ಹುಡುಗಿ 20. ಗಣಪ 22. ಉರಿ 24. ರಕ

ಎಡದಿಂದ ಬಲಕ್ಕೆ

1. ಅನುಭವವಿಲ್ಲದೆ ಯುದ್ಧದಲ್ಲಿ ಅನುಭವಿಸಿದ ಸೋಲು .... (4)
4. ಮೈಚಳಿ ಬಿಟ್ಟು ಸ್ವತಂತ್ರಕ್ಕಾಗಿ ನಡೆಸಿದ ಹೋರಾಟ .... (4)
6. ಮಹಿಮರು ಮುಂದೆ ಹೋಗಲಾರದಂತೆ ಮಾಡಿದ ಮಂಜು .... (2)
8. ಅಪರೂಪಕ್ಕಾಗಿ ಹಣ್ಣು ತಂದ ಸಹೋದರ .... (2)
9. ಎಲ್ಲರನ್ನೂ ಸೋಲಿಸಿದ ಕುಸ್ತಿ ಪಟು .... (2)
10. ಜತನದಿಂದ ಜೋಪಾನ ಮಾಡಿದ ತಂದೆ.......................... (3)
12. ವೇದ ಕಾಲದಿಂದಲೂ ಹಿಂದುಳಿಯಲು ಕಾರಣವಾದ ಜಾತಿ ..... (2)
15. ಭಕ್ತಿಯ ಮಾರ್ಗ ತೋರಿಸಲು 12ನೇ ಶತಮಾನದಲ್ಲಿ ಅವತರಿಸಿದ ಶರಣ .... (5)
18. ಭಟ್ಟರು ಮಾಡಿದ ಮೊಂಡುತನ ತಿರುಗಿದೆ........................ (2)
19. ಎಲ್ಲ ಜನರ ಮನದಲ್ಲಿ ನೆನಪು ಉಳಿಯುವಂತೆ ಮಾಡಿದ ಹೆತ್ತ ತಾಯಿ (3)
21. ಒಂದೇ ಒಂದು ಕಾರಣದಿಂದ ನಾಶವಾದ ನಾಡು .... (2)
22. ಮಿಡಿ ನಾಗರದಂತೆ ಬಡೆದು ಕೊಳ್ಳುವ ಮುಂಗೈಯಲ್ಲಿರುವ ನರ.. (2)
23. ಮಳೆಗಾಲದಲ್ಲಿ ಆದ ವಿನಾಶ.. (2)
25. ಸಾಯುವ ಸ್ಥಿತಿಯಲ್ಲಿದ್ದರೂ ಮಳೆಯಲ್ಲಿ ಬಟ್ಟೆ ಒಗೆಯುವ ಅಗಸ (4)
26. ಮಸೂತಿಯಲ್ಲಿ ದೊರೆತ ದೊಡ್ಡ ಸಮಾಚಾರ......................(4)

ಮೇಲಿನಿಂದ ಕೆಳಕ್ಕೆ

2. ರಾಮ ಹೊರಟಿದ್ದು ಇರುಳಿನ ವೇಳೆ .... (5)
3. ಅಧಿಕಾರ ವಹಿಸಿಕೊಂಡ ನಂತರ ತಪಾಸಣೆ ಮಾಡಿದ ಲೆಕ್ಕದ ಪುಸ್ತಕ(2)
4. ಅಣ್ಣ ಹೊಲಿಸಿ ಕೊಟ್ಟ ಚಡ್ಡಿ.. (2)
5. ವಲಯ ಹಂಚಿ ಕೊಟ್ಟಾಗ ಚೆನ್ನಾಗಿ ಪಾಲನೆ ಮಾಡುವ ತೋಟ ಸಂರಕ್ಷಣೆಗಾರ .... (5)
7. ಮಜ ಮಾಡುತ್ತ ಸಮಯ ಹಾಳು ಮಾಡುವ ಮನುಷ್ಯ .... (3)
8. ಅಪರೂಪಕ್ಕಾಗಿ ಬಂದವನಿಗೆ ಮಾಡಿದ ಅಪಹಾಸ್ಯ .... (3)
11. ಒಂಬತ್ತು ದಿನ ಉಪವಾಸ ಕುಳಿತಾಗ ಸಿಕ್ಕ ಹೊಸ ಸಂಬಳ......... (5)
13. ಬಳುವಳಿಯಾಗಿ ನೀಡಿದ್ದು, ಇದು ಕುರಿಯ ಉಣ್ಣೆಯಿಂದ ನೇಯ್ದ ಹೊದಿಕೆ (3)
14. ಶರಣರಿಗೂ ಬಿಡದೇ ಬೆನ್ನತ್ತಿ ಬಂದ ಸಾವು......................... (3)
16. ಜಡಿಮಳೆಯಲ್ಲಿ ಪ್ರವಾಸ ಮಾಡಿದ ಕುದುರೆ ಗಾಡಿ .... (5)
17. ಪವಡಿಸುವ ಸಮಯದಲ್ಲಿ ಎಲ್ಲವನ್ನೂ ಹಾಳು ಮಾಡು .... (5)
19. ಕರಡಿ ತೆಗೆದುಕೊಂಡು ಹೋದ ಸಾಣೆಸುವ ಸಾಧನ .... (3)
20. ನೀಲ ಬಾನಿನಲ್ಲಿ ಕಂಡು ಬಂದ ಶುಭ್ರತೆ .... (3)
22. ನಾನಾ ರೀತಿಯಲ್ಲಿ ಮೈಯಲ್ಲಿ ಹರಡಿಕೊಂಡಿರುವ ನರ........... (2)
24. ಸಮಯ ಸಾಧನೆಗಾರನಂತೆ ಬರುವ ಮರಣ ದೇವ .... (2)

■ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)

ಬೇಟೆ

■ ವಸುಧೇಂದ್ರ

ಒಂದಾನೊಂದು ಕಾಲದಲ್ಲಿ ಧರ್ಮಪುರಿಯೆಂಬ ರಾಜ್ಯವನ್ನು ಪ್ರಕಾಶವೀರನೆಂಬ ರಾಜನು ಆಳುತ್ತಿದ್ದನು. ಅವನ ರಾಜ್ಯದಲ್ಲಿ ಪ್ರಜೆಗಳೆಲ್ಲರೂ ಸುಖ-ಸಮೃದ್ಧಿಯಿಂದ ಜೀವನವನ್ನು ನಡೆಸುತ್ತಿದ್ದರು.

ಧರ್ಮಪುರಿಯ ಸುತ್ತ-ಮುತ್ತ ಭಯಂಕರವಾದ ಕಾಡಿತ್ತು. ಈ ಕಾಡಿನಲ್ಲಿ ಅನೇಕ ವನ್ಯಮೃಗಗಳು ನೆಲೆಸಿದ್ದವು. ಪ್ರಕಾಶವೀರನಿಗೆ ಬೇಟೆಯೆಂದರೆ ಎಲ್ಲಿಲ್ಲದ ವ್ಯಾಮೋಹ. ತನ್ನ ರಾಜ್ಯದ ಪ್ರಜೆಗಳು ಕಾಡಿನಲ್ಲಿ ಬೇಟೆಯಾಡಿ ಯಾವುದಾದರೂ ಕಾಡು ಪ್ರಾಣಿಯನ್ನು ಕೊಂದು ತಂದು ತೋರಿಸಿದರೆ, ಅವರ ಪರಾಕ್ರಮಕ್ಕೆ ತಕ್ಕಂತೆ ಬಹುಮಾನವನ್ನು ಕೊಟ್ಟು ಸತ್ಕರಿಸುತ್ತಿದ್ದ. ಹೀಗಾಗಿ ರಾಜನನ್ನು ಮೆಚ್ಚಿಸಿ ಬಹುಮಾನ ಪಡೆಯುವ ಸಲುವಾಗಿ ಪ್ರಜೆಗಳೆಲ್ಲಾ ಮಿತಿ ಮೀರಿ ಬೇಟೆಯಾಡುತ್ತಿದ್ದರು. ಇದರಿಂದಾಗಿ ಕಾಡಿನಲ್ಲಿ ವನ್ಯ ಮೃಗಗಳ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗಲಾರಂಭಿಸಿತು.

ಹೀಗಿರುತ್ತಿರಲು ಆ ಕಾಡಿಗೆ ಅತೀ ಭಯಂಕರವಾದ ಹುಲಿಯೊಂದು ಬಂದು ನೆಲೆಸಿತು. ಬೇಟೆಗೆಂದು ಬಂದ ಪ್ರಜೆಗಳ ಮೇಲೆ ಹಾರಿ ಅವರನ್ನೇ ಕೊಲ್ಲಲಾರಂಭಿಸಿತು. ಪ್ರಜೆಗಳೆಲ್ಲಾ ಸೇರಿ ರಾಜನ ಬಳಿ ಬಂದು ತಮ್ಮ ಸಮಸ್ಯೆಯನ್ನು ಹೇಳಿಕೊಂಡರು. ಹೇಗಾದರೂ ಮಾಡಿ ಆ ಹುಲಿಯನ್ನು ಕೊಲ್ಲಬೇಕೆಂದು ಬೇಡಿಕೊಂಡರು.

ಪ್ರಕಾಶವೀರನಿಗೆ ಈ ವಿಷಯವನ್ನು ಕೇಳಿ ಆಶ್ಚರ್ಯವಾಯಿತು. ಸಾಮಾನ್ಯವಾಗಿ ಎಂತಹ ಕ್ರೂರ ಪ್ರಾಣಿಯನ್ನಾದರೂ ತನ್ನ ಪ್ರಜೆಗಳು ಬೇಟೆಯಾಡಿದ್ದಾರೆ, ಕೊಂದಿದ್ದಾರೆ. ಅಂತಹ ವೀರರನ್ನೂ ಕೊಲ್ಲಬೇಕೆಂದರೆ ಈ ಹುಲಿ ಅದೆಷ್ಟು ಬಲಶಾಲಿಯಾಗಿರಬೇಕು? ಹೇಗಾದರೂ ಸರಿ, ಈ ರಾತ್ರಿ ತಾನೇ ಸ್ವತಃ ಬೇಟೆಗೆ ಹೋಗಿ ಈ ಹುಲಿಯನ್ನು ಕೊಂದುಬರುವುದಾಗಿ ತನ್ನ ಪ್ರಜೆಗಳಿಗೆ ಆಶ್ವಾಸನೆಯನ್ನಿತ್ತ. ಪ್ರಜೆಗಳೆಲ್ಲಾ ಸಂತೋಷದಿಂದ ಮನೆಗೆ ತೆರಳಿದರು.

ಆ ರಾತ್ರಿ ರಾಜ ಪ್ರಕಾಶವೀರ ಬೇಟೆಯ ಉಡುಪನ್ನು ಧರಿಸಿ, ಬಿಲ್ಲು ಬಾಣಗಳೊಂದಿಗೆ ಕುದುರೆಯೇರಿ ಹುಲಿಯ ಬೇಟೆಗೆಂದು ಹೊರಟ. ಸಾಮಾನ್ಯವಾಗಿ ರಾತ್ರಿಯ ವೇಳೆ ನೀರು ಕುಡಿಯಲು ಹುಲಿ ನದಿಯ ಬಳಿ ಬರುವುದರಿಂದ, ನದಿಯ ಹತ್ತಿರದ ಒಂದು ಮರದ ಮೇಲೆ ಬಿಲ್ಲು ಬಾಣದೊಂದಿಗೆ ಸನ್ನದ್ಧವಾಗಿ ಕುಳಿತ. ಹುಣ್ಣಿಮೆಯ ರಾತ್ರಿಯಾದ್ದರಿಂದ ಬೆಳದಿಂಗಳು ಎಲ್ಲೆಲ್ಲೂ ಹರಡಿತ್ತು. ಈ ಬೆಳಕಿನಲ್ಲಿ ನೀರಿಗಾಗಿ ಬರುವ ಎಲ್ಲಾ ಪ್ರಾಣಿಗಳೂ ಸ್ಪಷ್ಟವಾಗಿ ಕಾಣುತ್ತಿದ್ದವು. ನಡುರಾತ್ರಿಯ ವೇಳೆಗೆ ಸರಿಯಾಗಿ ಹುಲಿಯ ಭಯಂಕರವಾದ ಆರ್ಭಟ ಕಾಡಿನಲ್ಲೆಲ್ಲಾ ಪ್ರತಿಧ್ವನಿಸಿತು. ಆ ಸದ್ದಿಗೆ ರಾಜ ಪ್ರಕಾಶವೀರನ ಎದೆ ನಡುಗಿತು. ಹಿಂದೆ ಸಾಕಷ್ಟು ಹುಲಿಯ ಬೇಟೆಯಾಡಿದ್ದರೂ, ಈ ಹುಲಿ ತುಂಬಾ ಭಯಂಕರವೇ ಇರಬೇಕೆಂದು ನಿಶ್ಚಯಿಸಿದ. ಆದರೂ ಧೈರ್ಯಗೆಡದೆ ಕಾತರದಿಂದ ಹುಲಿ ನದಿಯ ಬಳಿ ಬರುವುದನ್ನೇ ನಿರೀಕ್ಷಿಸಲಾರಂಭಿಸಿದ.

ಪಟ್ಟೆ ಪಟ್ಟೆಯ ಬೃಹದಾಕಾರದ ಹುಲಿಯೊಂದು ಬಂದೇ ಬಿಟ್ಟಿತು. ನದಿಯ ನೀರನ್ನು ಕುಡಿಯಲಾರಂಭಿಸಿತು. ರಾಜ ಪ್ರಕಾಶವೀರ ಇದೇ ಸಮಯವೆಂದು ಮನಗೊಂಡು, ಬಿಲ್ಲನ್ನು ಹೆದೆಯೇರಿಸಿ ಹುಲಿಗೆ ಸರಿಯಾಗಿ ಗುರಯಿಟ್ಟ. ಇನ್ನೇನು ಬಾಣವನ್ನು ಬಿಡಬೇಕೆಂಬ ಸಮಯದಲ್ಲಿ, ''ರಾಜ ನಿಲ್ಲು. ಅವಸರ ಪಡಬೇಡ'' ಎಂಬ ಜೋರಾದ ಧ್ವನಿ ಕೇಳಿ ಬಂತು. ರಾಜ ಈ ಮಾತನ್ನಾಡಿದವರ್‍ಯಾರೆಂದು ಸುತ್ತಮುತ್ತ ನೋಡಿದ. ''ರಾಜ ಪ್ರಕಾಶವೀರ, ಹೆದರಬೇಡ. ನಾನು ಹುಲಿರಾಯ. ಮರದಿಂದ ಕೆಳಕ್ಕಿಳಿದು ಬಾ, ನಿನ್ನೊಡನೆ ನಾನು ಮಾತನಾಡಬೇಕು'' ಎಂಬ ಮಾತು ಹುಲಿಯ ಬಾಯಿಂದ ಕೇಳಿ ಬಂತು. ಮಾತನಾಡುವ ಹುಲಿಯನ್ನು ಕಂಡು ರಾಜನಿಗೆ ತುಂಬಾ ಆಶ್ಚರ್ಯವಾಯ್ತು. ಆದರೂ ಧೈರ್ಯವಾಗಿ ಮರದಿಂದ ಕೆಳಕ್ಕಿಳಿದು ಹುಲಿಯ ಬಳಿ ಹೋದ. ಆಗ ಹುಲಿ ರಾಜನನ್ನು ಉದ್ದೇಶಿಸಿ ''ರಾಜ ಪ್ರಕಾಶವೀರ, ನನ್ನನ್ನು ನೀನು ಕೊಲ್ಲುವ ಉದ್ದೇಶವಾದರೂ ಏನು? ನಾನೇನು ನಿನಗೆ ಅಪಕಾರ ಮಾಡಿದ್ದೇನೆ?'' ಎಂದು ಕೇಳಿತು. ರಾಜ ಪ್ರಕಾಶವೀರನು ಅದಕ್ಕೆ ಉತ್ತರವಾಗಿ ''ಹುಲಿಯೇ, ನೀನು ನನ್ನ ಹಲವಾರು ಪ್ರಜೆಗಳನ್ನು ಕೊಂದಿದ್ದೀಯ. ನನ್ನ ಪ್ರಜೆಗಳು ನಿನ್ನಿಂದ ತುಂಬಾ ಭಯಗೊಂಡಿದ್ದಾರೆ. ಪ್ರಜೆಗಳನ್ನು ರಕ್ಷಿಸುವುದು ರಾಜನ ಧರ್ಮವಲ್ಲವೆ? ಅದಕ್ಕಾಗಿ ನಿನ್ನನ್ನು ಕೊಲ್ಲದೆ ನನಗೆ ಬೇರೆ ಮಾರ್ಗವೇ ಇಲ್ಲ'' ಎಂದು ಹೇಳಿದನು. ಹುಲಿಯು ನಕ್ಕು ''ರಾಜ ನೀನು ಪಾಲಿಸುತ್ತಿರುವ ಧರ್ಮವನ್ನೇ ನಾನೂ ಪಾಲಿಸಿದ್ದೇನಲ್ಲವೆ? ಅದರಲ್ಲಿ ನನ್ನದೇನು ತಪ್ಪು?'' ಎಂದಿತು. ರಾಜನಿಗೆ ಹುಲಿಯ ಮಾತು ಅರ್ಥವಾಗಲಿಲ್ಲ. ''ನಿನ್ನ ಮಾತು ನನಗೆ ಅರ್ಥವಾಗಲಿಲ್ಲ. ದಯವಿಟ್ಟು ವಿವರಿಸಿ ಹೇಳು'' ಎಂದು ಹುಲಿಯನ್ನು ಕೇಳಿಕೊಂಡನು.

''ರಾಜ ಪ್ರಕಾಶವೀರ, ನಿನ್ನ ನಾಡಿಗೆ ನೀನು ಹೇಗೆ ರಾಜನೋ ಹಾಗೇ ನಾನು ಈ ಕಾಡಿಗೆ ರಾಜ. ನಿನ್ನ ಪ್ರಜೆಗಳನ್ನು ರಕ್ಷಿಸುವುದು ಹೇಗೆ ನಿನ್ನ ಧರ್ಮವೋ ಹಾಗೇ ಈ ಕಾಡಿನ ಪ್ರಾಣಿಗಳನ್ನು ರಕ್ಷಿಸುವುದು ನನ್ನ ಧರ್ಮ. ನಿನ್ನ ಪ್ರಜೆಗಳು ಕೇವಲ ನೀನು ನೀಡುವ ಬಹುಮಾನದ ಆಸೆಗಾಗಿ ನನ್ನ ಕಾಡಿನ ಪ್ರಾಣಿಗಳನ್ನೆಲ್ಲಾ ಕೊಲ್ಲಲಾರಂಭಿಸಿದ್ದಾರೆ. ಹೀಗಿರುವಾಗ ನನ್ನ ಕಾಡಿನ ಪ್ರಾಣಿಗಳನ್ನು ಸಂಹರಿಸಲು ಬಂದ ನಿನ್ನ ಪ್ರಜೆಗಳನ್ನು ಕೊಲ್ಲುವುದು ನನ್ನ ಧರ್ಮವಲ್ಲವೆ?''

ರಾಜನಿಗೆ ಹುಲಿಯ ಮಾತನ್ನು ಕೇಳಿ ತನ್ನ ತಪ್ಪಿನ ಅರಿವಾಯಿತು. ನಾಚಿಕೆಯಿಂದ ಬಿಲ್ಲು ಬಾಣವನ್ನು ದೂರಕ್ಕೆಸೆದು ಹುಲಿಗೆ ಕೈ ಮುಗಿದು ಈ ರೀತಿಯಾಗಿ ಹೇಳಿದ -

''ಹುಲಿಯೇ ನಿನ್ನ ಮಾತಿನಿಂದ ನನ್ನ ಕಣ್ಣು ತೆರೆಯಿತು. ಇನ್ನೆಂದೂ ನನ್ನ ಪ್ರಜೆಗಳು ಕಾಡು ಪ್ರಾಣಿಗಳನ್ನು ಕೊಲ್ಲದಂತೆ ನೋಡಿಕೊಳ್ಳುತ್ತೇನೆ. ನಿನಗೆ ನನ್ನ ಧನ್ಯವಾದಗಳು. ಹುಲಿಯ ರೂಪದಲ್ಲಿ ನನಗೆ ಬುದ್ಧಿ ಕಲಿಸಿದ ನೀನು ಯಾರೋ ಮಹಾತ್ಮನೇ ಇರಬೇಕು. ದಯವಿಟ್ಟು ನೀನ್ಯಾರೆಂದು ಹೇಳು''

ಆ ತಕ್ಷಣವೇ ಹುಲಿಯು ಮಾಯವಾಗಿ, ಆ ಸ್ಥಳದಲ್ಲಿ ದೇವತೆಯೊಬ್ಬಳು ಪ್ರತ್ಯಕ್ಷಳಾದಳು.

''ರಾಜ, ಚಿಂತೆ ಮಾಡಬೇಡ. ನಾನು ವನದೇವತೆ. ನಿನ್ನ ಪ್ರಜೆಗಳು ಅನಾವಶ್ಯಕವಾಗಿ ಕಾಡು ಪ್ರಾಣಿಗಳನ್ನು ಕೊಲ್ಲುವುದನ್ನು ತಪ್ಪಿಸಲು ಈ ರೀತಿಯಾಗಿ ಹುಲಿಯ ವೇಷ ಹಾಕಬೇಕಾಯ್ತು. ಇನ್ನು ಮುಂದೆ ಈ ರೀತಿಯ ಪ್ರಾಣಿ ಹತ್ಯೆ ನಡೆಯದಂತೆ ರಾಜ್ಯವಾಳು. ನಾನು ಈ ಹಿಂದೆ ಹುಲಿಯ ವೇಷದಿಂದ ಕೊಂದ ನಿನ್ನ ಪ್ರಜೆಗಳೆಲ್ಲರೂ ತಮ್ಮ ತಮ್ಮ ಮನೆಗೆ ಈಗಾಗಲೇ ಹಿಂತಿರುಗಿದ್ದಾರೆ. ರಾಜ, ಮೇಲೇಳು, ನಿನಗೆ ಮಂಗಳವಾಗಲಿ''.

ಹೀಗೆಂದು ಹೇಳಿದ ವನದೇವತೆ ಅದೃಶ್ಯಳಾದಳು. ನಂತರ ರಾಜ ಪ್ರಕಾಶವೀರನು ತನ್ನ ರಾಜ್ಯಕ್ಕೆ ಹಿಂತಿರುಗಿ ಪ್ರಜೆಗಳ್ಯಾರೂ ಬೇಟೆಯಾಡಕೂಡದೆಂದು ಕಟ್ಟಾಜ್ಞೆ ಹೊರಡಿಸಿದ. ಮುಂದೆ ಬಹುದಿನಗಳ ಕಾಲ ಶಾಂತಿಯಿಂದ ರಾಜ್ಯವನ್ನಾಳಿದ. ■

ನೀವು ಕಥೆಗಾರರಾಗಬೇಕೆ?...............

ನಿಮಗೂ ಕಥೆಗಾರರಾಗಬೇಕೆಂಬ ಆಸೆ ಇರಬಹುದಲ್ಲವೆ? ನಿಮ್ಮಂತಹ ಚಿಗುರು ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲಿಕ್ಕಾಗಿಯೇ ಈ ಅಂಕಣ ಮೀಸಲು. ನೀವು ಮಾಡಬೇಕಾದುದಿಷ್ಟೇ; ಈ ಕೆಳಗೆ ನಾವೊಂದು ಕಥೆ ನೀಡಿದ್ದೇವೆ. ಆದರೆ ಅದು ಅಪೂರ್ಣ. ಅದನ್ನು ಪೂರ್ಣಗೊಳಿಸಬೇಕಾದವರು ನೀವೇ!

ಅಪೂರ್ಣ ಕತೆ

ಪುಟ್ಟಣ್ಣಿ ರಾವುಣ್ಣಿಯ ತಮ್ಮ. ಹೆಸರಿಗೆ ತಕ್ಕ ಪುಟ್ಟ ಆಕೃತಿ, ಸಾಲದಕ್ಕೆ ಪ್ರಚಂಡ ತುಂಟ. ರಾವುಣ್ಣಿ ಶಾಲೆಗೆ ಹೋಗುವನು. ತಂದೆ ತೀರಿಕೊಂಡ ಆ ಮುದ್ದು ಮಕ್ಕಳಿಗೆ ತಾಯಿ ಅಂಬಿಕಾಳೇ ತಂದೆಯ ಪಾತ್ರವನ್ನು ನಿಭಾಯಿಸುತ್ತಿದ್ದಳು.

ರಾವುಣ್ಣಿಗೆ ಶಾಲೆ, ತಾಯಿಗೆ ಕೆಲಸಗಳಲ್ಲಿ ನೆರವು ಅಲ್ಲದೇ ಪುಟ್ಟಣ್ಣಿಯ ತುಂಟತನಗಳ ಪಟ್ಟಿ ತಂದೊಪ್ಪಿಸುವ ನೆರೆ ಹೊರೆಯವರಿಗೆ ಸಮಾಧಾನ ಪಡಿಸುವ ಕೆಲಸವೂ ಇತ್ತು.

ಪುಟ್ಟಣ್ಣಿ ರಾವುಣ್ಣಿಗೆ ಮಾತ್ರ ಹೆದರುತ್ತಿದ್ದ; ಉಳಿದಂತೆ ಯಾರೇ ಆದರೂ 'ಕ್ಯಾರೇ' ಎನ್ನುತ್ತಿರಲಿಲ್ಲ, ಅಮ್ಮ ಅಂಬಿಕಾಳಿಗೂ ಅದೇ ಭಯ. ಶಾಲೆಗೆ ಹೋಗಲ್ಲವೆಂದ ಆಯಿತು, ಮನೆಯಲ್ಲಿ ಇರಲ್ಲವೆಂದ. ಅದಕ್ಕೂ ಮೂಕಳಾಗಿ ತಾಯಿ ಒಪ್ಪಿದಳು. ಇದಕ್ಕೆ ರಾವುಣ್ಣಿಯ ಪ್ರಭಾವವೂ ಇತ್ತು.

ಆದರೆ, ದಿನ ರಾತ್ರಿ ರಾವುಣ್ಣಿ ಓದಲು ಕುಳಿತಾಗ ಪುಟ್ಟಣ್ಣಿಯೂ ಅವನೊಂದಿಗೆ ಕುಳಿತು ತಾನು ದಿನದಲ್ಲಿ ಕಂಡ ಆಶ್ಚರ್ಯಗಳ, ತಿಳಿದ ಅನೇಕ ವಿಚಾರಗಳ ಚರ್ಚೆ ಮಾಡುತ್ತಿದ್ದ.....

ಸೂಚನೆಗಳು :

- ಹತ್ತನೆಯ ತರಗತಿಯವರೆಗಿನ ವಿದ್ಯಾರ್ಥಿಗಳು ಮಾತ್ರ ಈ ಕಥೆಯನ್ನು ಪೂರ್ಣಗೊಳಿಸಿ ಕಳುಹಿಸಲು ಅರ್ಹರು.
- ನಿಮ್ಮ ಬರವಣಿಗೆ ಅರ್ಧ ಫೂಲ್‌ಸ್ಕೇಪ್ ಹಾಳೆ ಮೀರದಿರಲಿ.
- ಆ ಹಾಳೆಯ ಹಿಂಬದಿಯಲ್ಲಿ 'ಕಿಲ ಕಿಲ ಕೂಪನ್' ಅಂಟಿಸಿರಬೇಕು.
- ಮುಂದಿನ ಸಂಚಿಕೆಯಲ್ಲಿ ಫಲಿತಾಂಶ.
- ನಿಮ್ಮ ಬರವಣಿಗೆ ನಮಗೆ ತಲುಪಲು ಅಂತಿಮ ದಿನಾಂಕ 15. 5. 1999

ಕಿಲ ಕಿಲ ಕೂಪನ್ – (ಮೇ 99)

ಹೆಸರು..

ತರಗತಿ............................ ವಯಸ್ಸು..................

ತಂದೆ..

ತಾಯಿ..

ವಿಳಾಸ..

....

....

....

ಮೂರ್ಖರಿಗೆ ಉಪದೇಶ!

ಗುಬ್ಬಿಯೊಂದು ಗಿಡದೊಳಗೆ
ಗೂಡು ಮಾಡುತ,
ಚಳಿಯಲ್ಲಿಯೂ ಬೆಚ್ಚಗಿತ್ತು
ಮರಿಗೆ ಉಣಿಸುತ

ಅದೇ ಗಿಡದಿ ಕೋತಿಯೊಂದು
ಚಳಿಯ ದಿನದಲೆ,
ಕೊಂಬೆಯಲ್ಲಿ ನಡುಗುತಿತ್ತು
ಗೂಡು ಇಲ್ಲದಲೆ.

ಕೋತಿಯನ್ನು ಕಂಡ ಗುಬ್ಬಿ
ಮರುಕಗೊಂಡಿತು,
ಅದನು ಕುರಿತು ಕರುಣೆಯಿಂದ
ಹೀಗೆ ಎಂದಿತು.

ಅತ್ತ ಇತ್ತ ಅಲೆದು, ಕದ್ದು
ಸಮಯ ಕೊಲ್ಲುವೆ,
ಇದನು ಬಿಟ್ಟು ನಿನಗೆ ಬೇರೆ
ಕೆಲಸ ಇಲ್ಲವೇ?

ಸುಖದಿ ಇರಲು ಗೂಡನೊಂದು
ರಚಿಸಬಾರದೆ?
ಚಳಿ - ಮಳೆಯಲಿ ಅದರಲಿದ್ದು
ಸುಖಿಸಬಾರದೆ?

ಇದನು ಕೇಳಿ ಕೋತಿಗಾಗ
ಕೋಪ ಬಂದಿತು,
ಜಿಗಿದು, ಗುಬ್ಬಿ ಗೂಡನೆಲ್ಲ
ಕೆಡಿಸಿ ನಿಂದಿತು!

ಕೋತಿಗೆಂದು ಬುದ್ಧಿ ಮಾತು
ಹೇಳಬಾರದು
ಮೂರ್ಖಗೆ ಉಪದೇಶವಿತ್ತು
ನೋಯಬಾರದು!

–ಗುರುರಾಜ ಬೆಣಕಲ್

ಕಳೆದ ತಿಂಗಳ ಅಪೂರ್ಣ ಕಥೆಯ ಮುಕ್ತಾಯ

◆

ಅಜ್ಜಿ ಆ ಹುಡುಗನನ್ನು ನೋಡಿ 'ಏನು ಹುಡುಕುತ್ತಿರುವೆ?' ಎಂದು ಕೇಳಿದಳು. ಆಗಲೇ ಆ ಹುಡುಗ ಅಜ್ಜಿ ಕೈಲಿದ್ದ ಉಂಗುರವನ್ನು ನೋಡಿದ್ದ. ಸ್ವಲ್ಪ ಚಿಂತೆಯಲ್ಲಿರುವಂತೆ ನಟಿಸಿ 'ಅಜ್ಜಿ ಅಪ್ಪ ಬೇಡವೆಂದರೂ ಅವರ ಉಂಗುರವನ್ನು ಹಾಕಿಕೊಂಡೆ. 'ಸ್ವಲ್ಪ ಸಡಿಲವಾಗಿದ್ದರಿಂದ ಎಲ್ಲೋ ಬಿದ್ದುಬಿಟ್ಟಿದೆ. ಅದನ್ನು ತರುವವರೆಗೂ ಮನೆಗ ಬರಬೇಡ ಎಂದಿದ್ದಾರೆ' ಎಂದು ಅಳುಕುವಂತೆ ನಟಿಸಿದ. ಆದರೆ ಅಜ್ಜಿಗೆ ಗೊತ್ತಿತ್ತು. ಆ ಹುಡುಗನಿಗೆ ತಂದೆ ಇಲ್ಲವೆಂದು ಇವನಿಗೆ ಬುದ್ಧಿ ಕಲಿಸಬೇಕೆಂದು 'ಗೌಡರಿಗೆ ಒಂದು ಉಂಗುರ ಸಿಕ್ಕಿತ್ತಂತೆ ನೋಡುಬಾ' ಎಂದು ಗೌಡರ ಹತ್ತಿರ ಕರೆದುಕೊಂಡು ಹೋದಳು. ಗೌಡರಲ್ಲಿ ಎಲ್ಲ ವಿಷಯವನ್ನು ಹೇಳಿದಳು. ಆ ಉಂಗುರ ಗೌಡರದ್ದೇ ಆಗಿತ್ತು. ಅವರು ಅಜ್ಜಿಯ ಜಾಣ್ಮೆಯನ್ನು ಮೆಚ್ಚಿ ಆ ಉಂಗುರವನ್ನು ಅವಳಿಗೆ ಕೊಟ್ಟರು. ಹುಡುಗನಿಗೆ 'ಇನ್ನೊಮ್ಮೆ ಸುಳ್ಳು ಹೇಳಬೇಡ' ಎಂದು ಎಚ್ಚರಿಸಿ ಬಿಟ್ಟುಬಿಟ್ಟರು. ಸಾಬಿಯ ಈ ಕಥೆ ಕೇಳಿ ಮಕ್ಕಳಿಗೆ ತುಂಬಾ ಆನಂದವಾಯಿತು.

-ಶ್ವೇತಾ ಸು.ಪಾಟೀಲ, ಬೆಳಗಾವಿ.

◆

ಆ ಹುಡುಗ ಅಜ್ಜಿಯನ್ನು ಸಮೀಪಿಸಿ ''ಅಜ್ಜಿ ಈ ದಾರಿಯಲ್ಲಿ ನನ್ನ ಉಂಗುರ ಕಳೆದಿದೆ'' ಎಂದು ಅತ್ತನು. ಅವನ ಕಣ್ಣೀರು ನೋಡಿ ನಿಂಗವ್ವ ಕೂಡಲೇ ತನ್ನ ಸೆರಗಿನಲ್ಲಿ ಕಟ್ಟಿದ್ದ ಉಂಗುರವನ್ನು ಅವನ ಕೈಗೆ ಕೊಟ್ಟಳು. ಆ ಮುದ್ದಾದ ಹುಡುಗನಿಗೆ ಬಹಳ ಖುಷಿಯಾಯ್ತು. ನಂತರ ಅಜ್ಜಿಯನ್ನು ಕರೆದುಕೊಂಡು ತಮ್ಮ ಮನೆಗೆ ಹೋಗಿ, ಅವನು ನಡೆದ ಸಂಗತಿಯನ್ನು ತಿಳಿಸಿದನು. ಮನೆಯ ಹಿರಿಯರು ಬಡ ಮುದುಕಿಯನ್ನು ನೋಡಿ ಕನಿಕರ ಪಟ್ಟು ಅವಳಿಗೆ ಸೀರೆ, ರವಿಕೆ, ಸ್ವಲ್ಪ ಖರ್ಚಿಗೆ ಹಣ ಕೊಟ್ಟು ಹೊಟ್ಟೆ ತುಂಬಾ ಊಟ ಮಾಡಿಸಿದರು. ನಿಂಗವ್ವಜ್ಜಿ ಸ್ವಲ್ಪ ಹೊತ್ತಿನ ನಂತರ ಗೌಡರಿಗೆ ಧನ್ಯವಾದಗಳನ್ನು ಹೇಳಿ ತನ್ನ ಗುಡಿಸಲಿಗೆ ಹೋದಳು ಎಂದು ಹುಸೇನ ಸಾಬಿ ಮಕ್ಕಳಿಗೆ ಹೇಳುವ ಕಥೆಯನ್ನು ಮುಕ್ತಾಯಗೊಳಿಸಿದನು.

- ಬಾವಾಸಾಬ ರಾ.ವಂಟಿ, ಹುನಗುಂದ.

◆

ಹುಡುಗನನ್ನು ನಿಂಗಜ್ಜಿಯು ಏನೆಂದು ವಿಚಾರಿಸುತ್ತಾಳೆ. ಅವನು ಅಳುತ್ತಾ ಸಣ್ಣ ಧ್ವನಿಯಲ್ಲಿ 'ನನ್ನ ಹುಟ್ಟು ಹಬ್ಬದಲ್ಲಿ ನನ್ನ ಅಜ್ಜ ಉಡುಗೊರೆಯಾಗಿ ಉಂಗುರವೊಂದನ್ನು ನೀಡಿದನು. ಅದು ಅದು... ನಿನ್ನೆ ನನ್ನ ಗೆಳೆಯರ ಜೊತೆಯಲ್ಲಿ ಆಡುವಾಗ ಕಳೆದು ಹೋಗಿದೆ. ಆದರಿಂದ 'ನನ್ನ ಮನೆಯಲ್ಲಿ ಅದನ್ನು ತರದೆ 'ಒಳಗೆ ಬರಬೇಡ ಎಂದು ತಂದೆ ಹೇಳಿದ್ದಾರೆ' ಎಂದು ಅಳಹತ್ತಿದನು. ಆಗ ನಿಂಗಜ್ಜಿ ಆತನನ್ನು ಸಮಾಧಾನಪಡಿಸಿ ತನಗೆ ಸಿಕ್ಕ ಉಂಗುರವನ್ನು ಅವನ ಕೈಗೆ ಇಡುತ್ತಾ ಮಗು ಹೀಗೆ ಬೆಲೆ ಬಾಳುವ ವಸ್ತುವನ್ನು ಹಾಕಿಕೊಂಡು ಆಡಲು ಹೋಗಬಾರದು ಎಂದು ಹೇಳುತ್ತಾಳೆ, ಆಗ ಹುಡುಗನು 'ಹೂ! ಎನ್ನುತಾ ಅಜ್ಜಿಗೆ ನಮಸ್ಕರಿಸಿ ಮನೆಗೆ ಓಡುತ್ತಾನೆ.

- ಈರಪ್ಪ ಬಸಪ್ಪ ಹಳಕಟ್ಟಿ, ಧಾರವಾಡ.

◆

ಅಜ್ಜಿಯನ್ನು ನೋಡಿ ತುಂಟ ಹುಡುಗ ಹೀಗೆಂದು ಕೇಳಿದ - 'ಅಜ್ಜಿ ನಿನಗೆ ಒಂದು ಹೊಳೆಯುವ ಉಂಗುರ ಸಿಕ್ಕಿತಾ?'. ಕೂಡಲೇ ಆ ಅಜ್ಜಿಯು ತನಗೆ ಸಿಕ್ಕ ಉಂಗುರವನ್ನು ಆತನಿಗೆ ಕೊಟ್ಟಳು. ಹೊಳೆಯುವ ಉಂಗುರವನ್ನು ಮರಳಿ ಪಡೆದ ತುಂಟ ಬಾಲಕನು ಅಜ್ಜಿಯ ಗುಣಕ್ಕೆ ಮೆಚ್ಚಿ ಅವಳನ್ನು ತನ್ನ ತಂದೆಯ ಬಳಿ ಕರೆದೊಯ್ದು ಸೂಕ್ತ ಬಹುಮಾನವನ್ನು ಕೊಡಿಸಿದನು. ಸಾಬಿಯ ಈ ಕಥೆ ಮಕ್ಕಳಿಗೆ ಪ್ರಾಮಾಣಿಕತೆಯ ಪಾಠ ಹೇಳಿತು.

- ಸಂಗಮೇಶ ನಂದವಾಡಗಿ, ಹುನಗುಂದ.

◆

ಆ ಹುಡುಗನ ಮುಖದಲ್ಲಿ ಏನೋ ದುಃಖವನ್ನು ಕಂಡ ಅಜ್ಜಿಯು, ''ಮಗು, ನೀನು ಏಕೆ ದುಃಖದಿಂದ ಕೂಡಿದ್ದಿಯಾ?'' ಎಂದು ಕೇಳಿದಳು. ಹುಡುಗನು ''ಅಜ್ಜಿ ನನ್ನ ಉಂಗುರವು ಇದೇ ದಾರಿಯಲ್ಲಿ ಕಳೆದುಹೋಗಿದೆ, ಅದನ್ನು ಹುಡುಕಿಕೊಂಡು ಬಂದಿದ್ದೇನೆ'' ಎಂದು ಹೇಳಿದನು. ಅಜ್ಜಿಯು ಪ್ರೀತಿಯಿಂದ ''ಮಗುವೇ ಅಳಬೇಡ, ಇಗೋ ನಿನ್ನ ಉಂಗುರ'' ಎಂದು ಉಂಗುರ ಕೊಡುವಳು. ಹುಡುಗ ಕೃತಜ್ಞತೆಯಿಂದ ಆಕೆಗೆ ತನ್ನ ತಂದೆಯಿಂದ ಹಣದ ಸಹಾಯವನ್ನು ಮಾಡಿ ಒಂದು ಮನೆ ಆಶ್ರಯವನ್ನು ಕೊಟ್ಟನು.

- ಅನೂಪ ಮಾನೆ, ಬೆಂಗಳೂರು.

◆

'ಏನೋ ಹುಡುಗ ಹುಡುಕುತ್ತಾ ಇದ್ದೀಯ' ಎಂದು ಪ್ರಶ್ನಿಸುತ್ತಾಳೆ ಅಜ್ಜಿ. ಆ ಹುಡುಗ 'ಏನೂ ಇಲ್ಲ, ಇಲ್ಲೇ ಸೀನಪ್ಪನ ಅಟ್ಟಿ ಅತ್ರ ಒಂದು ಉಂಗುರ ಕಳೆದು ಹೋಗಿದೆ. ಹುಡುಕುತ್ತಾ ಇದ್ದೇನೆ' ಎಂದ ಹುಡುಗ. 'ಇದೇನು ನಿನ್ನ ಉಂಗುರ' ಎಂದು ತೆಗೆದು ತೋರಿಸಿದಳು ಅಜ್ಜಿ. 'ಹೌದು' ಎನ್ನುತ್ತಾನೆ' ಹುಡುಗ. ಉಂಗುರವನ್ನು ಹುಡುಗನಿಗೆ ಕೊಟ್ಟು ತನ್ನ ಮನೆಯ ಕಡೆಗೆ ಹೋಗುತ್ತಾಳೆ ಅಜ್ಜಿ. 'ಪರರ ವಸ್ತು ನಮ್ಮ ಸ್ವತ್ತಲ್ಲ' ಇದೇ ಈ ಕತೆಯ ನೀತಿ ಎಂದು ಹುಸೇನ ಮಕ್ಕಳಿಗೆ ತಿಳಿ ಹೇಳಿದ.

- ದ್ರಾಕ್ಷಾಯಿಣಿ, ಕೊಪ್ಪಳ.

◆

ನಿಂಗವ್ವ ಎಂಬ ಮುದುಕಿಯು, ಆ ಹುಡುಗ ದಾರಿಯನ್ನೇ ನೋಡುತ್ತಾ ಬರುತ್ತಿದ್ದುದ್ದನ್ನು ಕಂಡು ಆ ಹುಡುಗನನ್ನು 'ಮಗು ಈ ಉಂಗುರ ನಿನ್ನದೇ' ಎಂದು ಕೇಳಿದಳು. ಆ ಹುಡುಗ 'ಅಮ್ಮಾ ಈ ಉಂಗುರ ನನ್ನದಲ್ಲ' ಎಂದನು. 'ಮತ್ತೇಕೆ ನೀನು ದಾರಿಯನ್ನೇ ನೋಡುತ್ತಾ ಹೊರಟಿರುವೆ' ಎಂದು ಅಜ್ಜಿ ಕೇಳಿದಳು. ಹುಡುಗ ಅಳುತ್ತಾ 'ನನ್ನ ತಾಯಿಗೆ ಆರೋಗ್ಯ ಸರಿಯಿಲ್ಲ ಆಸ್ಪತ್ರೆಗೆ ಕರೆದುಕೊಂಡು ಹೋಗೋಣ ಎಂದರೆ, ನನ್ನಲ್ಲಿ ಹಣ ಇಲ್ಲ ಅದಕ್ಕೇ ತಲೆ ತಗ್ಗಿಸಿ ಯೋಚಿಸುತ್ತಿರುವೆ' ಎಂದನು. ಕನಿಕರಗೊಂಡ ಮುದುಕಿ ಹುಡುಗನಿಗೆ ಉಂಗುರ ಕೊಟ್ಟು ಕಳುಹಿಸಿದಳು.

- ಮಲ್ಲಮ್ಮ ಶಿ.ಹಾವೇರಿ, ಹಾವೇರಿ.

◆

ಹುಡುಗನು ಅಜ್ಜಿಯ ಕೈಯಲ್ಲಿರುವ ಉಂಗುರವನ್ನು ನೋಡಿ 'ಇದು ನಿನ್ನ ಉಂಗುರವೇ' ಎಂದು ಕೇಳಿದನು. ಅಜ್ಜಿಯು 'ಇಲ್ಲ, ಇದು ನನಗೆ ದಾರಿಯಲ್ಲಿ ಬರುವಾಗ ಸಿಕ್ಕಿದೆ' ಎಂದಳು. ಬೇರೆಯವರಾಗಿದ್ದರೆ ನನ್ನ ಉಂಗುರವೆಂದು ವಾದಿಸುತ್ತಿದ್ದರು. ಹುಡುಗನು ನನ್ನ ಉಂಗುರ ಕಳೆದಿದೆ. ಇದೇ ನನ್ನ ಉಂಗುರ ಎಂದು ಹೇಳಲು ಅಜ್ಜಿ ತಕ್ಷಣ ತೆಗೆದು ಹುಡುಗನ ಕೈಗಿತ್ತಳು. ಅಜ್ಜಿಯ ಪ್ರಾಮಾಣಿಕತೆ ಮೆಚ್ಚಿ ಹುಡುಗ ಉಂಗುರವನ್ನು ಅಜ್ಜಿಗೇ ನೀಡಿ ಹೊರಟು ಹೋದನು.

- ಎ.ವಿನಯ್, ಶಿವಮೊಗ್ಗ.

ಪ್ಯಾಲೇಸ್ ಗ್ರೌಂಡ್‌ನಲ್ಲಿ 'ದುರ್ಗಾಶಕ್ತಿ' ಚಿತ್ರದ ಕ್ಲೈಮ್ಯಾಕ್ಸ್ ಶೂಟಿಂಗ್. 10 ನಿಮಿಷದ ಹಾಡಿಗೆ ಶ್ರುತಿ ಡ್ಯಾನ್ಸ್. ದುರ್ಗಾದೇವಿಯ ವೇಷದಲ್ಲಿದ್ದ ಶ್ರುತಿಗೆ ಕುಣಿತದ ಮಧ್ಯದಲ್ಲಿ ದೇವರು ಮೈಮೇಲೆ ಬಂದ ಅನುಭವವಾಯಿತಂತೆ. ನೋಡಿದವರಿಗೂ ಶ್ರುತಿ ಯಾಕೆ ಹಿಂಗಾಡ್ತಿದ್ದಾರೆ ಅಂತನಿಸಿತಂತೆ. ಇದಾದ ಬಳಿಕ ಚೆನ್ನೈನಿಂದ ಬಂದ 5 ಜ್ಯೂನಿಯರ್ ನರ್ತಕಿಯರು ಕುಣಿಯೋದಕ್ಕೆ ಶುರು ಮಾಡಿದರು. ನಿರ್ದೇಶಕರು ಕಟ್ ಹೇಳಿದ ನಂತರವೂ ಇವರ ಡ್ಯಾನ್ಸ್ ನಿಲ್ಲದೇ ಇಡೀ ಚಿತ್ರತಂಡ ಅಚ್ಚರಿ-ಗಾಬರಿಗಳಿಂದ ನೋಡುತ್ತಿದ್ದಂತೆ ನಿರ್ಮಾಪಕರಿಗೆ ಇದೆಲ್ಲಾ ದೇವಿಚೇಷ್ಟೆಯೇ ಎನ್ನುವುದು ಖಚಿತವಾಯಿತು. ಪುರೋಹಿತರನ್ನು ಕರೆಸಿ ಪೂಜೆ ಮಾಡಿದರು. ಕುರಿ ಕಡಿದರು. ಇಷ್ಟೆಲ್ಲಾ ಸೇವೆ ನಡೆದ ನಂತರ ದೇವಿ ಪ್ರಸನ್ನಳಾಗಿರಬೇಕು. ನರ್ತಕಿಯರು ಸುಸ್ತಾಗಿ ನೆಲಹಿಡಿದರು.

ಚಿತ್ರೀಕರಣ ನೋಡ್ತೋದಕ್ಕೆ ಬಂದಿದ್ದ ಜನರ ಸಂಭ್ರಮ ಹೇಳತೀರದು. ಎಲ್ಲರೂ ದೇವಿಗೆ ಪೂಜೆ ಮಾಡಿದರು.

ಜನ ಮರುಳೋ ಜಾತ್ರೆ ಮರುಳೋ ಎಂಬ ಗಾದೆ ನೆನಪಾಗುವುದು ಇಂಥ ಸಂದರ್ಭದಲ್ಲೇ.



ಸಿನಿಮಾದವರ ಗಿಲೀಟಿಗೆ ಬೆರಗಾಗುವ ಮುಗ್ಧ ಜನರಿಗೇನೋ ಕ್ಷಮೆಯಿದೆ. ಆದರೆ ಹವ್ಯಾಸಿ ರಂಗಭೂಮಿಯಿಂದ ಸಿನಿಮಾಗೆ ಬಂದ ಬುದ್ಧಿಜೀವಿ ನಟ ದೇವರಾಜ್, ಕೂಡಾ ಇದು ಶುಭಸೂಚನೆ ಅಂತ ಘೋಷಿಸಿದನ್ನು ಕೇಳಿದಾಗ ನಗಬೇಕೋ ಅಳಬೇಕೋ ನೀವೇ ಹೇಳಿ.

ಶ್ರುತಿ ಕೂಡಾ ಅನಂತರ ತಮ್ಮ ಮೈಯೊಳಗೆ ಏನೋ ಶಕ್ತಿ ಸಂಚರಿಸಿದಂತಾಯಿತು ಅಂತ ಒಪ್ಪಿಕೊಂಡರಂತೆ. ಅದೃಷ್ಟವಶಾತ್ ಅವರ ಪತಿ ಸ್ಥಳದಲ್ಲಿರಲಿಲ್ಲ. ತಮಾಷೆಯೆಂದರೆ 'ದುರ್ಗಾಶಕ್ತಿ' ಚಿತ್ರ ತೆಲುಗಿನ ಅಮ್ಮೋರು ಚಿತ್ರದ ರೀಮೇಕ್, ಆ ಚಿತ್ರದ ಶೂಟಿಂಗ್‌ನಲ್ಲೂ ಇಂಥ ಪವಾಡ ನಡೆದಿತ್ತು.

ಪ್ರಾಣಿಗಳು ಹಾಗೂ ದೇವತೆಗಳಿಗೆ ಸಂಬಂಧಿಸಿದ ಯಾವುದೇ ಕಥೆ ಪವಾಡಗಳನ್ನು ಜನ ನಂಬ್ತಾರೆ, ನಂಬದೇ ಇರುವವರು ಕುತೂಹಲಕ್ಕಾದರೂ ಇಂಥ ಕಥೆ ಹೇಳ್ತಾರೆ. ಅದಕ್ಕೇ ಇಂಥ ಭಕ್ತಿಪ್ರಧಾನ ಚಿತ್ರಗಳಿಗೆ ಬಿ.ಸಿ. ಸೆಂಟರ್‌ಗಳಲ್ಲಿ ವಿಪರೀತ ಬೇಡಿಕೆಯಿರುತ್ತೆ. ಶೂಟಿಂಗ್ ಜಾಗಕ್ಕೆ ಹಾವುಗಳು ಭೇಟಿ ನೀಡಿದ್ದವು ಅಂತ ನಿರ್ಮಾಪಕ ರೀಲು ಬಿಡ್ತಾನೆ. ಪುಂಗಿಯ ನಾದಕ್ಕೆ ಮರುಳಾಗಿ ಹತ್ತು ಹಾವುಗಳು ಥಿಯೇಟರ್ ಒಳಗೇ ಬಂದಿದ್ದವು ಎನ್ನುವ ಕಥೆಯನ್ನೂ ಪ್ರಚಾರ ಮಾಡ್ತಾನೆ. ಹಾವು ಪುಂಗಿಯ ನ್ನಾಲಿಸುವುದಿಲ್ಲ, ಹಾಲು ಕುಡಿಯುವುದಿಲ್ಲ ಎಂಬ ವೈಜ್ಞಾನಿಕ ಸತ್ಯಗಳ ಬಗ್ಗೆ ಯಾರೂ ಕೇರೇ ಮಾಡೋಲ್ಲ.

ಇದೀಗ ದುರ್ಗಾಶಕ್ತಿ ನಿರ್ಮಾಪಕ ಪ್ರಸಾದ್ ಮಾಡ್ತಾ ಇರೋದು ಇಂಥ ಕೆಲಸವನ್ನೇ. ಅರಮನೆ ಆವರಣದಲ್ಲಿ ಹಾಕಲಾಗಿರುವ ದುರ್ಗಾದೇವಾಲಯದ ಸೆಟ್ಟನ್ನು ಹಾಗೇ ಉಳಿಸುವ ಯೋಚನೆಯಲ್ಲಿ ಪ್ರಸಾದ್ ಇದ್ದಾರೆ. ಅದಕ್ಕೆ ಸರ್ಕಾರ ಅನುಮತಿ ನೀಡುವ ಸಾಧ್ಯತೆಯಿದೆಯೇ ಎಂಬ ಬಗ್ಗೆ ಅವರು ಯೋಚಿಸಿದಂತಿಲ್ಲ. ಬೆಂಗಳೂರಲ್ಲಿ ಈಗಾಗಲೇ ಹಲವಾರು ಆಟದ ಮೈದಾನಗಳು ದೇವರ ಆಡೊಂಬಲವಾಗಿರುವುದರಿಂದ ಇದೇನು ಮಹಾ ಅಂತ ಅವರ ಲೆಕ್ಕಾಚಾರವಾಗಿರಬಹುದು.

ನಮ್ಮ ನಟರೂ ಇಂಥ ಗಿಮಿಕ್‌ಗಳನ್ನು ಮಾಡುವುದರಲ್ಲಿ ನಿಷ್ಣಾತರು. ಪೌರಾಣಿಕ ಚಿತ್ರದಲ್ಲಿ ದೇವರ ಪಾರ್ಟ್ ಮಾಡುವ ನಟ ವಾರಗಟ್ಟಲೆ ಮಧು ಮಾಂಸಕ್ಕೆ ವಿದಾಯ ಹೇಳುತ್ತಾನೆ. ಅಯ್ಯಪ್ಪ ಸ್ವಾಮಿ ದರ್ಶನಕ್ಕೆ ಹೋಗುವ ಭಕ್ತಾದಿಗಳು ಇದನ್ನೇ ಮಾಡುತ್ತಾರೆ. ಆದರೆ ಕೆಲಸ ಮುಗಿದಾಕ್ಷಣ ಮತ್ತೆ ತಮ್ಮ

ಮಾಮೂಲು ಪ್ರವೃತ್ತಿಗೆ ವಾಪಸಾಗುತ್ತಾರೆ.

ಇತ್ತೀಚೆಗೆ ಅಬ್ಬಯ್ಯ ನಾಯ್ಡು ಸ್ಟುಡಿಯೋದಲ್ಲಿ 'ಪಟೇಲ' ಚಿತ್ರದ ಮುಹೂರ್ತ ನಡೆದಾಗ, ನಾಯಕ ಜಗ್ಗೇಶ್ ತಮ್ಮ ಖರ್ಚಿನಲ್ಲೇ ಹೋಮ ಹವನದ ವ್ಯವಸ್ಥೆ ಮಾಡಿದ್ದರು. ಪುರೋಹಿತರಿಗೆ ಖುಷಿಯೋ ಖುಷಿ. ಈ ಖುಷಿಯಲ್ಲೇ ಒಂದು ಕಥೆ ಹೇಳಿದರು. ಹಿಂದಿನ ರಾತ್ರಿ ದೇವರು ಅವರ ಕನಸಲ್ಲಿ ಬಂದು ಜಗ್ಗೇಶ್ ಸಂಕಲ್ಪವನ್ನು ಪೂರೈಸುವಂತೆ ಅಪ್ಪಣೆ ಮಾಡಿದ್ದನಂತೆ. ಮರುದಿನ ಜಗ್ಗೇಶ್‌ರಿಂದ ಕರೆ ಬಂತು.

ಇಂದಿಗೂ ಜಗ್ಗೇಶ್ ಬೆಳಗಿನ ಪೂಜೆ ಮುಗಿಸಿಯೇ ಶೂಟಿಂಗ್‌ಗೆ ಹೋಗೋದು. ಮುಂಜಾನೆ 7ಕ್ಕೆ ಯಾರಾದರೂ ನಿರ್ದೇಶಕ ಶೂಟಿಂಗ್ ಇಟ್ಟುಕೊಂಡರೆ ಅವರ ಗತಿ ಗೋವಿಂದ. ಇದೇ ಜಗ್ಗೇಶ್ ತಮ್ಮ ಗೃಹಪ್ರವೇಶದ ದಿನ ಇನ್ನೊಂದು ಕಥೆ ಹೇಳಿದ್ದರು. ಈ ಶುಭಸಮಾರಂಭಕ್ಕೆ ಮಂತ್ರಾಲಯದ ಸ್ವಾಮೀಜಿ ಬಂದು ಪೂಜೆ ನಡೆಸಿದರೆ ಚೆನ್ನಾಗಿರುತ್ತೆ ಅಂತ ಜಗ್ಗೇಶ್‌ಗೆ ಅನಿಸಿತ್ತಂತೆ. ಆಮಂತ್ರಣ ನೀಡೋದಕ್ಕೆ ಇವರೇ ಮಂತ್ರಾಲಯಕ್ಕೆ ಹೋಗಿದ್ದರೂ ಸ್ವಾಮಿಗಳ ಭೇಟಿಯಾಗಿರಲಿಲ್ಲ. ಅವರು ಬೆಂಗಳೂರಿಗೆ ಬರೋದಕ್ಕೆ ಸಾಧ್ಯವೇ ಇಲ್ಲ ಅಂತ ಶಿಷ್ಯಂದಿರು ಹೇಳಿದ್ದರು. ಆದರೆ ಗೃಹಪ್ರವೇಶದ ದಿನ ಜಗ್ಗೇಶ್‌ಗೆ ಅಚ್ಚರಿ ಕಾದಿತ್ತು. ಸ್ವಾಮೀಜಿ ಬೆಂಗಳೂರಿಗೆ ಬಂದು ಇವರ ಮನೆಗೆ ಫೋನ್ ಮಾಡಿದ್ದರು. ಅವರಿಗೆ ರಾಘವೇಂದ್ರ ಸ್ವಾಮಿಗಳೇ ರಾತ್ರಿ ಕನಸಲ್ಲಿ ಬಂದು ಜಗ್ಗೇಶ್ ಮನೆಗೆ ಹೋಗು ಅಂತ ಸೂಚಿಸಿದ್ದರಂತೆ.

ಸಾಯಿಪ್ರಕಾಶ್ ಎಂಬ ಭಯಂಕರ ನಿರ್ದೇಶಕರಿಗೆ ಒಂದು ವಿಚಿತ್ರ ಚಟವಿತ್ತು. ತಮ್ಮ ಚಿತ್ರದ ಪ್ರಿಂಟ್‌ಗಳನ್ನು ಪುಟ್ಟಪರ್ತಿಗೆ ಕೊಂಡೊಯ್ದು, ಬಾಬಾ ಆಶೀರ್ವಾದ ಪಡೆದು ಬರೋದು. ಅವರದೇ ಸ್ವಂತ ನಿರ್ಮಾಣದ ಚಿತ್ರವೊಂದು ಇದೇ ರೀತಿ ಪುಟ್ಟಪರ್ತಿಗೆ ಪಾರ್ಸೆಲ್ ಆದಾಗ, ಸಾಯಿಬಾಬಾ ಅದನ್ನು ಸ್ಪರ್ಶಿಸಿ, ಸ್ಥಳದಲ್ಲೇ ವಾಚೊಂದನ್ನು ಸೃಷ್ಟಿಸಿ ಈ ಸಾಯಿಗೆ ನೀಡಿದರಂತೆ. ಅನಂತರ ಗಲ್ಲಾಪೆಟ್ಟಿಗೆಯಲ್ಲಿ ಆ ಚಿತ್ರ ನೆಲಕಚ್ಚಿತು. ಮುಂದೊಂದು ದಿನ ಸಾಯಿಪ್ರಕಾಶ್ ಅವರೇ ಶಿರಡಿ ಸಾಯಿಬಾಬಾನ ವೇಷದಲ್ಲಿ ನಟಿಸಿ, ಜನರನ್ನು ರಂಜಿಸಿದರು.

ಸಾರ್ವಜನಿಕವಾಗಿ ಗುಡ್ಡು ಹಾಕುವ ನಟನನ್ನು ಪ್ರೇಕ್ಷಕರು ಮೆಚ್ಚುವುದಿಲ್ಲ ಎಂಬ ಸಂಗತಿ ಎಲ್ಲರಿಗೂ ಗೊತ್ತು. ಅದೇ ಕಾರಣಕ್ಕೆ ನಮ್ಮ ನಾಯಕ ನಟರು ಪರಮ ಆಸ್ತಿಕರ ಪೋಸ್ ಕೊಡುತ್ತಾರೆ. ಅಷ್ಟೇಕೆ, ನಮ್ಮ ಸಿನಿಮಾಗಳ ಡಾಕ್ಟರ್ ಕೂಡಾ, ಸಾಯುತ್ತಿರುವ ರೋಗಿಗೆ ಚಿಕಿತ್ಸೆ ನೀಡುವ ಬದಲಾಗಿ ದೇವರ ಮೇಲೇ ಭಾರ ಹಾಕುತ್ತಾರೆ.

ಜೀವನದಿ ಚಿತ್ರಕ್ಕೆ ತಿರುಪತಿಯಲ್ಲಿ ಚಿತ್ರೀಕರಣ ನಡೆಸೋಡಕ್ಕೆ ಅನುಮತಿ ಸಿಗದೆ ಇದ್ದಾಗ ನಿರ್ಮಾಪಕರು ಕಂಠೀರವ ಸ್ಟುಡಿಯೋದಲ್ಲಿ ತಿರುಪತಿ ಸೆಟ್ಟನ್ನು ನಿರ್ಮಿಸಿದ್ದರು. ಭಕ್ತರೆಲ್ಲಾ ಅಲ್ಲಿಗೆ ಹೋಗಿ ಪೂಜೆ ಸಲ್ಲಿಸಿದ್ದರು. ಇಂದಿಗೂ ಕನ್ನಡ ನಿರ್ಮಾಪಕರಲ್ಲಿ ಹೆಚ್ಚಿನವರು ತಿರುಪತಿ ಭಕ್ತರೇ. ಚಿತ್ರ ಶುರುವಾಗುವಾಗ ಮತ್ತು ಚಿತ್ರ ಮುಗಿದ ನಂತರ ತಿರುಪತಿಗೆ ಭೇಟಿ ಕೊಡದೇ ಇದ್ದಲ್ಲಿ ಅವರಿಗೆ ನಿದ್ದೆಯಿಲ್ಲ. ಕೆಲವರು ಚಿತ್ರಕಥೆಯ ಫೈಲನ್ನೇ ದೇವರ ಮುಂದಿಟ್ಟು ಪೂಜೆ ಮಾಡುತ್ತಾರೆ. ಮುಹೂರ್ತದ ದೃಶ್ಯವನ್ನು ದೇವರ ಫೋಟೋ ಮುಂದೆ ಚಿತ್ರೀಕರಿಸುವುದಂತೂ ಮಾಮೂಲು. ಸುನಿಲ್‌ಕುಮಾರ್ ದೇಸಾಯಿಯಂಥ ಕ್ರಾಂತಿಕಾರಿಗಳೂ ಅಪರೂಪಕ್ಕೆ ಇಂಥ ಸಂಪ್ರದಾಯವನ್ನು ಮುರಿಯುತ್ತಾರೆ.

ಇದು ಅವರ ವೈಯಕ್ತಿಕ ವಿಚಾರ ಎಂದು ಸುಮ್ಮನಿರಬಹುದು. ಆದರೆ ಚಿತ್ರೀಕರಣದ ಸಂದರ್ಭದಲ್ಲಿ ದೇವರು ಪ್ರತ್ಯಕ್ಷನಾದ ಅಂತ ಬುರುಡೆ ಬಿಟ್ಟು ಜನರನ್ನು ಮೋಸ ಮಾಡುವುದಕ್ಕೆ ಕ್ಷಮೆಯಿಲ್ಲ. 'ನಾ ನಿನ್ನ ಬಿಡಲಾರೆ' ಚಿತ್ರ ಬಿಡುಗಡೆಯಾದ ಥಿಯೇಟರ್‌ಗಳ ಹೊರಗೆ ದೇವರ ಫೋಟೋ ಇಟ್ಟು ಪ್ರಸಾದ ಹಂಚಿದ್ದು ನಿಮಗೆ ನೆನಪಿರಬಹುದು. ಇಂಥವರನ್ನು ಆ ಭಗವಂತನೇ ಕ್ಷಮಿಸಲಿ. ■



ಮಹೇಂದರ್ ಪ್ರಣಯರಾಗ

ಮಹೇಂದರ್ - ಶ್ರುತಿ 'ಪ್ರೇಮಾಚಾರಿ' ಚಿತ್ರದ ಸೆಟ್‌ನಲ್ಲಿ ರೊಮಾನ್ಸ್ ಮಾಡ್ತಾ ಇದ್ದರಂತೆ.

ಈ ಸುದ್ದಿ ಒಂದು ವರ್ಷದ ಹಿಂದೆ ಪ್ರಕಟವಾಗಿದ್ದರೆ, ಕುತೂಹಲಿಗಳ ಹುಬ್ಬೇರುತ್ತಿತ್ತು. ಈಗ ಮದುವೆಯಾಯ್ತಲ್ಲಾ ಸ್ವಾಮಿ, ಇನ್ನೆಂಥ ರೊಮಾನ್ಸ್ ಅಂತ ಮೂಗುಮುರಿಯಬಹುದು. ಆದರೆ ಜಗತ್ತಿನ ಮಾತಿಗೆ ಕಿವಿಗೊಡುವವರಲ್ಲ ಈ ನಿತ್ಯಪ್ರೇಮಿಗಳು. 'ಪ್ರೇಮಾಚಾರಿ' ಚಿತ್ರದ ಸೆಟ್‌ನಲ್ಲಿ ಚಿತ್ರ ನಾಯಕನಿಗಿಂತ ಒಂದು ಪಟ್ಟು ಪ್ರೇಮಾಚಾರದಲ್ಲಿ ನಿರತರಾಗಿದ್ದರಂತೆ ಮಹೇಂದರ್.

ಮಹೇಂದರ್ - ಶ್ರುತಿ ಚೇಷ್ಟೆ ಬರೀ ಇಷ್ಟಕ್ಕೇ ಸೀಮಿತವಾಗಿದ್ದರೆ ಪರವಾಗಿರಲಿಲ್ಲ. ನಿರ್ದೇಶಕ ಮಹೇಂದರ್ ಪರವಾಗಿ ಶ್ರುತಿಯೇ ನಿರ್ದೇಶನಕ್ಕೆ ಇಳಿದುಬಿಡೋದೇ. ನಿರ್ಮಾಪಕ ಪಾಟೀಲ್ ಸಾಹೇಬ್ರ ಗತಿ ಏನಾಗಬೇಕು ಹೇಳಿ. ಛಾಯಾಗ್ರಾಹಕ ರಮೇಶ್‌ಬಾಬು ಅವರಂತೂ ಮನಸ್ಸಿಲ್ಲದ ಮನಸ್ಸಿನಿಂದಲೇ ಶ್ರುತಿ ಆಜ್ಞೆಯನ್ನು ಪಾಲಿಸುತ್ತಿದ್ದರಂತೆ. ಈ ಎಲ್ಲಾ ಕಥೆಗಳು ರಂಗುರಂಗಾಗಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದಂತೆ ಮಹೇಂದರ್ ಸಿಡಿಮಿಡಿಗೊಂಡರಂತೆ. ಗಂಡಹೆಂಡತಿ ಚೆನ್ನಾಗಿರೋದು ತಪ್ಪಾ? ಎಂದು ಪ್ರಶ್ನಿಸಿದರಂತೆ.

ತಪ್ಪೇನಲ್ಲ. ಆದರೆ ಗಂಡ ಹೆಂಡಿರ ಪ್ರೀತಿ ಸಾರ್ವಜನಿಕ ಪ್ರದರ್ಶನವಾಗೋದು ಬೇಡ ಎನ್ನುವ ಕಾಮನ್‌ಸೆನ್ಸ್ ಅವರಿಗಿದ್ದಿದ್ದರೆ ಚೆನ್ನಾಗಿರೋದು. ಸಿನಿಮಾ ಎನ್ನೋದು ನೋಡೋರ ಕಣ್ಣಿಗೆ ತಮಾಷೆಯಾದರೂ ನಿರ್ಮಾಪಕನಿಗೆ ಅದು ಸೀರಿಯಸ್ ಬಿಜಿನೆಸ್. ಲಕ್ಷಾಂತರ ರೂಪಾಯಿ ಸುರಿದ ಮೇಲೆ ಚಿತ್ರ ಚೆನ್ನಾಗಿ ಬರಲಿ ಎನ್ನುವ ಆಸೆ ಅವನದು. ಆತನ ಖರ್ಚಲ್ಲಿ ದಂಪತಿಗಳು ಜಾಲಿಯಾಗಿ ಸಮಯಪೋಲು ಮಾಡಿದರೆ ಸಿಟ್ಟು ಬರೋಲ್ವೆ?

ಈಗಾಗಲೇ ಮಹೇಂದರ್ - ಶ್ರುತಿ ಪ್ರಣಯದ ಸುದ್ದಿ ಇತರ ನಿರ್ಮಾಪಕರ ಕಿವಿಗೆ ಬಿದ್ದು ಅವರೆಲ್ಲರೂ ಹುಷಾರಾಗಿದ್ದಾರಂತೆ. ಮಹೇಂದರ್ ತಮ್ಮ ಮುಂದಿನ ಚಿತ್ರಕ್ಕೆ ಬುಕ್ ಮಾಡಿದ್ದ ಸಂದೇಶ ನಾಗರಾಜ್ ಈಗ ಮೀನಾಮೇಷ ಎಣಿಸುತ್ತಿದ್ದಾರಂತೆ. ಮಹೇಂದರ್ ಪರಿಶ್ರಮದಿಂದ ನಿರ್ದೇಶಕರಾಗಿ ಮೇಲೆ ಬಂದವರು. ಅದೂ ಈ ರೀತಿಯಲ್ಲಿ ವೇಸ್ಟ್ ಆಗಬಾರದಾಗಿತ್ತು.


ನೀವು ಏನಾದ್ರೂ ಹೇಳಿ ರಾಯರೇ.. ಎಷ್ಟೇ ಪತ್ರಿಕೆ ಕೊಂಡೋದಿದ್ರೂ.. 'ಎರವಲು' ತಂದು ಓದಿದ ಖುಷಿ ಸಿಗಲ್ಲ ಬಿಡಿ!!
ಏನು ಮನೆಕಡೇ ಬರ್‍ತಾನೇ ಇಲ್ಲ ಅಂದ್ರಾ.. ಏನೂ ಇಲ್ಲ ನೀವು ಈ ನಡುವೆ 'ಸಿನಿಮಾ ಮ್ಯಾಗಜೈನ್' ತರಿಸೋದು ನಿಲ್ಲಿಸಿದ್ರಲ್ಲ - ಅದಕ್ಕೆ!!
ಕಳೆದ ತಿಂಗಳ 'ಬಿಸಿಲ ಬದುಕು' ಮಾಸಪತ್ರಿಕೆಯನ್ನು ವಾಪಸ್ ಮಾಡಲೇ ಇಲ್ಲವಲ್ಲ ರಾಯರೇ?
ನಿಮಗೆ ಅದಿನ್ನೂ ನೆನಪಿದೆಯಾ?.. ಮರೆತಿರಬೇಕೆಂದು ಕೊಂಡಿದ್ದೆ...
ಪತ್ರಿಕೆಯ 'ಖಾಯಂ ಓದುಗ'ನ ಗಿಫ್ಟ್ ಇದು... ನ್ಯಾಯವಾಗಿ ಇದು ರಾಯರಿಗೇ ಸಲ್ಲಬೇಕಯ್ಯಾ!!
ಬದುಕು ಉಚಿತ ಗೋಡೆ ಗಡಿಯಾರ
POST

"ಮಲ್ಲಿಗೆ" ಮೇ – 1999 ರ ಸಂಚಿಕೆ

ವಿಶ್ವಕಪ್ ವಿಶೇಷಾಂಕ

ಇಂಗ್ಲೆಂಡಿನಲ್ಲಿ ಮೇ 14 ರಿಂದ ಆರಂಭವಾಗುತ್ತಿರುವ ವಿಶ್ವಕಪ್ ಕುರಿತು ವಿಶ್ಲೇಷಣೆ

ಇದು ಕೇವಲ ಅಂಕಿ–ಸಂಖ್ಯೆಗಳ ಕಸರತ್ತಲ್ಲ,
ವಿಶ್ವಕಪ್ ಕುರಿತು ಸಾಂಸ್ಕೃತಿಕ ದಾಖಲಾತಿ

- ಏಳನೇ ವಿಶ್ವಕಪ್‌ನ ವೇಳಾಪಟ್ಟಿ, ವಿವಿಧ ತಂಡಗಳ ಬಲಾಬಲ, ಭಾರತದ ಕಸುವಿನ ಕುರಿತ ಚಿಂತನೆ.
- ವಿಶ್ವಕಪ್ ನಡೆದು ಬಂದ ದಾರಿ, ಅದಕ್ಕಿರುವ ಸಾಂಸ್ಕೃತಿಕ ಹಿನ್ನೆಲೆ.
- ಕ್ರಿಕೆಟ್ ಎಂಬ ಸಮೂಹ ಸನ್ನಿ : ಕ್ರಿಕೆಟ್ ಈ ದೇಶವನ್ನು ಕಾಡುತ್ತಿರುವ ಬಗೆ, ಅದಕ್ಕೆ ಕಾರಣಗಳು.
- ವಿಶ್ವಕಪ್ ಗೀಳಾಗಿ ನಿಮ್ಮ ದೈನಂದಿನ ಕೆಲಸಗಳನ್ನು ನಿಲ್ಲಿಸುವುದು ಬೇಡ, ಅದನ್ನು ಅರ್ಥಪೂರ್ಣವಾಗಿ ಸ್ವೀಕರಿಸಿ. ಅದಕ್ಕೆ **ಮಲ್ಲಿಗೆ** 'ಮೇ' ಸಂಚಿಕೆ ಓದಿ.

ನಿಮ್ಮ ಪ್ರತಿಗಳನ್ನು ಸ್ಥಳೀಯ ಏಜಂಟರಲ್ಲಿ ಇಂದೇ ಕಾದಿರಿಸಿ

ಸಂಪರ್ಕಿಸಿ : **ಮಲ್ಲಿಗೆ** ಮಾಸಪತ್ರಿಕೆ 28, ಶಿರಸಿರಸ್ತೆ ಎದುರು, ಬೆಂಗಳೂರು – 560 018

BISILA BADUKU Kannada Monthly MAY 1999 RNI No. 67406 / 97 Regd. BGW / 394